ವಿಶ್ವವಾಣಿ
ವಿಶ್ವಾಸವೇ ವಿಶ್ವ

ಶುಭಾಂಶು ಮೊದಲ ಬಾಹ್ಯಾಕಾಶ ಸಂದೇಶ

ರಾಕೆಟ್ ಫಾಲ್ಕನ್-9 ಬಾಹ್ಯಾಕಾಶಕ್ಕೆ ತೆರಳಿದ ನಂತರ ಶುಭಾಂಶು ಶುಕ್ಲಾ ಅವರ ಮೊದಲ ಸಂದೇಶ ಬಂದಿದೆ. 'ನನ್ನ ಪ್ರೀತಿಯ ದೇಶವಾಸಿಗಳಿಗೆ ನಮಸ್ಕಾರ. 41 ವರ್ಷಗಳ ನಂತರ ನಾವು ಮತ್ತೊಮ್ಮೆ ಬಾಹ್ಯಾಕಾಶ ತಲುಪಿದ್ದೇವೆ. ನನ್ನ ಭುಜದ ಮೇಲೆ ತ್ರಿವರ್ಣ ಧ್ವಜವಿದೆ. ಅದು ನಾನು ಒಬ್ಬಂಟಿಯಲ್ಲ, ನೀವೆಲ್ಲರೂ ನನ್ನೊಂದಿಗಿದ್ದೀರಿ ಎನ್ನುವ ಭಾವನೆಯನ್ನು ನೀಡುತ್ತದೆ. ಈ ಸಂದರ್ಭ ಸೆಕೆಂಡಿಗೆ 7.66 ಕಿ.ಮೀ. ವೇಗದಲ್ಲಿ ಭೂಮಿಯನ್ನು ಸುತ್ತು ಹಾಕುತ್ತಿದ್ದೇವೆ. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್‌ಎಸ್‌ಗೆ) ನನ್ನ ಈ ಪ್ರಯಾಣ ಭಾರತದ ಮಾನವಸಹಿತ ಗಗನಯಾನದ ಆರಂಭ. ನೀವೆಲ್ಲರೂ ಈ ಪ್ರಯಾಣದ ಭಾಗವಾಗಿರಬೇಕು ಎಂದು ಬಯಸುವೆ. ಎಲ್ಲರೂ ಒಟ್ಟಾಗಿ ಭಾರತದ ಮಾನವ ಸಹಿತ ಬಾಹ್ಯಾಕಾಶ ಕಾರ್ಯಕ್ರಮ ಆರಂಭಿಸೋಣ. ಜೈ ಹಿಂದ್, ಜೈ ಭಾರತ್' ಎಂದು ಹಿಂದಿ ಭಾಷೆಯಲ್ಲಿ ಸಂದೇಶ ರವಾನಿಸಿದ್ದಾರೆ.

ಗ್ರೇಟರ್ ಬೆಂಗಳೂರು ಅಥಾರಿಟಿ (ಜಿಬಿಎಂಪಿ)
ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸರ್ವಶ್ರೇಷ್ಠ ದಾರ್ಶನಿಕ - ಅಪ್ರತಿಮ ಆಡಳಿತಗಾರ, ಬೆಂಗಳೂರು ಮಹಾನಗರ ನಿರ್ಮಾತೃ

ನಾಡಪ್ರಭು

ಶ್ರೀ ಕೆಂಪೇಗೌಡರ

516ನೇ ಜಯಂತ್ಯುತ್ಸವ

27 ಜೂನ್, 2025 ಶುಕ್ರವಾರ

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಮಾನ್ಯ ಕಂದಾಯ ಸಚಿವರು ಮತ್ತು ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಕೃಷ್ಣ ಬೈರೇಗೌಡ ರವರು ಸಮಾರಂಭವೊಂದರಲ್ಲಿ ಭಾಷಣ.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಹಾಗೂ ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ಪದನಿಮಿತ್ತ ಸದಸ್ಯರಾದ ಶ್ರೀ ಶಿವರಾಜ್ ಎಸ್. ತಂಗಡಗಿ ರವರು ಸಮಾರಂಭವೊಂದರಲ್ಲಿ ಭಾಷಣ.

ಕೆಂಪೇಗೌಡ ಭವನ ನಿರ್ಮಾಣದ ಶಂಕುಸ್ಥಾಪನಾ ಸಮಾರಂಭ
ಮಧ್ಯಾಹ್ನ 12.00 ಕ್ಕೆ

ಕೆಂಪೇಗೌಡ ಜಯಂತಿ ಹಾಗೂ ಅಂತಾರಾಷ್ಟ್ರೀಯ ಕೆಂಪೇಗೌಡ ಪ್ರಶಸ್ತಿ ಪ್ರದಾನ ಕಾರ್ಯಕ್ರಮ
ಮಧ್ಯಾಹ್ನ 12.30 ಕ್ಕೆ

ಸ್ಥಳ: ಡಾ. ಬಾಬು ಜಗಜೀವನರಾಂ ಭವನ (ಸಂಶೋಧನಾ ಸಂಸ್ಥೆ)
ಹೊರವರ್ತುಲ ರಸ್ತೆ (ಮಾಗಡಿ ರಸ್ತೆ), ಸುಮನಹಳ್ಳಿ ಸರ್ಕಲ್, ಬೆಂಗಳೂರು.

ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ
ಸಂಜೆ 6.00 ಕ್ಕೆ

ಸ್ಥಳ: ಡಾ. ರಾಜಕುಮಾರ್ ಗಾಜಿನಮನೆ
ಜಿಬಿಎ (ಬಿಬಿಎಂಪಿ) ಕೇಂದ್ರ ಕಚೇರಿ ಆವರಣ, ಬೆಂಗಳೂರು.

ಗಣ್ಯರುಗಳಿಂದ ನಾಡಪ್ರಭು ಕೆಂಪೇಗೌಡ ಪ್ರತಿಮೆ ಹಾಗೂ ಮಹಾತ್ಯಾಗಿ ಲಕ್ಷ್ಮೀದೇವಿ ಪ್ರತಿಮೆಗೆ ಮಾಲಾರ್ಪಣೆ ಮತ್ತು ಪುಷ್ಪ ನಮನ
ಬೆಳಿಗ್ಗೆ 9.30ಕ್ಕೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ | ಬೆಳಿಗ್ಗೆ 10.30ಕ್ಕೆ ಜಿಬಿಎ (ಬಿಬಿಎಂಪಿ) ಕೇಂದ್ರ ಕಚೇರಿ ಮುಂಭಾಗ,
ಬೆಳಿಗ್ಗೆ 10.45ಕ್ಕೆ ವಿಧಾನಸೌಧ ಮುಂಭಾಗ

ದಿವ್ಯ ಸಾನಿಧ್ಯ

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಸುತ್ತೂರು ಮಹಾಸಂಸ್ಥಾನ ಮಠ

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ|| ನಂಜಾವದೂತ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠ, ಶ್ರೀಕ್ಷೇತ್ರ ಪಟ್ಟನಾಯಕನಹಳ್ಳಿ

ಪರಮಪೂಜ್ಯ
ಶ್ರೀ ಶ್ರೀ ಶ್ರೀ ಡಾ|| ನಿಶ್ಚಲಾನಂದನಾಥ ಸ್ವಾಮೀಜಿಯವರು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಕೆಂಗೇರಿ, ಬೆಂಗಳೂರು

ಗೌರವ ಉಪಸ್ಥಿತಿ

ಶ್ರೀ ಆರ್. ಅಶೋಕ
ಮಾನ್ಯ ವಿರೋಧ ಪಕ್ಷದ ನಾಯಕರು-ವಿಧಾನಸಭೆ

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ
ಮಾನ್ಯ ವಿರೋಧ ಪಕ್ಷದ ನಾಯಕರು-ವಿಧಾನ ಪರಿಷತ್

ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು

ಡಾ. ಸಿ.ಎನ್. ಮಂಜುನಾಥ್
ಮಾನ್ಯ ಸಂಸದರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ

ಶ್ರೀ ಪಿ.ಸಿ. ಮೋಹನ್
ಮಾನ್ಯ ಸಂಸದರು, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ

ಅಧ್ಯಕ್ಷತೆ

ಶ್ರೀ ಮುನಿರತ್ನ
ಮಾನ್ಯ ಶಾಸಕರು, ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರ

ಶ್ರೀ ರಿಜ್ವಾನ್ ಹರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

3 ಐತಿಹಾಸಿಕ ಸ್ಥಳಗಳು ಮತ್ತು 4 ಗಡಿ ಗೋಪುರಗಳಿಂದ ಆಗಮಿಸುವ
ಪುರಜ್ಯೋತಿಗೆ ಚಾಲನೆ
ಬೆಳಿಗ್ಗೆ 7.00 ರಿಂದ

ಹುತ್ರಿದುರ್ಗ, ಕುಣಿಗಲ್ ತಾಲ್ಲೂಕು	ಡಾ. ಜಿ. ಪರಮೇಶ್ವರ ಮಾನ್ಯ ಗೃಹ ಸಚಿವರು ಕರ್ನಾಟಕ ಸರ್ಕಾರ
ಆವತಿ, ದೇವನಹಳ್ಳಿ ತಾಲ್ಲೂಕು	ಶ್ರೀ ಕೆ.ಹೆಚ್. ಮುನಿಯಪ್ಪ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ
ಕೆಂಪಾಪುರ, ಮಾಗಡಿ ತಾಲ್ಲೂಕು	ಶ್ರೀ ರಾಮಲಿಂಗಾರೆಡ್ಡಿ ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು ಕರ್ನಾಟಕ ಸರ್ಕಾರ ಮತ್ತು ಉಪಾಧ್ಯಕ್ಷರು, ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ
ಹಲಸೂರು ಕೆರೆ ಗಡಿ ಗೋಪುರ	ಶ್ರೀ ಕೆ.ಜೆ. ಜಾರ್ಜ್ ಮಾನ್ಯ ಇಂಧನ ಸಚಿವರು ಕರ್ನಾಟಕ ಸರ್ಕಾರ
ಲಾಲ್‌ಬಾಗ್ ಗಡಿ ಗೋಪುರ	ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಮೇಖ್ರಿ ವೃತ್ತ ಗಡಿ ಗೋಪುರ	ಶ್ರೀ ಸುರೇಶ್. ಬಿ.ಎಸ್. ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು, ಕರ್ನಾಟಕ ಸರ್ಕಾರ
ಕೆಂಪಾಂಬುಧಿ ಕೆರೆ ಗಡಿ ಗೋಪುರ	ಶ್ರೀ ಬಿ.ಜಡ್. ಜಮೀರ್ ಅಹ್ಮದ್ ಖಾನ್ ಮಾನ್ಯ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ಈ ಸಮಾರಂಭದಲ್ಲಿ ಮಾನ್ಯ ಸಚಿವರುಗಳು, ಮಾನ್ಯ ಸಂಸದರು (ಲೋಕಸಭೆ/ರಾಜ್ಯಸಭೆ), ಮಾನ್ಯ ಶಾಸಕರುಗಳು (ವಿಧಾನಸಭೆ / ವಿಧಾನ ಪರಿಷತ್), ನಿಗಮ ಮಂಡಳಿಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿರುವರು.

ಸರ್ವಜನರ ಒಳಿತಿಗಾಗಿ ನಾಡುಕಟ್ಟಿದ ನಾಡಪ್ರಭು ಕೆಂಪೇಗೌಡರು - ನಾಡ ಪ್ರಭುವಿಗೆ ನಮನ, ಬನ್ನಿ, ಪಾಲ್ಗೊಳ್ಳಿ.

ತಮಗೆ ಆದರದ ಸ್ವಾಗತ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಸಮಾಚಾರ ಸಣ್ಣದಲ್ಲ

ಲೈಂಗಿಕ ದೌರ್ಜನ್ಯ: ಪಿಜಿ ಮಾಲೀಕನ ಬಂಧನ

ಬೆಂಗಳೂರು: ಕಳೆದು ಹೋದ ಚಿನ್ನದುಂಗುರ ಪತ್ತೆ ವಿಚಾರಣೆ ನೆಪದಲ್ಲಿ ಯುವತಿಯನ್ನು ಕರೆಯಿಸಿ ಲೈಂಗಿಕ ದೌರ್ಜನ್ಯವೆಸಗಿದ ಆರೋಪದಡಿ ಪಿಜಿ ಮಾಲೀಕನನ್ನು ಮೈಕೋ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆಂಧ್ರ ಪ್ರದೇಶ ಮೂಲದ ಸಂತ್ರಸ್ತೆ ನೀಡಿದ ದೂರು ಆಧರಿಸಿ ಪಿಜಿ ಮಾಲೀಕ ರವಿತೇಜ ರೆಡ್ಡಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಿಟಿಎಂ ಬಡಾವಣೆಯಲ್ಲಿ ಕಳೆದ 7 ವರ್ಷಗಳಿಂದ ಆರೋಪಿ ಪಿಜಿ ನಡೆಸುತ್ತಿದ್ದ. ಜೂನ್ 21ರಂದು ಪಿಜಿಯಲ್ಲಿ ಚಿನ್ನದುಂಗುರ ಕಳ್ಳತನವಾಗಿದೆ ಎಂದು ಒಬ್ಬ ಯುವತಿ ಆರೋಪಿಗೆ ದೂರು ನೀಡಿದ್ದರು. ಈ ಸಂಬಂಧ ವಿಚಾರಣೆ ನಡೆಸಿದ್ದ ಆರೋಪಿಯು, ಸಂತ್ರಸ್ತ ಯುವತಿ ಉಂಗುರ ಕಳವು ಮಾಡಿರುವುದಾಗಿ ಶಂಕಿಸಿ ಆಕೆಯನ್ನ ವಿಚಾರಣೆ ನೆಪದಲ್ಲಿ ರೂಮಿಗೆ ಕರೆದಿದ್ದ. ಬಳಿಕ ಅಶ್ಲೀಲವಾಗಿ ಆಕೆಯ ಅಂಗಾಂಗಳನ್ನ ಮುಟ್ಟಿ ಅಸಹಜ ಲೈಂಗಿಕ ಕ್ರಿಯೆಗೆ ಪ್ರಯತ್ನಿಸಿದ್ದ. ಈ ಬಗ್ಗೆ ಪ್ರತಿರೋಧ ವ್ಯಕ್ತಪಡಿಸಿದ ಸಂತ್ರಸ್ತೆಗೆ ಜೀವ ಬೆದರಿಕೆಯೊಡ್ಡಿದ್ದ. ಈ ಸಂಬಂಧ ದೂರು ನೀಡಿದ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಶಿಕ್ಷಣ ಸಂಸ್ಥೆಗಳಿಗೆ ಇಡಿ ಇಕ್ಕಳ

ಬೆಂಗಳೂರು ಸೇರಿ ರಾಜ್ಯದ 18 ಕಡೆ ಜಾರಿ ನಿರ್ದೇಶನಾಲಯ ದಾಳಿ

ಬೆಂಗಳೂರು: ಕರ್ನಾಟಕದಾದ್ಯಂತ, ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್ ಮತ್ತು ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದ ಆರೋಪಗಳ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ (ಇಡಿ) 18 ಕಡೆಗಳಲ್ಲಿ ದಾಳಿ ನಡೆಸಿದೆ. ಬೆಂಗಳೂರಿನ ಪ್ರತಿಷ್ಠಿತ ಬಿಎಂಎಸ್ ಕಾಲೇಜು ಮತ್ತು ಆಕಾಶ್ ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ರಾಜ್ಯದ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಈ ದಾಳಿಗಳು ನಡೆದಿವೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ನಡೆಯುವ ಎಂಜಿನಿಯರಿಂಗ್ ಸೀಟ್‌ಗಳ ಹಂಚಿಕೆ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿರುವುದು ಬೆಳಕಿಗೆ ಬಂದಿದೆ. ತನಿಖೆಯ ಸಂದರ್ಭದಲ್ಲಿ, ಕೆಲವು ಮಧ್ಯವರ್ತಿಗಳು ಅಭ್ಯರ್ಥಿಗಳ ಲಾಗಿನ್, ಪಾಸ್ವರ್ಡ್ ಮತ್ತು ಸೀಕ್ರೆಟ್ ಕೀಗಳನ್ನು ಬಳಸಿಕೊಂಡು ಸೀಟ್‌ಗಳನ್ನು ಅಕ್ರಮವಾಗಿ ಆಯ್ಕೆ ಮಾಡಿಸಿದ್ದಾರೆ ಎಂಬ ಆರೋಪವಿದೆ. ಒಂದು ಎಂಜಿನಿಯರಿಂಗ್ ಸೀಟ್‌ಗೆ ಸುಮಾರು 60 ಲಕ್ಷ ರುಪಾಯಿಗಳವರೆಗೆ ವ್ಯವಹಾರ ನಡೆದಿರುವುದು ತನಿಖೆಯಿಂದ ದೃಢಪಟ್ಟಿದೆ. ಈ ಅಕ್ರಮಗಳಲ್ಲಿ ಕೆಇಎ ಸಿಬ್ಬಂದಿಯೂ ಭಾಗಿಯಾಗಿರುವುದು ಸಾಬೀತಾಗಿದೆ.

ಮಲ್ಲೇಶ್ವರಂ ಠಾಣೆಯಲ್ಲಿ ದೂರು ಮತ್ತು ಸೈಬರ್ ತನಿಖೆ: ಈ ಹಿಂದೆ, ಈ ಅಕ್ರಮಗಳ ಕುರಿತು ಕೆಇಎ ಅಧಿಕಾರಿಗಳು ಬೆಂಗಳೂರಿನ ಮಲ್ಲೇಶ್ವರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಈ ದೂರಿನ ಅನ್ವಯ, ಸೈಬರ್ ಅಪರಾಧ ವಿಭಾಗದ ಅಧಿಕಾರಿಗಳು ತನಿಖೆ ನಡೆಸಿ, ಚಾರ್ಜ್‌ಶೀಟ್ ಸಲ್ಲಿಸಿದ್ದರು. ತನಿಖೆಯ ವೇಳೆ, ಮಧ್ಯವರ್ತಿಗಳು ಸೀಟ್ ಬ್ಲಾಕಿಂಗ್ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು ಎಂಬುದು ಸ್ಪಷ್ಟವಾಗಿತ್ತು. ಈ ಮಧ್ಯವರ್ತಿಗಳು ಅಭ್ಯರ್ಥಿಗಳ ವೈಯಕ್ತಿಕ ಮಾಹಿತಿಯನ್ನು ದುರ್ಬಳಕೆ ಮಾಡಿಕೊಂಡು, ಅಕ್ರಮವಾಗಿ ಸೀಟ್ ಮಾರಾಟ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಈ ಪ್ರಕರಣದಲ್ಲಿ ಭಾಗಿಯಾಗಿರುವ ಕೆಲವರ ವಿರುದ್ಧ ಮಲ್ಲೇಶ್ವರಂ ಪೊಲೀಸರು ಈಗಾಗಲೇ ನೋಟಿಸ್ ಜಾರಿಗೊಳಿಸಿದ್ದಾರೆ.

- ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್, ಅಕ್ರಮ ಹಣ ವರ್ಗಾವಣೆ ಸಂಬಂಧ ದಾಳಿ
- ಎಂಜಿನಿಯರಿಂಗ್ ಸೀಟ್‌ಗೆ ಸುಮಾರು 60 ಲಕ್ಷ ರು. ವರೆಗೆ ವ್ಯವಹಾರ ಆರೋಪ

ಬಿಎಂಎಸ್ ಆಕಾಶ್ ಮೇಲೆ ದಾಳಿ

ಈ ಅಕ್ರಮಗಳ ಹಿನ್ನೆಲೆಯಲ್ಲಿ, ಜಾರಿ ನಿರ್ದೇಶನಾಲಯವು ರಾಜ್ಯದ 18 ಕಡೆಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿದೆ. ಬೆಂಗಳೂರಿನ ಬಿಎಂಎಸ್ ಕಾಲೇಜು ಮತ್ತು ಆಕಾಶ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬುಧವಾರ ಬೆಳಗ್ಗೆಯಿಂದಲೇ ಇಡಿ ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದಾರೆ. ಈ ದಾಳಿಗಳ ಸಂದರ್ಭದಲ್ಲಿ, ಅಕ್ರಮ ಹಣದ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ಮತ್ತು ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಕಟ್ಟಡ ನಕ್ಷೆ ಅನುಮತಿ ಇಲ್ಲದೆ ಮನೆ ಕಟ್ಟಬೇಡಿ

ಅನುಮೋದನೆ ಇಲ್ಲದಿದ್ದರೆ ನೀರು, ವಿದ್ಯುತ್ ಸಂಪರ್ಕ ನೀಡುವಂತಿಲ್ಲ; ಸುಪ್ರೀಂ ಆದೇಶ

ಬೆಂಗಳೂರು: ಕಟ್ಟಡ ನಕ್ಷೆ ಅನುಮತಿ, ಸ್ವಾಧೀನ ಪ್ರಮಾಣ ಪತ್ರವಿಲ್ಲದೆ ನೀರು ಹಾಗೂ ವಿದ್ಯುತ್ ಸಂಪರ್ಕ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿದೆ. ಹೀಗಾಗಿ ಜನರು ಈ ಅನುಮತಿ ಇಲ್ಲದೆ ಮನೆ ಕಟ್ಟಬೇಡಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ವಿಧಾನಸೌಧದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಟ್ಟಡ ನಕ್ಷೆ ಅನುಮತಿ, ಸ್ವಾಧೀನ ಪ್ರಮಾಣ ಪತ್ರವಿಲ್ಲದೆ ನೀರು ಹಾಗೂ ವಿದ್ಯುತ್ ಸಂಪರ್ಕ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಇಡೀ ದೇಶಕ್ಕೆ ಅನ್ವಯವಾಗಲಿದೆ. ಇದುವರೆಗೂ 2.50 ಲಕ್ಷ ಜನ ಹಳ್ಳಿಗಳು ಹಾಗೂ ನಗರ ಪ್ರದೇಶಗಳಲ್ಲಿ ಕಟ್ಟಡ ನಕ್ಷೆ ಅನುಮತಿ ಪಡೆಯದೇ ಮನೆ ಕಟ್ಟಿಕೊಂಡು, ವಿದ್ಯುತ್ ಹಾಗೂ ನೀರಿನ ಸಂಪರ್ಕಕ್ಕೆ ಅರ್ಜಿ ಹಾಕಿದ್ದಾರೆ. ಈ ವಿಚಾರವಾಗಿ ಕಾನೂನು ಸಲಹೆಗಾರರ ಜತೆ ಚರ್ಚಿಸಿ, ಸಾರ್ವಜನಿಕರಿಗೆ ಹೇಗೆ ನೆರವಾಗಬಹುದು ಎಂದು ಅಭಿಪ್ರಾಯ ಕೇಳಿದ್ದೇನೆ ಎಂದು ತಿಳಿಸಿದರು.

ಜನರ ಸಮಸ್ಯೆ ಬಗೆಹರಿಸಲು ಕಾನೂನು ತಜ್ಞರು, ಅಧಿಕಾರಿಗಳ ಸಲಹೆ

ಕೆಲವು ಸಾರ್ವಜನಿಕರು ಕೆಇಬಿಗೆ ಠೇವಣಿ ಪಾವತಿ ಮಾಡಿದ್ದು, ಈ ವಿಚಾರವಾಗಿ ಯಾವ ರೀತಿ ಕ್ರಮ ಕೈಗೊಳ್ಳಬಹುದು ಎಂದು ಅಧಿಕಾರಿಗಳ ಜತೆಗೂ ಚರ್ಚೆ ಮಾಡುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ ಇದನ್ನು ಯಾವ ರೀತಿ ಬಗೆಹರಿಸಲಿದ್ದಾರೆ ಎಂದು ಮಾಹಿತಿ ಕಲೆಹಾಕುತ್ತೇವೆ. ಈ ಮಧ್ಯೆ ಕಟ್ಟಡ ನಕ್ಷೆ ಅನುಮೋದನೆ ಪಡೆಯದೇ ಯಾರೂ ಮನೆ ಕಟ್ಟಬೇಡಿ. ಸುಪ್ರೀಂ ಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲಿ ಸಾರ್ವಜನಿಕರು ಮತ್ತೆ ಇಂತಹ ಸಾಹಸಕ್ಕೆ ಕೈ ಹಾಕಬೇಡಿ. ಈ ವಿಚಾರದಲ್ಲಿ ಅಕ್ರಮವಾಗಿ ಮನೆ ಕಟ್ಟಿದರೆ ಸಕ್ರಮ ಮಾಡುವುದು ಕಷ್ಟ. ನೀರು ಹಾಗೂ ವಿದ್ಯುತ್ ಸಂಪರ್ಕ ಸಿಗುವುದಿಲ್ಲ ಎಂದು ಹೇಳಿದರು.

ಅಕ್ರಮ ಸಕ್ರಮ ಡಿಬಿಲ್‌ಗೆ ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ತಡೆಹಿಡಿಯಲಾಗಿದೆ. ನಮ್ಮ ಸರಕಾರ ಎ ಖಾತಾ, ಬಿ ಖಾತಾ ಎಲ್ಲ ಸಮಸ್ಯೆ ಬಗೆಹರಿಸಲು ಚರ್ಚೆ ಮಾಡುತ್ತಿದೆ. 110 ಹಳ್ಳಿಗಳಿಗೆ ನೀರಿನ ಸಂಪರ್ಕ ನೀಡಲು ಮುಂದಾಗಿದ್ದೆವು. ಈ ತೀರ್ಪಿನ ನಂತರ ಬಿಡ್ಲ್ಯೂಎಸ್‌ಎಸ್‌ಬಿಗೆ ತೊಂದರೆಯಾಗಿದೆ. ಕಳೆದ ವರ್ಷ ಜೂನ್ ತಿಂಗಳಲ್ಲಿ 39 ಸಾವಿರ ನೀರಿನ ಸಂಪರ್ಕ ನೀಡಿದ್ದೆವು. ಈ ವರ್ಷ ಕೇವಲ 300 ಸಂಪರ್ಕ ನೀಡಿದ್ದೇವೆ. ಈ ವಿಚಾರವಾಗಿ ಎಲ್ಲರ ಸಹಕಾರ ಬೇಕು ಎಂದು ತಿಳಿಸಿದರು.

ಕಾನೂನು ಚೌಕಟ್ಟಿನಲ್ಲಿ ಜನರಿಗೆ ಸಹಾಯ

ಬೇರೆ ರಾಜ್ಯದಲ್ಲಿ ಇದು ಜಾರಿಯಾಗಿಲ್ಲ, ನಮ್ಮ ರಾಜ್ಯದಲ್ಲಿ ಆತುರದಲ್ಲಿ ಜಾರಿ ಯಾಕೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿಸಿಎಂ, ನ್ಯಾಯಾಲಯದ ಆದೇಶ ಬಂದ ನಂತರ ಕೆಆರ್‌ಸಿ ಯಿಂದ ನಮ್ಮ ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ನ್ಯಾಯಾಲಯದ ಆದೇಶ ಪಾಲಿಸುವಂತೆ ಸೂಚಿಸಲಾಗಿದೆ. ಅಧಿಕಾರಿಗಳು ತಮಗೆ ಮುಂದೆ ತೊಂದರೆ ಆಗಬಾರದು ಎಂದು ಮೈಗೆ ಎಣ್ಣೆ ಹಚ್ಚಿಕೊಂಡಿರುತ್ತಾರೆ. ನಮ್ಮ ಮೇಲೆ ಹಾಕುತ್ತಾರೆ. ಹೀಗಾಗಿ ಈ ಸಮಸ್ಯೆ ಬಗೆಹರಿಸಲು ನಾವು ಮುಂದಾಗಿದ್ದೇವೆ. ಕಾನೂನು ಚೌಕಟ್ಟಿನಲ್ಲೇ ಜನರಿಗೆ ಸಹಾಯ ಮಾಡಬೇಕು ಎಂದು ಸ್ಪಷ್ಟನೆ ನೀಡಿದರು.

ಕಟ್ಟಡ ನಕ್ಷೆ ಅನುಮತಿ, ಸ್ವಾಧೀನ ಪ್ರಮಾಣ ಪತ್ರವಿಲ್ಲದೆ ನೀರು ಹಾಗೂ ವಿದ್ಯುತ್ ಸಂಪರ್ಕ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗೆ ತೀರ್ಪು ನೀಡಿದೆ. ಈ ಅನುಮತಿಗಳನ್ನು ಪಡೆ ಯದೆ ಯಾರೂ ಮನೆ ಕಟ್ಟಲು ಮುಂದಾಗಬೇಡಿ, ಸುಪ್ರೀಂ ತೀರ್ಪಾಗಿರುವುದರಿಂದ ಇದನ್ನು ಅಕ್ರಮ ಸಕ್ರಮ ಮಾಡಲು ಬರುವುದಿಲ್ಲ. ಈ ತೀರ್ಪಿನಿಂದ ತೊಂದರೆಗೆ ಒಳಗಾಗಿರುವ ಜನರ ಸಹಾಯಕ್ಕಾಗಿ ಕಾನೂನು ತಜ್ಞರ ಜತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು.

– ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ

ಪುತ್ರ ವೃದ್ಧಾಶ್ರಮ ಸೇರಿಸಿದ್ದಕ್ಕೆ ನೊಂದು ವೃದ್ಧ ದಂಪತಿ ಆತ್ಮಹತ್ಯೆ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಅಮಾನವೀಯ ಘಟನೆಯೊಂದು ನಡೆದಿದ್ದು, ವೃದ್ಧಾಶ್ರಮ ಸೇರಿಸಿದ್ದಕ್ಕೆ ನೊಂದು ವೃದ್ಧ ದಂಪತಿ ಜೀವ ಕಳೆದುಕೊಂಡಿದ್ದಾರೆ. ಜೆಪಿ ನಗರದ 8ನೇ ಹಂತದ ವೃದ್ಧಾಶ್ರಮದಲ್ಲಿ ಈ ಘಟನೆ ನಡೆದಿದೆ.

ಕೃಷ್ಣ ಮೂರ್ತಿ (81) ಇವರ ಪತ್ನಿ ರಾಧ (74) ನೇಣು ಬಿಗಿದುಕೊಂಡು ಸಾವಿಗೆ ಶರಣಾದ ದಂಪತಿ. ತಂದೆ, ತಾಯಿಯನ್ನು ಕಳೆದ 1 ತಿಂಗಳ ಹಿಂದೆಯಷ್ಟೇ ಮಗ ವೃದ್ಧಾಶ್ರಮಕ್ಕೆ ಸೇರಿಸಿದ್ದನು. ಮನೆಯಲ್ಲಿ ಸೊಸೆ ಮಾಡಿದ ಅಡುಗೆ ಚೆನ್ನಾಗಿರಲ್ಲ ಎನ್ನುವ ವಿಚಾರಕ್ಕೆ ಗಲಾಟೆ ನಡೆಯುತ್ತಿತ್ತು. ಹೀಗಾಗಿ ತಂದೆ, ತಾಯಿ ಇಬ್ಬರನ್ನು ಮಗ ವೃದ್ಧಾಶ್ರಮಕ್ಕೆ ಸೇರಿಸಿದ್ದನು. ಸೋಮವಾರ ರಾತ್ರಿಯೇ ಇಬ್ಬರೂ ನೇಣಿಗೆ ಶರಣಾಗಿದ್ದಾರೆ. ಆದರೆ ಮಂಗಳವಾರ ಬೆಳಗಿನ ಜಾವ ಬಾಗಿಲು ತೆಗೆದಿರಲಿಲ್ಲ. ಇದರಿಂದ ಅನುಮಾನಗೊಂಡ ಆಶ್ರಮದವರು ಬಾಗಿಲು ತೆಗೆಸಿದಾಗ ಘಟನೆ ಬೆಳಕಿಗೆ ಬಂದಿದೆ. ಈ ಸಂಬಂಧ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ.

ಈ ವೃದ್ಧ ದಂಪತಿ ಸೊಸೆ ಜತೆ ಹೊಂದಾಣಿಕೆ ಇರದ ಕಾರಣ ಬೇರೆ ಮನೆ ಮಾಡಿಕೊಡಲು ಮಗನಿಗೆ ಕೇಳಿದ್ದರು. ಈ ಹಿನ್ನೆಲೆಯಲ್ಲಿ 2021ರಲ್ಲಿ ಬ್ಯಾಟರಾಯನಪುರ ವೃದ್ಧಾಶ್ರಮಕ್ಕೆ ತಂದೆ ತಾಯಿಯನ್ನು ಸೇರಿಸಿದ್ದನು. ಬಳಿಕ 2023ರಲ್ಲಿ ವಾಪಸ್ ಮನೆಗೆ ತಂದೆ, ತಾಯಿಯನ್ನು ಕರೆದುಕೊಂಡು ಬರಲಾಗಿತ್ತು. ಆದರೆ ಮತ್ತೆ ಮನೆಯಲ್ಲಿ ಹೊಂದಾಣಿಕೆ ಆಗಲಿಲ್ಲ. ಹೀಗಾಗಿ ಕಳೆದ ತಿಂಗಳು ಮತ್ತೆ ಬನಶಂಕರಿ ವೃದ್ಧಾಶ್ರಮಕ್ಕೆ ಸೇರಿಸಲಾಗಿತ್ತು. ಆದರೆ ಸೋಮವಾರ ರಾತ್ರಿ ಇಬ್ಬರೂ ಊಟ ಮಾಡಿ ಮಲಗಲು ಹೋಗಿದ್ದರು. ಬೆಳಗ್ಗೆ ವೃದ್ಧ ದಂಪತಿ ನೇಣು ಬಿಗಿದು ಸಾವಿಗೆ ಶರಣಾಗಿರುವುದು ಬೆಳಕಿಗೆ ಬಂದಿದೆ. ಘಟನೆ ಬಗ್ಗೆ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸದ್ಯ ಟಿವಿ ನೋಡುವ ವಿಚಾರಕ್ಕೆ ಇಬ್ಬರಿಗೂ ಮನಸ್ತಾಪ ಆಗಿತ್ತು ಎಂದು ವೃದ್ಧಾಶ್ರಮದವರ ಮಾಹಿತಿ ನೀಡಿದ್ದಾರೆ.

ನಾಳೆ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಆಚರಣೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯನ್ನು ಜೂ.27ರಂದು ಬಿಬಿಎಂಪಿ ಕೇಂದ್ರ ಕಚೇರಿ ಆವರಣದ ಡಾ. ರಾಜ್ ಕುಮಾರ್ ಗಾಜಿನ ಮನೆಯಲ್ಲಿ ನಡೆಯಲಿದೆ ಎಂದು ಜಿಬಿಎ ಆಡಳಿತ ವಿಶೇಷ ಆಯುಕ್ತ ನವೀನ್ ಕುಮಾರ್ ರಾಜು ತಿಳಿಸಿದರು.

ಕೆಂಪೇಗೌಡರ ಜಯಂತಿಯ ದಿನದಂದು ಬೆಳಗ್ಗೆ 7.00 ಗಂಟೆಗೆ ನಗರದ ನಾಲ್ಕು ದಿಕ್ಕುಗಳಲ್ಲಿರುವ (ಲಾಲ್ ಬಾಗ್, ಮೇಕ್ರಿ ವೃತ್ತ, ಕೆಂಪಾಂಬುದಿ ಕೆರೆ ಹಾಗೂ ಹಲಸೂರು) ಗಡಿ ಗೋಪುರಗಳಿಂದ ಹಾಗೂ 3 ಐತಿಹಾಸಿಕ ಸ್ಥಳಗಳಾದ ಮಾಗಡಿ ತಾಲೂಕಿನ ಕೆಂಪಾಪುರ, ದೇವನಹಳ್ಳಿ ತಾಲೂಕಿನಲ್ಲಿರುವ ಆವತಿ ಹಾಗೂ ಕುಣಿಗಲ್ ತಾಲೂಕಿನ ಹುತ್ತರಿ ದುರ್ಗ ಸೇರಿದಂತೆ ಒಟ್ಟು 7 ಸ್ಥಳಗಳಿಂದ ಸಚಿವರುಗಳ ನೇತೃತ್ವದಲ್ಲಿ ಪುರ ಜ್ಯೋತಿಗಳು ಹೊರಟು, ಸುಮ್ಮನಹಳ್ಳಿ ವೃತ್ತದ ಬಳಿಯ ಹೊರವರ್ತುಲ ರಸ್ತೆ(ಮಾಗಡಿ ರಸ್ತೆ)ಯಲ್ಲಿ ಕೆಂಪೇಗೌಡ ಭವನದ ನಿರ್ಮಾಣ ಸ್ಥಳಕ್ಕೆ 7 ಪುರ ಜ್ಯೋತಿಗಳನ್ನು ಸ್ವೀಕರಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ನಾಡಪ್ರಭು ಕೆಂಪೇಗೌಡ ಜಯಂತಿಯ ದಿನದ ಅಂಗವಾಗಿ 3 ಕಡೆ ಪ್ರತಿಮೆಗಳಿಗೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಮಾನ್ಯ ಸಚಿವರುಗಳು ಹಾಗೂ ಇತರೆ ಗಣ್ಯರುಗಳು ಪುಷ್ಪನಮನ ಸಲ್ಲಿಸಲಿದ್ದಾರೆ. ಬೆಂಗಳೂರು ನಗರ ಸುಮ್ಮನಹಳ್ಳಿ ವೃತ್ತದ ಬಳಿಯ ಹೊರವರ್ತುಲ ರಸ್ತೆ(ಮಾಗಡಿ ರಸ್ತೆ)ಯಲ್ಲಿ ಕೆಂಪೇಗೌಡ ಭವನದ ನಿರ್ಮಾಣ ಸ್ಥಳಕ್ಕೆ ಬೆಳಗ್ಗೆ 11.00 ಗಂಟೆ ಸುಮಾರಿಗೆ 7 ಸ್ಥಳಗಳ ಪುರ ಜ್ಯೋತಿಗಳನ್ನು ಸ್ವೀಕರಿಸಲಾಗುತ್ತದೆ. ಅದಾದ ಬಳಿಕ ಅಪರಾಹ್ನ 12.15 ಕ್ಕೆ ಕೆಂಪೇಗೌಡ ಭವನ ನಿರ್ಮಾಣದ ಶಂಕುಸ್ಥಾಪನೆಯನ್ನು ಸಿಎಂ, ಉಪ ಮುಖ್ಯಮಂತ್ರಿಗಳು, ಮಠಾಧೀಶರುಗಳು, ಸಚಿವರುಗಳು, ಶಾಸಕರುಗಳು ಹಾಗೂ ಇತರೆ ಗಣ್ಯರುಗಳಿಂದ ನೆರವೇರಲಿದೆ ಎಂದು ವಿವರಿಸಿದ್ದಾರೆ.

ಎಲ್ಲಿಂದ ಜ್ಯೋತಿಗಳ ಆಗಮನ

- ಲಾಲ್ ಬಾಗ್ ಗಡಿ ಗೋಪುರ
- ಮೇಕ್ರಿ ವೃತ್ತ ಗಡಿ ಗೋಪುರ
- ಕೆಂಪಾಂಬುದಿ ಕೆರೆ ಗಡಿ ಗೋಪುರ
- ಹಲಸೂರು ಗಡಿ ಗೋಪುರ
- ನಾಡಪ್ರಭು ಕೆಂಪೇಗೌಡರ ಸಮಾಧಿ, ಮಾಗಡಿ
- ಚೆನ್ನಕೇಶವ ದೇವಾಲಯ, ಆವತಿ
- ಬಯಲು ಬಿಸಿಲು ಬಸವಣ್ಣ, ಹುತ್ರಿದುರ್ಗ

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	(1) ಶ್ರೀ ಟಿ ತುರಾಯಿ ನಾಯ್ಕ್ ಬಿನ್ ಶ್ರೀ ಹನುಮಂತ್ ನಾಯ್ಕ್, 176, ಮಿಲಿಟರಿ ಬಂಉಲು ರಾಮನಗರ, ಹಗರಿಬೊಮ್ಮನಹಳ್ಳಿ ಪೋಸ್ಟ್, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ–583212. **ಮತ್ತೊಂದು ವಿಳಾಸ:** 41, ಆಶ್ರಯ ಕಾಲೋನಿ ರಾಯರಲುತಂಡ ಹಗರಿ ಬೊಮ್ಮನ ಹಳ್ಳಿ–ಟಿ2, ದುರ್ಗಮ್ಮ ದೇವಸ್ಥಾನದ ಹತ್ತಿರ–583222.	**ಈ ಆಸ್ತಿಯು ಶ್ರೀ ಟಿ ತುರಾಯಿ ನಾಯ್ಕ್‌ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ಥಿರಾಸ್ತಿಯ ವಾಸಯೋಗ್ಯ ಮನೆಯ ಆಸ್ತಿ ನಂ.203ಬಿ, ಇ–ಆಸ್ತಿ ನಂ.150500301900520164, ಈ ಆಸ್ತಿಯು ರಾಯರಲುತಂಡ ಗ್ರಾಮ, ಹಲಗಪುರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿದ್ದು ಜೊತೆಗೆ ಬಳ್ಳಾರಿ ನೋಂದಣಿ ಜಿಲ್ಲೆ ಮತ್ತು ಹಗರಿಬೊಮ್ಮನಹಳ್ಳಿ ಉಪ–ನೋಂದಣಿ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 13.71 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 18.2884 ಮೀಟರ್‌ಗಳು, ಒಟ್ಟು ವಿಸ್ತೀರ್ಣ 250.83 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶದ ವಿಸ್ತೀರ್ಣ 183.20 ಚದರ ಮೀಟರ್‌ಗಳು. ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಫುಟ್‌ಪಾತ್, ಉತ್ತರಕ್ಕೆ: ಮಲ್ಲಪ್ಪ ಹಟ್ಟಿರವರ ಮನೆ, ದಕ್ಷಿಣಕ್ಕೆ: ಕೃಷ್ಣಮೂರ್ತಿರವರ ಮನೆ. **ಯಾವುದೇ ಮಾಹಿತಿಗಾಗಿ ಶ್ರೀ ಸುಹೇಲ್, ಕಲೆಕ್ಷನ್ ಮ್ಯಾನೇಜರ್ ಮೊಬೈಲ್ ನಂ. 8880999288 ರವರನ್ನು ಸಂಪರ್ಕಿಸಿ.**	05.06.2025 ಎನ್‌ಪಿಎ ದಿನಾಂಕ 01.05.2025	Over Draft Loan No. 921030054171047 Amount : Rs.14,20,000/- ---- Production Credit (working Capital) Amount: Rs.30,000/- ಒಟ್ಟು ಬಾಕಿ ಮೊತ್ತ ರೂ. 15,88,263/– ದಿನಾಂಕ: 05.06.2025 ರಂದು ಇದ್ದಂತೆ
2	ಶ್ರೀ ಸುಜಾತ್ ಅಲಿ ಖಾನ್ ಬಿನ್ ಮೊಹಮ್ಮದ್ ಉಸ್ಮಾನ್ ಅಲಿ ಖಾನ್ **(ಸಾಲಗಾರರು/ಅರ್ಜಿದಾರರು)** (2) ಶ್ರೀಮತಿ ಗುಲ್ನಾಜ್ ಬಾನು ಕೋಂ ಸುಜಾತ್ ಅಲಿ ಖಾನ್ **(ಸಹ–ಅರ್ಜಿದಾರರು/ ಜಾಮೀನುದಾರರು)** **ಇವರಿಬ್ಬರ ವಿಳಾಸ:** # 6/ಎ, 12 ಎಂ ಬಿ ಕ್ರಾಸ್, ರಾಜೀವ್ ಗಾಂಧಿ ನಗರ, 7ನೇ ವಲಯ, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು 560102. **ಮತ್ತೊಂದು ವಿಳಾಸ: ಶ್ರೀ. ಸುಜಾತ್ ಅಲಿ ಖಾನ್** ಬಿನ್ ಮೊಹಮ್ಮದ್ ಉಸ್ಮಾನ್ ಅಲಿ ಖಾನ್, ಮಾಲೀಕರು: ಸನಾ ಕಲೆಕ್ಷನ್ಸ್, ನಂ.76, ಶಾಪ್ ನಂ.2 ಜಿಎಫ್, ಕಲಾಮಂದಿರದ ಎದುರು, ಒಆರ್‌ಆರ್ ರಾಮಾಂಜನೇಯ ಲೇಔಟ್, ಮಾರತಹಳ್ಳಿ, ಬೆಂಗಳೂರು 560037.	**ಷೆಡ್ಯೂಲ್ ಆಸ್ತಿ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆವರಣದ ನಂ.6/ಎ, ಖಾತಾ ನಂ.707/46/5/6/ಎ, ಪಿಐಡಿ ನಂ.174–W0080–14, ರಾಜೀವಗಾಂಧಿ ನಗರ, ಬೊಮ್ಮನಹಳ್ಳಿ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು–560068ರಲ್ಲಿದೆ. 1440 ಚದರ ಅಡಿ ಬಿಲ್ಟ್‌ಅಪ್ ಪ್ರದೇಶ, ಜೊತೆಗೆ ಕಟ್ಟಡವನ್ನೊಳಗೊಂಡಿದೆ ಮತ್ತು ಅವುಗಳ ಮೇಲಿನ ರಚನೆಗಳು, ನೆಲಹಾಸುಗಳು, ಫಿಟ್ಟಿಂಗ್‌ಗಳು ಮತ್ತು ಪ್ಲಾಂಟ್ ಮತ್ತು ಮಿಷನರಿಗಳನ್ನು ಭೂಮಿಗೆ ಅಳವಡಿಸಲಾಗಿರುತ್ತದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.7, ಪಶ್ಚಿಮಕ್ಕೆ: ನಿವೇಶನ ನಂ.6, ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ. 8880041234 ರವರನ್ನು ಸಂಪರ್ಕಿಸಿ.**	09.06.2025 ಎನ್‌ಪಿಎ ದಿನಾಂಕ 02.06.2025	Asset Power BRE Loan No. LTR051405967065 Amount : Rs 15,33,700/- ಒಟ್ಟು ಬಾಕಿ ಮೊತ್ತ ರೂ. 12,29,942/– ದಿನಾಂಕ: 09.06.2025 ರಂದು ಇದ್ದಂತೆ
3	(1) ಮೆ॥ ಅಂಬಿಕಾ ಟ್ರೇಡರ್ಸ್ ಇದನ್ನು ಪಾಲುದಾರರು ಪ್ರತಿನಿಧಿಸುವ ಶ್ರೀ ರೇವಣಸಿದ್ದಯ್ಯ ಬಿ ಭೂಸನೂರಮಠ ಮತ್ತು ಶ್ರೀ ವೀರೇಶ ಆರ್ ಭೂಸನೂರಮಠ, (2) ಶ್ರೀ ರೇವಣಸಿದ್ದಯ್ಯ ಬಿ ಭೂಸನೂರಮಠ ಬಿನ್ ಶ್ರೀ ನಾಗಭೂಷಣಸ್ವಾಮಿ, (3) ಶ್ರೀ ವೀರೇಶ ಆರ್ ಭೂಸನೂರಮಠ ಬಿನ್ ಶ್ರೀ ರೇವಣಸಿದ್ದಯ್ಯ ಬಿ ಭೂಸನೂರಮಠ, **ಇವರೆಲ್ಲರ ವಿಳಾಸ:** ನಂ.266, ವಾಟರ್ ಟ್ಯಾಂಕ್ ಎದುರು, 2ನೇ ಕ್ರಾಸ್ ಎಸ್‌ಎನ್ ನಗರ, ಸಾಗರ, ಶಿವಮೊಗ್ಗ, ಸಾಗರ ಮಾರುಕಟ್ಟೆ ರಸ್ತೆ, ಶಿವಮೊಗ್ಗ–577401.	**ಈ ಆಸ್ತಿಯು ಶ್ರೀ ರೇವಣಸಿದ್ದಯ್ಯ ಬಿ ಭೂಸನೂರಮಠ ರವರ ಹೆಸರಿನಲ್ಲಿದೆ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ನಿವೇಶನ ನಂ.39, ಮುನಿಸಿಪಲ್ ಅಸೆಸ್‌ಮೆಂಟ್ ನಂ.761–1539–1539, ಸರ್ವೆ ನಂ.31/1, (ಹಿಂದಿನ ಡಿಆರ್ ನಂ.42, ಅಸೆಸ್‌ಮೆಂಟ್ ನಂ.325, ಸರ್ವೆ ನಂ.31:1ಎರಲ್ಲಿ ನಿರ್ಮಿಸಲಾಗಿದೆ, (ಹಳೆ ಸರ್ವೆ ನಂ.31/1), ಭೀಮನೇರಿ ಗ್ರಾಮ, ಕಸಬಾ ಹೋಬಳಿ, ಸಾಗರ ತಾಲ್ಲೂಕಿನಲ್ಲಿದೆ. ವಿಸ್ತೀರ್ಣ 8 ಎಕರೆ 09 ಗುಂಟೆಗಳು, ದಿನಾಂಕ 14/01/1987ರಂದು ಸಾಗರ ತಹಸೀಲ್ದಾರ್ ಅವರು ಅಂಗೀಕರಿಸಿರುವ ಆದೇಶ ನಂ.ALN CR No.57:86-87ರ ಪ್ರಕಾರ ಇದನ್ನು ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ.) ಈ ಆಸ್ತಿಯು ಆರ್‌ಎಂಸಿ ರಸ್ತೆ, ಸಾಗರದಲ್ಲಿದ್ದು, ಸಾಗರ ನಗರಸಭಾ ವ್ಯಾಪ್ತಿಯಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 80 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 38 ಅಡಿ, ಒಟ್ಟು ವಿಸ್ತೀರ್ಣ 282.72 ಚದರ ಮೀಟರ್‌ಗಳು, ಈ ಆಸ್ತಿಯು ಶ್ರೀ ರೇವಣಸಿದ್ದಯ್ಯ ಬಿ ಭೂಸನೂರುಮಠ ಬಿನ್ ಶ್ರೀ ನಾಗಭೂಷಣಸ್ವಾಮಿರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಸಾಗರ–III ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.38, ಉತ್ತರಕ್ಕೆ: ಅದೇ ನಿವೇಶನದ ಉಳಿಕೆ ಭಾಗ ವಿಸ್ತೀರ್ಣ 38 X 80 ಅಡಿ, ದಕ್ಷಿಣಕ್ಕೆ: ಕನ್ಸರ್ವೆನ್ಸಿ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಸುಹೇಲ್, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ. 8880999288 ರವರನ್ನು ಸಂಪರ್ಕಿಸಿ.**	05.06.2025 ಎನ್‌ಪಿಎ ದಿನಾಂಕ 01.04.2025	Overdraft-AGRI VALUE CHAIN PARTNE-GSTOD Loan No. 922030065871126 Amount : Rs.20,00,000/- ಒಟ್ಟು ಬಾಕಿ ಮೊತ್ತ ರೂ. 20,36,590/– ದಿನಾಂಕ 05.06.2025 ರಂದು ಇದ್ದಂತೆ
4	(1) ಶ್ರೀ ರಮೇಶ್ ಕುಮಾರ್ ಟಿ ಬಿನ್ ತಿಪ್ಪೇಸ್ವಾಮಿ, # 64, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು, ಬಸವೇಶ್ವರ ನಗರ, ಹಿರಿಯೂರು, ಚಿತ್ರದುರ್ಗ–577598. ಸಾಲಗಾರರು/ಅರ್ಜಿದಾರರು)	**ಷೆಡ್ಯೂಲ್ ಆಸ್ತಿ** ವಾಸಯೋಗ್ಯ ಮನೆಯ ಆಸ್ತಿಯು ನೆಲ ಮಹಡಿಯನ್ನೊಳಗೊಂಡಿದ್ದು ನಿರ್ಮಿತ ಆರ್‌ಸಿಸಿ ಕಟ್ಟಡದ ಆಸ್ತಿಯ ನಿವೇಶನ ನಂ.27 ಮತ್ತು 28, ಖಾತಾ ಅಸೆಸ್‌ಮೆಂಟ್ ನಂ.27/ಎ/27/ಎ/27/ಎ 28/ಎ1/28/ಎ1/28ಎ1, ಪಿಐಡಿ ನಂ.18–515–511ಎ, ವಿಸ್ತೀರ್ಣ 15.19 +15.35+2 INTO 16.29 +14.02/02 ಮೀಟರ್‌ಗಳು, ವಾಸಯೋಗ್ಯ ನೆಲ ಮಹಡಿಯ ಕಟ್ಟಡದ ವಿಸ್ತೀರ್ಣ 1833 ಚದರ ಅಡಿ ಮತ್ತು 0.3 into 10.67 ಮೀಟರ್‌ಗಳು, ಈ ಆಸ್ತಿಯು 17ನೇ ವಾರ್ಡ್, ಬಸವೇಶ್ವರ ಬಡಾವಣೆ, ಹಿರಿಯೂರು ಟೌನ, ಚಿತ್ರದುರ್ಗ ಜಿಲ್ಲೆಯಲ್ಲಿದೆ. ಈ ಆಸ್ತಿಯು ರಮೇಶ್ ಕುಮಾರ್ ಟಿ ರವರ ಹೆಸರಿನಲ್ಲಿದ್ದು, ಪ್ಲಾಟ್ ನಂ.18, ಆಸ್ತಿ ನಂ.4/18, ಜಿ ಪಿ ಆಸ್ತಿ ನಂ.18, ಇ–ಖಾತಾ ನಂ.150500402003100414, ಬಾಗಿಲು ಪಶ್ಚಿಮದ ಕಡೆ, ಈ ಆಸ್ತಿಯು ವಾರ್ಡ್ ನಂ.1, ಬೈಲುವದ್ದಿಗೇರಿ ಗ್ರಾಮ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ, ಜೊತೆಗೆ ವಿಜಯನಗರ ಜಿಲ್ಲೆಯಲ್ಲಿ ನೋಂದಣಿಯಾಗಿದೆ ಮತ್ತು ಈ ಆಸ್ತಿಯು ಬಸವರಾಜ್ ಎಂ ರವರ ಹೆಸರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಸಿದ್ದೇಶ್ವರರವರ ಮನೆ, ಪಶ್ಚಿಮಕ್ಕೆ: ಲಕ್ಕಕ್ಕ ಶಿವಮೂರ್ತಿರವರ ಮನೆ, ಉತ್ತರಕ್ಕೆ: ಜಯನಗರ ಬಡಾವಣೆ, ದಕ್ಷಿಣಕ್ಕೆ: ರಸ್ತೆ ಮತ್ತು ವಿಜಯಲಕ್ಷ್ಮಿ ತಿಪ್ಪೆಸ್ವಾಮಿರವರ ಖಾಲಿ ನಿವೇಶನದ ಆಸ್ತಿ. **ಯಾವುದೇ ಮಾಹಿತಿಗಾಗಿ ಶ್ರೀ ಗಂಗಾಧರ್, ಮೊಬೈಲ್ ನಂ. 9449182570 ರವರನ್ನು ಸಂಪರ್ಕಿಸಿ.**	09.06.2025 ಎನ್‌ಪಿಎ ದಿನಾಂಕ 13.02.2025	Overdraft Loan No. 920030038602876 Amount : Rs 15,00,000/- O/s Amount : Rs. 17,00,173/- as on 10.06. 2025 ---- Working Capital Loan No. 920030038602915 Amount : Rs 25,100/- O/s Amount : Rs. 25,499/- as on 10.06. 2025 ಒಟ್ಟು ಬಾಕಿ ಮೊತ್ತ ರೂ.17,25,672/– ದಿನಾಂಕ: 10.06.2025 ರಂದು ಇದ್ದಂತೆ
5	(1) ಶ್ರೀಮತಿ ಸರೋಜಮ್ಮ D/o ಅಂಗಡಿ ವೀರಣ್ಣ **(ಸಾಲಗಾರರು/ಅರ್ಜಿದಾರರು),** (2) ಶ್ರೀ ಆದರ್ಶ್ ಸಿಎಲ್ ಬಿನ್ ಲೋಕೇಶಪ್ಪ, (3) ಶ್ರೀ ಲೋಕೇಶಪ್ಪ ಟಿ ಬಿ ಬಿನ್ ಬಸಣ್ಣ, ಇವರೆಲ್ಲರ ವಿಳಾಸ: #128 ಪಿ ರೋಟರಿ ಶಾಲೆ, ಗಾಂಧಿ ನಗರ, ಚಳ್ಳಕೆರೆ–577522. (4) ಶ್ರೀಮತಿ ಜಲಜಾಕ್ಷಮ್ಮ D/o ಅಂಗಡಿ ವೀರಣ್ಣ 2 ನೇ ಕ್ರಾಸ್, ಬಿಎನ್‌ಕೆ ದುರ್ಗದ ಮನೆ ಪಕ್ಕ, ಗಾಂಧಿ ನಗರ, ಚಳ್ಳಕೆರೆ–577522. **(ಸಹ–ಅರ್ಜಿದಾರರು/ ಜಾಮೀನುದಾರರು)**	**ಷೆಡ್ಯೂಲ್ ಆಸ್ತಿ** ಕಮರ್ಷಿಯಲ್ ಕಟ್ಟಡದ ಆಸ್ತಿಯ ನಿವೇಶನ ನಂ.6ಎ, ಮುನಿಸಿಪಲ್ ಖಾತಾ ನಂ.33/32/2200, ವಿಸ್ತೀರ್ಣ 60X130 ಇದರಲ್ಲಿ 16X130 ಆರ್‌ಸಿಸಿ ಕಟ್ಟಡ ಮತ್ತು 30X60 ಸಿಮೆಂಟ್ ಶೀಟ್ ಕಟ್ಟಡ, ಈ ಆಸ್ತಿಯು ಆರ್‌ಎಂಸಿ ಯಾರ್ಡ್ ಬಿ ಬ್ಲಾಕ್, ಚಳ್ಳಕೆರೆ ಟೌನ್‌ನಲ್ಲಿದೆ. ಈ ಆಸ್ತಿಯು ಶ್ರೀ ಲೋಕೇಶಪ್ಪ ಟಿಬಿ ಬಿನ್ ಟಿ ಬಸಣ್ಣ ರವರ ಹೆಸರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಮಾರುಕಟ್ಟೆ ಯಾರ್ಡ್ ರಸ್ತೆ, ಪಶ್ಚಿಮಕ್ಕೆ: ಕನ್ಸರ್ವೆನ್ಸಿ (ಮಾರುಕಟ್ಟೆ ಯಾರ್ಡ್ ಸಮಿತಿಯ ಖಾಲಿ ಆಸ್ತಿ), ಉತ್ತರಕ್ಕೆ: ಸಿರಿಯಣ್ಣ ದಲ್ಲಲಿ ಮಂಡಿ, ದಕ್ಷಿಣಕ್ಕೆ: ವಿಜಯೇಂದ್ರಪ್ಪ ದಲ್ಲಲಿ ಮಂಡಿರವರ ಆಸ್ತಿ. **ಯಾವುದೇ ಮಾಹಿತಿಗಾಗಿ ಶ್ರೀ ಗಂಗಾಧರ್, ಮೊಬೈಲ್ ನಂ. 9449182570 ರವರನ್ನು ಸಂಪರ್ಕಿಸಿ.**	09.06.2025 ಎನ್‌ಪಿಎ ದಿನಾಂಕ 02.05.2025	Overdraft Loan No. 920030055485168 Amount : Rs 76,00,000/- O/s Amount : Rs. 84,07,700 /- as on 10.06.2025 ---- Working Capital Loan No. 920030055485197 Amount : Rs. 26,000/- O/s Amount : Rs. 4,364//- as on 10.06.2025 ಒಟ್ಟು ಬಾಕಿ ಮೊತ್ತ ರೂ.84,12,064/– ದಿನಾಂಕ: 10.06.2025 ರಂದು ಇದ್ದಂತೆ
6	(1) ಶ್ರೀ ದೀಪಕ್ ಬಿನ್ ಶ್ರೀ ಪ್ರಕಾಶ್ ಸವತ ಮಾಳಿಂಗಾರ್ ಇಂದಪೂರ್, ಪುಣೆ–413106. **ಮತ್ತೊಂದು ವಿಳಾಸ: ಶ್ರೀ ದೀಪಕ್** ಬಿನ್ ಶ್ರೀ ಪ್ರಕಾಶ್ ಭವಾನಿ ಬಿಜಲಗಾವ್ ತಾಲ್ಲೂಕು, ಔರಾದ್ ಖಾನಾಪುರ, ಬೀದರ್, ಕರ್ನಾಟಕ–585326.	**ಈ ಆಸ್ತಿಯು ಶ್ರೀ ದೀಪಕ್ ರವರ ಹೆಸರಿನಲ್ಲಿದೆ** ಇಕ್ವಿಟೇಬಲ್ ಅಡಮಾನ ಸ್ವತ್ತಿನ ವಾಸಯೋಗ್ಯ ಮನೆಯ ಆಸ್ತಿ ನಂ.24–524–101, ವಾರ್ಡ್ ನಂ.13, ಹಳೆಯ ಆಸ್ತಿ ನಂ.33, ಈ ಆಸ್ತಿಯು ಎನ್‌ಎ ಭೂಮಿ ಸರ್ವೆ ನಂ.86/3, ಪಟ್ಟಣ ಪಂಚಾಯತ್ ಔರಾದ್–585326ರ ವ್ಯಾಪ್ತಿಯಲ್ಲಿದೆ, ವಿಸ್ತೀರ್ಣ 1200 ಚದರ ಅಡಿ, 84.54 ಚದರ ಮೀಟರ್ ಪ್ಲಿಂತ್ ಪ್ರದೇಶವನ್ನೊಳ ಗೊಂಡಿದ್ದು, ಶ್ರೀ ದೀಪಕ್ ಬಿನ್ ಪ್ರಕಾಶ್ ಸೂರ್ಯವಂಶಿರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.34, ಪಶ್ಚಿಮಕ್ಕೆ: ಪ್ಲಾಟ್ ನಂ.32, ಉತ್ತರಕ್ಕೆ: 4' Sheri & ಡಾ. ಮುರ್ಕಿಜೆರ್ ರವರ ಪ್ಲಾಟ್, ದಕ್ಷಿಣಕ್ಕೆ: 9 ಮೀಟರ್‌ಗಳ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಸುಹೇಲ್, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ. 8880999288 ರವರನ್ನು ಸಂಪರ್ಕಿಸಿ.**	05.06.2025 ಎನ್‌ಪಿಎ ದಿನಾಂಕ 01.05.2025	Over Draft Loan No. 922030051398552 Amount : Rs. 14 ,00,000/- ---- Production Credit (working Capital) Amount : Rs.26,000/- ಒಟ್ಟು ಬಾಕಿ ಮೊತ್ತ ರೂ.16,07,661/– ದಿನಾಂಕ: 05.06.2025 ರಂದು ಇದ್ದಂತೆ
7	(1) ಶ್ರೀ ಕೆ ಎನ್ ವೆಂಕಟೇಶ್ ಮೂರ್ತಿ ಬಿನ್ ಸಿವಿ ನಾರಾಯಣ ಸ್ವಾಮಿ, ಜ್ಯೂಸ್ ಮ್ಯಾಜಿಕ್ ಹತ್ತಿರ, ಗುಂಡಪ್ಪ ಲೇಔಟ್, 2ನೇ ಕ್ರಾಸ್, ಕನಂಪಲ್ಲಿ, ಚಿಂತಾಮಣಿ 563125. (ಸಾಲಗಾರರು/ಅರ್ಜಿದಾರರು)	**ಷೆಡ್ಯೂಲ್ ಆಸ್ತಿ** ಇಕ್ವಿಟೇಬಲ್ ಅಡಮಾನ ಸ್ವತ್ತಿನ ವಾಸಯೋಗ್ಯ ಮನೆಯ ಆಸ್ತಿಯ ಮುನಿಸಿಪಲ್ ನಂ.125/1, ನಿವೇಶನ ನಂ.125, ಪಿಐಡಿ ನಂ.55–413–125/1, ವಿಸ್ತೀರ್ಣ 512 ಚದರ ಅಡಿ, ಈ ಆಸ್ತಿಯು ವಾರ್ಡ್ ನಂ.161, ಬನಶಂಕರಿ 3ನೇ ಹಂತ, ಹೊಸಕೆರೆಹಳ್ಳಿ, ಉತ್ತರಹಳ್ಳಿ, ಬೆಂಗಳೂರು ದಕ್ಷಿಣದಲ್ಲಿದ್ದು, ಶ್ರೀ ಕೆ ಎನ್ ವೆಂಕಟೇಶ್ ಮೂರ್ತಿ ಬಿನ್ ಸಿವಿ ನಾರಾಯಣಸ್ವಾಮಿರವರ ಹೆಸರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ವಿ ರಾಮು @ ರಾಮಯ್ಯ @ ವಿ ರಾಮಯ್ಯರವರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ವಿ ರಾಮು @ ರಾಮಯ್ಯ @ ವಿ ರಾಮಯ್ಯರವರ ಆಸ್ತಿ, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಗಂಗಾಧರ್, ಮೊಬೈಲ್ ನಂ. 9449182570ರವರನ್ನು ಸಂಪರ್ಕಿಸಿ.**	09.06.2025 ಎನ್‌ಪಿಎ ದಿನಾಂಕ 01.05.2025	Overdraft Loan No. 921030041876096 Amount : Rs. 39,50,000/- O/s Amount : Rs. 38,92,336/- as on 09.06.2025 ---- Working Capital Loan No. 921030041876104 Amount : Rs. 30,000/- O/s Amount : Rs 16,811/- as on 09.06. 2025 ಒಟ್ಟು ಬಾಕಿ ಮೊತ್ತ ರೂ.39,09,147/– ದಿನಾಂಕ: 09.06.2025 ರಂದು ಇದ್ದಂತೆ
8	(1) ಶ್ರೀ ಶೇಖ್ ಹಯಾತ್ ಮೊಯಿನುದ್ದೀನ್ ಬಿನ್ ಶ್ರೀ ಮೊಹಮ್ಮದ್ ಹಯಾತ್, (2) ಶ್ರೀಮತಿ ಶಹನಿಲಾ ತಬಸ್ಸುಮ್ ಕೋಂ ಶ್ರೀ ಶೇಖ್ ಹಯಾತ್ ಮೊಯಿನುದ್ದೀನ್, ಇವರಿಬ್ಬರ ವಿಳಾಸ: ಐಡಿಯಲ್ ಬಿಲ್ಡಿಂಗ್, ಸುಣ್ಣದ ಬೀದಿ ವಿರಾಜಪೇಟೆ, ಕೊಡಗು, ಕರ್ನಾಟಕ–571218.	**ಈ ಆಸ್ತಿಯು ಶ್ರೀ ಶೇಖ್ ಹಯಾತ್ ಮೊಯಿನುದ್ದೀನ್ ರವರ ಹೆಸರಿನಲ್ಲಿದೆ.** ಇಕ್ವಿಟೇಬಲ್ ಅಡಮಾನ ಸ್ವತ್ತಿನ ವಾಸಯೋಗ್ಯ ಮನೆಯ ಪಿಐಡಿ ನಂ.6–508–46ಜಿ, ವಿಸ್ತೀರ್ಣ 327 ಚದರ ಅಡಿ, ಈ ಆಸ್ತಿಯು ವಾರ್ಡ್ ನಂ.6, 6ನೇ ಬ್ಲಾಕ್, ವಿರಾಜ್‌ಪೇಟೆ ಟೌನ್, ಕೊಡಗು ಜಿಲ್ಲೆಯಲ್ಲಿದ್ದು, ಈ ಆಸ್ತಿಯು ಶ್ರೀ ಎಸ್‌ಹೆಚ್‌ಮೊಯಿನುದ್ದೀನ್ ಬಿನ್ ಶ್ರೀ ಮೊಹಮ್ಮದ್ ಹಯಾತ್‌ರವರ ಹೆಸರಿನಲ್ಲಿದೆ, ಪಿಐಡಿ ನಂ.6–508–46ಜಿ (ಹಳೆ ನಂ.06), ಸರ್ವೆ ನಂ.68/9, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 8.229616 X ಉತ್ತರದಿಂದ ದಕ್ಷಿಣಕ್ಕೆ: 3.691135 ಮೀಟರ್‌ಗಳು, ಈ ವಾಸಯೋಗ್ಯ ಆಸ್ತಿಯು ಎ.ಪಿ.ಜೆ. ಅಬ್ದುಲ್ ಕಲಾಂ ರಸ್ತೆ, ವಿರಾಜ್‌ಪೇಟೆ, ಕೊಡಗು ಜಿಲ್ಲೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.68/02, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.68/10, ದಕ್ಷಿಣಕ್ಕೆ: ನಿವೇಶನ ನಂ.68/08. **ಯಾವುದೇ ಮಾಹಿತಿಗಾಗಿ ಶ್ರೀ ಸುಹೇಲ್, ಕಲೆಕ್ಷನ್ ಮ್ಯಾನೇಜರ್, ಮೊಬೈಲ್ ನಂ. 8880999288ರವರನ್ನು ಸಂಪರ್ಕಿಸಿ.**	05.06.2025 ಎನ್‌ಪಿಎ ದಿನಾಂಕ 02.05.2025	Over Draft Loan No. 922030010159523 Amount: Rs. 9,70,000/- ---- Production Credit- Horticulture (Working Capital) Amount: Rs. 30,000/- ಒಟ್ಟು ಬಾಕಿ ಮೊತ್ತ ರೂ. 10,55,838/– ದಿನಾಂಕ: 05.06.2025 ರಂದು ಇದ್ದಂತೆ

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 25.06.2025
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಅಮೃತ ವಿದ್ಯಾಪೀಠಕ್ಕೆ ಅಗ್ರ 50ರಲ್ಲಿ ಸ್ಥಾನ

ಬೆಂಗಳೂರು: ಟೈಮ್ಸ್ ಹೈಯರ್ ಎಜುಕೇಶನ್ ಇಂಪ್ಯಾಕ್ಟ್ ಶ್ರೇಯಾಂಕ 2025 ರಲ್ಲಿ ಅಮೃತ ವಿಶ್ವ ವಿದ್ಯಾಪೀಠವು ಅಗ್ರ 50 ರಲ್ಲಿ ಜಾಗತಿಕ ಸ್ಥಾನ ಪಡೆದುಕೊಂಡಿದೆ.

ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ವಿಶ್ವಾದ್ಯಂತ ವಿಶ್ವವಿದ್ಯಾಲಯಗಳ ಪ್ರಗತಿಯನ್ನು ಮೌಲ್ಯಮಾಪನ ಮಾಡುತ್ತದೆ. ಈ ವರ್ಷದ ಇಂಪ್ಯಾಕ್ಟ್ ಶ್ರೇಯಾಂಕಗಳು ಇದುವರೆಗಿನ ಅತ್ಯಂತ ಸ್ಪರ್ಧಾತ್ಮಕವಾಗಿದ್ದು, 130 ದೇಶಗಳಿಂದ 2,540 ಕ್ಕೂ ಹೆಚ್ಚು ವಿವಿಗಳು ಭಾಗವಹಿಸಿದ್ದವು. ಅವುಗಳಲ್ಲಿ, ಭಾರತವು 148 ಸಂಸ್ಥೆಗಳೊಂದಿಗೆ ಹೆಚ್ಚು ಪ್ರಾತಿನಿಧ್ಯ ಹೊಂದಿರುವ ರಾಷ್ಟ್ರವಾಗಿ ಹೊರಹೊಮ್ಮಿದೆ. ಅಮೃತ ವಿವಿ ಪ್ರತ್ಯೇಕವಾಗಿ ನಿಂತು ಆಳವಾದ ಪರಿಣಾಮ, ಪರಿವರ್ತನೆಯ ಸಂಶೋಧನೆ ಮತ್ತು ಜಾಗತಿಕ ಸವಾಲುಗಳಿಗೆ ಕಾರ್ಯಾಚರಣೆಗಳ ವಿಧಾನಕ್ಕಾಗಿ ಗುರುತಿಸಲ್ಪಟ್ಟಿದೆ. ಒಟ್ಟಾರೆ ಜಾಗತಿಕವಾಗಿ 41 ನೇ ಶ್ರೇಯಾಂಕದೊಂದಿಗೆ, ಅಮೃತ ಭಾರತದ ಅತ್ಯುನ್ನತ ಎಸ್‌ಡಿಜಿ ಪರಿಣಾಮ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಿದೆ, ಸುಸ್ಥಿರ ಭವಿಷ್ಯ ರೂಪಿಸುವಲ್ಲಿ ಶೈಕ್ಷಣಿಕ ಕ್ಷೇತ್ರದ ಪಾತ್ರವನ್ನು ಮರು ವ್ಯಾಖ್ಯಾನಿಸಿದೆ. ಈ ಕುರಿತು ಮಾಹಿತಿ ಹಂಚಿಕೊಂಡಿರುವ ಅಮೃತ ಸ್ಕೂಲ್ ಫಾರ್ ಸಸ್ಟೈನಬಲ್ ಫ್ಯೂಚರ್ಸ್‌ನ ಡೀನ್ ಡಾ.ಮನೀಷಾ.ವಿ.ರಮೇಶ್, ಜಾಗತಿಕ ಮನ್ನಣೆ ಸಹಾನುಭೂತಿ ಆಧಾರಿತ ನಾವೀನ್ಯತೆಗೆ ಅಮೃತ ವಿವಿಯ ಬದ್ಧತೆಗೆ ಸಾಕ್ಷಿಯಾಗಿದೆ. ನಾವು ಕೇವಲ ವಿಶ್ವವಿದ್ಯಾಲಯಗಳನ್ನು ನಿರ್ಮಿಸುತ್ತಿಲ್ಲ, ಸ್ಥಿತಿಸ್ಥಾಪಕ ಸಮುದಾಯ ಮತ್ತು ಸುಸ್ಥಿರ ಭವಿಷ್ಯ ರಚಿಸುತ್ತಿದ್ದೇವೆ ಎಂದು ತಿಳಿಸಿದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, **ಶ್ರೀ. ರಿಕಿ ಅಯೂನಾರ್ಡ್ ಪೆರೇರಾ** ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ತಿಳಿಸಿರುವ ಸ್ಥಿರಾಸ್ತಿ ಸ್ವತ್ತಿಗೆ ಮಾಲೀಕರಾಗಿರುತ್ತಾರೆ ಮತ್ತು ಶ್ರೀ. ರಾಜಪ್ಪ ರವರು ಶ್ರೀಮತಿ. ಸಿಲ್ವಿಯಾ ಫರ್ನ್ ಆಂಡಿಸ್ ರವರ ಹೆಸರಿಗೆ ಬರೆದು ಕೊಟ್ಟಿರುವ ಅಸಲಿ ಕ್ರಯ ಪತ್ರದ ದಿನಾಂಕ: 07-12-1994, ದಸ್ತಾವೇಜು ನಂ. 8330/1994-95, 1ನೇ ಪುಸ್ತಕ, ವಲ್ಯೂಮ್ ನಂ. 791, ಪುಟಗಳು 99-100, ಈ ಸ್ವತು ಕೆ.ಆರ್.ಪುರಂ, ಬೆಂಗಳೂರು, ಉಪ ನೋಂದಣಿ ಕಛೇರಿಯಲ್ಲಿ ನೋಂದಣಿಯಾಗಿರುವ ಅಸಲಿ ಕ್ರಯ ಪತ್ರವನ್ನು ಕಳೆದುಕೊಂಡಿರುತ್ತಾರೆ. ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಾದರೂ ಸ್ವತ್ತಿನ ಮೇಲೆ ಸ್ವಾಧೀನವನ್ನು ಹೊಂದಿದ್ದರೆ, ಅದನ್ನು ಈ ದಿನಾಂಕದಿಂದ ನೋಟೀಸು ಪ್ರಕಟವಾದ **ಏಳು ದಿನಗಳ** ಒಳಗಾಗಿ ಕೆಳಸಹಿದಾರರಿಗೆ ತಲುಪಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿಯ ಬೈರತಿ ಗ್ರಾಮದಲ್ಲಿರುವ, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಬರುವ, ಸೈಟ್ ಸಂಖ್ಯೆ. 41 ಮತ್ತು 42, ಖಾತಾ ಸಂಖ್ಯೆ. 370/308, ಹಳೆಯ ಆಸ್ತಿ ಸಂಖ್ಯೆ. 15/1, ಪ್ರಸ್ತುತ ಖಾತಾ ಸಂಖ್ಯೆ. 16/2, ಬಿಬಿಎಂಪಿ ಇ-ಆಸ್ತಿ ಪಿಐಡಿ ಸಂಖ್ಯೆ. 6404236281,ರ ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ:-60 ಅಡಿ, ಒಟ್ಟು 2400 ಚದರ ಅಡಿ ಅಳತೆ ಸ್ವತ್ತಿಗೆ ಚಕ್ಕುಬಂದಿ:- ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ಸಂಖ್ಯೆ. 47 & 48, ಉತ್ತರಕ್ಕೆ: ಸೈಟ್ ಸಂಖ್ಯೆ.43, ದಕ್ಷಿಣಕ್ಕೆ: ಸೈಟ್ ಸಂಖ್ಯೆ.40,

ಎನ್ ಜಗದೀಶ್ ಕುಮಾರ್, ವಕೀಲರು
ನಂ.30/1, 2ನೇ ಮಹಡಿ, 7ನೇ ಕ್ರಾಸ್,
ಎನ್.ಆರ್.ಕಾಲೋನಿ ಬಸ್ ನಿಲ್ದಾಣದ ಹತ್ತಿರ,
ಹೋಟೆಲ್ ದ್ವಾರಕ ಎದುರು, ಬೆಂಗಳೂರು–560019.

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ

ಸಿ.ಮಿಸ್.ನಂ. 398/2025

ಅರ್ಜಿದಾರರು: ಶ್ರೀ ಕೆಂಪೇಗೌಡ ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: ತಹಶಿಲ್ದಾರ್ ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರುಗಳಿಗೆ ತಂದೆಯಾದ ಶ್ರೀಕಂಠೇಗೌಡ ಬಿನ್ ಲೇಟ್ ಸಿದ್ದೇಗೌಡ ಇವರು ದಿನಾಂಕ 12.07.1984 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಸೋರೆಕಾಯಿದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿರುವುದು ಸರಿಯಷ್ಟೆ, ಇವರ ಮರಣ ದಿನಾಂಕದ ಬಗ್ಗೆ ಯಾರಿಗಾದರೂ ತಕರಾರು ಇದ್ದಲ್ಲಿ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 04-08-2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ 20ನೇ ಜೂನ್ 2025 ರಂದು ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೇದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಮಧುಸೂದನ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 20/06/2025

ವಿಶ್ವವಾಣಿ
ವಿಶ್ವಾಸವೇ ವಿಶ್ವ

2ನೇ ಟೆಸ್ಟ್‌ಗೆ ಬುಮ್ರಾ ಅಲಭ್ಯ

ಲೀಡ್ಸ್‌ನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಬಹಳಷ್ಟು ಓವರ್‌ಗಳನ್ನು ಬೌಲಿಂಗ್ ಮಾಡಿರುವುದರಿಂದ ಎಡ್ಜ್‌ಬಾಸ್ಟನ್‌ನಲ್ಲಿ ನಡೆಯುವ ಇಂಗ್ಲೆಂಡ್ ವಿರುದ್ಧದ ಎರಡನೇ ಟೆಸ್ಟ್ ಪಂದ್ಯದಲ್ಲಿ ವೇಗಿ ಜಸ್‌ಪ್ರೀತ್ ಬುಮ್ರಾ ಆಡುವುದು ಅನುಮಾನ ಎನ್ನಲಾಗುತ್ತಿದೆ. ಮೊದಲ ಟೆಸ್ಟ್ ಪಂದ್ಯದಲ್ಲಿ ಬುಮ್ರಾ 5 ವಿಕೆಟ್ ಪಡೆದಿದ್ದರು.

ಸೊಂಪಾದ ಪುಟಗಳು

ಯಾವುದೋ ರೂಪದಲ್ಲಿ ದೇವರು ಬಂದೇ ಬರುತ್ತಾನೆ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ಹೋರಾಡುವ ವೀರರು, ಕದಿಯುವ ಚೋರರು!
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ತಮ್ಮ ಬಿಡುವಿಲ್ಲದ ಕೆಲಸಗಳ ಮಧ್ಯವೂ ನಿಮಗೆ ಸಮಯ ಕೊಡುವವರನ್ನು ಗೌರವಿಸಬೇಕು. ನೀವು ಬಯಸಿದಾಗ ತಮ್ಮ ಕೆಲಸವನ್ನೂ ನೋಡದೇ ಧಾವಿಸುವವರನ್ನು ಇಷ್ಟಪಡಬೇಕು.

ವಕ್ರತುಂಡೋಕ್ತಿ

ಶಾಪಿಂಗ್ ಮಾಡುವಾಗ ನಮಗೆ ಬೇಕಾದ ವಸ್ತುವನ್ನು ಖರೀದಿಸಿದಾಗ ಆಗುವ ಸಂತಸಕ್ಕಿಂತ, ಒಂದು ವಸ್ತುವನ್ನು ಖರೀದಿಸದೆ ಇದ್ದಾಗ ಆಗುವ ದುಃಖವೇ ಹೆಚ್ಚು.

ತರಗತಿ 10ಕ್ಕೆ 2ಬಾರಿ ಪರೀಕ್ಷೆ: ಸಿಬಿಎಸ್‌ಇ

ದೆಹಲಿ: 2026ರಿಂದ 10ನೇ ತರಗತಿ ವಿದ್ಯಾರ್ಥಿಗಳು ಒಂದೇ ಶೈಕ್ಷಣಿಕ ಅವಧಿಯಲ್ಲಿ ಎರಡು ಬಾರಿ ಬೋರ್ಡ್ ಪರೀಕ್ಷೆ ಬರೆಯಬಹುದಾಗಿದೆ. ಆದರೆ ಫೆಬ್ರವರಿಗೆ ನಡೆಯುವ ಮೊದಲ ಪರೀಕ್ಷೆಗೆ ಹಾಜರಿ ಕಡ್ಡಾಯ ಎಂದು 'ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ' (ಸಿಬಿಎಸ್‌ಇ) ಬುಧವಾರ ತಿಳಿಸಿದೆ. 2ನೇ ಬಾರಿಯ ಪರೀಕ್ಷೆ ಮೇ ತಿಂಗಳಲ್ಲಿ ನಡೆಯಲಿದ್ದು, ಇದು ಐಚ್ಛಿಕವಾಗಿರುತ್ತದೆ. ವಿದ್ಯಾರ್ಥಿಗಳು ತಮ್ಮ ಕಾರ್ಯಕ್ಷಮತೆ ಸುಧಾರಿಸಲು ಬಯಸಿದರೆ ಹಾಜರಾಗಬಹುದಾಗಿದೆ.

ನಾಲ್ವರು ಯಾನಿಗಳ ಆಕ್ಸಿಯೊಮ್-4 ಮಿಷನ್ ಬಾಹ್ಯಾಕಾಶ ನೌಕೆ ಯಶಸ್ವಿ ಉಡ್ಡಯನ

ಶುಭಾಂಶು ಶುಭಯಾತ್ರೆ: ಬಾನೆತ್ತರಕ್ಕೆ ಹಾರಿದ ಭಾರತದ ತಿರಂಗ

ಫ್ಲೋರಿಡಾ: 10, 9. 8..... ಅಮೆರಿಕದ ಫ್ಲೋರಿಡಾದಲ್ಲಿ ಹೀಗೆ ಕ್ಷಣ ಗಣನೆ ನಡೆಯುತ್ತಿದ್ದರೆ ಇತ್ತ ಭಾರತ ವಾಸಿಗಳ ಎದೆಯ ಬಡಿತ ಕ್ಷಣಕ್ಷಣಕ್ಕೂ ಜೋರಾಗುತ್ತಿತ್ತು. ಬರೋಬ್ಬರಿ 41 ವರ್ಷಗಳ ಬಳಿಕ ಭಾರತ ಮಾತ್ರೆಯ ಸುಪುತ್ರನೊಬ್ಬ ಬಾಹ್ಯಾಕಾಶ ಯಾನ ಕೈಗೊಂಡಿದ್ದು, ಅದು ಯಾವುದೇ ತೊಡಕಿಲ್ಲದೇ ಯಶಸ್ವಿಯಾಗಲಿ ಎಂಬ ಪ್ರಾರ್ಥನೆ ನಡೆದಿತ್ತು. ಆರು ಬಾರಿ ಗಗನಯಾನ ಮುಂದೂಡಿಕೆಯಾಗಿದ್ದರೂ ಹತಾಶೆಗೊಳ್ಳದ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರ ಮೊದಲ ಗಗನಯಾನ ಕೊನೆಗೂ ಕೈಗೂಡಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಮತ್ತೊಂದು ವಿಕ್ರಮ ಬರೆದಿದೆ.

ಭಾರತೀಯ ವಾಯುಪಡೆಯ ಪೈಲಟ್ ಶುಭಾಂಶು ಶುಕ್ಲಾ, 'ಆಕ್ಸಿಯೊಮ್-4 ಮಿಷನ್' ಗ್ರೂಪ್ ಕ್ಯಾಪ್ಟನ್ ಆಗಿದ್ದು, ಇವರ ನೇತೃತ್ವದಲ್ಲಿ ಅಮೆರಿಕ, ಹಾಲೆಂಡ್ ಮತ್ತು ಡೆನ್ಮಾರ್ಕ್ ಸೇರಿ ನಾಲ್ವರು ಗಗನಯಾತ್ರಿಗಳನ್ನು ಹೊತ್ತ ವಿಶೇಷ ಗಗನ ನೌಕೆ 'ಸ್ಪೇಸ್‌ಎಕ್ಸ್' ಕಂಪನಿಯ ಬಲಿಷ್ಠ ರಾಕೆಟ್ 'ಫಾಲ್ಕನ್-9' ನೆರವಿನೊಂದಿಗೆ ಯಶಸ್ವಿಯಾಗಿ ಬಾಹ್ಯಾಕಾಶಕ್ಕೆ ಜಿಗಿದಿದೆ.

→ 4

ಸಹ ಗಗನಯಾತ್ರಿಗಳಾದ ನಾಸಾದ ಪೆಗ್ಗಿ ವಿಲ್ಸನ್, ಪೋಲೆಂಡ್‌ನ ಸ್ಲೊವೋಸ್ ಉಜ್‌ನ್ಯಾನ್‌ಸ್ಕಿ, ಹಂಗೇರಿಯ ಟಿಬೊರ್ ಕಪು ಜತೆ ಆಕ್ಸಿಯೊಮ್-4 ಮಿಷನ್ ಪೈಲಟ್ ಶುಭಾಂಶು ಶುಕ್ಲಾ.

ಶುಭಾಂಶು ಶುಕ್ಲಾ 140 ಕೋಟಿ ಭಾರತೀಯರ ಕನಸು, ಭರವಸೆಗಳನ್ನು ಹೊತ್ತುಕೊಂಡು ಬಾಹ್ಯಾಕಾಶಕ್ಕೆ ತೆರಳಿದ್ದಾರೆ. ಇದು ನಿಜಕ್ಕೂ ಭಾರತದ ಪಾಲಿಗೆ ಹೆಮ್ಮೆಯ ಕ್ಷಣ. ಬಾಹ್ಯಾಕಾಶಕ್ಕೆ ತೆರಳಿದ 2ನೇ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಮೂಲಕ ಶುಭಾಂಶು ಶುಕ್ಲಾ ಇತಿಹಾಸ ಬರೆದಿದ್ದಾರೆ. ಶುಭಾಂಶು ಶುಕ್ಲಾ ಮತ್ತು ಅವರ ಸಹಯಾತ್ರಿಕರಿಗೆ ಹಾರ್ದಿಕ ಶುಭಾಶಯಗಳು.

-ನರೇಂದ್ರ ಮೋದಿ ಪ್ರಧಾನಿ

ಇಸ್ರೊಗೆ 550 ಕೋಟಿ ವೆಚ್ಚ!

ಅಕ್ಸಿಯೊಮ್-4 ಮಿಷನ್‌ನಲ್ಲಿ ಇಸ್ರೊ ಪಾಲುದಾರನಾಗಿದ್ದು ಭಾರತದ ಪರ ಶುಭಾಂಶು ಶುಕ್ಲಾ ಅವರಲ್ಲದೆ ನಾಸಾದ ಪೆಗ್ಗಿ ವಿಲ್ಸನ್, ಪೋಲೆಂಡ್‌ನ ಸ್ಲೊವೋಸ್ ಉಜ್‌ನ್ಯಾನ್‌ಸ್ಕಿ, ಹಂಗೇರಿಯ ಟಿಬೊರ್ ಕಪು ಭಾಗಿಯಾಗಿದ್ದಾರೆ. ಅಮೆರಿಕದ ಹ್ಯೂಸ್ಟನ್‌ನಲ್ಲಿನ ಖಾಸಗಿ ಬಾಹ್ಯಾಕಾಶ ಯಾನ ಸಂಸ್ಥೆಯಾದ 'ಆಕ್ಸಿಯೊಮ್' ಎರಡು ವಾರಗಳ ಅವಧಿಯ ಬಾಹ್ಯಾಕಾಶ ಯಾನದ ಈ ಯೋಜನೆ ಯಲ್ಲಿ ಪ್ರತಿ ಗಗನಯಾತ್ರಿಗೆ 6.50 ಕೋಟಿ ಡಾಲರ್ ಗಳಷ್ಟು ಶುಲ್ಕ ವಿಧಿಸಿದೆ ಎಂಬ ಮಾಹಿತಿಯಿದೆ. ಇಸ್ರೊ ಈ ಯಾತ್ರೆಗೆ ಇದುವರೆಗೆ ಸುಮಾರು 550 ಕೋಟಿ ರು. ಹಣ ವ್ಯಯಿಸಿದೆ ಎನ್ನಲಾಗಿದೆ. ಆದರೆ ಇದರ ಅಧಿಕೃತ ಅಂಕಿಅಂಶಗಳನ್ನು ಈ ತನಕ ಬಿಡುಗಡೆ ಮಾಡಿಲ್ಲ.



ದೆಹಲಿಯಿಂದ ವಾಪಸ್, ಅತೃಪ್ತರ ಜತೆ ಸಿಎಂ ಸಭೆ | ಜೂ.30ಕ್ಕೆ ಸುರ್ಜೇವಾಲ ಪಾಠ

ಅಸಮಾಧಾನಕ್ಕೆ ಮುಲಾಮು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಕೋಲಾಹಲ ಸೃಷ್ಟಿಸಿರುವ ವಸತಿ ಇಲಾಖೆಯ ಭ್ರಷ್ಟಾಚಾರ ಆರೋಪದ ಹಿಂದಿನ ಮರ್ಮ ಹಾಗೂ ವಿವಾದವನ್ನು ಇತ್ಯರ್ಥಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಿಂದ ವಾಪಸಾಗುತ್ತಿದ್ದಂತೆ ಶಾಸಕರೊಂದಿಗೆ ಸರಣಿ ಸಭೆ ನಡೆಸಿದ್ದಾರೆ.

ದೆಹಲಿ ಪ್ರವಾಸದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಿಂದ ವಾಪಸಾಗುತ್ತಿದ್ದಂತೆ ಹಿರಿಯ ಶಾಸಕ ಬಿ.ಆರ್. ಪಾಟೀಲ್, ರಾಜು ಕಾಗೆ ಹಾಗೂ ಬೇಳೂರು ಗೋಪಾಲಕೃಷ್ಣ ಅವರಿಗೆ ಬುಲಾವ್ ನೀಡಿದ್ದಾರೆ. ಅದರಲ್ಲಿಯೂ ವಸತಿ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಆಡಿಯೊ ಬಿಡುಗಡೆ ಮಾಡಿದ್ದ ಪಾಟೀಲ್ ಅವರೊಂದಿಗೆ ಸುದೀರ್ಘ ಚರ್ಚೆ ನಡೆಸಿದ್ದಾರೆ. ಭ್ರಷ್ಟಾಚಾರದ ಆರೋಪ ಮಾಡಿದ ಬಳಿಕ ಅದನ್ನು ನಿರಂತರ ವಾಗಿ ಪಾಟೀಲ್ ಅವರು ಪುನರುಚ್ಚರಿಸಿದ್ದರು. ಇದು ಸರಕಾರಕ್ಕೆ ಹಾಗೂ ಪಕ್ಷಕ್ಕೆ ತೀವ್ರ ಮುಜುಗರವನ್ನು ಉಂಟು ಮಾಡಿದೆ. ಆದ್ದರಿಂದ ಇದೀಗ ಸಿದ್ದರಾಮಯ್ಯ ಅವರು ಕರೆದು ಸಮಸ್ಯೆ ಆಲಿಸಿದ್ದಾರೆ.

ಬುಧವಾರ ಬೆಳಗ್ಗೆ ದೆಹಲಿಯಲ್ಲಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿಯಾದ ಸಮಯದಲ್ಲಿ ಶಾಸಕರ ಸಮಸ್ಯೆ ಆಲಿಸುವಂತೆ ಸೂಚನೆ ನೀಡಿದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಿಂದ ತೆರಳುವ ಮೊದಲೇ ಶಾಸಕರಿಗೆ ಕರೆ ಮಾಡಿ ನಿವಾಸಕ್ಕೆ ಬರುವಂತೆ ಸೂಚನೆ ನೀಡಿದ್ದರು. ಅದರಂತೆ ಮುಖ್ಯಮಂತ್ರಿಗಳ ನಿವಾಸಕ್ಕೆ ಭೇಟಿ ನೀಡಿದ ಬಿ.ಆರ್. ಪಾಟೀಲ್, ರಾಜು ಕಾಗೆ ಹಾಗೂ ಬೇಳೂರು ಗೋಪಾಲಕೃಷ್ಣ ತಮ್ಮ ಅಸಮಾಧಾನವನ್ನು ಹೊರಹಾಕಿದ್ದಾರೆ ಎನ್ನಲಾಗಿದೆ. ಇದಕ್ಕೂ ಮೊದಲು ಬಿ.ಆರ್. ಪಾಟೀಲ್ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿ ಚರ್ಚಿಸಿದ್ದು, ಕುತೂಹಲಕ್ಕೆ ಕಾರಣವಾಗಿದೆ.

ಸಿಎಂಗೆ ವಿವರಣೆ ನೀಡಿದ ಜಮೀರ್

ಬಹಿರಂಗವಾಗಿ ಅಸಮಾಧಾನ ಹೊರ ಹಾಕಿದ ಬಿ.ಆರ್. ಪಾಟೀಲ್, ರಾಜು ಕಾಗೆ ಹಾಗೂ ಬೇಳೂರು ಗೋಪಾಲಕೃಷ್ಣ ಸಿಎಂ ನಿವಾಸಕ್ಕೆ ಬರುವ ಮೊದಲೇ ಸಚಿವ ಜಮೀರ್ ಅಹ್ಮದ್ ಸಿದ್ದರಾಮಯ್ಯ ನಿವಾಸಕ್ಕೆ ಆಗಮಿಸಿ, ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ವಿವರಣೆ ನೀಡಿದ್ದಾರೆ. ಇಲಾಖಾವಾರು ತನಿಖೆಗೆ ಸೂಚನೆ ನೀಡಿರುವ ಬಗ್ಗೆಯೂ ಮಾಹಿತಿ ನೀಡಿದರೂ, ಶಾಸಕರಿಂದ ಈ ರೀತಿಯ ಬಹಿರಂಗ ಹೇಳಿಕೆ ಆರೋಪ ಬರುವ ತನಕ ಏಕೆ ಕ್ರಮವಹಿಸಿಲ್ಲ ಎಂದು ಸಿದ್ದರಾಮಯ್ಯ ಅವರು ಪ್ರಶ್ನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಹಿರಂಗ ಹೇಳಿಕೆಗೆ ಹೈ ಬ್ರೇಕ್

ದೆಹಲಿ ಪ್ರವಾಸದ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆ.ಸಿ. ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನುಭೇಟಿಯಾದ ಸಿದ್ದರಾಮಯ್ಯ ಅವರಿಗೆ ರಾಜ್ಯ ನಾಯಕರು ಬಹಿರಂಗ ಹೇಳಿಕೆ ನೀಡದಂತೆ ಸೂಚಿಸುವಂತೆ ಹೇಳಿದ್ದಾರೆ. ಪಕ್ಷದ ಶಾಸಕರು ತಮ್ಮ ಅಸಮಾಧಾನವನ್ನು ಪಕ್ಷದ ಚೌಕಟ್ಟಿನಲ್ಲಿ ಹೇಳಿಕೊಳ್ಳಬೇಕು. ಈ ಬಗ್ಗೆ ಹಲವು ಬಾರಿ ಎಚ್ಚರಿಕೆ ನೀಡಿದ್ದರೂ, ಕೆಲ ಶಾಸಕರು ತಿದ್ದಿಕೊಂಡಿಲ್ಲ. ಆದ್ದರಿಂದ ಈ ಬಗ್ಗೆ ಮತ್ತೊಮ್ಮೆ ಎಚ್ಚರಿಕೆ ನೀಡಿ, ಜತೆಗೆ ಸಚಿವರು ಕೈಗೆ ಸಿಗುತ್ತಿಲ್ಲ ಎನ್ನುವ ಶಾಸಕರ ಆರೋಪಕ್ಕೂ ಪರಿಹಾರ ಕಂಡುಕೊಳ್ಳಿ. ಇನ್ನು ಮುಂದೆ ಬಹಿರಂಗ ಹೇಳಿಕೆ ಮುಂದುವರಿದರೆ ಕಠಿಣ ಕ್ರಮ ಅನಿವಾರ್ಯ ಎನ್ನುವ ಮಾತುಗಳು ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

30ಕ್ಕೆ ಬೆಂಗಳೂರಿಗೆ ಸುರ್ಜೇವಾಲ

ಬಹಿರಂಗ ಹೇಳಿಕೆ ನೀಡದಂತೆ ಸ್ಪಷ್ಟ ಸೂಚನೆಯ ಹೊರತಾಗಿಯೂ ಕೆಲ ಶಾಸಕರು ತಮ್ಮ ಅಸಮಾಧಾನವನ್ನು ಮುಂದುವರೆಸಿರುವುದರಿಂದ ಇದೇ 30ಕ್ಕೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯಕ್ಕೆ ಆಗಮಿಸಲಿದ್ದಾರೆ. ಈ ವೇಳೆ ಶಾಸಕರ ಹಾಗೂ ಸಚಿವರೊಂದಿಗೆ ಸಭೆ ನಡೆಸಿ, ಭಿನ್ನಾಭಿಪ್ರಾಯ ಸರಿಪಡಿಸಲಿದ್ದಾರೆ. ಈ ಸಭೆಗೆ ಕೆ.ಸಿ. ವೇಣುಗೋಪಾಲ್ ಸಹ ಆಗಮಿಸುವ ಸಾಧ್ಯತೆಯಿದ್ದು, ಈ ವೇಳೆ ಅಸಮಾಧಾನಿತ ಶಾಸಕರೊಂದಿಗೆ ಪ್ರತ್ಯೇಕ ಸಭೆ ನಡೆಸುವ ಬಗ್ಗೆಯೂ ಚಿಂತನೆ ನಡೆಸಲಾಗಿದೆ. ಆದರೆ ಈ ಬಗ್ಗೆ ಸ್ಪಷ್ಟನೆ ಸಿಕ್ಕಿಲ್ಲ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ದೆಹಲಿ ಅಪ್‌ಡೇಟ್ಸ್

- ಬುಧವಾರ ಬೆಳಗ್ಗೆ ಕೆ.ಸಿ. ವೇಣುಗೋಪಾಲ್ ಭೇಟಿಯಾದ ಸಿಎಂ ಸಿದ್ದರಾಮಯ್ಯ
- ವಿಧಾನಪರಿಷತ್ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ ಚರ್ಚೆ
- ರಾಹುಲ್ ಗಾಂಧಿ ವಿದೇಶದಿಂದ ವಾಪಸಾದ ಬಳಿಕ ಅಂತಿಮಗೊಳಿಸುವ ಭರವಸೆ ನೀಡಿದ ವೇಣು
- ಬಿ.ಆರ್. ಪಾಟೀಲ್ ಆರೋಪಕ್ಕೆ ಸಂಬಂಧಿಸಿದಂತೆ ಸಿಎಂ ವಿವರಣೆ
- ಎಲ್ಲ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಂತೆ ಸೂಚನೆ ನೀಡಿದ ದಿಲ್ಲಿ ನಾಯಕರು

ಅಧಿಕಾರ ಹಂಚಿಕೆ ಸೂತ್ರದಲ್ಲಿ ಮೂಗುದಾರ, ಪದಾಧಿಕಾರಿಗಳ ಪಟ್ಟಿಗೆ ಸರ್ಜರಿ ಸಂಭವ

ಬಿವೈವಿ ಪಟ್ಟ ಕಾಯಂ

ಬೆಂಗಳೂರು: ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ಮುಂದುವರಿಯಲಿದ್ದು ವಾರದಲ್ಲಿ ಸಂಬಂಧಿತ ಆದೇಶ ಪ್ರಕಟವಾಗಲಿದೆ. ಆದರೆ, ಅಧ್ಯಕ್ಷರಿಗೆ ಮೂಗುದಾರ ಹಾಕಲು ರಾಜ್ಯ ಪದಾಧಿಕಾರಿಗಳ ಪಟ್ಟಿಯಲ್ಲಿ ಭಾರೀ ಬದಲಾವಣೆ ಮಾಡಲು ಪಕ್ಷದ ವರಿಷ್ಠರು ತೀರ್ಮಾನಿಸಿರುವ ಹೊಸ್ತಿಲಲ್ಲೇ, ದೆಹಲಿಯಲ್ಲಿ ಕೇಂದ್ರ ಸಚಿವರನ್ನು ಬಿಜೆಪಿ ನಾಯಕರು ಭೇಟಿಯಾಗಿರುವುದು ಕುತೂಹಲ ಮೂಡಿಸಿದೆ.

ಪ್ರಸ್ತುತ ರಾಜ್ಯಾಧ್ಯಕ್ಷರಾದ ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕ ಆರ್.ಅಶೋಕ ಮಂಗಳವಾರ ದೆಹಲಿಯಲ್ಲಿದ್ದರೂ ಯಾವುದೇ ವರಿಷ್ಠರ ಭೇಟಿಗೆ ಅವಕಾಶವಿರಲಿಲ್ಲ. ಹೀಗಿದ್ದರೂ, ಆರ್.ಅಶೋಕ ವರಿಷ್ಠರ ಭೇಟಿ ಕಾಯ್ದು ಕುಳಿತಿದ್ದೇ ಬಂತು ಎನ್ನುವಂತಾಗಿದೆ.

ಬಿಜೆಪಿ ಪಕ್ಷದ ರಾಜ್ಯ ಚುನಾವಣಾಧಿಕಾರಿ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ರಾಜ್ಯದ ನೂತನ ಅಧ್ಯಕ್ಷರ ಆಯ್ಕೆ ಇಷ್ಟರಲ್ಲೇ ಪ್ರಕಟಿಸಲಿದ್ದಾರೆ. ಇದಕ್ಕೆ ಸಂಪರ್ಕ, ಸಹಮತ ಹಾಗೂ ಅಭಿಪ್ರಾಯ ಸಂಗ್ರಹದಂತೆ ವಿಜಯೇಂದ್ರ ಅವರೇ ಮುಂದುವರೆಯಲಿದ್ದಾರೆ. ಆದರೆ ವರಿಷ್ಠರ ವಿವೇಚನೆಯಂತೆ ರಾಜ್ಯ ಪದಾಧಿಕಾರಿಗಳ ಪಟ್ಟಿಯಲ್ಲಿ ವಿಜಯೇಂದ್ರ ಬಣಕ್ಕಿಂತಲೂ ಹೆಚ್ಚಾಗಿ ಅಸಮಾಧಾನಿತರ, ಹಿರಿಯರ ಹಾಗೂ ತಟಸ್ಥ ಬಣದ ನಾಯಕರು ಹಾಗೂ ಕಾರ್ಯಕರ್ತರು ಹೆಚ್ಚಿನ ಜನರಿರುವುದು ನಿಶ್ಚಿತವಾಗಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ, ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಅಭಿಪ್ರಾಯಗಳನ್ನು ಈಗಾಗಲೇ ವರಿಷ್ಠರು ಪಡೆದುಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಅಂತಿಮ ಸುತ್ತಿನ ಅಭಿಪ್ರಾಯವನ್ನು ಕೂಡ ಪಡೆದಿದ್ದಾರೆ ರಾಜ್ಯ ಘಟಕದಿಂದ ಪಡೆಯಲಾಗಿದೆ. ಇದೇ ವಿಚಾರಕ್ಕೆ ಭೇಟಿ ಮಾಡಲೆಂದು ಹೋಗಿದ್ದ ಪ್ರತಿಪಕ್ಷದ ನಾಯಕರ ಆರ್.ಅಶೋಕ ಅವರಿಗೆ ವರಿಷ್ಠರು ದರ್ಶನ ಭಾಗ್ಯ ನೀಡಿಲ್ಲ ಹಾಗೂ ಅಭಿಪ್ರಾಯವನ್ನೂ ಪಡೆದಿಲ್ಲ ಎನ್ನಲಾಗಿದೆ. ಹೀಗಾಗಿ ಮಂಗಳವಾರ ರಾತ್ರಿಯವರೆಗೂ ಸಂಸದರೊಬ್ಬರ ಮನೆಯಲ್ಲೇ ಠಿಕಾಣಿ ಹೂಡಿದ್ದಾರೆ.

ಇನ್ನು ಪಕ್ಷದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ವಿಜಯೇಂದ್ರ ಅಂತಿಮವಾಗುತ್ತಿದ್ದಂತೆ ಅತೃಪ್ತರ ಬಣವೂ ಆಟ ಮುಂದುವರೆದಿದ್ದು, ಕೇಂದ್ರದಲ್ಲಿ ಇದಕ್ಕೆ ಒಂದಷ್ಟು ಬೆಂಬಲವೂ ವ್ಯಕ್ತವಾಗಿದೆ. ಇನ್ನು ರಾಜ್ಯಾಧ್ಯಕ್ಷರ ಆಯ್ಕೆ ವಿಳಂಬವಾದಷ್ಟೂ ಅಪಸ್ವರ ಹೆಚ್ಚಬಹುದು ಹೀಗಾಗಿ ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ ಎಂದು ರಾಜ್ಯದಿಂದ ಕೇಂದ್ರಕ್ಕೆ ಸಂದೇಶವೂ ರವಾನೆಯಾಗಿದೆ. ಖಾಸಗಿ ಕಾರ್ಯಕ್ರಮಕ್ಕೆ ಕೆಲ ದಿನಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ಅಮಿತ್ ಶಾ ರಾಜ್ಯ ಘಟಕಕ್ಕೆ ಕೆಲ ಸೂಚನೆಗಳೊಂದಿಗೆ ಎಚ್ಚರಿಕೆ ನೀಡಿದ್ದಾರೆ.

→ 4

ವರಿಷ್ಠರ ಭೇಟಿಗೆ ಹೋಗಿರಲಿಲ್ಲ. ವೈಯುಕ್ತಿಕ ಕೆಲಸಕ್ಕಾಗಿ ದೆಹಲಿಗೆ ಹೋಗಿದ್ದೆ. ರಾಜ್ಯಾಧ್ಯಕ್ಷರ ವಿಚಾರ ಸಂಬಂಧ ಕೇಂದ್ರ ಘಟಕ ಈಗಾಗಲೇ ಅಭಿಪ್ರಾಯ ಸಂಗ್ರಹಿಸಿದ್ದಾರೆ. ರಾಜ್ಯ ಘಟಕದ ಪದಾಧಿಕಾರಿಗಳನ್ನು ವರಿಷ್ಠರು ಅಂತಿಮಗೊಳಿಸಲಿದ್ದಾರೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಚುಂಚನಗಿರಿ, ಸುತ್ತೂರು ಸಂಸ್ಕೃತ ಪೀಠದ ಮೂಲಕ 300 ಜನರಿಗೆ ಆರತಿ ತರಬೇತಿ

ವಾರಕ್ಕೆ ಮೂರು ದಿನ ಕಾವೇರಿ ಆರತಿ

ವಿಶ್ವವಾಣಿ ವಿಶೇಷ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಹತ್ವಾಕಾಂಕ್ಷೆ ಘೋಷಣೆಯಾಗಿರುವ ಕಾವೇರಿ ಆರತಿಗೆ ಸಿದ್ಧತೆಗಳು ಆರಂಭಗೊಂಡಿವೆ. ಬುಧವಾರ ವಿಧಾನಸೌಧದಲ್ಲಿ ಸಚಿವರು, ಶಾಸಕರು, ರೈತ ಮುಖಂಡರ ಜೊತೆ ಸಭೆ ನಡೆಸಿದ ಬಳಿಕ ಮಾತನಾಡಿದ ಡಿಸಿಎಂ, ಕೆಆರ್‌ಎಸ್‌ಗೆ ಹೊಸ ರೂಪ ಕೊಡಲು ಪ್ರಾರಂಭ ಮಾಡಿದ್ದೇವೆ. ವಾರಕ್ಕೆ ಮೂರು ದಿನ ಕಾವೇರಿ ಆರತಿ ನಡೆಯಲಿದೆ. 10 ಸಾವಿರ ಆಸನಗಳ ವ್ಯವಸ್ಥೆ ಮಾಡುತ್ತೇವೆ. ಇದರಲ್ಲಿ ಶೇ. 70% ಆಸನಗಳು ಉಚಿತ, ಶೇ. 30% ಸೀಟುಗಳನ್ನು ಟಿಕೆಟ್ ಮೂಲಕ ಹಂಚಿಕೆ ಮಾಡಲಾಗುವುದು ಎಂದು ಹೇಳಿದರು.

ಈ ನಡುವೆ ಕಾವೇರಿ ಆರತಿಯ ಪೂರ್ಜಾ ಕೈಂಕರ್ಯವನ್ನು ಮುನ್ನಡೆಸಲು ಬರೋಬ್ಬರಿ 300 ಜನರಿಗೆ ತರಬೇತಿ ನೀಡಲಾಗುತ್ತಿದೆ. ಆದಿಚುಂಚನಗಿರಿ ಹಾಗೂ ಜೆಎಸ್‌ಎಸ್‌ನಲ್ಲಿರುವ ಸಂಸ್ಕೃತ ಪೀಠದ ಮೂಲಕ 300 ಜನರಿಗೆ ಕಾವೇರಿ ಆರತಿಗೆ ಸಂಬಂಧಿಸಿದ ತರಬೇತಿ ನೀಡಲಾ ಗುತ್ತಿದೆ.

→ 4

ಕಾವೇರಿ ಆರತಿಯಲ್ಲಿ ಸ್ಥಳೀಯ ಪುರೋಹಿತರು, ಕಲಾವಿದರಿಗೆ ಅವಕಾಶ ಕಲ್ಪಿಸಲಾಗುವುದು. ಆದಿಚುಂಚನಗಿರಿ ಮಠದಲ್ಲಿ ಪುರೋಹಿತರಿಗೆ ತರಬೇತಿ ನೀಡಲಾಗು ವುದು. ನೂರಾರು ಕಲಾವಿದರು ಭಾಗವಹಿಸಲಿದ್ದಾರೆ. ಕಾವೇರಿ ಹುಟ್ಟುವ ಕೊಡಗಿನಿಂದ ಕಾವೇರಿ ಸಮುದ್ರಕ್ಕೆ ಸೇರುವವರೆಗೂ ಎಷ್ಟು ಪ್ರದೇಶಗಳಲ್ಲಿ ವಿಭಿನ್ನ ಸಂಸ್ಕೃತಿ ಇದೆಯೋ ಅವುಗಳನ್ನು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಒಳಗೊಳ್ಳುವಂತೆ ಕ್ರಮವಹಿಸಲಾಗುವುದು.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ವಿಶ್ವ ಆಹಾರ ಸುರಕ್ಷತಾ ದಿನ
07ನೇ ಜೂನ್ 2025
Eat Right India
The theme for World Food Safety Day 2025 is "Food Safety: Science in Action"

ಈಟ್ ರೈಟ್ ಕಾರ್ಯಕ್ರಮದ ಮಹತ್ವ ಮತ್ತು ಪ್ರಮುಖಾಂಶಗಳು
ದೇಶದ ಆಹಾರ ಪದಾರ್ಥಗಳ ತಯಾರಿಕೆಯ ವ್ಯವಸ್ಥೆಯನ್ನು ಸುರಕ್ಷಿತ ಮತ್ತು ಮಾನವನ ಸೇವನೆಗೆ ಯೋಗ್ಯವಾದ ಆಹಾರ ಪದ್ಧತಿಯನ್ನಾಗಿ ಮಾಡುವ ಮೂಲ ಉದ್ದೇಶದಿಂದ ಈಟ್ ರೈಟ್ ಇಂಡಿಯಾ (ERI) ಆಂದೋಲನವನ್ನು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (FSSAI) ಪ್ರಾರಂಭಿಸಿರುತ್ತದೆ.
ಈ ಆಂದೋಲನವು 'ಈಟ್ ಹೆಲ್ತಿ', 'ಈಟ್ ಸೇಫ್' ಮತ್ತು 'ಈಟ್ ಸಸ್ಟೈನಬಲ್' ಎಂಬ ಮೂರು ತಳಹದಿಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ.

ಮಾಲ್‌ಗಳಲ್ಲಿ ಆಹಾರದ ಗುಣಮಟ್ಟವನ್ನು ಸಾರ್ವಜನಿಕರೇ ಪರೀಕ್ಷಿಸಿಕೊಳ್ಳಬಹುದಾದ ಕಾರ್ಯಕ್ರಮವನ್ನು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್ ರವರು ಉದ್ಘಾಟಿಸುತ್ತಿರುವುದು.

ಈಟ್ ರೈಟ್ ಮಾರುಕಟ್ಟೆ
ಈಟ್ ರೈಟ್ ಮಾರುಕಟ್ಟೆ ಎನ್ನುವುದು ಹಣ್ಣು ಮತ್ತು ತರಕಾರಿ ಮಂಡಿಯ ವ್ಯಾಪಾರಸ್ಥರು ಮಾರಾಟ ಮಾಡುವ ಹಣ್ಣು ಮತ್ತು ತರಕಾರಿಗಳ ಶುಚಿತ್ವ ಮತ್ತು ಗುಣಮಟ್ಟವನ್ನು ಸುಧಾರಿಸಲಾಗುವುದು.
ಈಟ್ ರೈಟ್ ಕ್ಯಾಂಪಸ್
ಕಾಲೇಜುಗಳು, ವಿಶ್ವವಿದ್ಯಾನಿಲಯಗಳು, ಕೆಲಸದ ಸ್ಥಳಗಳು, ಫುಡ್ ಕೋರ್ಟ್ ಗಳು ಮತ್ತು ಆಸ್ಪತ್ರೆಗಳಲ್ಲಿ ಸುರಕ್ಷಿತ ಮತ್ತು ಆರೋಗ್ಯಕರ ಆಹಾರವನ್ನು ಒದಗಿಸುವ ಕ್ಯಾಂಪಸ್‌ಗಳಿಗೆ ಪ್ರಮಾಣಪತ್ರಗಳನ್ನು ಮತ್ತು ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.
ಈಟ್ ರೈಟ್ ಸ್ಕೂಲ್
ಶಾಲಾ ಮಕ್ಕಳಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಮೂಲಕ ಸರಿಯಾದ ಆಹಾರ ಪದ್ಧತಿಯನ್ನು ಬೆಳೆಸಲು ಈ ಉಪಕ್ರಮ ಅನುಕೂಲವಾಗುತ್ತದೆ. ಶಿಫಾರಸ್ಸು ಮಾಡಲಾದ ಅಭ್ಯಾಸಗಳನ್ನು ಅನುಸರಿಸುವ ಶಾಲೆಗಳಿಗೆ ಈಟ್ ರೈಟ್ ಸ್ಕೂಲ್ ಪ್ರಮಾಣಪತ್ರವನ್ನು ನೀಡಲಾಗುತ್ತದೆ.
ಈಟ್ ರೈಟ್ ಸ್ಟೇಷನ್
ರೈಲ್ವೇ ನಿಲ್ದಾಣಗಳಲ್ಲಿ ನೈರ್ಮಲ್ಯ ಮತ್ತು ಶುಚಿತ್ವದ ಗುಣಮಟ್ಟವನ್ನು ಸುಧಾರಿಸಲಾಗುವುದು.

fssai Agmark Jaivik Bharat FORTIFIED Veg Non Veg ISI
ಪ್ಯಾಕ್ ಮಾಡಿರುವ ಆಹಾರ ಪದಾರ್ಥಗಳಲ್ಲಿ ಈ ಮೇಲಿನ ಚಿಹ್ನೆಗಳನ್ನು ಗಮನಿಸಿ
ಸಹಾಯವಾಣಿ ಸಂಖ್ಯೆ : 080 - 22270035

ಅಂತಾರಾಷ್ಟ್ರೀಯ ಮಾದಕವಸ್ತು ವಿರೋಧಿ ದಿನ
26ನೇ ಜೂನ್ 2025

Theme 2025 : "Breaking the Chains : Prevention, Treatment and Recovery for All!"

ಮಾದಕ ವಸ್ತುಗಳಿಂದ ಯುವಜನರನ್ನು ರಕ್ಷಿಸಲು
- ಮಕ್ಕಳಲ್ಲಿ ದೈಹಿಕ ಹಾಗೂ ಮಾನಸಿಕವಾಗಿ ಆಗುತ್ತಿರುವ ಬದಲಾವಣೆಯನ್ನು ಗಮನಿಸಿ.
- ಶಾಲಾ ಕಾಲೇಜುಗಳಲ್ಲಿ ಮಕ್ಕಳ ನಡವಳಿಕೆಯ ಬಗ್ಗೆ ಹಾಗೂ ಅವರ ಸ್ನೇಹಿತರ ಬಗ್ಗೆ ತಿಳಿದುಕೊಳ್ಳಿ.
- ಪೋಷಕರು ಮಕ್ಕಳನ್ನು ನಿಯಮಿತವಾಗಿ ಗಮನಿಸಿ.

ಮಾದಕ ವಸ್ತುಗಳ ಸೇವನೆಯಿಂದ ದೇಹ ಮತ್ತು ಮನಸ್ಸಿನ ಸ್ವಾಸ್ಥ್ಯ ಕೆಡುತ್ತದೆ.
ಮಾದಕ ವಸ್ತುಗಳ ದುರ್ಬಳಕೆಯನ್ನು ತಡೆಯುವಲ್ಲಿ ನಾವೆಲ್ಲರೂ ಕೈಜೋಡಿಸೋಣ.
ನಿಮ್ಮ ಸ್ವಾಸ್ಥ್ಯವೇ ದೇಶದ ಶಕ್ತಿ,
ಮಾದಕ ವ್ಯಸನಿಗಳಾಗುವ ಮುನ್ನ ಬಳಸಿ ನಿಮ್ಮ ಯುಕ್ತಿ!

ಔಷಧ ಮಾರಾಟಗಾರರೇ, ಮಾದಕವಸ್ತು ಬಳಕೆ ನಿಯಂತ್ರಿಸುವಲ್ಲಿ ನಿಮ್ಮ ಜವಾಬ್ದಾರಿ ಕೆಳಕಂಡಂತಿದೆ
- ವೈದ್ಯರ ಸಲಹಾ ಚೀಟಿ ಇಲ್ಲದೆ ಯಾವುದೇ ಔಷಧಗಳ ವಿತರಣೆ ಮಾಡಬೇಡಿ.
- ಅನುಸೂಚಿ ಔಷಧಗಳನ್ನು ಮಾರಾಟ ಮಾಡುವ ಮುನ್ನ ವೈದ್ಯರ, ರೋಗಿಗಳ ಹೆಸರು ಮತ್ತು ವಿಳಾಸ, ಮಾರಾಟ ಮಾಡಿದ ಔಷಧಿಯ ಬ್ಯಾಚ್ ಸಂಖ್ಯೆ, ಔಷಧಿಯ ಪ್ರಮಾಣ, ಮೊದಲಾದ ಮಾಹಿತಿಯನ್ನು ಕಡ್ಡಾಯವಾಗಿ ರಸೀದಿಯಲ್ಲಿ ದಾಖಲಿಸುವುದು.
- ನೀವು ನಿಯಮಗಳನ್ನು ಉಲ್ಲಂಘಿಸಿ ಔಷಧಿಗಳನ್ನು ಮಾರಾಟ ಮಾಡಿದಲ್ಲಿ, ಔಷಧ ಮತ್ತು ಕಾಂತಿವರ್ಧಕ ಅಧಿನಿಯಮಗಳ ಅಡಿ ಶಿಕ್ಷಾರ್ಹ ಅಪರಾಧವಾಗುತ್ತದೆ.

ಸಹಾಯವಾಣಿ ಸಂಖ್ಯೆ : 104
ಪ್ರಕಟಣೆ : ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ

UNIVERSITY OF HORTICULTURAL SCIENCES, BAGALKOT.
Office of the Registrar Udyanagiri, Navanagar
Bagalkot - 587104, Karnataka. Cell No. 94806 96389.
Phone No. 08354-230276/278/286/280.
E-mail: registrar@uhsbagalkot.edu.in
Website:https://uhsbagalkot.karnataka.gov.in

No. R/Academic/Diploma-11/403/2025-26 Date: 25.06.2025

NOTIFICATION

Applications are invited from eligible candidates for admission to the **Diploma (Horticulture) Two years course for the academic year 2025-26 at the University of Horticultural Sciences, Bagalkot.** For further information, please visit the university Website: **https://uhsbagalkot.karnataka.gov.in**.

Last date for submission of application: 15.07.2025.

Sd/- REGISTRAR,
U.H.S., Bagalkot

DIPR/Bagalkot/137/Manipal/2025-26

ಆರತಿಯಿಂದ ಕೆಆರ್‌ಎಸ್‌ಗೆ ತೊಂದರೆಯಿಲ್ಲ

2-3 ದಿನಗಳಲ್ಲಿ ಕಾರ್ಯಕ್ರಮದ ಸ್ವರೂಪ ಪ್ರಕಟಣೆ | ತಪ್ಪು ಗ್ರಹಿಕೆಯಿಂದ ಕೆಲವರ ವಿರೋಧ, ಮತ್ತೊಮ್ಮೆ ಸಭೆ ನಡೆಸಲಾಗುವುದು: ಡಿಕೆಶಿ

ಬೆಂಗಳೂರು: ಮುಂದಿನ ಎರಡು ಮೂರು ದಿನಗಳಲ್ಲಿ ಕಾವೇರಿ ಆರತಿ ಕಾರ್ಯಕ್ರಮದ ಸ್ವರೂಪ ಪ್ರಕಟಿಸಲಾಗುವುದು. ತಪ್ಪು ಗ್ರಹಿಕೆಯಿಂದ ಕೆಲವರು ಈ ಕಾರ್ಯಕ್ರಮಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಮತ್ತೊಮ್ಮೆ ಎಲ್ಲರ ಜತೆ ಸಭೆ ಮಾಡುತ್ತೇನೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಬುಧವಾರ ನಡೆದ ಐತಿಹಾಸಿಕ ಕಾವೇರಿ ಆರತಿ ಕಾರ್ಯಕ್ರಮ ಸಂಬಂಧ ಮಂಡ್ಯ ಜಿಲ್ಲೆ ರೈತ ಹಾಗೂ ಇತರೆ ಸಂಘಟನೆ ಮುಖಂಡರ ಜತೆ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾವೇರಿ ನದಿ ಬೆಂಗಳೂರು ನಗರ, ಮಂಡ್ಯ, ತಮಿಳುನಾಡು, ಪುದುಚೆರಿ, ಕೇರಳ ರಾಜ್ಯದ ರೈತರಿಗೆ ಆಸರೆಯಾಗಿದೆ. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂಬುದು ನಮ್ಮ ನಂಬಿಕೆ. ಈ ದೇಶದಲ್ಲಿ ಗಂಗಾ ಆರತಿ, ನಮ್ಮ ರಾಜ್ಯದಲ್ಲಿ ತುಂಗಾ ಆರತಿ ಕಾರ್ಯಕ್ರಮ ಮಾಡಲಾಗುತ್ತಿದೆ. ಈಗ ಕಾವೇರಿ ಆರತಿ ಮಾಡಲು ನಾವು ತೀರ್ಮಾನ ಮಾಡಿದ್ದೇವೆ. ಕೆಆರ್‌ಎಸ್ ಬೃಂದಾವನ ಉದ್ಯಾನಕ್ಕೆ ಸಾವಿರಾರು ಪ್ರವಾಸಿಗರು ಬರುತ್ತಿದ್ದು, ಇದನ್ನು ಮತ್ತಷ್ಟು ಹೆಚ್ಚಿಸಬೇಕು. ಕಾವೇರಿ ಮಾತೆಗೆ ಪ್ರಾರ್ಥಿಸುವುದು, ಉದ್ಯೋಗ ಸೃಷ್ಟಿ, ಸಂಸ್ಕೃತಿ ಪರಂಪರೆ ಉಳಿಸಲು, ಪ್ರವಾಸೋದ್ಯಮದ ಆಕರ್ಷಣೆಗೆ ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಕಾವೇರಿ ಆರತಿಯ ಪ್ರಾಯೋಗಿಕ ಕಾರ್ಯಕ್ರಮವಾಗಿ ಬೆಂಗಳೂರಿನ ಸ್ಯಾಂಕಿ ಕೆರೆಯಲ್ಲಿ ಕಾರ್ಯಕ್ರಮ ಮಾಡಲಾಗಿದೆ. ಇದರ ವಿರುದ್ಧ ಕೆಲವರು ನ್ಯಾಯಾಲಯದ ಮೆಟ್ಟಿಲೇರಿದರೂ ಕೊನೆಗೆ ನ್ಯಾಯಾಲಯ ಕಾರ್ಯಕ್ರಮಕ್ಕೆ ಅನುಮತಿ ನೀಡಿತು. ಆ ಕಾರ್ಯಕ್ರಮದಲ್ಲಿ ಸುಮಾರು 25 ಸಾವಿರ ಜನ ವೀಕ್ಷಣೆ ಮಾಡಿದರು. ಈಗ ವಾರಕ್ಕೆ ಮೂರು ದಿನ ಕಾವೇರಿ ಆರತಿ ಕಾರ್ಯಕ್ರಮ ಮಾಡಲು ತೀರ್ಮಾನಿಸಿದ್ದೇವೆ. 10 ಸಾವಿರ ಜನರಿಗೆ ಕೂರಲು ಆಸನ ವ್ಯವಸ್ಥೆ ಮಾಡಲಾಗಿದ್ದು, ಈ ಪೈಕಿ ಶೇ.30 ರಷ್ಟು ಪಾವತಿ ಪ್ರವೇಶ ಮತ್ತು ಶೇ.70 ರಷ್ಟು ಉಚಿತ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗುವುದು. ಕಾರ್ಯಕ್ರಮದ ವೇಳೆ ವಾಹನ ನಿಲುಗಡೆಗಾಗಿ 70-80 ಎಕರೆ ಜಾಗವನ್ನು ಮೀಸಲಿಡಲಾಗಿದೆ. ಕಾರ್ಯಕ್ರಮಕ್ಕೆ ಜಲಸಂಪನ್ಮೂಲ, ಧಾರ್ಮಿಕ ದತ್ತಿ, ಕನ್ನಡ ಮತ್ತು ಸಂಸ್ಕೃತಿ, ಬಿಡಬ್ಲ್ಯುಡಿ, ಪ್ರವಾಸೋದ್ಯಮ ಹಾಗೂ ಇಂಧನ ಇಲಾಖೆಗಳಿಂದ ಅನುದಾನ ನೀಡಲಾಗುವುದು. ಚಲುವರಾಯಸ್ವಾಮಿ ಅವರ ನೇತೃತ್ವದಲ್ಲಿ 20 ಶಾಸಕರು ಹಾಗೂ ಮುಖಂಡರ ತಂಡವನ್ನು ಉತ್ತರ ಭಾರತದ ಪ್ರವಾಸಕ್ಕೆ ಕಳುಹಿಸಿ ಎಲ್ಲಾ ಕಡೆ ಆರತಿ ಕಾರ್ಯಕ್ರಮ ಅಧ್ಯಯನ ಮಾಡಿ ವರದಿ ನೀಡಿದ್ದು, ಆ ವರದಿ ಆಧಾರದ ಮೇಲೆ ಕಾರ್ಯಕ್ರಮ ಮಾಡಲು ತೀರ್ಮಾನಿಸಿದ್ದೇವೆ ಎಂದರು.

ತಪ್ಪು ಗ್ರಹಿಕೆಯಿಂದ ವಿರೋಧ: ಕಾವೇರಿ ಆರತಿ ಕಾರ್ಯಕ್ರಮಕ್ಕೆ ಕೆಲವರು ಅಪಸ್ವರ ಎತ್ತಿದ್ದಾರೆ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮಾಹಿತಿ ನೀಡಿದರು. ಹೀಗಾಗಿ ನಾನು ಅವರಿಗೆ ಆಹ್ವಾನ ಕೊಟ್ಟು ಸಭೆ ಮಾಡಿದೆ. ರೈತರಿಗೆ ಅವರದೇ ಆದ ಆತಂಕಗಳಿರುತ್ತವೆ. ನಾವು ಅದನ್ನು ಗೌರವಿಸುತ್ತೇವೆ. ಸಭೆಯಲ್ಲಿ ಅವರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಈ ಕಾರ್ಯಕ್ರಮಕ್ಕೆ ಅನೇಕರು ಬೆಂಬಲ ವ್ಯಕ್ತಪಡಿಸಿದ್ದು, ಜನಪ್ರತಿನಿಧಿಗಳು ಕೂಡ ಇದನ್ನು ಸ್ವಾಗತಿಸಿದರು. ಕೆಲವರು ತಪ್ಪು ಗ್ರಹಿಕೆಯಿಂದ ಇದಕ್ಕೆ ಅಪಸ್ವರ ಎತ್ತಿದ್ದರು. ಮತ್ತೊಮ್ಮೆ ಎಲ್ಲರನ್ನು ಕರೆದು ಮಾತನಾಡಲಾಗುವುದು. ಆದರೆ ಈ ಕಾರ್ಯಕ್ರಮ ನಡೆಯುತ್ತದೆ. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಅಣೆಕಟ್ಟೆಗೆ ಯಾವುದೇ ತೊಂದರೆಯಾಗುವುದಿಲ್ಲ

ಕಾರ್ಯಕ್ರಮದಿಂದ ಅಣೆಕಟ್ಟೆಗೆ ಏನಾದರೂ ತೊಂದರೆ ಆಗಬಹುದು ಎಂಬ ಕಾರಣಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದರು. ಈ ಕಾರ್ಯಕ್ರಮ ನಡೆಯುವ ಜಾಗ ಅಣೆಕಟ್ಟಿನಿಂದ ಸಾಕಷ್ಟು ದೂರದಲ್ಲಿದೆ. ಬೆಂಗಳೂರಿಗೆ ನೀರು ಹರಿದು ಹೋಗುವ ಜಾಗದಲ್ಲಿ ಸ್ಥಳವನ್ನು ಸೌಂದರ್ಯೀಕರಣಗೊಳಿಸಿ ಕಾರ್ಯಕ್ರಮ ಮಾಡುತ್ತಿದ್ದೇವೆ. ಕೆಲವರಿಗೆ ಈ ವಿಚಾರಗಳು ತಿಳಿದಿಲ್ಲ, ಹೀಗಾಗಿ ಅಣೆಕಟ್ಟೆಗೆ ಹೆಚ್ಚುಕಮ್ಮಿ ಆಗಬಹುದು ಎಂದು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಇದು ಅವರ ತಪ್ಪಲ್ಲ. ಅಣೆಕಟ್ಟು ವಿಚಾರದಲ್ಲಿ ನಮಗೂ ಜವಾಬ್ದಾರಿ ಇದೆ. ಈ ಕಾರ್ಯಕ್ರಮ ಕಾವೇರಿ ತಾಯಿಗೆ ಪ್ರಾರ್ಥಿಸುವ ಕಾರ್ಯಕ್ರಮ. ಕೊಡಗು, ಮಂಗಳೂರು, ಮೈಸೂರು, ಮಂಡ್ಯ ಸಂಸ್ಕೃತಿ ಈ ಕಾರ್ಯಕ್ರಮದಲ್ಲಿರಲಿದೆ. ಸುಮಾರು 2 ಸಾವಿರ ಜನರಿಗೆ ನೇರ ಉದ್ಯೋಗ ಸಿಗಲಿದೆ ಎಂದು ವಿವರಿಸಿದರು.

ಕರ್ನಾಟಕದ ಜೀವ ನದಿಯಾಗಿರುವ ಕಾವೇರಿ ನದಿಗೆ ಗೌರವ ಸಮರ್ಪಿಸಲು ಕಾವೇರಿ ಆರತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಕಾರ್ಯಕ್ರಮದ ರೂಪುರೇಷೆ ತಿಳಿಯದ ಕೆಲವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಅವರೆಲ್ಲರನ್ನು ಕರೆದು ಮತ್ತೊಮ್ಮೆ ಸಭೆ ನಡೆಸಿ ಮಾಹಿತಿ ನೀಡಲಾಗುವುದು. ಈ ಕಾರ್ಯಕ್ರಮದಿಂದ ಯಾರಿಗೂ ತೊಂದರೆಯಾಗುವುದಿಲ್ಲ ಬದಲಾಗಿ ನೂರಾರು ಜನಕ್ಕೆ ಉದ್ಯೋಗ ಸೃಷ್ಟಿಯಾಗುವುದು.

– ಡಿ.ಕೆ.ಶಿವಕುಮಾರ್ ಉಪ ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ,
ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ,
ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080–26716046 ವೆಬ್‌ಸೈಟ್: http://kppp.karnataka.gov.in

ಸಂಖ್ಯೆ:ಕಾಅ/ಪಂರಾಇವಿ/ಬೆಂನ/ಎಇ–1/ಟೆಂಡರ್/10/2025–26 ದಿನಾಂಕ: 23.06.2025

ಕೆ.ಪಿ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ ನೋಟೀಸ್ (ಏಕ–ಲಕೋಟೆ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ MUZRAI, Women and Child Development, SCP, Deposit & MLA GRANTS ರಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಏಕ–ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ: 15.07.2025ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ http://www.kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.

ವಾಸಾಸಂಇ/ವಾಪ್ರ/1463/ಎಸ್‌ಎಸ್‌ಸಿ/2025–26

ಪ್ರಿಯತಮೆಯ ಕೊಲೆ: ಯುವಕ ಸೆರೆ

ಮಂಡ್ಯ: ವಿವಾಹಿತ ಪ್ರಿಯತಮೆಯನ್ನು ಕೊಲೈಗೈದು ತನ್ನದೇ ಜಮೀನಿನಲ್ಲಿ ಶವ ಮುಚ್ಚಿಟ್ಟು ಯುವಕನೊಬ್ಬ ಸಿಕ್ಕಿಬಿದ್ದ ಘಟನೆ ಮಂಡ್ಯದ ಕರೋಟಿ ಗ್ರಾಮದಲ್ಲಿ ನಡೆದಿದೆ. ಹತ್ಯೆಯಾದ ಮಹಿಳೆಯನ್ನು ಹಾಸನ ಜಿಲ್ಲೆಯ ಹೊಸಕೊಪ್ಪಲು ಗ್ರಾಮದ ಪ್ರೀತಿ (35) ಎಂದು ಗುರುತಿಸಲಾಗಿದೆ. ಕರೋಟಿ ಗ್ರಾಮದ ಪುನೀತ್ ಹತ್ಯೆಗೈದ ಆರೋಪಿಯಾಗಿದ್ದಾನೆ. ಇನ್ಸ್ಟಾಗ್ರಾಮ್‌ನಲ್ಲಿ ಯುವಕನಿಗೆ ಪ್ರೀತಿ ಪರಿಚಯ ವಾಗಿದ್ದಳು. ಇಬ್ಬರ ನಡುವೆ ಹತ್ತೇ ದಿನದಲ್ಲಿ ಪ್ರೀತಿ, ಪ್ರೇಮ ಹಾಗೂ ಪ್ರಣಯ ಎಂದೆಲ್ಲ ನಡೆದು, ಮಹಿಳೆಯ ಕೊಲೆಯಲ್ಲಿ ಅಂತ್ಯವಾಗಿದೆ. ಗಂಡ, ಮಕ್ಕಳಿದ್ದರೂ ಪುನೀತ್ ಜತೆ ಪ್ರೀತಿಯಲ್ಲಿ ಬಿದ್ದಿದ್ದಳು. ಈ ಸಂಬಂಧ ಕಿಕ್ಕೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

...ಬಾನೆತ್ತರಕ್ಕೆ ಹಾರಿದ ಭಾರತದ ತಿರಂಗ

← ಮೊದಲಪುಟದಿಂದ

- 41 ವರ್ಷಗಳ ಬಳಿಕ ಭಾರತೀಯನ ಬಾಹ್ಯಾಕಾಶ ಪಯಣ
- ಆಕ್ಸಿಯೊಮ್-4 ಮಿಷನ್‌ನಲ್ಲಿ ಐಎಸ್‌ಎಸ್‌ಗೆ ಹೊರಟ ಶುಕ್ಲಾ
- ನಾಸಾ, ಹಂಗೇರಿ, ಪೋಲೆಂಡ್ ಗಗನಯಾತ್ರಿಗಳ ಜತೆ ಯಾನ

ಭಾರತೀಯ ಕಾಲಮಾನ ಬುಧವಾರ 12.01ಕ್ಕೆ (ಅಮೆರಿಕ ಕಾಲಮಾನ ಬುಧವಾರ ಮುಂಜಾನೆ 2.31) ಸರಿಯಾಗಿ 'ಆಕ್ಸಿಯೊಮ್-4' ಗಗನಯಾನದ ಕನಸು ನನಸಾಗಿದೆ. ಅಮೆರಿಕದ ಫ್ಲೋರಿಡಾ ರಾಜ್ಯದ ಕೆನಡಿ ಬಾಹ್ಯಾಕಾಶ ಕೇಂದ್ರದಲ್ಲಿನ 39ಎ ಉಡ್ಡಯನ ವೇದಿಕೆಯಿಂದ ಉಡ್ಡಯನಗೊಂಡ 'ಫಾಲ್ಕನ್ 9' ರಾಕೆಟ್ ನಿರೀಕ್ಷೆಯಂತೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್) ದತ್ತ ಸಾಗಿದೆ. 'ಆಕ್ಸಿಯೊಮ್-4 ಮಿಷನ್' ಗಗನನೌಕೆ ಗುರುವಾರ ಸಂಜೆ 4.30ಕ್ಕೆ (ಭಾರತದ ಸಮಯ) ಅಂತಾರಾಷ್ಟ್ರೀಯ ಬಾಹ್ಯಾಕಾಶ ಕ್ಷೇತ್ರವನ್ನು ತಲುಪುವ ನಿರೀಕ್ಷೆ ಇದೆ.

ಎರಡನೇ ಭಾರತೀಯ: ಈ ಮೊದಲು ವಿಂಗ್ ಕಮಾಂಡರ್ ರಾಕೇಶ್ ಶರ್ಮಾ, 1984ರ ಏಪ್ರಿಲ್ 3ರಂದು ಸೋವಿಯತ್ ರಷ್ಯಾದ ಬಾಹ್ಯಾಕಾಶ ಸಂಶೋಧನಾ ಯೋಜನೆಯಡಿ 'ಸುಯೆಜ್ ಟಿ-11' ಗಗನ ನೌಕೆಯಲ್ಲಿ ಬಾಹ್ಯಾಕಾಶ ಯಾತ್ರೆ ಕೈಗೊಂಡಿದ್ದರು. ಆ ಬಳಿಕ, 41 ವರ್ಷಗಳ ಸುದೀರ್ಘ ಅವಧಿಯ ನಂತರ ಭಾರತದ ಬಾಹ್ಯಾಕಾಶ ಯಾನಿಯೊಬ್ಬರು ಗಗನಯಾನ ಕೈಗೊಂಡಿದ್ದಾರೆ. ಭಾರತ ಮೂಲದ ಕಲ್ಪನಾ ಚಾವ್ಲಾ, ಸುನೀತಾ ವಿಲಿಯಮ್ಸ್ ಅಂತರಿಕ್ಷದಲ್ಲಿ ಭಾರತದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದರೂ, ಇವರು ಅಮೆರಿಕ ಪ್ರಜೆಗಳಾಗಿ ಯಾನ ಕೈಗೊಂಡಿದ್ದರು. ಇದೀಗ ರಾಕೇಶ್ ಶರ್ಮಾ ಬಳಿಕ ಬಾಹ್ಯಾಕಾಶ ಯಾನ ಕೈಗೊಳ್ಳುವ ಅಪೂರ್ವ ಅವಕಾಶ ಉತ್ತರ ಪ್ರದೇಶದ ಲಖನೌದ ಯೋಧ 39 ವರ್ಷದ ಶುಭಾಂಶು ಶುಕ್ಲಾ ಅವರಿಗೆ ದೊರೆತಿದೆ.

ಶುಕ್ಲ ದಂಪತಿ ಆನಂದಬಾಷ್ಪ!

ದೆಹಲಿ: ಕಮಾಂಡರ್ ಶುಭಾಂಶು ಶುಕ್ಲ(39) ಅಮೆರಿಕದ 'ಆಕ್ಸಿಯಂ-4 ಗಗನಯಾನ ಮಿಷನ್'ನಲ್ಲಿ ಬಾಹ್ಯಾಕಾಶ ಪ್ರಯಾಣ ಆರಂಭಿಸಿದ ಕ್ಷಣವನ್ನು ದೆಹಲಿಯಿಂದಲೇ ನೇರ ಪ್ರಸಾರದಲ್ಲಿ ವೀಕ್ಷಿಸಿದ ತಾಯಿ ಆಶಾ ಶುಕ್ಲಾ ಅವರ ಕಣ್ಣುಗಳಿಂದ ಧಾರಾಕಾರ ಆನಂದಬಾಷ್ಪ ಹರಿಯಿತು. ಆಕ್ಸಿಯಂ-4 ಗಗನಯಾನದ ಗಗನನೌಕೆಯನ್ನು ಹೊತ್ತಿದ್ದ ಸ್ಪೇಸ್‌ಎಕ್ಸ್‌ನ ದೈತ್ಯ ರಾಕೆಟ್ 'ಫಾಲ್ಕನ್-9' ಅಮೆರಿಕದ ಫ್ಲೋರಿಡಾದಲ್ಲಿನ ಕೆನಡಿ ಬಾಹ್ಯಾಕಾಶ ಉಡ್ಡಯನ ಕೇಂದ್ರದ ಉಡ್ಡಯನ ವೇದಿಕೆ '39ಎ'ದಿಂದ ಆಕಾಶದತ್ತ ಚಿಮ್ಮುವ ಕ್ಷಣ ಹತ್ತಿರವಾಗುತ್ತಿದ್ದಂತೆ ಅಮ್ಮ ಆಶಾ ಶುಕ್ಲಾ ಮೊಗದಲ್ಲಿ ಆನಂದ, ಆತಂಕದ ಮಿಶ್ರಭಾವ. ಕೈಮುಗಿಯುತ್ತಾ ದೇವರನ್ನು ಪ್ರಾರ್ಥಿಸುತ್ತಲೇ ಇದ್ದರು.

ಜಿಲ್ಲಾ ಪಂಚಾಯತ್, ತುಮಕೂರು.
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ

ಕೆ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ:03/2025–26 ದಿನಾಂಕ:19–06–2025

ಕರ್ನಾಟಕ ರಾಜ್ಯಪಾಲರ ಪರವಾಗಿ **ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಧುಗಿರಿ** ವ್ಯಾಪ್ತಿಯ ಕಾಮಗಾರಿಗಳಿಗೆ ಕೆ.ಪಿ.ಪಿ ಪೋರ್ಟಲ್ ಟೆಂಡರ್ ಅನ್ನು ಕರೆಯಲಾಗಿದ್ದು, ಕೆ.ಪಿ.ಸಿ ಪೋರ್ಟಲ್ ಟೆಂಡರ್‌ಗಾಗಿ ಅರ್ಹ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಅರ್ಜಿ ಸಲ್ಲಿಸಲು ಹಾಗೂ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲು **ದಿನಾಂಕ:19–06–2025 ರಿಂದ 03–07–2025** ರಂದು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ **ದೂರವಾಣಿ ಸಂಖ್ಯೆ: 080–25501216, 080–25501227** ರಲ್ಲಿ ಸಂಪರ್ಕಿಸಲು ಹಾಗೂ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ಮಧುಗಿರಿ.

DIPR/TUM/RO-49/25-26/Oysters

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಚೇರಿ (ಗುಭ/ಗುನಿ) ವಿಭಾಗ, ದಕ್ಷಿಣ ವಲಯ,
ಕೊಠಡಿ ನಂ. 101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–02.

ಸಂಖ್ಯೆ: ಕಾಪಾಅ(ಗುಭ/ಗುನಿ)/ದಕ್ಷಿಣ/ಟೆಂಡರ್/06/25–26 ದಿನಾಂಕ: 25.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ದ್ವಿ ಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ, ದಕ್ಷಿಣ ವಲಯ, ಬಿಬಿಎಂಪಿ, ಬೆಂಗಳೂರು ಇವರು ವಿಶೇಷ ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (ಪಿಎಂಸಿ) ಸೇರಿದಂತೆ ಯೋಜನಾ ನಿರ್ವಹಣಾ ಸಮಾಲೋಚನಾ ಸೇವೆಗಳಿಗಾಗಿ ಇದೇ ವಿಧದ ಕಾಮಗಾರಿಗಳನ್ನು ನಿರ್ವಹಿಸಿರುವ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಾಗಿ ಮನವಿಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನಾ ಮೊತ್ತ (ಲಕ್ಷ ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಪ್ರಸನ್ನ ಗಣಪತಿ ದೇವಸ್ಥಾನದ ಹತ್ತಿರದ ಪಾರ್ಕ್ ಮತ್ತು ಬೌಲೆಯಾರ್ಡ್ ಪಾರ್ಕ್‌ನಲ್ಲಿ ಅಭಿವೃದ್ಧಿ ಕಾಮಗಾರಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು.	550.00	13,750/-
2	ವಾರ್ಡ್ ನಂ. 196ರ ಗವಿಪುರಂನಲ್ಲಿ ಬಿಬಿಎಂಪಿ ಕಾಲೇಜು ಕಟ್ಟಡದಲ್ಲಿ ಹೆಚ್ಚುವರಿ ಅಭಿವೃದ್ಧಿ ಕೆಲಸಗಳು ಹಾಗೂ ಗವಿಪುರಂ ಪಾರ್ಕ್‌ನಲ್ಲಿ ರೀಟೈನಿಂಗ್ ಗೋಡೆಯ ನಿರ್ಮಾಣ ಮತ್ತು ವಾರ್ಡ್ ನಂ. 196ರ ಗವಿಪುರಂನಲ್ಲಿರುವ ಗವಿಪುರಂ ಪಾರ್ಕ್ ಮತ್ತು ಗೋಶಾಲ ಮಠದ ಎದುರು ರೀಟೈನಿಂಗ್ ಗೋಡೆಯ ನಿರ್ಮಾಣಕ್ಕಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು (2ನೇಕರೆ).	300.00	6,500/-
3	ವಾರ್ಡ್ ನಂ. 199ರ ವಿದ್ಯಾಪೀಠ ಪಾರ್ಕ್‌ನ ಹತ್ತಿರ ಸಿಟಿ ಬೆಡ್‌ನಲ್ಲಿ ಬಹುಪಯೋಗಿ ಕಟ್ಟಡದಲ್ಲಿನ ಆಡಿಟೋರಿಯಂಗೆ ಇಂಟೀರಿಯರ್ ಕೆಲಸ ಹಾಗೂ ವಾರ್ಡ್ ನಂ. 199ರಲ್ಲಿ ಎಸ್‌ಎಸ್‌ಎಂ ಶಾಲೆಯ ಎದುರು ಸಿಟಿ ಬೆಡ್‌ನಲ್ಲಿನ ಬಿಬಿಎಂಪಿ ಬಹುಪಯೋಗಿ ಕಟ್ಟಡಕ್ಕೆ ಇಂಟೀರಿಯರ್ ಕಾಮಗಾರಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು (2ನೇ ಕರೆ)	300.00	6,100/-

ಕಾಲಾವಧಿ : **ಯೋಜನೆ ಪೂರ್ಣಗೊಳಿಸುವವರೆಗೆ.**

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ https://kppp.karnataka.gov.inನಿಂದ **ದಿನಾಂಕ: 27.06.2025ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ–ಬಿಡ್ ಸಭೆಯ ದಿನಾಂಕ: **02.07.2025ರಂದು ಬೆಳಿಗ್ಗೆ 11.30 ಗಂಟೆಗೆ.** (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **05.07.2025ರ ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **07.07.2025ರಂದು ಬೆಳಿಗ್ಗೆ 11.30 ಗಂಟೆಗೆ.** (5) ಟೆಂಡರ್ ಕಾಲಾವಧಿ: **ಟೆಂಡರ್ ಸ್ವೀಕರಿಸಿದ ಕೊನೆಯ ದಿನಾಂಕದಿಂದ 90 ದಿನಗಳು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ಗುಭ/ಗುನಿ), ದಕ್ಷಿಣ ವಲಯ, ಬಿಬಿಎಂಪಿ

ಬಿ.ವೈ.ವಿ ಪಟ್ಟ ಕಾಯಂ

← ಮೊದಲಪುಟದಿಂದ

ರಾಷ್ಟ್ರಾಧ್ಯಕ್ಷರ ಆಯ್ಕೆ ಮುನ್ನ ಪಟ್ಟಿ ಅಂತಿಮ: ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆಯೂ ಆಗಬೇಕಿದೆ. ಇದಕ್ಕಿಂತಲೂ ಮುಂಚಿತವಾಗಿ ರಾಜ್ಯ ಸಮಿತಿಗಳ ಅಧ್ಯಕ್ಷರ ಆಯ್ಕೆ ನಡೆದ ನಂತರವೇ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ಇಲ್ಲವೇ ಆಯ್ಕೆಗೆ ಅವಕಾಶ ಲಭಿಸಲಿದೆ. ಕರ್ನಾಟಕ ಸೇರಿದಂತೆ 10ಕ್ಕೂ ಹೆಚ್ಚು ರಾಜ್ಯಗಳ ಆಯ್ಕೆ ಬಾಕಿದ್ದು, ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ದಾರಿ ಸುಗಮವಾಗಲು ರಾಜ್ಯ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಇನ್ನು ಹತ್ತು ದಿನಗಳಲ್ಲಿ ಅಂತಿಮವಾಗಲಿದೆ. ಇದಾದ ನಂತರ ರಾಜ್ಯ ಪದಾಧಿಕಾರಿಗಳ ಪಟ್ಟಿ ಹೊರಬೀಳಲಿದ್ದು ಯಾರಿಗೆಲ್ಲ ಅವಕಾಶ ಸಿಗಲಿದೆ ಎನ್ನುವುದು ಗೊತ್ತಾಗಲಿದೆ.

ಎಚ್‌ಡಿಕೆ ಭೇಟಿಯಾದ ಬಿಜೆಪಿಗರು: ನೀವು ಕೆಲಸ ಮಾಡಿ. ನಾನು ದೆಹಲಿಯಿಂದ ಟಿಕೆಟ್ ತರುತ್ತೇನೆ ಎಂದು ಈಗಾಗಲೇ ಎನ್‌ಡಿಎಯಲ್ಲಿ ಗುರುತಿಸಿಕೊಂಡಿರುವ ಎಚ್.ಡಿ.ಕುಮಾರಸ್ವಾಮಿ ಹಲವು ದಿನಗಳ ಹಿಂದೆ ತಮ್ಮ ಜೆಡಿಎಸ್ ಕಾರ್ಯಕರ್ತರಿಗೆ ಭರವಸೆ ನೀಡಿದ್ದರು. ಅಲ್ಲಿಗೆ ಮುಂದಿನ ಚುನಾವಣೆಯಲ್ಲಿ ಮೈತ್ರಿಯಿದ್ದರೂ ರಾಜ್ಯ ಬಿಜೆಪಿಯ ನಾಯಕರಿಗಿಂತ ಕುಮಾರಸ್ವಾಮಿ ಕೇಂದ್ರ ಬಿಜೆಪಿಯಲ್ಲಿ ಪ್ರಭಾವ ಹೆಚ್ಚಾದಂತಿದೆ. ಇದೇ ವೇಳೆ ವರಿಷ್ಠರ ಭೇಟಿಗೆಂದು ಹೋಗಿದ್ದ ಆರ್.ಅಶೋಕ ದೆಹಲಿಯಲ್ಲಿ ಕುಮಾರಸ್ವಾಮಿ ಅವರನ್ನು ಭೇಟಿಯಾಗಿದ್ದಾರೆ. ಇವರೊಂದಿಗೆ ಸಂಸದ ಡಾ.ಕೆ.ಸುಧಾಕರ್ ಅಲ್ಲದೆ ಇನ್ನು ಹಲವು ಒಕ್ಕಲಿಗ ನಾಯಕರೂ ಕೂಡ ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಮಹತ್ವದ ಮಾತುಕತೆ ನಡೆಸಿರುವುದು ಬಿಜೆಪಿಯಲ್ಲಿ ಕಲಹ ಇನ್ನೂ ಮುಂದುವರೆದಂತಿದೆ.

ವಾರಕ್ಕೆ 3 ದಿನ ಕಾವೇರಿ ಆರತಿ

← ಮೊದಲಪುಟದಿಂದ

ಆಗಮ ಶಾಸ್ತ್ರದಲ್ಲಿ ಈಗಾಗಲೇ ಪರಿಣತಿ ಹೊಂದಿರುವವರನ್ನು ಆಯ್ಕೆ ಮಾಡಿ ಅವರಿಗೆ ತರಬೇತಿ ನೀಡುವ ಕಾರ್ಯವಾಗುತ್ತಿದೆ. ಸಂಸ್ಕೃತ ಪೀಠದಲ್ಲಿ ನೀಡುತ್ತಿರುವ ತರಬೇತಿ ಮೇಲ್ವಿಚಾರಣೆಯನ್ನು ಧಾರ್ಮಿಕ ದತ್ತಿ ಇಲಾಖೆ ಮಾಡುತ್ತಿದೆ ಎನ್ನಲಾಗಿದೆ.

ಈಗಾಗಲೇ ಈ ಎರಡು ಕೇಂದ್ರದಲ್ಲಿ ಆರತಿಯ ಬಗ್ಗೆ ತರಬೇತಿ ನೀಡಲಾಗುತ್ತಿದೆ. ವಿಶ್ವ ಪ್ರಸಿದ್ಧ ಹರಿದ್ವಾರ ಹಾಗೂ ವಾರಾ ಣಾಸಿ ಗಂಗಾರತಿಯಲ್ಲಿ ತರಬೇತಿ ನೀಡುತ್ತಿರುವವರು ಹಾಗೂ ತರಬೇತಿ ಪಡೆದ ಕೆಲವರು ಭಾಗವಹಿಸಿ, ಅಲ್ಲಿನ ಪುರೋಹಿತರೊಂದಿಗೆ ಚರ್ಚೆ ನಡೆಸಿದ್ದಾರೆ. ಈ ವೇಳೆ ಯಾವೆಲ್ಲ ಧಾರ್ಮಿಕ ಆಚರಣೆಗಳು ಆರತಿಯ ಸಮಯದಲ್ಲಿ ನಡೆಯಬೇಕು ಎನ್ನುವ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಇದೀಗ ಕರ್ನಾಟಕಕ್ಕೆ ಸರಿಹೊಂದುವಂತೆ, ಕೆಲ ಮಾರ್ಪಾಟುಗಳೊಂದಿಗೆ ಕಾವೇರಿ ಆರತಿ ನೆರವೇರಿಸಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹೆಚ್ಚುವರಿ ಜನರಿಗೆ ತರಬೇತಿ: ಹರಿದ್ವಾರ ಹಾಗೂ ಕಾಶಿಯಲ್ಲಿ ಒಂದೇ ಸಮಯದಲ್ಲಿ ನಾಲ್ಕೈದು ತಂಡವಾಗಿ ಗಂಗಾರತಿಯನ್ನು ಮಾಡಲಾಗುತ್ತದೆ. ಆದರೆ ಕಾವೇರಿ ಆರತಿಯನ್ನು ಒಂದೇ ತಂಡದಿಂದ ಮಾಡಲಾಗುವುದೇ ಅಥವಾ ನಾಲ್ಕೈದು ತಂಡದಿಂದ ಏಕಕಾಲಕ್ಕೆ ಮಾಡಲಾಗುವುದೋ ಎನ್ನುವ ಸ್ಪಷ್ಟನೆಯಿಲ್ಲ. ಆದ್ದರಿಂದ 300 ಜನರಿಗೆ ತರಬೇತಿ ನೀಡಲಾಗುತ್ತಿದೆ. ಪಾಳಿಯ ರೀತಿಯಲ್ಲಿ ತರಬೇತಿ ಪಡೆದವರಿಗೆ ಆರತಿಗೆ ಅವಕಾಶ ನೀಡುವ ಬಗ್ಗೆ ಚರ್ಚೆ ನಡೆದಿದೆ.

ಸುಮಾರು ಒಂದು ಗಂಟೆಯ ವಿಶೇಷ ಸಂಗೀತ: ಕಾವೇರಿ ಆರತಿ ಕೇವಲ ಧಾರ್ಮಿಕ ಕಾರ್ಯಕ್ರಮದ ರೀತಿಯಾಗದೇ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಹಾಗೂ ಕಾವೇರಿಯ ಇತಿಹಾಸವನ್ನು ಜನರಿಗೆ ತಿಳಿಸುವ ರೀತಿಯಲ್ಲಿರಬೇಕು ಎನ್ನುವ ತೀರ್ಮಾನಕ್ಕೆ ಸರಕಾರ ಬಂದಿದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಈಗಾಗಲೇ ನಾಡಿನ ಹಿರಿಯ ಸಂಗೀತ ನಿರ್ದೇಶಕರಾದ ಹಂಸಲೇಖ, ಸಾಧು ಕೋಕಿಲ, ಅರ್ಜುನ್ ಜನ್ಯ ಸೇರಿದಂತೆ ಪ್ರಮುಖರಿಗೆ ಪತ್ರ ಬರೆದು ಕಾವೇರಿ ಆರತಿಗೆ ವಿಶೇಷ ಗೀತೆಯನ್ನು ಸಂಯೋಜಿಸುವಂತೆ ಮನವಿ ಮಾಡಿದ್ದಾರೆ. ಕಾವೇರಿಯ ಹುಟ್ಟು, ಮಹತ್ವ ಹಾಗೂ ಪ್ರಾಮುಖ್ಯತೆಯನ್ನು ತಿಳಿಸುವ ಒಂದು ಗಂಟೆಯ ಅವಧಿಯ ಈ ಗೀತೆಗಳನ್ನು ರಚಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಸಂ:ಕಾಇಂ/ಕಾನೀನಿನಿ/ಹಾನಾವಿ/ಪಿಬಿ/ಟೆ.ಪ್ರ/04/2025–26/417
ದಿ:10.06.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 04/2025–26 ದಿ:10.06.2025

(ಇ–ಪ್ರೊಕ್ಯೂರ್‌ಮೆಂಟ್ 2.0 ಪೋರ್ಟ್‌ಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ/ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿ ನೋಂದಾವಣಿ ಚಾಲ್ತಿಯಲ್ಲಿರುವ ಅರ್ಹ ಗುತ್ತಿಗೆದಾರರಿಂದ ಐಟಂವಾರು ದರದಲ್ಲಿ 01 ಸಂಖ್ಯೆಯ ಕಾಮಗಾರಿಯ ಅಂದಾಜು ಮೊತ್ತ ರೂ.97.00 ಲಕ್ಷ ಮುಂಗಡ ಠೇವಣಿ (ಇ.ಎಂ.ಡಿ) ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ 2.0 ನಲ್ಲಿ ತಿಳಿಸಿರುವಂತೆ.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು ಈ ಕೆಳಕಂಡಂತಿವೆ: 1) ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮೂಲಕ ಡೌನ್ ಲೋಡ್ ಮಾಡಿಕೊಳ್ಳುವ ದಿ: 23.06.2025ರ ನಂತರ. **2)** ಭರ್ತಿ ಮಾಡಿದ ಟೆಂಡರ್‌ನ್ನು ಮತ್ತು ಇ.ಎಂ.ಡಿ ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿ: 02.07.2025 ಸಂಜೆ 4.00 ಗಂಟೆಯರವರೆಗೆ). **3)** ಇ–ಪ್ರೊಕ್ಯೂರ್‌ಮೆಂಟ್ 2.0 ಪೋರ್ಟಲ್ ಮೂಲಕ ಸ್ವೀಕೃತವಾಗುವ ಟೆಂಡರ್‌ಗಳ ತಾಂತ್ರಿಕ ಬಿಡ್ಡನ್ನು ತೆರೆಯುವ ದಿ: 03.07.2025 (ಸಂಜೆ 4.30 ಗಂಟೆಯನಂತರ) ಹಾಗೂ ತಾಂತ್ರಿಕ ಬಿಡ್ಡಿಗೆ ಅನುಮೋದನೆ ಪಡೆದ ನಂತರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು, ಸೂಚನೆಗಳು ಮತ್ತು ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ 2.0 ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಕಾ.ನೀ.ನಿ.ನಿ., ಹಾರಂಗಿ ನಾಲಾ ವಿಭಾಗ, ಸಾಲಿಗ್ರಾಮ.

DIPR/DDMYS/506/KSMCA/309/2025-26

ಪ್ರತಿ ಜಿಲ್ಲೆಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

ಮೋದಿ ರೀತಿ ರಾಜ್ಯದಲ್ಲಿ ಸರ್ವಾಧಿಕಾರಿ ಆಡಳಿತವಿಲ್ಲ: ಡಾ.ಶರಣ್ ಪ್ರಕಾಶ್ ಪಾಟೀಲ್

ಬೆಂಗಳೂರು: ರಾಜ್ಯದಲ್ಲಿ ಆರೋಗ್ಯ ಭಾಗ್ಯ ಹೆಚ್ಚಿಸಲು ಸಂಕಲ್ಪ ತೊಟ್ಟಿರುವ ನಮ್ಮ ಸರಕಾರ ಮುಂದಿನ 3 ವರ್ಷದೊಳಗೆ ಪ್ರತಿ ಜಿಲ್ಲೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಸೆಂಟರ್, ಕ್ಯಾನ್ಸರ್ ಆಸ್ಪತ್ರೆ, ಹೃದ್ರೋಗ ಚಿಕಿತ್ಸಾ ಆಸ್ಪತ್ರೆ ನಿರ್ಮಾಣ ಮಾಡಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ್ ಪ್ರಕಾಶ್ ಪಾಟೀಲ್ ತಿಳಿಸಿದರು.

ನಗರದ ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಕಾರ್ಯಕರ್ತರೊಂದಿಗೆ ಸಂವಾದ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕರ್ನಾಟಕವನ್ನು ಆರೋಗ್ಯಕರ ರಾಜ್ಯವನ್ನಾಗಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಗುರಿ ಇಟ್ಟುಕೊಂಡಿದೆ. ಈ ನಿಟ್ಟಿನಲ್ಲಿ ನಮ್ಮ ವೈದ್ಯಕೀಯ ಶಿಕ್ಷಣ ಇಲಾಖೆ ಮೂರು ವರ್ಷಗಳ ಅಭಿವೃದ್ಧಿ ಯೋಜನೆಗಳ ನೀಲನಕ್ಷೆ ಹಾಕಿಕೊಂಡಿದೆ. ಪ್ರತಿ ಜಿಲ್ಲೆಯಲ್ಲಿ ಎಲ್ಲರಿಗೂ, ಸುಲಭ ಹಾಗೂ ಸುಲಲಿತವಾಗಿ ಚಿಕಿತ್ಸೆ ದೊರೆಯುವಂತೆ ಮಾಡಲಾಗುವುದು. ನಾಗರಿಕರ ಯೋಗ ಕ್ಷೇಮದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲಾಗುವುದು. ಹುಬ್ಬಳ್ಳಿ ಮತ್ತು ಬೆಳಗಾವಿ ಭಾಗದಲ್ಲಿ ಜಯದೇವ ಹೃದ್ರೋಗ ಆಸ್ಪತ್ರೆ ಶಾಖೆ ಶೀಘ್ರವಾಗಿ ಲೋಕಾರ್ಪಣೆ ಆಗಲಿದೆ ಎಂದರು.

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಅನೇಕ ಸುಧಾರಣಾ ಕ್ರಮಗಳನ್ನು ತಂದಿದ್ದೇವೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ರಾಜ್ಯಾದ್ಯಂತ ಮಾಡಲು ಆರಂಭಿಸಿದ್ದೇವೆ. ಕಲಬುರಗಿ, ಧಾರವಾಡ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಕಾರ್ಯಾರಂಭವಾಗಿದೆ. ಮೈಸೂರಿನಲ್ಲಿ ಜಯದೇವ ಆಸ್ಪತ್ರೆ ಇದೆ. ಹುಬ್ಬಳ್ಳಿಯಲ್ಲಿ ಮುಂದಿನ ವರ್ಷ 400 ಹಾಸಿಗೆಗಳ ಜಯದೇವ ಆಸ್ಪತ್ರೆ ಉದ್ಘಾಟನೆ ಮಾಡಲಿದ್ದೇವೆ. 2 ಲಕ್ಷದ 86 ಸಾವಿರ ಯುವಕರು ಯುವ ನಿಧಿ ಯೋಜನೆಯಲ್ಲಿ ನೋಂದಣಿ ಆಗಿದ್ದಾರೆ. ಈ ಯೋಜನೆಯನ್ನು ಇನ್ನಷ್ಟು ಸಮರ್ಪಕವಾಗಿ ಜಾರಿಗೆ ತರಲು ಕೆಲವು ಸುಧಾರಣೆಗಳನ್ನು ತರುತ್ತಿದ್ದೇವೆ ಎಂದು ಡಾ. ಶರಣ್ ಪ್ರಕಾಶ್ ಪಾಟೀಲ್ ತಿಳಿಸಿದರು.

ಸೀಟ್ ಬ್ಲಾಕಿಂಗ್ ಇಲ್ಲ: ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಶೇ.100 ರಷ್ಟು ಪಾರದರ್ಶಕತೆ ಇದೆ. ಯಾವುದೇ ಸೀಟ್ ಬ್ಲಾಕಿಂಗ್ ಇಲ್ಲ. ಮೆರಿಟ್ ಆಧಾರದ ಮೇಲೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಮೆಡಿಕಲ್ ಸೀಟು ಹಂಚಿಕೆ ಮಾಡಲಾಗುತ್ತದೆ. 800 ಮೆಡಿಕಲ್ ಸೀಟು ಹೆಚ್ಚಳಕ್ಕೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮಾಹಿತಿ ಹಂಚಿಕೊಂಡರು.

ನಗರದ ಕ್ವೀನ್ಸ್ ರಸ್ತೆಯಲ್ಲಿರುವ ಕೆಪಿಸಿಸಿ ಕಚೇರಿಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ್ ಪ್ರಕಾಶ್ ಪಾಟೀಲ್ ಕಾರ್ಯಕರ್ತರೊಂದಿಗೆ ಸಂವಾದ ನಡೆಸಿದರು.

ಮೋದಿ ರೀತಿ ಸರ್ವಾಧಿಕಾರಿ ಆಡಳಿತವಿಲ್ಲ

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಪ್ರಜಾಸತ್ತಾತ್ಮಕ ಆಡಳಿತವಿದೆ. ಇಲ್ಲಿ ಯಾರೇ ಆಗಲಿ ದನಿ ಎತ್ತಬಹುದು, ಬೇಡಿಕೆ ಮಂಡಿಸಬಹುದು. ಇದು ನರೇಂದ್ರ ಮೋದಿ ರೀತಿಯ ಸರ್ವಾಧಿಕಾರ ಆಡಳಿತ ಅಲ್ಲ. ಶಾಸಕರು ಈಗ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಚಿವರನ್ನು ಕೆಲವು ವಿಷಯದ ಬಗ್ಗೆ ಪ್ರಶ್ನಿಸಿದ್ದಾರೆ. ತಮ್ಮ ತಮ್ಮ ಕ್ಷೇತ್ರಗಳಿಗೆ ಅನುದಾನ ಬೇಕೆಂದು ಬೇಡಿಕೆ ಮಂಡಿಸಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಇದೆಲ್ಲ ಸಹಜ. ಇದುವೇ ಗುಡ್ ಅಂಡ್ ವೈಬ್ರೆಂಡ್ ಡೆಮಾಕ್ರಸಿ. ಇದು ಅಸಮಾಧಾನ ಅಥವಾ ಆಕ್ರೋಶ ಅಲ್ಲ, ತಮ್ಮ ಬೇಡಿಕೆ ಮಂಡಿಸಿದ್ದು. ಒಬ್ಬೊಬ್ಬರು ಒಂದೊಂದು ರೀತಿ ತಮ್ಮ ಅಹವಾಲು ಪ್ರಸ್ತುತಪಡಿಸಬಹುದು. ಶಾಸಕರ ಬೇಡಿಕೆ ಬಗ್ಗೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಗಮನಹರಿಸುತ್ತಾರೆ ಎಂದು ಡಾ.ಪಾಟೀಲ್ ಸ್ಪಷ್ಟಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ನಾನಲ್ಲ. ಸದ್ಯಕ್ಕೆ ಈ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ. ಹಾಗೊಂದು ವೇಳೆ ಆಯ್ಕೆ ಮಾಡಬೇಕಾದರೆ ಪಕ್ಷದ ಅಧ್ಯಕ್ಷರು ಯಾರಾಗಬೇಕು ಎನ್ನುವುದನ್ನು ಹೈಕಮಾಂಡ್ ನಾಯಕರು ನಿರ್ಧರಿಸುತ್ತಾರೆ. ಪಕ್ಷ ಕೊಡುವ ಜವಾಬ್ದಾರಿಯನ್ನು ನಿಭಾಯಿಸುವೆ. ನಾನು ಯಾರ ಬಳಿಯೂ ಕೆಪಿಸಿಸಿ ಅಧ್ಯಕ್ಷ ಸ್ಥಾನ ಕೇಳಿಲ್ಲ.

– ಡಾ.ಶರಣ್ ಪ್ರಕಾಶ್ ಪಾಟೀಲ್ ವೈದ್ಯಕೀಯ ಶಿಕ್ಷಣ ಸಚಿವ

ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ
ಡಿ.ದೇವರಾಜ ಅರಸು ಬಡಾವಣೆ, ಟಮಕ ಕೋಲಾರ –563103. ದೂರವಾಣಿ ಸಂಖ್ಯೆ:08152–243142,
ಇಮೇಲ್:kudakolar@gmail.com.

ಸಂಖ್ಯೆ: ಕೋನಪ್ರಾಕೋ:ಭೂಉಬ:ಪ:ಪ್ರಕಟಣೆ:25:2025–26 ದಿನಾಂಕ: 19.06.2025

"ಸಾರ್ವಜನಿಕ ಪ್ರಕಟಣೆ"

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ–1961ರ ಕಲಂ–14(ಎ) ರನ್ವಯ ಈ ಕೆಳಕಂಡ ಭೂಮಾಲೀಕರು ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ (ಪ–1) (ಅಂತಿಮ) ಕಾಯ್ದಿರಿಸಿರುವ ಭೂಉಪಯೋಗದ ಬದಲಾವಣೆಗೆ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. **ಹಾಗೂ ಸಾರ್ವಜನಿಕರಿಗೆ/ಮಧ್ಯಮ ವರ್ಗದವರಿಗೆ ಅನುಕೂಲವಾಗುವ ಹಾಗೂ ಸಾರ್ವಜನಿಕರಿಗೆ ಕೈಗೆಟುಕುವ ದರಗಳಲ್ಲಿ ಸುಸಜ್ಜಿತ ವಸತಿ ಬಡಾವಣೆಯನ್ನು ನಿರ್ಮಿಸುವುದಾಗಿ ತಿಳಿಸಿರುತ್ತಾರೆ.** ಆದುದರಿಂದ ಅರ್ಜಿದಾರರ ಮನವಿಯಂತೆ, ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧ ಸಲಹೆ/ಆಕ್ಷೇಪಣೆಗಳಿದಲ್ಲಿ ಈ ಪ್ರತಿಕಾ ಪ್ರಕಟಣೆಯಾದ 15 (ಹದಿನೈದು) ದಿನದೊಳಗೆ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ ಇವರಿಗೆ **"ಲಿಖಿತ ರೂಪದಲ್ಲಿ ಖುದ್ದಾಗಿ, ಅಥವಾ ನೋಂದಾಯಿತ ಸ್ವೀಕೃತ ಅಂಚೆ"** ಮೂಲಕ ಸಲ್ಲಿಸಲು ಕೋರಲಾಗಿದೆ. ನಿಗಧಿತ ದಿನಾಂಕದ ನಂತರ ಬಂದ ಆಕ್ಷೇಪಣಾ ಅರ್ಜಿಗಳನ್ನು ಈ ಕಛೇರಿಯಲ್ಲಿ ಪರಿಗಣಿಸಲಾಗುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ಹೋಬಳಿ	ಗ್ರಾಮ	ಸ.ನಂ	ವಿಸ್ತೀರ್ಣ ಎ–ಗುಂ	ಚೆಕ್ಕುಬಂಧಿ: ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ	ಮಹಾ ಯೋಜನೆ ಕಾಯ್ದಿರಿಸಿರುವ ಭೂ ಉಪ ಯೋಗ	ಭೂ ಉಪ ಯೋಗ ಬದಲಾವಣೆಗೆ ಕೋರಿರುವ ಉದ್ದೇಶ
1	ಶ್ರೀ ಪ್ರಸನ್ನ ಎನ್ ಬಿನ್ ಕೆ.ಎನ್. ನಾರಾಯಣ ಸ್ವಾಮಿ	ಕಸಬಾ	ಅಮ್ಮೇರ ಹಳ್ಳಿ	115/1 155/2 159/1 159/2 159/3 159/4 208/2 208/3	01–24.08 00–37.08 0–04 0–07 0–07 0–07 0–08 0–02.08 ಒಟ್ಟು 03–17.08	ಕೋಲಾರ ದಿಂದ – ಹೊಸ ಕೋಟೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿ	ಸ.ನಂ:182	ಸ.ನಂ:154, ಸ.ನಂ:209	ಸ.ನಂ:159/5 ಸ.ನಂ:207 ಹಾಗೂ 156.	ಕೃಷಿ 14(ಎ)	ವಸತಿ

ಸಹಿ/–
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ
ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:144/ಕೆಎಸ್‌ಎಂಸಿಎ/2025–26

ಸಮಾಚಾರ ಸಣ್ಣದಲ್ಲ

ನಕ್ಸಲ್ ಕೃಷ್ಣಮೂರ್ತಿ ಕೋರ್ಟ್‌ಗೆ ಹಾಜರು

ಚಿಕ್ಕಮಗಳೂರು: ನಕ್ಸಲ್ ನಾಯಕ ಬಿ.ಜಿ. ಕೃಷ್ಣಮೂರ್ತಿಯನ್ನು ಕೇರಳ ಪೊಲೀಸರು ಬುಧವಾರ ಚಿಕ್ಕಮಗಳೂರು ಜೆಎಂಎಫ್ ಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಹಲವು ಪ್ರಕರಣ ಸಂಬಂಧ ಹಾಜರುಪಡಿಸಲಾಗಿದ್ದು, ಪ್ರಕರಣವನ್ನು ಜುಲೈ 21ಕ್ಕೆ ಮುಂದೂಡಲಾಗಿದೆ. ಸಾಕೇತ್ ರಾಜನ್ ನಂತರ ರಾಜ್ಯದಲ್ಲಿ ಒಂದೂವರೆ ದಶಕ ನಕ್ಸಲ್ ನಾಯಕತ್ವ ವಹಿಸಿದ್ದ ಬಿ.ಜಿ. ಕೃಷ್ಣಮೂರ್ತಿ ಕೇರಳದಲ್ಲಿ ಕಳೆದ ವರ್ಷ ಶರಣಾಗಿದ್ದ. ಮೋಸ್ಟ್ ವಾಂಟೆಡ್ ನಕ್ಸಲ್ ಆಗಿದ್ದ ಕೃಷ್ಣಮೂರ್ತಿ ಮೇಲೆ 66 ಪ್ರಕರಣ ದಾಖಲಾಗಿವೆ. ಚಿಕ್ಕಮಗಳೂರು ಮಾತ್ರವಲ್ಲದೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೃಷ್ಣಮೂರ್ತಿ ವಿರುದ್ಧ ಪ್ರಕರಣಗಳಿವೆ. ದಶಕದ ಹಿಂದೆ ಇತರ ನಕ್ಸಲರೊಂದಿಗೆ ಕೇರಳಕ್ಕೆ ತೆರಳಿದ್ದ ಕೃಷ್ಣಮೂರ್ತಿ ಸಕ್ರಿಯನಾಗಿದ್ದ.

ಕರ್ನಾಟಕ ರಾಜ್ಯ ಕಾಂಗ್ರೆಸ್‌ಗೆ ಎಟಿಎಂ

ಬೀದರ್: ರಾಜ್ಯ ಸರಕಾರ ಪಾಪರ್ ಆಗಿದೆ. ಮೂರು ಕಾಸು ಇಲ್ಲ, ಬಂದ ಹಣ ಎಲ್ಲಿಗೆ ಹೋಗುತ್ತಿದೆ ಎಂಬುದು ಗೊತ್ತಿಲ್ಲ. ದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ನಡೆಸಲು ಹಣ ಇಲ್ಲ, ಹೀಗಾಗಿ ಕರ್ನಾಟಕವನ್ನು ಕಾಂಗ್ರೆಸ್ ಎಟಿಎಂ ಮಾಡಿಕೊಂಡಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳ ಲಾಭ ಮೂರ್ನಾಲ್ಕು ತಿಂಗಳಾದರೂ ಸಿಗುತ್ತಿಲ್ಲ. ಈ ಬಗ್ಗೆ ಕೇಳಿದರೆ ತಿಂಗಳಿಗೊಮ್ಮೆ ಕೊಡಲು ಸಂಬಳ ಇದಲ್ಲ ಅಂತಾರೆ ಎಂದು ಹೇಳಿದರು.

ಖರ್ಗೆ, ಸುರ್ಜೇವಾಲ, ವೇಣುಗೋಪಾಲ್ ಜತೆ ಚರ್ಚಿಸಿದ ಸಿಎಂ | ಎಲ್ಲ ಸಚಿವರಿಗೆ ಸಮಯ ನೀಡುವಂತೆ ಸೂಚನೆ ನೀಡಿದ ಹೈಕಮಾಂಡ್

ಬಹಿರಂಗ ಹೇಳಿಕೆ ಬೇಡ: ಹೈಕಮಾಂಡ್ ಕಟ್ಟಪ್ಪಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮೂರು ದಿನಗಳ ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೂಲಕ ಪಕ್ಷದ ನಾಯಕರಿಗೆ 'ಬಹಿರಂಗ ಹೇಳಿಕೆ ನೀಡಬಾರದು' ಎನ್ನುವ ಸ್ಪಷ್ಟ ಸಂದೇಶವನ್ನು ಹೈಕಮಾಂಡ್ ರವಾನಿಸಿದೆ.

ಸಿದ್ದರಾಮಯ್ಯ ಅವರು ಬುಧವಾರ ಬೆಳಗ್ಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿಯಾಗಿ ಚರ್ಚಿಸಿದ್ದಾರೆ. ಈ ವೇಳೆ ವಸತಿ ಇಲಾಖೆಗೆ ಸಂಬಂಧಿಸಿದಂತೆ ಬಿ.ಆರ್. ಪಾಟೀಲ್ ಆರೋಪ, ಅದಾದ ಬಳಿಕ ರಾಜು ಕಾಗೆಯವರ 'ರಾಜೀನಾಮೆ'ಯ ಎಚ್ಚರಿಕೆ ಹಾಗೂ ಜಮೀರ್ ರಾಜೀನಾಮೆಗೆ ಬೇಳೂರು ಗೋಪಾಲಕೃಷ್ಣ ಅವರ ಆಗ್ರಹಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ಸ್ಪಷ್ಟ ಬಹುಮತದೊಂದಿಗೆ ಅಧಿಕಾರದಲ್ಲಿದ್ದರೂ ಈ ರೀತಿಯ ಹೇಳಿಕೆಗಳೇ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗಲಿದೆ ಎಂದು ಅಸಮಾಧಾನವ್ಯಕ್ತಪಡಿಸಿರುವ ಕೆ.ಸಿ. ವೇಣುಗೋಪಾಲ್ ಅವರು, ಪಕ್ಷ ಅಥವಾ ಸರಕಾರದ ವಿರುದ್ಧ ಯಾರೂ ಮಾತನಾಡಬಾರದು. ಶಾಸಕರು ಅಥವಾ ನಾಯಕರಿಗೆ ಯಾವುದೇ ಸಮಸ್ಯೆಯಿದ್ದರೂ, ಪಕ್ಷದ ವೇದಿಕೆಯಲ್ಲಿ ಚರ್ಚಿಸಬೇಕು. ಇಲ್ಲವೇ ನಿಮ್ಮನ್ನು (ಸಿದ್ದರಾಮಯ್ಯ) ಅಥವಾ ಡಿಸಿಎಂ ಡಿ.ಕೆ.ಶಿವಕುಮಾರ್ ಜತೆ ಚರ್ಚಿಸಬೇಕು ಎನ್ನುವ ಸೂಚನೆ ನೀಡಿ. ಮತ್ತೊಮ್ಮೆ ಈ ರೀತಿಯ ಹೇಳಿಕೆ ನೀಡಿದರೆ, ಕಠಿಣ ಕ್ರಮಕ್ಕೆಗೊಳ್ಳಬೇಕಾಗುತ್ತದೆ ಎನ್ನುವ ಎಚ್ಚರಿಕೆಯನ್ನು ನೀಡಿದ್ದಾರೆ ಎನ್ನಲಾಗಿದೆ.

ಸಿದ್ದರಾಮಯ್ಯ ಅವರು ಬುಧವಾರ ಬೆಳಗ್ಗೆ ದೆಹಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

- ಶಾಸಕರ ಹೇಳಿಕೆಗಳಿಗೆ ಕೆ.ಸಿ. ವೇಣುಗೋಪಾಲ್ ಅಸಮಾಧಾನ
- ಪಕ್ಷ ಅಥವಾ ಸರಕಾರದ ವಿರುದ್ಧ ಯಾರೂ ಮಾತನಾಡದಂತೆ ಸೂಚನೆ
- ಶಾಸಕರು, ನಾಯಕರಿಗೆ ಯಾವುದೇ ಸಮಸ್ಯೆಯಿದ್ದರೂ, ಪಕ್ಷದ ವೇದಿಕೆಯಲ್ಲಿ ಚರ್ಚಿಸಲು ಸೂಚನೆ
- ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗುವ ಹೇಳಿಕೆಗಳು ನೀಡಿದರೆ ಕಠಿಣ ಕ್ರಮದ ಎಚ್ಚರಿಕೆ

ಕೈಗೆ ಸಚಿವರು ಸಿಗುತ್ತಿಲ್ಲ ಎನ್ನುವ ಬಹುತೇಕ ಶಾಸಕರ ಆರೋಪವನ್ನೂ ಗಂಭೀರವಾಗಿ ಪರಿಗಣಿಸಿರುವ ವೇಣುಗೋಪಾಲ್ ಅವರು, ಸಚಿವರು ಯಾರ ಕೈಗೂ ಸಿಗುತ್ತಿಲ್ಲ ಎನ್ನುವ ಆರೋಪ ಮೊದಲಿನಿಂದಲೂ ಇದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಕೂಡಲೇ ಕ್ರಮವಹಿಸಿ. ಪಕ್ಷದ ಶಾಸಕರ ಸಮಸ್ಯೆಗಳನ್ನು ಸಾಧ್ಯವಾದಷ್ಟು ಬಗೆಹರಿಸುವ ನಿಟ್ಟಿನಲ್ಲಿ ಕ್ರಮವಹಿಸಲಿ. ಇಲ್ಲವೇ ವಸ್ತುಸ್ಥಿತಿಯನ್ನಾದರೂ ಮನವರಿಕೆ ಮಾಡಿಕೊಡಲು ಸೂಚನೆ ನೀಡಿ ಎಂದು ಹೇಳಿದ್ದಾರೆ ಎನ್ನಲಾಗಿದೆ.

ಬಿ.ಆರ್. ಪಾಟೀಲ್ ಅಸಮಾಧಾನವನ್ನು ಆರಂಭದಲ್ಲೇ ಶಮನ ಮಾಡಬೇಕಿತ್ತು. ಅವರನ್ನು ಕರೆಸಿ ಅಹವಾಲು ಆಲಿಸಬೇಕಿತ್ತು. ಈ ಬಗ್ಗೆ ನಿರ್ಲಕ್ಷ್ಯ ವಹಿಸಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ಆದರೆ ಇದಕ್ಕೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ಪಾಟೀಲ್ ಅವರಿಗೆ ಭಾನುವಾರವೇ ಕರೆ ಮಾಡಿ ಭೇಟಿ ಮಾಡುವಂತೆ ತಿಳಿಸಿದ್ದೆ. ಬುಧವಾರ ಬರುವುದಾಗಿ ತಿಳಿಸಿದ್ದಾರೆ. ಬೆಂಗಳೂರಿಗೆ ತೆರಳಿದ ಕೂಡಲೇ ಅವರೊಂದಿಗೆ ಚರ್ಚೆ ನಡೆಸುವೆ' ಎಂದು ಸಮರ್ಥಿಸಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಂದಿನ ವಾರ ಮತ್ತೆ ದೆಹಲಿಗೆ ಸಿಎಂ?

ವಿಧಾನಪರಿಷತ್‌ನ ನಾಮನಿರ್ದೇಶಕಕ್ಕೆ ಸಂಬಂಧಿಸಿದಂತೆಯೂ ಚರ್ಚಿಸಿರುವ ಸಿಎಂ, ಬದಲಿ ಆಯ್ಕೆಗೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಇದರೊಂದಿಗೆ ಸಂಪುಟದಲ್ಲಿ ಖಾಲಿ ಇರುವ ಒಂದು ಸ್ಥಾನವನ್ನು ಭರ್ತಿ ಮಾಡಲು ಹೈಕಮಾಂಡ್ ಈವರೆಗೂ ಹಸಿರು ನಿಶಾನೆ ತೋರಿಸಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ವೇಣುಗೋಪಾಲ್ ಅವರೊಂದಿಗೆ ಚರ್ಚೆ ನಡೆಸಿದ್ದಾರೆ. ಆದರೆ ರಾಹುಲ್ ಗಾಂಧಿ ಅವರು ವಿದೇಶ ಪ್ರವಾಸದಲ್ಲಿರುವುದರಿಂದ ಅವರು ವಾಸ ಪಾದ ಬಳಿಕ ಮತ್ತೊಮ್ಮೆ ದೆಹಲಿಗೆ ತೆರಳಿ ಈ ನಾಮ ನಿರ್ದೇಶನವನ್ನು ಅಂತಿಮಗೊಳಿಸುವ ಸಾಧ್ಯತೆ ಯಿದೆ. ಇದಾದ ಬಳಿಕ ಸುರ್ಜೇವಾಲಾ ಅವರು ರಾಜ್ಯಕ್ಕೆ ಭೇಟಿ ಮಾಡಿ ರಾಜ್ಯ ನಾಯಕರು ಹಾಗೂ ಶಾಸಕರ ಜತೆಗೆ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ರಾಗಾ ವಾಪಸಾದ ಬಳಿಕ ನಾಮನಿರ್ದೇಶನ ಅಂತಿಮ

ಮಲ್ಲಿಕಾರ್ಜುನ ಖರ್ಗೆ ಹಾಗೂ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿಯಾದ ಸಮಯದಲ್ಲಿ ನಾಲ್ಕು ವಿಧಾನಪರಿಷತ್ ನಾಮನಿರ್ದೇಶನ ಸ್ಥಾನಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಚರ್ಚೆ ನಡೆಸಿದ್ದಾರೆ. ರಾಜ್ಯ ಕಾಂಗ್ರೆಸ್ ರವಾನಿಸಿರುವ ಎಂಎಲ್‌ಸಿ ಪಟ್ಟಿಯಲ್ಲಿ ಕೆಲ ಬದಲಾವಣೆಗಳನ್ನು ಮಾಡುವಂತೆ ಹೈಕಮಾಂಡ್ ಸೂಚಿಸಿತ್ತು. ಈ ಬಗ್ಗೆ ಸಿದ್ದರಾಮಯ್ಯ ಅವರು ನಾಯಕರೊಂದಿಗೆ ಚರ್ಚಿಸಿದ್ದಾರೆ. ಆದರೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು, ಹೊರದೇಶದಲ್ಲಿರುವುದರಿಂದ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲು ಸಾಧ್ಯವಾಗಿಲ್ಲ. ಆದ್ದರಿಂದ ರಾಹುಲ್ ಗಾಂಧಿ ಅವರು ವಾಪಸಾದ ಬಳಿಕ ಹೆಸರು ಅಂತಿಮಗೊಳ್ಳಲಿವೆ ಎನ್ನಲಾಗಿದೆ.

ಮಂತ್ರಾಲಯ ಮಠದಲ್ಲಿ 5 ಕೋಟಿ ಕಾಣಿಕೆ ಸಂಗ್ರಹ

ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಸಿಬ್ಬಂದಿ ಮಂಗಳವಾರ ಕಾಣಿಕೆ ಎಣಿಕೆ ಮಾಡಿದರು.

ರಾಯಚೂರು: ಕಳೆದ 35 ದಿನಗಳಲ್ಲಿ ಮಂತ್ರಾಲಯದ ರಾಯರ ಮಠಕ್ಕೆ ಭರ್ಜರಿ ಆದಾಯ ಹರಿದು ಬಂದಿದೆ. ರಾಘವೇಂದ್ರ ಸ್ವಾಮಿ ಮಠದ ಕಾಣಿಕೆ ಹುಂಡಿ ಎಣಿಕೆ ಮಾಡಲಾಗಿದ್ದು, ಇದೇ ಮೊದಲ ಬಾರಿಗೆ 5 ಕೋಟಿ ರುಪಾಯಿ ಮೀರಿ ದಾಖಲೆಯ ಕಾಣಿಕೆ ಸಂಗ್ರಹ ಆಗಿದೆ. ಒಟ್ಟು 5,28,39,538 ರು. ಕಾಣಿಕೆ ರೂಪದಲ್ಲಿ ಭಕ್ತರು ರಾಯರಿಗೆ ಸಮರ್ಪಿಸಿದ್ದಾರೆ. ಒಟ್ಟು ಕಾಣಿಕೆಯಲ್ಲಿ 5,13,04,958 ರು. ನಗದು ನೋಟುಗಳು ಹಾಗೂ 15,34,580 ರು. ನಾಣ್ಯಗಳು ಸಂಗ್ರಹ ಆಗಿದೆ. 43 ಗ್ರಾಂ ಚಿನ್ನ, 1837 ಗ್ರಾಂ ಬೆಳ್ಳಿ ಕಾಣಿಕೆ ಸಲ್ಲಿಕೆಯಾಗಿದೆ. ಕರ ಸೇವಕರು , ಮಠದ ಭಕ್ತರು, ಸಿಬ್ಬಂದಿ ಹುಂಡಿ ಎಣಿಕೆ ಕಾರ್ಯದಲ್ಲಿ ಭಾಗಿಯಾಗಿದ್ದರು.

ತಮಾಷೆಗಾದರೂ ಪರಮೇಶ್ವರ ಸತ್ಯ ಹೇಳಿದ್ದಾರೆ

ರಾಜ್ಯ ಸರಕಾರಕ್ಕೆ ದಿಕ್ಕು ದೆಸೆ ಇಲ್ಲ

ಬೆಂಗಳೂರು: ಕಾಂಗ್ರೆಸ್ ಸರಕಾರ ಸಂಪೂರ್ಣ ಭ್ರಷ್ಟಾಚಾರದಲ್ಲಿ ಮುಳುಗಿ ರಾಜ್ಯ ದಿಕ್ಕು ದೆಸೆ ಇಲ್ಲದೆ ನಡೆಯುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷವಾಗಿದೆ. ಶಾಸಕರಿಗೆ ಯಾವುದೇ ಅನುದಾನ ಇಲ್ಲ. ಕೆಲಸ ಮಾಡಲು ಆಗಿಲ್ಲ. ಹೀಗೆ ಆದರೆ, ಇನ್ನೆರಡುವರೆ ವರ್ಷದಲ್ಲಿ ಜನರ ಬಳಿ ಹೋಗಲು ಆಗುವುದಿಲ್ಲ. ಸರಕಾರದ ಬಳಿ ಹಣ ಇಲ್ಲ. ಕೆಲಸ ಮಾಡಲು ಪ್ರತಿಯೊಂದಕ್ಕೂ ಭ್ರಷ್ಟಾಚಾರ, ಎಷ್ಟಿಮೇಟ್‌ಗೂ ಭ್ರಷ್ಟಾಚಾರ, ವರ್ಕ್ ಆರ್ಡರ್ ತೆಗೆದುಕೊಳ್ಳಲು ಭ್ರಷ್ಟಾಚಾರ. ಕಾಂಗ್ರೆಸ್ ನ ನೀತಿಯಿಂದಾಗಿ ಜನರು ತಮ್ಮ ದುಡಿಮೆಯ ಹಣ ಭ್ರಷ್ಟಾಚಾರಕ್ಕೆ ಕೊಡುವ ಪರಿಸ್ಥಿತಿ ಬಂದಿದೆ. ವಿರೋಧ ಪಕ್ಷದಲ್ಲಿ ಇದ್ದಾಗ ಭ್ರಷ್ಟಾಚಾರದ ವಿರುದ್ಧ ದೊಡ್ಡ ಹಂಗಾಮ ಮಾಡಿದ್ದರು. ಇಡೀ ಕಾಂಗ್ರೆಸ್ ಭ್ರಷ್ಟಾಚಾರದಲ್ಲಿ ಮುಳುಗಿ ದಿಕ್ಕು ದೆಸೆ ಇಲ್ಲದೆ ನಡೆದಿದೆ ಇದರಿಂದ ಜನ ಬೇಸತ್ತಿದ್ದಾರೆ ಎಂದು ಆರೋಪಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಬಳಿ ಹಣ ಇಲ್ಲ ಎಂದು ಗೃಹ ಸಚಿವ ಪರಮೇಶ್ವರ ಅವರು ತಮಾಷೆಗಾಗಿಯಾದರೂ ಸತ್ಯ ಹೇಳಿದ್ದಾರೆ. ತಮಾಷೆಗಾದರೂ ಸತ್ಯ ಹೇಳಿದ್ದಾರೆ. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಡಬಲ್ ಸ್ಟ್ಯಾಂಡರ್ಡ್ ಯಾಕೆ?

ಕಾನೂನು ಸಚಿವ ಎಚ್.ಕೆ.ಪಾಟೀಲರು ಅಕ್ರಮ ಗಣಿ ತನಿಖೆ ಕುರಿತು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಅವರು ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾಗಿದ್ದಾರೆ, ಅದನ್ನು ಅವರಿಗೆ ನೇರವಾಗಿಯೇ ಹೇಳಬಹುದಿತ್ತು. ಅವರ ಮಾತು ಸಿಎಂ ಕೇಳುತ್ತಿರಲಿಲ್ಲವೇ. ಪ್ರತಿಪಕ್ಷದವರ ರೀತಿ ಬಹಿರಂಗವಾಗಿ ಪತ್ರ ಬರೆದಿದ್ದಾರೆ. ಕೇಂದ್ರ ಸರಕಾರ ಗಣಿ ಹರಾಜು ಹಾಕಲು ಕಾನೂನು ಮಾಡಿತ್ತು ಅದಕ್ಕೂ ಮೊದಲಿನ ದಿನ ರಾಜ್ಯ ಸರಕಾರ ಗಣಿ ಹರಾಜು ಹಾಕಿದ್ದರು. ಈ ಹಿಂದೆ ನಮ್ಮ ಅಧಿಕಾರದಲ್ಲಿ ಜಿಂದಾಲ್ ಗೆ ಜಮೀನು ನೀಡಬಾರದು ಎಂದು ಎಚ್. ಕೆ. ಪಾಟೀಲರು ಪತ್ರ ಬರೆದಿದ್ದರು. ಅವರು ಅಧಿಕಾರಕ್ಕೆ ಬಂದ ಮೇಲೆ ಜಿಂದಾಲ್ ಗೆ ಜಮೀನು ನೀಡಿದರು. ಈ ರೀತಿಯ ಡಬಲ್ ಸ್ಟ್ಯಾಂಡರ್ಡ್ ಯಾಕೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಸಹೋದರನ ಕೊಲೆಯ ಪ್ರತೀಕಾರಕ್ಕೆ ಹತ್ಯೆ

ಮೂವರ ಬರ್ಬರ ಕೊಲೆ





ಕಲುಬುರಗಿ: ಮಾರಕಾಸ್ತ್ರಗಳಿಂದ ಮೂವರನ್ನು ಕೊಚ್ಚಿ ಭೀಕರವಾಗಿ ಕೊಲೆ ಮಾಡಿರುವ ಘಟನೆ ನಗರದ ಹೊರವಲಯದ ಪಟ್ಟಣ ಗ್ರಾಮದ ಸಮೀಪದ ಡ್ರೈವರ್ ಡಾಬಾ ಬಳಿ ಮಂಗಳವಾರ ತಡರಾತ್ರಿ ನಡೆದಿದೆ.

ಮಂಗಳವಾರ ತಡರಾತ್ರಿ 1.30ರ ಸುಮಾರಿಗೆ ಡ್ರೈವರ್ ಡಾಬಾಗೆ ನುಗ್ಗಿದ ದುಷ್ಕರ್ಮಿಗಳು ಡಾಬಾ ಮಾಲೀಕ ಸಿದ್ದಾರೂಢ ಶರಣಬಸಪ್ಪ ತುಗುಡಿ(35), ಆತನ ಅಳಿಯ ಜಗದೀಶ್ ದತ್ತಾತ್ರೇಯ ಬೆಳಮಗಿ (33) ಹಾಗೂ ಕೆಲಸಗಾರ ರಾಮಚಂದ್ರ ಅಂಬಾರಾವ್ (35) ಎನ್ನುವವರನ್ನು ಕೊಲೆಗೈದಿದ್ದಾರೆ. ಕಳೆದ ವರ್ಷ ನಡೆದ ಸೋಮು ತಾಳಿಕೋಟಿ ಎನ್ನುವವರ ಕೊಲೆಗೆ ಪತೀಕಾರವಾಗಿ ತ್ರಿಬಲ್ ಮರ್ಡರ್ ಮಾಡಲಾಗಿದೆ ಎಂದು ತಿಳಿದು ಬಂದಿದೆ. ಈ ಕುರಿತು ಕಲಬುರಗಿ ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ 11 ಜನರ ವಿರುದ್ಧ ದೂರು ದಾಖಲಾಗಿದ್ದು, 7 ಮಂದಿಯನ್ನು ಈಗಾಗಲೇ, ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಕಮಿಷನರ್ ಡಾ.ಶರಣಪ್ಪ ಎಸ್.ಡಿ ಅವರು ತಿಳಿಸಿದ್ದಾರೆ.

ಎರಡು ಕುಟುಂಬಗಳ ಪ್ರತಿಷ್ಠೆಗಾಗಿ ಬಿದ್ದ ಹೆಣ

ಒಂದೇ ಗ್ರಾಮದ ಎರಡು ಕುಟುಂಬಗಳ ನಡುವೆ ಕಳೆದ ಹಲವಾರು ವರ್ಷಗಳಿಂದ ಪ್ರತಿಷ್ಠೆ ಹಾಗೂ ಪ್ರತಿಕಾರದ ಹಗೇತನ ಸಾಧಿಸುತ್ತಿದ್ದವು. ಅನೇಕ ಬಾರಿ ಪೊಲೀಸರಿಂದ ಶಾಂತಿ ಸಂಧಾನ, ತಿಳುವಳಿಕೆ ಹಾಗೂ ಎಚ್ಚರಿಕೆ ನೀಡಲಾಗಿತ್ತು. ಆದರೆ, ಕಳೆದ ವರ್ಷ ನಡೆದ ಸೋಮು ತಾಳಿಕೋಟಿ ಎನ್ನುವವರ ಕೊಲೆ ಪ್ರಕರಣದಲ್ಲಿ ಈಗ ಕೊಲೆಯಾದ ಸಿದ್ದಾರೂಢ ಹಾಗೂ ಜಗದೀಶ ಭಾಗಿಯಾಗಿ ಜೈಲು ಸೇರಿದರು. ಇತ್ತೀಚೆಗಷ್ಟೇ ಜೈಲಿನಿಂದ ಬಿಡುಗಡೆಯಾಗಿ ಹೊರಬಂದಿದರು. ಮಂಗಳವಾರ ತಡರಾತ್ರಿ ಸೋಮು ಕೊಲೆಗೆ ಪ್ರತಿಕಾರ ತೀರಿಸಿಕೊಳ್ಳಲು ಪಟ್ಟಣದ ಡಾಬಾದಲ್ಲಿ ತ್ರಿಬಲ್ ಮರ್ಡರ್ ಆಗಿದೆ. ಈ ಬಗ್ಗೆ ತನಿಖೆ ನಡೆದಿದೆ ಎಂದು ಪೊಲೀಸ್ ಕಮಿಷನರ್ ಡಾ.ಶರಣಪ್ಪ ಎಸ್.ಡಿ ಮಾಹಿತಿ ನೀಡಿದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ



- **ಸ್ಥಳ : ಹುಬ್ಬಳ್ಳಿ**

ಸಮಸ್ಯೆಯೇನು..? : ಹುಬ್ಬಳ್ಳಿ ವಿಭಾಗದ ವಾರ್ಡ್ ನಂ.59ರಲ್ಲಿ ಬರುವ ಮಹಾದೇವಿ ಲೇಔಟ್‌ನಲ್ಲಿ ಒಳಚರಂಡಿಯಲ್ಲಿ ಗಿಡ ಗಂಟೆ ಬೆಳೆದಿರುವ ಬಗ್ಗೆ.

- **ಪರಿಹಾರ:** ಹುಬ್ಬಳ್ಳಿ ವಿಭಾಗದ ವಾರ್ಡ್ ನಂ.59ರಲ್ಲಿ ಬರುವ ಮಹಾದೇವಿ ಲೇಔಟ್‌ನಲ್ಲಿ ಸದರಿ ಸ್ಥಳವನ್ನು ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸದರಿ ಸ್ಥಳದಲ್ಲಿ ಒಳಚರಂಡಿಯಲ್ಲಿ ಗಿಡ ಗಂಟೆ ಬೆಳೆದಿರುವುದಿಲ್ಲ. ಸದರಿ ಚೇಂಬರನ್ನು ಒಂದು ವರ್ಷದ ಹಿಂದೆ ಮರು ನಿರ್ಮಾಣ ಮಾಡಿ ಸ್ವಚ್ಛಗೊಳಿಸಲಾಗಿರುತ್ತದೆ.

ವಿಶ್ವವಾಣಿ ಕ್ಲಬ್ ಹೌಸ್
26.05.2025
ಸಂಜೆ: 06.55 ರಿಂದ 08.05 ರವರೆಗೆ
ಗುರುವಾರದ ಅತಿಥಿ
ಶ್ರೀ ಸತ್ಯೇಶ್ ಎನ್ ಬೆಳ್ಳೂರು
ವಿಷಯ
ಮ್ಯಾನೇಜ್ಮೆಂಟ್ ಕಥೆಗಳು

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ಮೋದಿ ಆಡಳಿತದಲ್ಲಿ ದೇಶದ ಭವಿಷ್ಯ ಮಂಕಾಗುತ್ತದೆ. ಕೇಂದ್ರದ ಬಿಜೆಪಿ ಸರಕಾರ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಗತ್ಯ ಅನುದಾನ ನೀಡದೆ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣ ಕಡೆಗಣಿಸಿದೆ. ಕೇಂದ್ರ ಸರಕಾರದ ನಿರ್ಲಕ್ಷ್ಯದಿಂದ ಸಾವಿರಾರು ಶಾಲೆಗಳು ಬಾಗಿಲು ಮುಚ್ಚುತ್ತಿವೆ. 2021 ರಿಂದ 2024ರ ನಡುವೆ ದೇಶದ ಭವಿಷ್ಯ ರೂಪಿಸಬೇಕಾದ 1 ರಿಂದ 8ನೇ ತರಗತಿಯ 2 ಕೋಟಿಗೂ ಹೆಚ್ಚಿನ ಮಕ್ಕಳು ಶಾಲೆ ತೊರೆದಿದ್ದಾರೆ.

ಗಿರೀಶ್ ವಾಸುದೇವ

ಸಿದ್ದಣ್ಣನ ಆಡಳಿತದಲ್ಲಿ ಕರ್ನಾಟಕದ ಭವಿಷ್ಯ ಕಂಗೊಳಿಸುತ್ತಿದೆ. ರಸ್ತೆಯ ಸ್ಥಿತಿಯನ್ನು ನೋಡಿ ತಿಳಿಯಬೇಕು. ಗೃಹಮಂತ್ರಿ ವೇದಿಕೆ ಮೇಲೆ ನಿಂತು ಹೇಳ್ತಿದ್ದಾರೆ ಅಭಿವೃದ್ಧಿಗೆ ಹಣ ಇಲ್ಲ ಅಂತ. ಇದಕ್ಕಿಂತಾ ನಾಚಿಕೇಡಿನ ಸಂಗತಿ ಇದೆಯಾ?

ಪಶ್ಚಿಮ ಘಟ್ಟದಲ್ಲಿ ನಿರಂತರ ಮಳೆ | ಗೋವಾ-ಕರ್ನಾಟಕ ಸಂಪರ್ಕ ಅಸ್ತವ್ಯಸ್ತ | ಕಾಡಂಚಿನ ಗ್ರಾಮಗಳಲ್ಲಿ ಪರದಾಟ

ಆರಿದ್ರಾ ಮಳೆ ಅಬ್ಬರಕ್ಕೆ ಎಂಟು ಸೇತುವೆ ಮುಳುಗಡೆ

ಬೆಂಗಳೂರು: ಮಹಾರಾಷ್ಟ್ರದ ಪಶ್ಚಿಮ ಘಟ್ಟ ಹಾಗೂ ರಾಜ್ಯ ಕರಾವಳಿಯಲ್ಲಿ ಆರಿದ್ರಾ ಮಳೆ ಅಬ್ಬರ ಜೋರಾಗಿದೆ. ಎಡೆಬಿಡದೇ ಬೆಳಗಾವಿ ಜಿಲ್ಲೆಯಲ್ಲಿ ಸುರಿಯುತ್ತಿರುವ ಮಳೆ ಪರಿಣಾಮ ಕೃಷ್ಣಾ, ವೇದಗಂಗಾ, ದೂಧಗಂಗಾ, ಮಲಪ್ರಭಾ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಹಲವು ಸೇತುವೆಗಳು ಮುಳುಗಡೆಗೊಂಡು ಜನ-ಜೀವನ ಅಸ್ತವ್ಯಸ್ತಗೊಂಡಿದೆ.

ಖಾನಾಪುರ-ಗೋವಾ ರಾಜ್ಯ ಹೆದ್ದಾರಿಯ ಮಂತುರ್ಗಾ ಬಳಿ ಸೇತುವೆ ಮೇಲೆ ಹಾಲಾತ್ರಿ ಹಳ್ಳ ತುಂಬಿ ಹರಿಯುತ್ತಿದೆ. ಸೇತುವೆ ಜಲಾವೃತವಾದ ಪರಿಣಾಮ ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾಡಳಿತ ಬೆಳಗಾವಿ-ಚೋರ್ಲಾ, ಜಾಂಬೋಟಿ-ಜತ್ತ, ಸಿಂಧನೂರು-ಹೆಮ್ಮಡಗಾ ಹೆದ್ದಾರಿಗಳಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಿದೆ. ಕುಸಮಳ್ಳಿ ಗ್ರಾಮದ ಬಳಿ ಮಲಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ಕಾಮಗಾರಿ ನಿರ್ಮಾಣ ಹಂತದಲ್ಲಿದ್ದು, ಇಲ್ಲಿಯೇ ಪಕ್ಕದಲ್ಲಿ ತಾತ್ಕಾಲಿಕ ಸರ್ವೀಸ್ ರಸ್ತೆ ನಿರ್ಮಿಸಲಾಗಿತ್ತು. ಅದು ಕುಸಿದಿದ್ದರಿಂದ ಗೋವಾಗೆ ಸಂಪರ್ಕಿಸುವ ಬೆಳಗಾವಿ-ಚೋರ್ಲಾ ರಾಜ್ಯ ಹೆದ್ದಾರಿ ಮೇಲೆ ವಾಹನ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಬಳಿಕ ಬೆಳಗಾವಿಯಿಂದ ಗೋವಾ ಕಡೆಗೆ ಸಾಗುವ ವಾಹನಗಳಿಗೆ ಬೈಲೂರು, ಹಬ್ಬನಾಟ್ಟಿ ಮಾರ್ಗವಾಗಿ ಅವಕಾಶ ಕಲ್ಪಿಸಲಾಗಿತ್ತು. ಈಗ ಈ ಮಾರ್ಗದ ಮೇಲೂ ನೀರು ಬಂದಿದೆ. ಹಾಗಾಗಿ, ಗೋವಾಗೆ ಹೋಗಲು ರಾಮನಗರ ಮೂಲಕ ಹೋಗುವ ಅನಿವಾರ್ಯತೆ ಸೃಷ್ಟಿಯಾಗಿದೆ. ರಾಜಾಪುರ ಬ್ಯಾರೇಜ್ ನಿಂದ 73 ಸಾವಿರ ಕ್ಯೂಸೆಕ್ ಹೊರ ಹರಿವು ಇದ್ದು ಒಟ್ಟು 92,050 ಕ್ಯೂಸೆಕ್ ನೀರು ಕೃಷ್ಣಾ ಉಪ ನದಿಗಳ ಮೂಲಕ ಹರಿದು ಬರುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಮಳೆ ಬಿರುಸು: ಕೊಡಗು ಜಿಲ್ಲೆಯಲ್ಲಿ ಮತ್ತೆ ಗಾಳಿಮಳೆ ಬಿರುಸುಗೊಂಡಿದೆ. ಮಳೆಯೊಂದಿಗೆ ಗಾಳಿಯ ವೇಗ ಹೆಚ್ಚಾಗಿರುವುದರಿಂದ ಜನರಲ್ಲಿ ಆತಂಕ ಮೂಡಿದೆ. ಜಿಲ್ಲೆಯಾದ್ಯಂತ ರೆಡ್ ಅಲರ್ಟ್ ಘೋಷಿಸಲಾಗಿದ್ದು, ಜೂ.26 ರಂದು ಪ್ರಾಥಮಿಕ, ಪ್ರೌಢಶಾಲೆ, ಅಂಗನವಾಡಿ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಜಿಲ್ಲಾಧಿಕಾರಿಗಳು ರಜೆ ಘೋಷಿಸಿದ್ದಾರೆ. ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ನೀರಿನ ಮಟ್ಟ ಏರಿಕೆಯಾಗುತ್ತಿದೆ.

ಮೀನುಗಾರಿಕಾ ಬೋಟ್, ಬಲೆಗಳಿಗೆ ಹಾನಿ: ಉತ್ತರ ಕನ್ನಡ ಜಿಲ್ಲೆಯಲ್ಲಿ ಭಾರೀ ಗಾಳಿ, ಮಳೆ ಮುಂದುವರೆದಿದೆ. ಕರಾವಳಿಯಲ್ಲಿ ಕಡಲು ಪ್ರಕ್ಷುಬ್ಧಗೊಂಡ ಕಾರಣ ಆಳೆತ್ತರದ ಅಲೆಗಳು ದಡಕ್ಕಪ್ಪಳಿಸುತ್ತಿದ್ದು, ಕಾರವಾರದಲ್ಲಿ ಮೀನುಗಾರರ ಶೆಡ್ ಹಾಗೂ ಬೋಟ್‌ಗಳಿಗೆ ಹಾನಿಯಾಗಿದೆ. ಮೀನುಗಾರಿಕೆ ಬಂದ್ ಆಗಿರುವ ಕಾರಣ ಸಾಂಪ್ರದಾಯಿಕ ಬೋಟ್ ಲಂಗರು ಹಾಕಿದ ಪ್ರದೇಶಕ್ಕೂ ನೀರು ನುಗ್ಗಿ ಕೆಲವರ ಬೋಟ್‌ಗಳು ಹಾಗೂ ಬಲೆಗಳಿಗೂ ಹಾನಿಯಾಗಿದೆ.

ಕಲ್ಲೋಳ-ಯಡೂರ ಸೇತುವೆ ಮೇಲೆ ಹರಿಯುತ್ತಿರುವ ಕೃಷ್ಣಾ ನದಿ ನೀರು.

ಎಲ್ಲೆಲ್ಲಿ ಸೇತುವೆ ಮುಳುಗಡೆ?

- ಬಾರವಾಡ -ಕುನ್ನೂರ
- ಭೋಜ-ಶಿವಾಪುರವಾಡಿ
- ಕಾರದಗಾ-ಭೋಜ
- ಮಲಿಕವಾಡ-ದತವಾಡ
- ಕಲ್ಲೋಳ-ಯಡೂರ ಸೇರಿ ಕೆಳಹಂತದ 8 ಸೇತುವೆಗಳು ಜಲಾವೃತ.

ಶಾಲಾ-ಕಾಲೇಜುಗಳಿಗೆ ರಜೆ

ಜಿಲ್ಲೆ	ತಾಲೂಕು
ಹಾಸನ	ಸಕಲೇಶಪುರ, ಆಲೂರು, ಅರಕಲಗೂಡು
ಬೆಳಗಾವಿ	ಬೆಳಗಾವಿ, ಖಾನಾಪುರ
ಕೊಡಗು	ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ರಜೆ
ಉತ್ತರಕನ್ನಡ	ದಾಂಡೇಲಿ,ಜೋಯಿಡಾ

ಹಬ್ಬಾನಟ್ಟಿ ದೇಗುಲ ಸಂಪೂರ್ಣ ಮುಳುಗಡೆ

ಮಹಾರಾಷ್ಟ್ರದ ಪಶ್ಚಿಮ ಘಟ್ಟ, ಕಣಕುಂಬಿ ಭಾಗದಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಮಲಪ್ರಭಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಹಬ್ಬಾನಟ್ಟಿ ಗ್ರಾಮದ ಶ್ರೀ ಮಾರುತಿ ದೇವಸ್ಥಾನ ಸಂಪೂರ್ಣ ಮುಳುಗಡೆಯಾಗಿದೆ. ನಿರಂತರ ಮಳೆಗೆ ಮಲಪ್ರಭಾ ನದಿಯಲ್ಲಿ ಒಳ ಹರಿವು ಹೆಚ್ಚಾಗಿದೆ. ನದಿ ತಟದಲ್ಲಿದ್ದ ಮಾರುತಿ ದೇವಸ್ಥಾನ, ಶಿವನ ಮಂದಿರ ಮುಳುಗಡೆಯಾಗಿದೆ. ದೇವಸ್ಥಾನದ ಗೋಪುರ ಮಾತ್ರ ಗೋಚರವಾಗುತ್ತಿದ್ದು, ಇಡೀ ದೇವಸ್ಥಾನ ಜಲಾವೃತವಾಗಿದೆ. ಹತ್ತು ದಿನದ ಹಿಂದೆ ದೇವಸ್ಥಾನ ಗರ್ಭಗುಡಿಗೆ ನೀರು ನುಗ್ಗಿತ್ತು. ಆದರೆ ಈಗ ಹತ್ತು ಅಡಿಯಷ್ಟು ನದಿಯ ನೀರು ಏರಿಕೆಯಾಗಿದೆ.

15ಕ್ಕೂ ಹೆಚ್ಚು ಗ್ರಾಮಗಳ ರಸ್ತೆ ಸಂಪರ್ಕ ಕಡಿತ

ಖಾನಪುರ ತಾಲೂಕಿನ 15ಕ್ಕೂ ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಮಲಪ್ರಭಾ, ಪಾಂಡು, ಮಹದಾಯಿ ನದಿಗಳು ಹಾಗೂ ಕೋಟ್ನಿ, ಹಾಲಾತ್ರಿ, ಮಂಗೇತ್ರಿ, ಕುಂಬಾರ, ತಟ್ಟಿ, ಪಣಸೂರಿ, ಬೈಲ್, ಕಳಸಾ ಹಾಗೂ ಬಂಡೂರಿ ಹಳ್ಳಗಳು ಉಕ್ಕಿ ಹರಿಯುತ್ತಿವೆ. ಹಾಗಾಗಿ, ನೆರಸೆ, ಮಂತುರ್ಗಾ, ಅಶೋಕನಗರ, ಗವಳಿವಾಡ, ಹೆಮ್ಮಗಡಾ ಸೇರಿ 15ಕ್ಕೂ ಅಧಿಕ ಗ್ರಾಮಗಳ ಸಂಪರ್ಕ ಕಡಿತವಾಗಿದೆ. ಖಾನಾಪುರ ತಾಲೂಕಿನ ಹಬ್ಬಾನಟ್ಟಿ ಗ್ರಾಮದಲ್ಲಿರುವ ಮಾರುತಿ ದೇವಸ್ಥಾನ ಸಂಪೂರ್ಣವಾಗಿ ಮುಳುಗಡೆಯಾಗಿದೆ.

ಪಿಕಪ್ ಮೇಲೆ ಬಿದ್ದ ಕಂಬ

ಉತ್ತರಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನ ಬೆಡಸಗಾಂವ್ ಗ್ರಾಮದಲ್ಲಿ ದೊಡ್ಡ ಅನಾಹುತವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದೆ. 10ಕ್ಕೂ ಹೆಚ್ಚು ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ವಾಹನದ ಮೇಲೆ ವಿದ್ಯುತ್ ಕಂಬ ಮುರಿದು ಬಿದ್ದಿದೆ. ಆದರೆ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ರಾಮಾಪುರದಿಂದ ಹುಲೆಕಲ್‌ಗೆ ಕೆಲಸಕ್ಕೆ ತೆರಳುತ್ತಿದ್ದ ಕಾರ್ಮಿಕರಿದ್ದ ವಾಹನ ಸಂಚರಿಸುವಾಗ, ಮರ ಮುರಿದು ವಿದ್ಯುತ್ ತಂತಿಗಳ ಮೇಲೆ ಬಿದ್ದಿದೆ. ಪರಿಣಾಮ ವಿದ್ಯುತ್ ಕಂಬವು ಮುರಿದು ವಾಹನದ ಮೇಲೆ ಬಿದ್ದಿದೆ.

ನೆಲ್ಯಾಡಿ ಬಳಿ ಗುಡ್ಡ ಕುಸಿತ

ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ನೆಲ್ಯಾಡಿ ಸಮೀಪದ ಮಣ್ಣಗುಂಡಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಗುಡ್ಡ ಕುಸಿದು, ಹೆದ್ದಾರಿಯೆಲ್ಲ ಮಣ್ಣು ಹಾಗೂ ಮರಗಳಿಂದ ಮುಚ್ಚಿಹೋಗಿದೆ. ಈ ಪ್ರದೇಶದಲ್ಲಿ ಚತುಷ್ಪಥ ಕಾಮಗಾರಿಯ ಹಿನ್ನೆಲೆಯಲ್ಲಿ ಅತ್ಯಂತ ಎತ್ತರದ ಗುಡ್ಡವನ್ನು ಯಾವುದೇ ಮುನ್ನೆಚ್ಚರಿಕೆಯ ಕ್ರಮವಿಲ್ಲದೇ ಕತ್ತರಿಸಲಾಗಿದೆ ಎಂಬ ಆರೋಪ ವ್ಯಕ್ತವಾಗಿದೆ. ಪರಿಣಾಮವಾಗಿ ಮಳೆ ಬರುತ್ತಿದ್ದಂತೆ ಮಣ್ಣು ಸಡಿಲಗೊಂಡು ಕುಸಿದು, ಹೆದ್ದಾರಿ ಬಂದ್ ಆಗುವ ಸ್ಥಿತಿ ನಿರ್ಮಾಣವಾಗಿದೆ.

ಶಿಶಿಲೇಶ್ವರ ದೇವಾಲಯಕ್ಕೆ ನುಗ್ಗಿದ ನೀರು

ಬೆಳ್ತಂಗಡಿ ತಾಲೂಕಿನಲ್ಲಿ ಬುಧವಾರ ಭಾರೀ ಮಳೆ ಸುರಿದ ಪರಿಣಾಮ ಬೆಳ್ತಂಗಡಿ ತಾಲೂಕಿನ ಶಿಶಿಲದ ಕಪಿಲ ನದಿಯಲ್ಲಿ ನೀರು ಉಕ್ಕಿ ಹರಿದ ಪರಿಣಾಮ ಮತ್ಸ್ಯ ಕ್ಷೇತ್ರವೆಂದೇ ಪ್ರಸಿದ್ಧವಾಗಿರುವ ಶಿಶಿಲೇಶ್ವರ ದೇವಾಲಯಕ್ಕೆ ನೀರು ನುಗ್ಗಿದೆ. ನದಿ ನೀರಿನ ಮಟ್ಟ ಏರಿಕೆಯಾದ ಪರಿಣಾಮ ಗರ್ಭಗುಡಿ ಪ್ರವೇಶಿಸಿದೆ ಎಂಬ ಮಾಹಿತಿ ಲಭ್ಯವಾಗಿದೆ. ಪಕ್ಕದಲ್ಲೇ ಇರುವ ಕಿಂಡಿ ಅಣೆಕಟ್ಟು (ದೇವಳದ ಸಂಪರ್ಕ ರಸ್ತೆ) ನೀರಿನಿಂದ ಸಂಪೂರ್ಣ ಮುಳುಗಡೆಯಾಗಿದ್ದು ಸದ್ಯಕ್ಕೆ ಅಲ್ಲಿರುವ ತೂಗು ಸೇತುವೆ ವರೆಗೂ ನೀರು ಹರಿಯುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ. ನದಿಯ ಅಕ್ಕಪಕ್ಕದ ತೋಟಗಳಿಗೆ ನೀರು ನುಗ್ಗಿದೆ.

ವಿಶ್ವವಾಣಿ

ಸಂಪಾದಕೀಯ

ಭಾರತದ ಹೆಮ್ಮೆಯ ಕ್ಷಣ

ಭಾರತದ ಬಾಹ್ಯಾಕಾಶ ಯಾನದಲ್ಲಿ ಒಂದು ದೊಡ್ಡ ಮತ್ತು ಐತಿಹಾಸಿಕ ಕ್ಷಣ ಕೊನೆಗೂ ನೆರವೇರಿದೆ. ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದಾರೆ. ಇಸ್ರೋ ಗಗನಯಾತ್ರಿ ಶುಭಾಂಶು ಶುಕ್ಲಾ ಮತ್ತು ಇತರ ಮೂವರು ಸಿಬ್ಬಂದಿಯನ್ನು ಹೊತ್ತ ಆಕ್ಸಿಯಮ್-4 ಮಿಷನ್ ಫ್ಲೋರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಬುಧವಾರದಂದು ಪ್ರಯಾಣ ಬೆಳೆಸಿದೆ. ತಾಂತ್ರಿಕ ತೊಂದರೆಗಳ ಕಾರಣಕ್ಕೆ ಹಲವು ಬಾರಿ ಆಕ್ಸಿಯಮ್-4 ಮಿಷನ್ ಉಡಾವಣೆ ಮುಂದೂಡಲಾಗಿತ್ತು. ಎಲ್ಲಾ ತಾಂತ್ರಿಕ ದೋಷಗಳನ್ನು ಸರಿಪಡಿಸಿದ ಬಳಿಕ ಕಾರ್ಯಾಚರಣೆಗೆ ಸಿದ್ಧಪಡಿಸಲಾಗಿತ್ತು. ಬುಧವಾರ ಮಧ್ಯಾಹ್ನ ಭಾರತೀಯ ಕಾಲಮಾನ 12.01ಕ್ಕೆ ಆಕ್ಸಿಯಮ್-4 ಬಾಹ್ಯಾಕಾಶ ಯೋಜನೆಯ ಗಗನಯಾತ್ರಿಗಳನ್ನು ಹೊತ್ತ ಸ್ಪೇಸ್‌ಎಕ್ಸ್ ಫಾಲ್ಕನ್-9 ನೌಕೆಯು ತನ್ನ ಪ್ರಯಾಣ ಬೆಳೆಸಿದೆ ಎಂದು ನಾಸಾ ಮತ್ತು ಸ್ಪೇಸ್ ಎಕ್ಸ್ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿವೆ. 1984ರಲ್ಲಿ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ಇತಿಹಾಸ ನಿರ್ಮಿಸಿದ ನಾಲ್ಕು ದಶಕಗಳ ನಂತರ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಬಾಹ್ಯಾಕಾಶಕ್ಕೆ ಹೋಗುತ್ತಿರುವ ಭಾರತದ ಎರಡನೇ ಗಗನಯಾತ್ರಿ. ಇಸ್ರೋ ಗಗನಯಾತ್ರಿ ಆಗಿರುವ ಶುಕ್ಲಾ ಅವರೊಂದಿಗೆ ಅಮೆರಿಕ, ಹಂಗರಿ ಮತ್ತು ಪೋಲೆಂಡ್‌ನ ಗಗನಯಾತ್ರಿಗಳೂ ಅಂತರಿಕ್ಷಕ್ಕೆ ಹಾರಿದ್ದಾರೆ. ಆಕ್ಸಿಯಮ್ ಮಿಷನ್‌ನ ವಿಶೇಷತೆ ಏನೆಂದರೆ ಗಗನಯಾತ್ರಿಗಳು 14 ದಿನಗಳ ಕಾಲ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಉಳಿದು ಅಧ್ಯಯನಗಳನ್ನು ನಡೆಸಲಿದ್ದಾರೆ. ಶುಕ್ಲಾ ಅವರು 7 ಪ್ರಯೋಗಗಳನ್ನು ಅಲ್ಲಿ ನಡೆಸಲಿದ್ದಾರೆ. 'ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಇದು ನನ್ನ ಪ್ರಯಾಣದ ಆರಂಭವಲ್ಲ, ಭಾರತದ ಮಾನವ ಸಹಿತ ಬಾಹ್ಯಾಕಾಶಯಾನದ ಆರಂಭವಿದು. ನೀವೆಲ್ಲರೂ ಈ ಪ್ರಯಾಣದ ಭಾಗವಾಗಿರಬೇಕೆಂದು ನಾನು ಬಯಸುತ್ತೇನೆ..ಜೈ ಹಿಂದ್, ಜೈ ಭಾರತ್' ಎಂದು ಶುಕ್ಲಾ ಹೇಳಿದ್ದಾರೆ. ಶುಭಾಂಶು ಶುಕ್ಲಾ 1.4 ಶತಕೋಟಿ ಭಾರತೀಯರ ಭರವಸೆಯನ್ನು ಹೊತ್ತುಕೊಂಡು ಬಾಹ್ಯಾಕಾಶಕ್ಕೆ ಹಾರಿದ್ದಾರೆ, ಹಾಗಾಗಿ ಇದು ಭಾರತಕ್ಕೆ ಹೆಮ್ಮೆಯ ಕ್ಷಣ ಎಂದು ಪ್ರಧಾನಿ ಮೋದಿ ಶ್ಲಾಘಿಸಿದ್ದಾರೆ.

ಸೊಂಪಾದಕೀಯ

ಪಂಚರ್ ಆದ ಸರಪಂಚ

ಸಾರ್ವಜನಿಕ ವಾಹನಗಳಲ್ಲಿ ಓಡಾಡೋ ತೊಂದರೆನೇ ಬೇಡ ಅಂತ ಸ್ವಂತ ವಾಹನ ಖರೀದಿ ಮಾಡ್ತಾರೆ ಬಹುತೇಕ ಜನ. ಆದರೆ ಈ ಸ್ವಂತ ವಾಹನಗಳ ತಲೆನೋವು ಅಷ್ಟಿಷ್ಟಲ್ಲ. ಅದಕ್ಕೆ ದುಡ್ಡು ಕೊಟ್ಟು ಖರೀದಿ ಮಾಡಿ ಟ್ಯಾಕ್ಸ್ ಕಟ್ಟಿ ರೋಡಿಗಿಳಿದರೂ ಅದರ ಸಮಸ್ಯೆ ತೀರಲ್ಲ. ಪೆಟ್ರೋಲ್ ಡೀಸೆಲ್ ಹಾಕಿಸೋದು, ಸರ್ವೀಸ್ ಮಾಡಿಸೋದು ಒಂದು ಕಡೆ ತಲೆನೋವಾದರೆ ಅದಕ್ಕಿಂತ ದೊಡ್ಡ ತಲೆನೋವು ಅಂದ್ರೆ, ನಮ್ಮ ಟ್ರಾಫಿಕ್ ಪೊಲೀಸರದ್ದು. ಎಲ್ಲ ಸರಿ ಇದ್ರೂ ಏನಾದ್ರೂ ಒಂದು ನೆಪ ಹುಡುಕಿ ನಿಮ್ಮ ಹೆಸರಲ್ಲಿ ಚಲನ್ ಕಟ್ ಮಾಡಿ ಫೈನ್ ಕಟ್ಟಿ ಅಂತಾರೆ. ಇಂಥದ್ದೇ ಒಂದು ಪ್ರಕರಣದಲ್ಲಿ ಉತ್ತರ ಪ್ರದೇಶದ ಕಾರು ಚಾಲಕ ಸಂತ್ರಸ್ತನಾಗಿದ್ದಾನೆ. ಪಾಪ ಆತ ಟಾಟಾ ಪಂಚ್ ಕಾರು ಖರೀದಿಸಿದ್ದ. ಅವನು ಸರಪಂಚ ಅಂತೆ. ಜೊತೆಗೆ ಗುರ್ಜರ್ ಅನ್ನೋ ಜಾತಿಗೆ ಸೇರಿದವ. ಹಾಗಾಗಿ ತನ್ನ ಕ್ರಿಯೇಟಿವಿಟಿ ತೋರಿಸಿ ಪಂಚ್ ಅನ್ನೋ ಕಾರಿನ ಹೆಸರಿನ ಹಿಂದೆ ಸರ್ ಅಂತ ಹಾಕಿ, ಪಂಚ್ ಮುಂದೆ ಜೀ ಅಂತ ಹಾಕಿ ಅದನ್ನು ಸರಪಂಚ್ ಜೀ ಅಂತ ಮಾಡಿದ್ದ. ಜೊತೆಗೆ ಗುರ್ಜರ್ ಅನ್ನೋ ತನ್ನ ಜಾತಿಯ ಸೂಚಕವನ್ನು ಹಾಕಿಕೊಂಡಿದ್ದ. ಅದನ್ನು ನೋಡಿ ಅವನಿಗೆ ಟ್ರಾಫಿಕ್ ಪೊಲೀಸರು ಪಂಚನಾಮೆ ಮಾಡದೆಯೇ ಫೈನ್ ಹಾಕುವ ಮೂಲಕ ಪಂಚ್ ಕಜ್ಜಾಯ ಕೊಟ್ಟಿದ್ದಾರೆ. ಇದಕ್ಕೆ ಕಾರಣ ಉತ್ತರ ಪ್ರದೇಶದ ಕಾನೂನು. ಅಲ್ಲಿನ ಕಾನೂನುಗಳು ಯಾವಾಗ್ಲೂ ಡಿಫ್ರೆಂಟ್ ಬಿಡಿ. ಅಲ್ಲಿ ವಾಹನಗಳ ಮೇಲೆ ತಮ್ಮ ಜಾತಿ, ಧರ್ಮವನ್ನು ಬರೆಸುವಂತಿಲ್ಲ ಅನ್ನೋ ಕಾನೂನು ತರಲಾಗಿದೆಯಂತೆ. ಅದು ಈ ತರಲೆಗೆ ಕಾರಣ ಆಗಿದೆ. ಆದರೆ ಇಂಥ ಕಾನೂನೇನಾದರೂ ಕರ್ನಾಟಕದಲ್ಲಿ ಬಂದರೆ ಏನು ಗತಿ ಅಂತ ನಮ್ಮ ಪೊಲೀಸರು ಯೋಚನೆ ಮಾಡುತ್ತಿದ್ದಾರೆ. ಯಾಕಂದ್ರೆ, ಜಾತಿ ಹೇಳಿಕೊಳ್ಳೋದ್ರಲ್ಲಿ ನಮ್ಮ ಜನ ಎತ್ತಿದ ಕೈ. ತಮ್ಮ ಗಾಡಿಗಳ ಮೇಲೆ ಆ ಊರಿನ ಗೌಡ್ರು, ಈ ಊರಿನ ಗೌಡ್ರು ಅಂತ ಮೀಸೆ ತಿರುವುವವರು, ವಿಶ್ವಕರ್ಮ, ಕುರು ಬಾಸ್ ಅಂತಲೂ, ಕುಂತ್ರೆ ಕುರುಬ, ನಿಂತ್ರೆ ಕಿರುಬ ಅಂತ ಗುಟುರು ಹಾಕುವವರ ಸಂಖ್ಯೆ ಕಮ್ಮಿ ಏನಿಲ್ಲ. ಅವರಿಗೆಲ್ಲ ಉತ್ತರ ಪ್ರದೇಶದಂತೆ ಫೈನ್ ಹಾಕ್ತಾ ಹೋದ್ರೆ, ಪೊಲೀಸರು ಮತ್ತು ವಾಹನ ಸವಾರರ ನಡುವೆ ರಸ್ತೆಯಲ್ಲೇ ಕುರುಕ್ಷೇತ್ರ ನಡೆದು ಆ ಬಸವಣ್ಣನವರು ಬಂದ್ರೂ ತಡೆಯೋಕಾಗಲ್ಲ ಅನ್ನೋದಂತೂ ಗ್ಯಾರಂಟಿ.

ಸಂಪಾದಕರ ಸದ್ಯಶೋಧನೆ

ದುರಂತವೂ, ಭಾಷಾ ಸಮಸ್ಯೆಯೂ

ಏರ್ ಟ್ರಾಫಿಕ್ ಕಂಟ್ರೋಲ್ (ಎಟಿಸಿ) ತಂತ್ರಜ್ಞಾನ ಆಧರಿತವಾಗಿದ್ದರೂ, ಅಲ್ಲಿನ ಸಿಬ್ಬಂದಿ ಮಾಡುವ ಪ್ರಮಾದದಿಂದ ಸಾಕಷ್ಟು ಅಪಘಾತಗಳು ಸಂಭವಿಸಿದ ನಿದರ್ಶನಗಳಿವೆ. ಅವುಗಳ ಪೈಕಿ ತಕ್ಷಣ ಮನಸ್ಸಿಗೆ ಬರುವ ಅಪಘಾತಗಳೆಂದರೆ, ಉಬೆರ್ಲಿಂಗೇನ್ ಮಿಡ್ ಏರ್ ಡಿಕ್ಕಿ (2002) ಮತ್ತು ಚಾರ್ಖಿ ದಾದ್ರಿ, ಡಿಕ್ಕಿ (1996). 2002ರ ಜುಲೈ 1 ರಂದು, ಜರ್ಮನಿಯ ಉಬೆರ್ಲಿಂಗೇನ್ ಹತ್ತಿರ (ಲೇಕ್ ಕಾನ್ಸ್ಟನ್ಸ್ ಸಮೀಪ) ಗಗನದಲ್ಲಿ ಎರಡು ವಿಮಾನಗಳು - ಬಾಶ್ಕಿರಿಅನ್ ಏರ್ ಲೈನ್ಸ್ ಮತ್ತು ಡಿಎಚ್‌ಎಲ್ (ಕಾರ್ಗೋ) ವಿಮಾನ - ಪರಸ್ಪರ ಡಿಕ್ಕಿಯಾದವು. ಡಿಎಚ್‌ಎಲ್ ವಿಮಾನ ದಲ್ಲಿ ಇಬ್ಬರು ಮತ್ತು ಬಾಶ್ಕಿರಿಅನ್ ವಿಮಾನದಲ್ಲಿ 69 ಪ್ರಯಾಣಿಕರಿದ್ದರು. ಎಲ್ಲ 71 ಪ್ರಯಾಣಿಕರು ಅಸುನೀಗಿದರು. ಸ್ವಿಸ್ ಎಟಿಸಿ ಸೇವೆಯಲ್ಲಿ ಪೀಟರ್ ನೀಲ್ಸನ್ ಎಂಬ ಏರ್ ಟ್ರಾಫಿಕ್ ಕಂಟ್ರೋಲರ್ ನಿಯಂತ್ರಣದಲ್ಲಿದ್ದ. ಆತ ಕಠಿಣವಾದ ಕಾರ್ಯಭಾರದ ಪರಿಣಾಮ ನಿರ್ಲಕ್ಷ್ಯದಿಂದ ಎರಡು ವಿಮಾನಗಳಿಗೆ ಒಂದೇ ಎತ್ತರದಲ್ಲಿ ಹಾರಲು ಅನುಮತಿ ನೀಡಿದ್ದ. ಈ ಎರಡು ವಿಮಾನಗಳು ಒಂದೇ ಎತ್ತರ ಮತ್ತು ಒಂದೇ ಮಾರ್ಗದಲ್ಲಿ ಹಾರುತ್ತಿರುವುದನ್ನು ಆತ ಗುರುತಿಸಲು ವಿಫಲನಾದ. ಎರಡೂ ವಿಮಾನಗಳ ಪೈಲಟ್‌ಗಳು ಕೂಡ ವಿಮಾನ ಒಂದೇ ಎತ್ತರ ಮತ್ತು ಮಾರ್ಗದಲ್ಲಿ ಹಾರುತ್ತಿರುವುದನ್ನು ಗುರುತಿಸದಾದರು. ಆಕಾಶದಲ್ಲಿಯೇ ವಿಮಾನ ಪರಸ್ಪರ ಡಿಕ್ಕಿಯಾಗಿ ಬೆಂಕಿಯ ಉಂಡೆಗಳಾಗಿ ಧರೆಗುರುಳಿದವು. ಎರಡೂ ವಿಮಾನಗಳಲ್ಲಿದ್ದವರೆಲ್ಲ ದುರ್ಮರಣಕ್ಕೀಡಾದರು. ಇದಕ್ಕೆ ಎಟಿಸಿ ಸಿಬ್ಬಂದಿಯ ದಿವ್ಯ ನಿರ್ಲಕ್ಷ್ಯವೇ ಕಾರಣ ಎಂದು ಜರ್ಮನ್ ಫೆಡರಲ್ ಬ್ಯುರೋ ಆಫ್ ಏರ್‌ಕ್ರಾಫ್ಟ್ ಆಕ್ಸಿಡೆಂಟ್ ಇನ್ವೆಸ್ಟಿಗೇಷನ್ ತನಿಖೆಯಿಂದ ಹೇಳಿತು. 1996 ರ ನವೆಂಬರಿನಲ್ಲಿ ಹರಿಯಾಣದ ಚಾರ್ಖಿ ದಾದ್ರಿಯಲ್ಲಿ, ಸೌದಿ ವಿಮಾನದಲ್ಲಿ 312 ಪ್ರಯಾಣಿಕರಿದ್ದರು ಮತ್ತು ಕಜಖಸ್ತಾನ ಏರ್ ಲೈನ್ಸ್ ವಿಮಾನದಲ್ಲಿ 37 ಪ್ರಯಾಣಿಕರಿದ್ದರು. ಈ ದುರ್ಘಟನೆಯಲ್ಲಿ 349 ಮಂದಿ ಸಾವಿಗೀಡಾರು. ಕಜಕ್ ಪೈಲಟ್‌ಗಳು ಇಂಗ್ಲಿಷಿನಲ್ಲಿ ಮಾತಾಡುವಾಗ, ತೊಡಕಾಗಿ ಬಳಸಿದ ಪದಗಳನ್ನು ಎಟಿಸಿ ಸಿಬ್ಬಂದಿ ತಪ್ಪಾಗಿ ಭಾವಿಸಿದ್ದರಿಂದ ಗೊಂದಲ ಉಂಟಾಗಿ ಅದು ದುರಂತದಲ್ಲಿ ಪರ್ಯವಸನಗೊಂಡಿತು. ಚಾರ್ಖಿ ದಾದ್ರಿ, ದುರಂತ ಒಂದು ಅತಿದೊಡ್ಡ ಮಾನವ, ತಂತ್ರಜ್ಞಾನದ ಹಾಗೂ ವೈಜ್ಞಾನಿಕ ತಪ್ಪುಗಳ ಪರಿಣಾಮವಾಗಿದೆ. ಈ ಭೀಕರ ಘಟನೆ, ಭಾರತಯಲ್ಲಿ ವಿಮಾನಯಾನ ವ್ಯವಸ್ಥೆಯ ಸುರಕ್ಷತೆಯ ದಿಕ್ಕನ್ನು ಪರಿವರ್ತಿಸಲು ಕಾರಣವಾಯಿತು. ಸ್ಪೇನ್‌ನ ಟೆನೆರಿಫ್ ನಲ್ಲಿರುವ ಲಾಸ್ ರೋಡೆಸ್ ವಿಮಾನ ನಿಲ್ದಾಣದಲ್ಲಿ 1977 ರ ಮಾರ್ಚ್ 27 ರಂದು ಕೆಎಲ್‌ಎಂ ವಿಮಾನ ಮತ್ತು ಪಾನ್ ಆಮ್ (ಎರಡೂ ಬೋಯಿಂಗ್ 747 ವಿಮಾನಗಳೇ) ವಿಮಾನ ಡಿಕ್ಕಿಯಾಗಿ 583 ಮಂದಿ ಪ್ರಯಾಣಿಕರು ಹತರಾದರು. ಈ ಅಪಘಾತಕ್ಕೂ ಪೈಲಟ್ ಮತ್ತು ಎಟಿಸಿ ನಡುವಿನ ಭಾಷಾ ಗೊಂದಲವೇ ಕಾರಣ ಎಂಬುದು ತನಿಖೆಯಿಂದ ಸಾಬೀತಾಯಿತು. ಕೆಎಲ್‌ಎಂ ವಿಮಾನವು ರನ್‌ವೇಯಲ್ಲಿ ಟೇಕ್ ಆಫ್ ಮಾಡಲು ಸಿದ್ಧವಾಗಿತ್ತು. ಈ ನಡುವೆ ಪ್ಯಾನ್ ಆಮ್ ವಿಮಾನವೂ ಆ ರನ್‌ವೇಯಲ್ಲಿಯೇ ಇತ್ತು. ಎಟಿಸಿ ಸೂಚನೆ ನೀಡಿದರೂ, ಕೆಎಲ್‌ಎಂ ಪೈಲೆಟ್ 'We are now at takeoff' ಎಂದು ಹೇಳಿ ಟೇಕ್ ಆಫ್ ಮಾಡಿದ. ಇನ್ನು ಪ್ಯಾನ್ ಆಮ್ ಪೈಲೆಟ್ We are still taxiing' ಎಂದು ಹೇಳುತ್ತಿದ್ದರೂ ಎಟಿಸಿಕೆಎಲ್‌ಎಂ ಮಧ್ಯದಲ್ಲಿ ನಿಖರ ಸಂವಹನ ಸಾಧ್ಯವಾಗಲಿಲ್ಲ. ಎಟಿಸಿ 'stand by' ಎಂದೂ, ಕೆಎಲ್‌ಎಂ ಪೈಲೆಟ್ ಅದನ್ನು 'clear for takeoff' ಎಂದು ಅರ್ಥೈಸಿದ. ಕೆಎಲ್‌ಎಂ ಮತ್ತು ಎಟಿಸಿ ನಡುವಿನ ಭಾಷಾ ಟೋನ್, ಉಚ್ಚಾರಣಾ ವ್ಯತ್ಯಾಸ ಹಾಗೂ ಸಂವೇದನೆಯ ಕೊರತೆ ಇವು ದುರಂತಕ್ಕೆ ಕಾರಣವಾಯಿತು. ಬಹುಪಾಲು ಮರಣಗಳು ಕೆಎಲ್‌ಎಂ ವಿಮಾನದಲ್ಲಿ ಸಂಭವಿಸಿದವು. ಪೈಲಟ್ ಮತ್ತು ಎಟಿಸಿ ಸಿಬ್ಬಂದಿ ಇಂಗ್ಲಿಷ್ ಭಾಷಾ ಕಲಿಕೆಯ ನಾಲ್ಕನೇ ಹಂತದಲ್ಲಾದರೂ ತೇರ್ಗಡೆ ಆಗಿರಬೇಕು. ಅಲ್ಲದೇ ಪೈಲಟ್ ಗಳು ನಿರ್ಧಾರಿತ ಪದ ಬಳಸುವುದು ಕಡ್ಡಾಯ. ವೈಯಕ್ತಿಕ ಭಾಷಾ ಬಳಕೆ ಅಥವಾ ಗ್ರಾಮ್ಯ (slang) ಪದಗಳನ್ನು ಬಳಸುವಂತಿಲ್ಲ. ಯಾವ ಕಾರಣಕ್ಕೂ ತಮಾಷೆ ಅಥವಾ ಹಾಸ್ಯ ಮಾಡುವಂತಿಲ್ಲ. ಭಾಷಾ ಗೊಂದಲವು ಅನೇಕ ಘಟನೆಗಳಲ್ಲಿ ನೇರ ಕಾರಣವಾಗಿಲ್ಲದಿದ್ದರೂ, ಘಟನೆಯನ್ನು ತೀವ್ರಗೊಳಿಸಿ, ತಪ್ಪನ್ನು ತಡೆಯುವ ಅವಕಾಶವನ್ನು ಹಾಳು ಮಾಡಿದೆ. ಇದರಿಂದ ವಿಮಾನಯಾನ ಕ್ಷೇತ್ರದಲ್ಲಿ ಸ್ಪಷ್ಟ ಸಂವಹನಕ್ಕೆ ಮಹತ್ವದ ಸ್ಥಾನವಿದೆ.

ಯಾವುದೋ ರೂಪದಲ್ಲಿ ದೇವರು ಬಂದೇ ಬರುತ್ತಾನೆ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ತುಂಬ ಕಷ್ಟದ ಸಮಯ ಎದುರಿಗಿದ್ದಾಗ, ತೀರಾ ಆಕಸ್ಮಿಕವಾಗಿ ಯಾರೋ ಒಬ್ಬರು ನೆರವಿಗೆ ಬರುತ್ತಾರೆ. ಅದನ್ನು ನೆನಪಿಸಿಕೊಂಡು ನಾವೆಲ್ಲ- 'ದೇವರ ರೂಪದಲ್ಲಿ ಬಂದು ನಮ್ಮನ್ನು ಕಾಪಾಡಿಬಿಟ್ಟರಿ' ಎಂದು ಉದ್ಗರಿಸಿರುತ್ತೇವೆ. ವಾಸ್ತವ ಏನೆಂದರೆ, ಬೇರೊಬ್ಬರ ಪಾಲಿಗೆ ದೇವರ ರೂಪದಲ್ಲಿ ನೆರವಾಗುವಂಥ ಸಂದರ್ಭಗಳು ಎಲ್ಲರ ಬದುಕಿನಲ್ಲೂ ಒಂದಲ್ಲ ಒಂದು ಸಂದರ್ಭದಲ್ಲಿ ಬಂದೇ ಬರುತ್ತದೆ.

ಈ ಮಾತಿಗೆ ಸಾಕ್ಷಿಯಾಗುವಂಥ ಪ್ರಸಂಗವೊಂದನ್ನು ಕೆಲ ವರ್ಷದ ಹಿಂದೆ ಓದುಗ ಸ್ನೇಹಿತರಾದ ಎಚ್.ಎಸ್.ಜಿ. ರಾವ್ ಹೇಳಿದರು. ಅದನ್ನು ನಿಮಗೆ ಹೇಳಲೇಬೇಕು ಎನಿಸುತ್ತಿದೆ. ಖಂಡಿತವಾಗಿಯೂ ಇದು ನಿಮಗೆ ಇಷ್ಟವಾಗುತ್ತದೆ.

ಆ ಸೇನಾ ತುಕಡಿಯಲ್ಲಿ ಹದಿನೈದು ಮಂದಿ ಯೋಧರಿದ್ದರು. ಅವರಿಗೆ ನಾಯಕನಾಗಿ ಒಬ್ಬ ಮೇಜರ್ ಇದ್ದ. ಆತ ಎರಡು ಯುದ್ಧಗಳಲ್ಲಿ ಪಾಲ್ಗೊಂಡಿದ್ದ, ಎರಡು ಬಾರಿಯೂ ಗೆಲುವಿನ ಸವಿ ಕಂಡಿದ್ದ ಅನುಭವಿ. ಅವನ ಮುಂದಾಳತ್ವದ ತಂಡವನ್ನು ಹಿಮಾಲಯದ ತಪ್ಪಲಿನಲ್ಲಿ ಸೇವೆಗೆ ನಿಯೋಜಿಸಲಾಗಿತ್ತು. ಮೂರು ತಿಂಗಳ ಸುದೀರ್ಘ ಅವಧಿಯವರೆಗೂ ಆ ಗಡಿ ಪ್ರದೇಶದಲ್ಲಿ ತುಂಬ ಎಚ್ಚರದಿಂದ ಪಹರೆ ಕಾಯುವ ಕೆಲಸ ಈ ಸೇನಾ ತುಕಡಿಯ ಯೋಧರದ್ದಾಗಿತ್ತು. ಪಹರೆ ಕಾಯಬೇಕಿದ್ದ ಜಾಗಕ್ಕೆ ವಾಹನ ಸೌಲಭ್ಯವಿರಲಿಲ್ಲ. ಸೇನೆಯ ವಾಹನ ಇಳಿದ ನಂತರ 18 ಕಿಲೋಮೀಟರ್ ದೂರವನ್ನು ನಡೆದೇ ಕ್ರಮಿಸಬೇಕಿತ್ತು. ಈ ಹೊಸದೊಂದು ತುಕಡಿ ಕರ್ತವ್ಯ ನಿರ್ವಹಿಸಲು ಬರುತ್ತಿದೆ ಎಂಬ ಸುದ್ದಿ ತಿಳಿದು ಈಗಾಗಲೇ ಹಿಮಾಲಯದ ತಪ್ಪಲಿನಲ್ಲಿ ಕಾವಲಿಗೆ ನಿಂತಿದ್ದ ಯೋಧರು ಖುಷಿಯಾಗಿದ್ದರು. ಹೊಸ ತಂಡ ಅಲ್ಲಿಗೆ ತಲುಪಿದ ಮರುದಿನದಿಂದಲೇ ಈಗಾಗಲೇ ಕಾವಲಿಗೆ ನಿಂತಿದ್ದ ತುಕಡಿಯ ಯೋಧರಿಗೆ ರಜೆ ಮಂಜೂರಾಗುತ್ತಿತ್ತು. ರಜೆಯ ನೆಪದಲ್ಲಿ ಹುಟ್ಟಿದೂರಿಗೆ ತೆರಳುವ, ಹೆಂಡತಿ-ಮಕ್ಕಳೊಂದಿಗೆ ನಲಿದಾಡುವ, ಪೋಷಕರೊಂದಿಗೆ ಬೆರೆಯುವ ಸವಿಗನಸುಗಳೊಂದಿಗೆ ಹಳೆಯ ಯೋಧರ ತಂಡ ಉಳಿದಿತ್ತು.

ತನ್ನನ್ನು ಹಿಂಬಾಲಿಸುತ್ತಿದ್ದ ಸೈನಿಕರಿಗೆ ಮೇಜರ್, ಒಂದೊಂದೇ ಹಳೆಯ ಸಾಹಸವನ್ನು ನೆನಪಿಸಿಕೊಂಡು ಹೇಳುತ್ತಿದ್ದ. ಅವರು ಸಾಗುತ್ತಿದ್ದ ಹಾದಿ ಹಿಮಾಲಯದ ಕೊರಕಲುಗಳಿಂದ ಕೂಡಿತ್ತು. ಮಿಗಿಲಾಗಿ ಗಡಿ ಪ್ರದೇಶ ಬೇರೆ. ಹಾಗಾಗಿ, ಅವರು ತುಂಬ ಎಚ್ಚರದಿಂದ ಹೆಜ್ಜೆ ಇಡುತ್ತಿದ್ದರು. ಉಗ್ರರು, ಶತ್ರುಗಳು ಎದುರಾಗುವ ಆತಂಕ ಎಲ್ಲರಿಗೂ ಇದ್ದೇ ಇತ್ತು. ಹಾಗಾಗಿ ಎಷ್ಟೇ ಬಿರುಸಾಗಿ ನಡೆದರೂ ಕರ್ತವ್ಯಕ್ಕೆ ಹಾಜರಾಗಬೇಕಿದ್ದ ಸ್ಥಳವನ್ನು ತಲುಪಲು ಸಾಧ್ಯವಾಗಲಿಲ್ಲ. ಕತ್ತಲು ಆವರಿಸತೊಡಗಿದಂತೆ ಎಲ್ಲ ಯೋಧರನ್ನೂ ಒಂದೆಡೆ ಕೂರಿಸಿದ ಮೇಜರ್ 'ಈಗ ಊಟ ಮುಗಿಸಿ ಬಿಡಿ. ಕತ್ತಲಾದ ನಂತರ ಏನೂ ಕಾಣಿಸದೆ ತೊಂದರೆಯಾಗಬಹುದು' ಎಂದರು. ನಂತರದ ಅರ್ಧಗಂಟೆಯಲ್ಲಿ ಎಲ್ಲರೂ ಊಟ ಮುಗಿಸಿದರು. ಹೇಗಿದ್ದರೂ ಬೆಳದಿಂಗಳಿದೆ. ರಾತ್ರಿ 12 ಗಂಟೆಯವರೆಗೂ ನಡೆದು ಬಿಡೋಣ. ಆನಂತರ ಸೂಕ್ತ ಜಾಗದಲ್ಲಿ ನಿದ್ರಿಸಿ ಬೆಳಗ್ಗೆ ಪ್ರಯಾಣ ಮುಂದುವರಿಸೋಣ ಎಂದರು ಮೇಜರ್. ಎಲ್ಲ ಯೋಧರೂ ಈ ಮಾತಿಗೆ ಒಪ್ಪಿಕೊಂಡರು.

ಮಧ್ಯರಾತ್ರಿ ಒಂದು ಗಂಟೆಯ ವೇಳೆಗೆ ಅವರೆಲ್ಲ ಒಂದು ಸಮತಟ್ಟಾದ ಪ್ರದೇಶಕ್ಕೆ ಬಂದರು. ಅಲ್ಲಿ ತುಂಬ ಹಳೆಯದೆಂದು ತಕ್ಷಣಕ್ಕೆ ಗೊತ್ತಾಗುವಂತಿದ್ದ ಪೆಟ್ಟಿಗೆ ಅಂಗಡಿಯೊಂದಿತ್ತು. ಅದಕ್ಕೆ ಬೀಗ ಹಾಕಲಾಗಿತ್ತು. ಆ ನಡುರಾತ್ರಿಯಲ್ಲಿ (ಅದೂ ಹಿಮಾಲಯದ ಪ್ರದೇಶ ಬೇರೆ) ಗಡಗಡ ನಡುಗಿಸುವಂಥ ಚಳಿಯಿತ್ತು. ಇಂಥ ಸಂದರ್ಭದಲ್ಲಿ ಹೇಗಾದರೂ ಅರ್ಧ ಕಪ್ ಟೀ ಸಕ್ಕರೆ ಸಾಕು ಎಂದು ಎಲ್ಲ ಸೈನಿಕರೂ ಅಂದುಕೊಂಡರು. ಆದರೆ, ಯಾರೂ ಬಾಯಿ ಬಿಟ್ಟು ಹೇಳಲಿಲ್ಲ. ನಡೆದೂ ನಡೆದೂ ಆಯಾಸವಾಗಿದ್ದ ಕಾರಣದಿಂದ ಮೇಜರ್‌ಗೂ ಈ ಸಂದರ್ಭದಲ್ಲಿ ಅರ್ಧ ಕಪ್ ಚಹಾ ಕುಡಿದಿದ್ದರೆ ರಿಲೀಫ್ ಸಿಗುತ್ತಿತ್ತು ಅನ್ನಿಸಿತು. ಆತ ಮನದ ಮಾತನ್ನು ಯೋಧರೊಂದಿಗೆ ಹೇಳಿಕೊಂಡ.

ಆದರೆ ಅವರ ಬಳಿ ಟೀ ಮಾಡಲು ಅಗತ್ಯವಿರುವ ಪಾತ್ರೆ, ಹಾಲು, ನೀರು, ಸಕ್ಕರೆ, ಟೀ ಪುಡಿ, ಸ್ಟವ್ ಈ ಯಾವುದೂ ಇರಲಿಲ್ಲ. ಇದನ್ನು ಎಲ್ಲರಿಗಿಂತ ಮೊದಲೇ ಅರ್ಥ ಮಾಡಿಕೊಂಡ ಮೇಜರ್ ಹೇಳಿದ 'ಮೈ ಬಾಯ್ಸ್! ಇವತ್ತು ನಿಮ್ಮ ಪಾಲಿಗೆ ದುರಾದೃಷ್ಟ ಅಂದುಕೊಳ್ಳಿ. ಈಗಾಗಲೇ ನಡುರಾತ್ರಿಯಾಗಿದೆ. ಸಮೀಪದಲ್ಲಿ ಯಾವುದಾದರೂ ಹಳ್ಳಿ ಇರಬಹುದೇನೋ. ಆದರೆ ಅಪರಾತ್ರಿಯಲ್ಲಿ ಹೋಗಿ ಬಾಗಿಲು ಬಡಿಯುವುದರಿಂದ ಜನ ಹೆದರಬಹುದು. ನಡುರಾತ್ರಿಯಲ್ಲಿ ಊರುಗಳಿಗೆ ಹೋಗುವುದು ಸೇನಾ ನೀತಿಯಲ್ಲ. ಹಾಗಾಗಿ

ನಾವ್ಯಾರೂ ಇಲ್ಲಿಂದ ಕದಲುವುದು ಬೇಡ. ಈ ರಾತ್ರಿಯನ್ನು ಹೇಗಾದರೂ ಕಳೆಯೋಣ. ನಾಳೆ ಬೆಳಗ್ಗೆ ಬೇಗ ಪ್ರಯಾಣ ಆರಂಭಿಸೋಣ' ಎಂದರು.

ಆಗ ಯೋಧರೆಲ್ಲ ಒಟ್ಟಾಗಿ ಹೇಳಿದರು-'ಮೇಜರ್ ಸಾಬ್, ಒಂದು ಟೀ ಕುಡಿಯಲೇಬೇಕು ಎಂಬ ಆಸೆ ಎಲ್ಲರಿಗೂ ಇದೆ. ಎದುರಿಗೆ ಹೇಗಿದ್ದರೂ ಪೆಟ್ಟಿಗೆ ಅಂಗಡಿ ಇದೆ ತಾನೆ? ಅದರ ಬೀಗ ಒಡೆದು ನೋಡೋಣ. ಅಲ್ಲಿ ಟೀ ಮಾಡಲು ಅನುಕೂಲವಾಗುವಂಥ ವಸ್ತುಗಳಿದ್ದರೆ ಸರಿ. ಇಲ್ಲವಾದರೆ ಏನನ್ನೂ ಮುಟ್ಟದೆ ಬಾಗಿಲು ಹಾಕಿಬಿಡೋಣ. ದೇಶಕ್ಕಾಗಿ ಹೋರಾಡುವವರು ನಾವು. ತೀರಾ ಅನಿವಾರ್ಯ ಅನಿಸಿದ್ದರಿಂದ ಮಾತ್ರ ಇಂಥದೊಂದು ತಪ್ಪು ಮಾಡುತ್ತಿದ್ದೇವೆ. ಇದು ಖಂಡಿತ ಮಹಾಪರಾಧ ಆಗುವುದಿಲ್ಲ'.

ಯೋಧರ ಬೇಡಿಕೆಗೆ ಮೇಜರ್, ಒಲ್ಲದ ಮನಸ್ಸಿನಿಂದಲೇ ಸಮ್ಮತಿ ಸೂಚಿಸಿದರು. ಯೋಧರೆಲ್ಲರ ಅದೃಷ್ಟ ಚೆನ್ನಾಗಿತ್ತು. ಕಾರಣ, ಆ ಪೆಟ್ಟಿಗೆ ಅಂಗಡಿಯಲ್ಲಿ ಹಾಲು, ಟೀ ಪುಡಿ, ಟೀ ತಯಾರಿಸಲು ಪಾತ್ರೆ, ಸಕ್ಕರೆ, ಕುಡಿಯಲು ಬಳಸುವ ಕಪ್‌ಗಳು, ಸ್ಟವ್ ಹೀಗೆ ಎಲ್ಲವೂ ಇತ್ತು. ಬಿಸ್ಕತ್‌ಗಳಿದ್ದವು. ಎಂಟು ಪ್ಯಾಕ್ ಸಿಗರೇಟ್‌ಗಳೂ ಇದ್ದವು. ಯೋಧರ ಖುಷಿಗೆ ಪಾರವೇ ಇಲ್ಲ. ಅವರೆಲ್ಲ ತುಂಬ ಸಡಗರದಿಂದ ಟೀ ತಯಾರಿಸಿದರು. ಸಿಗರೇಟುಗಳನ್ನು ಹಂಚಿಕೊಂಡರು. ಆ ನಡುರಾತ್ರಿಯಲ್ಲಿ ಚಪ್ಪರಿಸುತ್ತಾ, ಟೀ ಕುಡಿದು ತಮ್ಮ ಇಷ್ಟದ ಹಾಡು ಹೇಳಿ ಖುಷಿಪಟ್ಟರು. ನಂತರ ಎಲ್ಲರೂ ಒಂದೆರಡು ಗಂಟೆ ಕಾಲ ನಿದ್ರೆ ತೆಗೆದರು. ಬೆಳಕು ಹರಿಯುವ ಮುನ್ನವೇ ಎಲ್ಲರೂ ಎದ್ದು, ಹತ್ತು ನಿಮಿಷದ ವ್ಯಾಯಾಮ ಮಾಡಿ, ತಲುಪಬೇಕಿರುವ ಗಮ್ಯದತ್ತ ಹೊರಡಲು ಎದ್ದು ನಿಂತರು.

ಈ ಸಂದರ್ಭದಲ್ಲಿ ಮೇಜರ್ ಯೋಚಿಸಿದ. ನಮ್ಮ ಯೋಧರು ಈ ಅಂಗಡಿಯ ಬೀಗ ಮುರಿದು, ಟೀ ಮಾಡಿಕೊಂಡು ಕುಡಿದಿದ್ದಾರೆ. ಬಿಸ್ಕತ್ ತಿಂದಿದ್ದಾರೆ. ಸಿಗರೇಟು ಹಂಚಿಕೊಂಡಿದ್ದಾರೆ. ಹೀಗೆ ಮಾಡಿರುವುದರಿಂದ ಅಂಗಡಿಯ ಮಾಲೀಕನಿಗೆ ಖಂಡಿತ ಲಾಸ್ ಆಗಿದೆ. ಅದನ್ನು ತುಂಬಿಕೊಡಬೇಕಾದುದು ನನ್ನ ಧರ್ಮ. ಹೀಗೊಂದು ಯೋಚನೆ ಬರುತ್ತಿದ್ದಂತೆಯೇ ಪರ್ಸ್‌ನಿಂದ ಒಂದು ಸಾವಿರ ರುಪಾಯಿಯ ನೋಟು ತೆಗೆದ ಮೇಜರ್, ಅದನ್ನು ಸಕ್ಕರೆ ಡಬ್ಬದ ಕೆಳಗಿಟ್ಟ. ನಂತರ ಅಂಗಡಿಯ ಬಾಗಿಲು ಮುಚ್ಚಿ, ಬೀಗ ಸಿಕ್ಕಿಸಿದ (ಹದಿನೈದು ಜನ ಟೀ ಕುಡಿದು, ಬಿಸ್ಕತ್ ತಿಂದು, ಸಿಗರೇಟ್ ಸೇದಿದರೆ 1000 ರುಪಾಯಿ ಆಗುವುದಿಲ್ಲ ನಿಜ. ಆದರೆ ಆ ಅಪರಾತ್ರಿಯಲ್ಲಿ ಟೀ ಸಿಕ್ಕಾಗ ದೊರೆತ ಖುಷಿಗೆ ಬೆಲೆ ಕಟ್ಟಲಾಗದು ಎಂದು ಮೇಜರ್ ಲೆಕ್ಕಹಾಕಿದ). ಬೀಗ ಒಡೆದಿರುವುದನ್ನು ಕಂಡು ಗಾಬರಿಯಿಂದಲೇ ಬಾಗಿಲು ತೆರೆಯುವ ಮಾಲೀಕನಿಗೆ, ತುಂಬ ಬೇಗನೆ ಸಾವಿರ ರು.ಗಳ ನೋಟು ಕಾಣಿಸುತ್ತದೆ ಎಂಬುದು ಮೇಜರ್ ನಂಬಿಕೆಯಾಗಿತ್ತು. ಹೊರಟು ನಿಂತಿದ್ದ ಯೋಧರು ತಮ್ಮ ನಾಯಕನನ್ನು ಅಚ್ಚರಿ ಬೆರೆತ ಪ್ರೀತಿಯಿಂದ ನೋಡುತ್ತಿದ್ದರು.

ಅವರೊಂದಿಗೆ ಹೆಜ್ಜೆಯಿಡುತ್ತಾ ಮೇಜರ್ ಹೇಳಿದ-'ಒಂದು ವೇಳೆ ಬೆಳಗ್ಗೆಯೋ, ಮಧ್ಯಾಹ್ನವೋ ನಾವೆಲ್ಲಾ ಅಲ್ಲಿಗೆ ಹೋಗಿದ್ದರೆ, ಅಂಗಡಿಯ ಮಾಲೀಕನಿಗೆ ಹಣ ನೀಡಿಯೇ ಟೀ ಕುಡಿಯುತ್ತಿದ್ದೆವು. ನಡುರಾತ್ರಿಯಲ್ಲಿ ಅಂಗಡಿಯ ಮಾಲೀಕ ಇದ್ದಿದ್ದರೆ ನೀವೇ ಮುಂದಾಗಿ ಹಣ ನೀಡುತ್ತಿದ್ದಿರಿ ಎಂಬುದನ್ನೂ ನಾನು ಬಲ್ಲೆ. ಆದರೆ, ಯಾರೂ ಇಲ್ಲದ ಕಾರಣದಿಂದ ನಾವು ಹಾಗೇ ಹೋಗಬಾರದು. ಹಣ ಪಾವತಿಸದೇ ಹೋದರೆ, ಬೀಗ ಒಡೆದವರು ಕಳ್ಳರು ಎಂಬ ಭಾವನೆ ಅಂಗಡಿಯ ಮಾಲೀಕನಿಗೆ ಬರುತ್ತದೆ. ಉಹುಂ, ನಾವ್ಯಾರೂ ಕಳ್ಳರಲ್ಲ. ನಾವು ಭಾರತಾಂಬೆಯ ಹೆಮ್ಮೆಯ ಪುತ್ರರು. ದೇಶಭಕ್ತರು, ಈ ಕಾರಣದಿಂದಲೇ ನಾನು ಹಣ ಇಟ್ಟು ಬಂದೆ.'

ಈ ಮಾತು ಕೇಳಿದ ಯೋಧರ ಕಂಗಳಲ್ಲಿ ಮೆಚ್ಚುಗೆಯಿತ್ತು. ಅವತ್ತೇ ಈ ತುಕಡಿ ಗಡಿ ಕಾಯುವ ಕೆಲಸ ವಹಿಸಿಕೊಂಡಿತು. ಹೀಗೇ ವಾರಗಳು, ತಿಂಗಳುಗಳು ಕಳೆದವು. ಈ ತುಕಡಿಯವರಿಗೆ ರಜೆ ಘೋಷಣೆಯಾಯಿತು. ಈ ಯೋಧರಿದ್ದ ಪ್ರದೇಶಕ್ಕೆ ಹೊಸದೊಂದು ತುಕಡಿ ಬಂತು. ರಜೆ ಸಿಕ್ಕಿತೆಂಬ ಖುಷಿಯಲ್ಲಿ ಮೇಜರ್ ಮತ್ತು ಯೋಧರು ಮಿಲಿಟರಿ ಕ್ಯಾಂಪ್ ಕಡೆಗೆ ಹೆಜ್ಜೆ ಹಾಕಿದರು.

ಕಾಕತಾಳೀಯವೆಂಬಂತೆ ತಿಂಗಳುಗಳ ಹಿಂದೆ ನಡೆದು ಹೋದ ಹಾದಿಯಲ್ಲೇ ಅವರು ಹಿಂತಿರುಗಿದ್ದರು. ಅದೃಷ್ಟಕ್ಕೆ ಅವತ್ತು ಟೀ ಅಂಗಡಿಯಲ್ಲಿ ಮಾಲೀಕನಿದ್ದ. ಅವನಿಗೆ ತುಂಬಾ ವಯಸ್ಸಾಗಿತ್ತು. ಮೇಜರ್ ಮತ್ತು ಯೋಧರೆಲ್ಲ ಟೀ ಕುಡಿದರು. ಬಿಸ್ಕತ್ ತಿಂದರು. ನಂತರ ಮಾಲೀಕನೊಂದಿಗೆ ಮಾತಿಗಿಳಿದ ಮೇಜರ್, ಅವನ ಸುಖ-ದುಃಖ ವಿಚಾರಿಸಿದ. 'ಜನ ಸಂಚಾರ ವಿರಳವಾಗಿರುವ ಈ ಪ್ರದೇಶದಲ್ಲಿ ಅಂಗಡಿ ಇಟ್ಟುಕೊಂಡು ಬದುಕುವುದು ಕಷ್ಟವಲ್ಲವೆ?' ಎಂದು ಪ್ರಶ್ನೆ ಹಾಕಿದ. ನಂತರ- 'ನೀವು ಏನೇ ಹೇಳಿ, ಈ ಜಗತ್ತಿನಲ್ಲಿ ದೇವರಿಲ್ಲ. ಆತ ನಿಜವಾಗ್ಲೂ ಇದ್ದಿದ್ರೆ, ನಿಮಗೆ ಇಷ್ಟೊಂದು ಕಷ್ಟದ ಮಧ್ಯೆ ಬದುಕಬೇಕಾದ ಪರಿಸ್ಥಿತಿ ಬರ್ತಾ ಇರಲಿಲ್ಲ' ಅಂದ.

ಇದಕ್ಕೆ ಮರುಕ್ಷಣವೇ ಪ್ರತಿಕ್ರಿಯಿಸಿದ ಆ ವೃದ್ಧ, 'ಸಾಬ್, ದಯವಿಟ್ಟು ಹಾಗನ್ನಬೇಡಿ. ದೇವರು ಇದ್ದಾನೆ. ಆತ ಕರೆದಾಗ ನಮ್ಮ ನೆರವಿಗೆ ಯಾವ ರೂಪದಲ್ಲಾದ್ರೂ ಬಂದೇ ಬರ್ತಾನೆ. ಈ ಮಾತಿಗೆ ಕೆಲವೇ ತಿಂಗಳುಗಳ ಹಿಂದೆ, ಈ ಅಂಗಡಿಯಲ್ಲಿಯೇ ಸಾಕ್ಷಿ ಸಿಕ್ಕಿದೆ. ನನ್ನ ಅಂಗಡಿಗೆ ಆ ದಯಾಮಯಿ ಭಗವಂತ ಬಂದು ಹೋಗಿದ್ದಾನೆ' ಎಂದುಬಿಟ್ಟ. ಈ ಮಾತು ಕೇಳುತ್ತಿದ್ದಂತೆಯೇ ಎಲ್ಲ ಯೋಧರ ಕಿವಿಗಳು ನೆಟ್ಟಗಾದವು. ಅವರೆಲ್ಲ-'ಹೌದಾ? ಏನಾಯ್ತು?' ಎಂದು ಕೇಳಿದರು. ಅದಕ್ಕೆ ಉತ್ತರವೆಂಬಂತೆ ವೃದ್ಧ ಹೀಗೆಂದ, 'ತಿಂಗಳುಗಳ ಹಿಂದೆ ಉಗ್ರಗಾಮಿಗಳ ತಂಡವೊಂದು ಈ ಕಡೆಗೆ ಬಂತು. ಅವರು ನನ್ನ ಒಬ್ಬನೇ ಮಗನನ್ನು ಹಿಡಿದುಕೊಂಡು ಕೆಲವು ಸೂಕ್ಷ್ಮ ಮಾಹಿತಿ ನೀಡುವಂತೆ ಒತ್ತಾಯಿಸಿದರು. ನನ್ನ ಮಗ ಒಪ್ಪಲಿಲ್ಲ. ಅವನನ್ನು ಸಾಯುವಂತೆ ಬಡಿದು ಹೋಗಿಬಿಟ್ಟರು. ವಿಷಯ ತಿಳಿದಾಕ್ಷಣ ಅಂಗಡಿಗೆ ಬೀಗ ಹಾಕಿ ಓಡಿಹೋದೆ. ಮಗನನ್ನು ಆಸ್ಪತ್ರೆಗೆ ಸೇರಿಸಿದೆ. ಅವತ್ತು ಕೆಲವು ಔಷಧಗಳ ಪಟ್ಟಿ ನೀಡಿದ ವೈದ್ಯರು, ಇವಿಷ್ಟನ್ನು ತಂದರೆ, ನಾಳೆ ಚಿಕಿತ್ಸೆ ಆರಂಭಿಸುತ್ತೇವೆ ಎಂದರು. ಅವತ್ತಿಗೆ ನನ್ನ ಬಳಿ ನಯಾ ಪೈಸೆ ಇರಲಿಲ್ಲ. ನೆರೆಹೊರೆಯವರ ಬಳಿ ಸಾಲ ಕೇಳಿದೆ. ಉಗ್ರಗಾಮಿಗಳ ಮೇಲಿನ ಭಯದಿಂದ ಯಾರೊಬ್ಬರೂ ಸಹಾಯಕ್ಕೆ ಬರಲಿಲ್ಲ. ಅವತ್ತು, ನನಗೆ ದಿಕ್ಕೇ ತೋಚಲಿಲ್ಲ. ರಾತ್ರಿ ಒಬ್ಬನೇ ಕೂತು ದೇವರನ್ನು ಪ್ರಾರ್ಥಿಸಿದೆ. ಭಗವಂತಾ, ಹೇಗಾದ್ರೂ ಸಹಾಯ ಮಾಡು ತಂದೇ ಎಂದು ಮತ್ತೆ ಮತ್ತೆ ಬೇಡಿಕೊಂಡೆ.

ಒಂದಿಷ್ಟು ವ್ಯಾಪಾರ ಮಾಡಿಕೊಂಡು ಆಸ್ಪತ್ರೆಗೆ ಹೋಗೋಣ ಎಂದುಕೊಂಡೇ ಬೆಳಗ್ಗೆ ಎದ್ದು ಅಂಗಡಿಗೆ ಬಂದೆ. ಅಂಗಡಿಯ ಬೀಗ ಮುರಿದು ಹೋಗಿತ್ತು. ಓಹ್, ಕಳ್ಳತನವಾಗಿದೆ. ನನ್ನ ಬದುಕು ಬೀದಿಗೆ ಬಿತ್ತು ಎಂದುಕೊಳ್ಳುತ್ತಲೇ ಒಳಗೆ ಬಂದರೆ ಆಶ್ಚರ್ಯ ಕಾದಿತ್ತು. ಸಕ್ಕರೆ ಡಬ್ಬಿಯ ಕೆಳಗೆ 1000 ರುಪಾಯಿಯ ನೋಟಿತ್ತು. ಅವತ್ತು ನನ್ನ ಪಾಲಿಗೆ ಅದು ಲಕ್ಷ ರುಪಾಯಿಗಿಂತಲೂ ಹೆಚ್ಚು ಅನ್ನಿಸಿತು. ಆ ಹಣದಿಂದಲೇ ಮಗನಿಗೆ ಚಿಕಿತ್ಸೆ ಕೊಡಿಸಿದೆ. ಈಗ ಹೇಳಿ ಸಾಹೇಬ್, ಅವತ್ತು ನನ್ನ ಅಂಗಡಿಗೆ ದೇವರಲ್ಲದೆ ಬೇರೆ ಯಾರಾದರೂ ಬಂದಿರಲು ಸಾಧ್ಯವೇ? ಒಂದಂತೂ ಸತ್ಯ. ನಾವು-ನೀವೆಲ್ಲ ಆಗಿಂದಾಗ್ಗೆ ದೇವರಿಲ್ಲ ಎಂದು ವಾದಿಸುತ್ತಲೇ ಇರುತ್ತೇವೆ. ಆದರೆ ಆತ ಯಾವುದೋ ರೂಪದಲ್ಲಿ ಕಾಣಿಸಿಕೊಂಡು ತನ್ನ ಲೀಲೆ ತೋರಿಸಿರುತ್ತಾನೆ. ತಿಂಗಳುಗಳ ಹಿಂದೆ ಈ ಟೀ ಶಾಪ್‌ಗೆ ಬಂದು ಹಣವಿಟ್ಟು ಹೋದನಲ್ಲ ಹಾಗೆ ದೇವರಲ್ಲದೆ ಬೇರೆ ಯಾರೂ ಹಾಗೆ ಮಾಡಲು ಸಾಧ್ಯವೇ ಇಲ್ಲ'.

ವೃದ್ಧ ಮಾತು ಮುಗಿಸಿದ ತಕ್ಷಣವೇ ಯೋಧನೊಬ್ಬ ಏನೋ ಹೇಳಲು ಮುಂದಾದ. ಅವನನ್ನು ಕಣ್ಸನ್ನೆಯಿಂದಲೇ ಎಚ್ಚರಿಸಿದ ಮೇಜರ್, ಏನೊಂದೂ ಮಾತನಾಡದಿರುವಂತೆ ಸೂಚಿಸಿದ. ಮಾತಾಡಲು ಬಿಟ್ಟರೆ, ಆ ಯೋಧ ಮೂರು ತಿಂಗಳ ಹಿಂದೆ ಈ ಅಂಗಡಿಯಲ್ಲಿ 1000 ರುಪಾಯಿ ನೋಟು ಇಟ್ಟು ಹೋಗಿದ್ದು ಮೇಜರ್ ಸಾಹೇಬರೇ ಹೊರತು ದೇವರಲ್ಲ ಎಂದು ಬಿಡುತ್ತಾನೆ ಎಂಬುದು ಆ ಸೇನಾಧಿಕಾರಿಗೆ ಅರ್ಥವಾಗಿ ಹೋಗಿತ್ತು. ಆತ ಟೀ ಅಂಗಡಿಯ ಮಾಲೀಕನಾಗಿದ್ದ ವೃದ್ಧನ ಹೆಗಲು ತಟ್ಟುತ್ತಾ- 'ಹೌದು ಅಜ್ಜಾ, ನಿಮ್ಮ ಮಾತು ನಿಜ. ದೇವರು ಎಲ್ಲೆಲ್ಲೂ ಇದ್ದಾನೆ. ಅವನಿಗೆ ಬೇಕು ಅನ್ನಿಸಿದಾಗ ತನಗೆ ಇಷ್ಟವಾದ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ' ಎಂದ. ಈ ಮಾತು ಹೇಳುವಾಗ ಮೇಜರ್‌ನ ಕಂಗಳಲ್ಲಿ ವಿಚಿತ್ರ ಕಾಂತಿಯಿತ್ತು. ಈ ಸಂದರ್ಭಕ್ಕೆ ಸಾಕ್ಷಿಯಾಗಿದ್ದ ಹದಿನೈದು ಯೋಧರೂ ಭಾವಪರವಶರಾಗಿ, ಮಾತು ಹೊರಡದೆ ನಿಂತು ಬಿಟ್ಟಿದ್ದರು.

ಅಂಕಲ್ ಸ್ಯಾಮ್ ಆರ್ಡರ್ ಮಾಡಿದರೆ ಮುಗೀತ್!

ಸಂಗತ
ಡಾ.ವಿಜಯ್ ದರಡಾ
vveditoped@gmail.com

ನಾನೀಗ ವಿದೇಶ ಪ್ರವಾಸದಲ್ಲಿದ್ದೇನೆ. ಹಲವು ದೇಶಗಳನ್ನು ಸುತ್ತುತ್ತಿದ್ದೇನೆ. ಪತ್ರಕರ್ತನಾದ್ದರಿಂದ ಎಲ್ಲೇ ಹೋದರೂ ಜನರು ನನಗೊಂದು ಸಾಮಾನ್ಯ ಪ್ರಶ್ನೆ ಕೇಳುತ್ತಿದ್ದಾರೆ: 'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪಾಕಿಸ್ತಾನದ ಸೇನಾಪಡೆಯ ಮುಖ್ಯಸ್ಥ ಜನರಲ್ ಮುನೀರ್‌ನನ್ನು ಔತಣಕ್ಕೆ ಕರೆದಿದ್ದೇಕೆ? ಇದರಿಂದ ಭಾರತದ ಮೇಲಾಗುವ ಪರಿಣಾಮವೇನು

ಅದಕ್ಕೆ ನಾನು, 'ಅವರಿಬ್ಬರ ಮಧ್ಯೆ ಏನು ಒಪ್ಪಂದವಾಯಿತು ಎಂಬುದನ್ನು ಟ್ರಂಪ್ ಮತ್ತು ಮುನೀರ್ ಮಾತ್ರ ಹೇಳಲು ಸಾಧ್ಯ ಎನ್ನುತ್ತೇನೆ. ಆದರೆ ಆ ಔತಣ ಎಲ್ಲರನ್ನೂ ಅಚ್ಚರಿಗೊಳಿಸಿದ್ದು ಮಾತ್ರ ನಿಜ. ಏಕೆಂದರೆ, ಅಮೆರಿಕದ ಇತಿಹಾಸದಲ್ಲಿ ಯಾವುದೇ ಒಬ್ಬ ಅಧ್ಯಕ್ಷ ಇನ್ನೊಂದು ದೇಶದ ಪ್ರಧಾನಿ ಅಥವಾ ಅಧ್ಯಕ್ಷ ಅಧಿಕಾರದಲ್ಲಿರುವಾಗ ಆ ದೇಶದ ಮಿಲಿಟರಿಯ ಮುಖ್ಯಸ್ಥನಿಗೆ ಶ್ವೇತಭವನದಲ್ಲಿ ಔತಣಕೂಟ ಏರ್ಪಡಿಸಿದ ನಿದರ್ಶನ ಇಲ್ಲ. ಟ್ರಂಪ್‌ಗೆ ಇರಾನ್ ವಿರುದ್ಧದ ಯುದ್ಧದಲ್ಲಿ ಪಾಕಿಸ್ತಾನದ ಬೆಂಬಲ ಬೇಕಿದೆ. ಬೆಂಬಲ ನೀಡುವುದಿಲ್ಲ ಎಂದು ಮುನೀರ್ ಯಾವ ಬಾಯಿಯಲ್ಲಿ ಹೇಳಲು ಸಾಧ್ಯ? ಆಫ್ಟರಾಲ್, ಜಾಗತಿಕ ವ್ಯವಹಾರಗಳಲ್ಲಿ ಅಂಕಲ್ ಸ್ಯಾಮ್ ಆದೇಶ ನೀಡದರೆ ಅದೇ ಅಂತಿಮ. ಮಜಾ ಏನೆಂದರೆ, ಔತಣಕೂಟದ ನಂತರ ಪಾಕಿಸ್ತಾನದ ಸಂಸತ್ತು ಡೊನಾಲ್ಡ್ ಟ್ರಂಪ್‌ಗೆ ನೊಬೆಲ್ ಶಾಂತಿ ಪ್ರಶಸ್ತಿ ನೀಡಬೇಕು ಎಂದು ನಿರ್ಣಯ ಅಂಗೀಕರಿಸಿದಾಗ ಇಡೀ ಬೆಳವಣಿಗೆ ನಗೆಪಾಟಲಿಗೀಡಾಯಿತು. ಜನರು ಆಡಿಕೊಂಡು ನಗಲು ಇನ್ನಷ್ಟು ಸರಕು ಒದಗಿಸುವಂತೆ ಟ್ರಂಪ್ ಕೂಡ, 'ನಾನು ಏನೇ ಮಾಡಿದರೂ ನೊಬೆಲ್ ಪ್ರಶಸ್ತಿ ಮಾತ್ರ ನನಗೆ ಸಿಗೋದಿಲ್ಲ ಎಂದು ಹೇಳಿಕೆ ನೀಡಿದರು.

ಇರಾನ್ ಮತ್ತು ಇಸ್ರೇಲ್ ನಡುವಿನ ಬಿಕ್ಕಟ್ಟಿನ ಬಗ್ಗೆ ಚರ್ಚಿಸುವುದಕ್ಕಿಂತ ಮೊದಲು ನಿಮಗೊಂದು ಸಂಗತಿ ಹೇಳಬೇಕು. ನಾನೀಗ ಓಡಾಡುತ್ತಿರುವ ದೇಶಗಳಲ್ಲಿ ಪಾಕಿಸ್ತಾನೀಯರೇ ಆಟೋಮೊಬೈಲ್ ಉದ್ದಿಮೆಯಲ್ಲಿ ನಂಬರ್ ಒನ್ ಸ್ಥಾನದಲ್ಲಿದ್ದಾರೆ. ಅವರ ನಂತರ ಭಾರತೀಯರಿದ್ದಾರೆ. ಆದರೆ, ಭಾರತೀಯರು ಮತ್ತು ಪಾಕಿಸ್ತಾನೀಯರ ನಡುವೆ ಬಹಳ ಆಪ್ತವಾದ ಭ್ರಾತೃತ್ವವಿದೆ. ಇಬ್ಬರೂ ಪರಸ್ಪರ ಭಾಯಿ ಭಾಯಿ ರೀತಿ ಬದುಕುತ್ತಿದ್ದಾರೆ. ಪಾಕಿಸ್ತಾನೀಯರನ್ನು ಮಾತನಾಡಿಸಿದರೆ ಜಗಳ ಇರುವುದು ಎರಡು ದೇಶಗಳ ಮಧ್ಯೆ ಅಲ್ಲ, ಎರಡು ದೇಶಗಳ ಸರ್ಕಾರ ಮತ್ತು ರಾಜಕಾರಣಿಗಳ ಮಧ್ಯೆ. ದೇಶ ಹಾಗೂ ರಾಜಕೀಯದ ಮಧ್ಯೆ ಸಾಕಷ್ಟು ವ್ಯತ್ಯಾಸವಿದೆ! ಎನ್ನುತ್ತಾರೆ. ನಿಜ. ನಾನು ಮಾತನಾಡಿಸಿದ ಕೆಲ ಬುದ್ಧಿವಂತ ಪಾಕಿಸ್ತಾನೀಯರು ಹೇಗೆ ಅಮೆರಿಕವು ಪಾಕಿಸ್ತಾನದ ರಾಜಕೀಯ ವ್ಯವಸ್ಥೆಯನ್ನು ಬಳಸಿಕೊಂಡು ಭಾರತವನ್ನು ಬಗ್ಗಿಸಲು ನಿರಂತರವಾಗಿ ಪ್ರಯತ್ನಿಸುತ್ತಾ ಬಂದಿದೆ ಎಂಬುದನ್ನು ಹೇಳಿದರು. ಪಾಕಿಸ್ತಾನಕ್ಕೆ ಅಮೆರಿಕದ ಸರ್ಕಾರ ಭಾರೀ ಪ್ರಮಾಣದಲ್ಲಿ ಆರ್ಥಿಕ ನೆರವು ನೀಡುತ್ತಾ ಬಂದಿದೆ. ಅದರಲ್ಲೂ ಪಾಕಿಸ್ತಾನದ ಮಿಲಿಟರಿಗೆ ಮತ್ತು ಗುಪ್ತಚರ ಸಂಸ್ಥೆ ಐಎಸ್‌ಐಗೆ ಅಮೆರಿಕ ಹಣದ ಹೊಳೆಯನ್ನೇ ಹರಿಸಿದೆ. ಆ ಹಣವನ್ನು ಬಳಸಿಕೊಂಡು ಪಾಕಿಸ್ತಾನ ಶಸ್ತ್ರಾಸ್ತ್ರಗಳನ್ನು ಖರೀದಿ ಮಾಡಿದೆ. ತಮಾಷೆಯೆಂದರೆ, ಅಮೆರಿಕದ ಕಂಪನಿಗಳಿಗೇ ಹಣ ನೀಡಿ ಶಸ್ತ್ರಾಸ್ತ್ರ ಖರೀದಿಸಿದೆ. ಅದರಿಂದ ಅಮೆರಿಕದ ಶಸ್ತ್ರಾಸ್ತ್ರ ವ್ಯಾಪಾರಿ ಕಂಪನಿಗಳಿಗೆ ದೊಡ್ಡ ಲಾಭವಾಗಿದೆ. ಪಾಕಿಸ್ತಾನದ ಮಿಲಿಟರಿ ಜನರಲ್‌ಗಳು ಅಮೆರಿಕ, ಯುರೋಪ್ ಮತ್ತು ಫ್ರಾನ್ಸ್‌ನಂತಹ ದೇಶಗಳಲ್ಲಿ ವೈಭವೋಪೇತ ಬಂಗಲೆಗಳನ್ನು ಖರೀದಿಸಿಕೊಂಡು, ತಮ್ಮ ಕುಟುಂಬವನ್ನು ಅಲ್ಲಿರಿಸಿ, ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಈಗೀಗ ಕೆನಡಾ ಮತ್ತು ಆಸ್ಟ್ರೇಲಿಯಾಗಳಲ್ಲೂ ಪಾಕಿಸ್ತಾನಿ ಜನರಲ್‌ಗಳ ಐಷಾರಾಮಿ ಸಂಸಾರಗಳಿವೆ. ಹೀಗಾಗಿಯೇ ಪಾಕಿಸ್ತಾನದಲ್ಲಿ ಯಾವುದೇ ನಾಯಕ ನಿಜವಾದ ಪ್ರಜಾಪ್ರಭುತ್ವವನ್ನು ತರಲು ಹೊರಟರೆ ಎಲ್ಲರೂ ಸೇರಿಕೊಂಡು ಅವನನ್ನು ವ್ಯವಸ್ಥಿತವಾಗಿ ಮುಗಿಸಿಹಾಕುತ್ತಾರೆ. ಬೆನಜೀರ್ ಭುಟ್ಟೋನಿಂದ ಹಿಡಿದು ನವಾಜ್ ಷರೀಫ್ ಮತ್ತು ಇಮ್ರಾನ್ ಖಾನ್‌ನವರೆಗೆ ಸಾಕಷ್ಟು ಉದಾಹರಣೆ ನೀಡಬಹುದು. ಈಗ ಮತ್ತೊಮ್ಮೆ ಅಂಕಲ್ ಸ್ಯಾಮ್ ಅದೇ ತನ್ನ ಹಳೆಯ ಆಟ ಆಡಲು ಆರಂಭಿಸಿದ್ದಾನೆ.

ನನ್ನ ಪ್ರಕಾರ ವಿದೇಶಗಳಲ್ಲಿ ನೆಲೆಸಿರುವ ಪಾಕಿಸ್ತಾನಿ ನಾಗರಿಕರು ಹೇಳುವುದು ಅಕ್ಷರಶಃ ನಿಜ. ಇಲ್ಲವಾದರೆ ಟ್ರಂಪ್ ಏಕೆ ಪಾಕಿಸ್ತಾನದ ಪ್ರಧಾನ ಮಂತ್ರಿಯನ್ನು ಕರೆಯದೆ ಸೇನಾಪಡೆಯ ಮುಖ್ಯಸ್ಥನನ್ನು ಔತಣಕ್ಕೆ ಕರೆಯುತ್ತಿದ್ದರು? ಪಾಕಿಸ್ತಾನ ವಿಶ್ವಾಸಾರ್ಹ ಪಾಲುದಾರನಲ್ಲ ಎಂಬುದು ಟ್ರಂಪ್‌ಗೆ ಚೆನ್ನಾಗಿ ಗೊತ್ತಿದೆ. ಅಫ್ಘಾನಿಸ್ತಾನದ ಯುದ್ಧದ ವೇಳೆ ಪಾಕಿಸ್ತಾನದ ಸೇನೆ ಮತ್ತು ಐಎಸ್‌ಐ ಅಮೆರಿಕಕ್ಕೆ ಚೆನ್ನಾಗಿ ಕೈಕೊಟ್ಟಿದ್ದವು. ಆ ಕಹಿನೆನಪು ಅಮೆರಿಕಕ್ಕೆ ಇದೆ. ಅಷ್ಟೇಕೆ, ಒಸಾಮಾ ಬಿನ್ ಲಾಡೆನ್ ಪಾಕಿಸ್ತಾನದಲ್ಲೇ ಅಡಗಿ ಕುಳಿತಿದ್ದ. ಹೀಗಾಗಿ ಪಾಕಿಸ್ತಾನ ಕಳ್ಳಾಟ ಆಡದಂತೆ ನೋಡಿಕೊಳ್ಳುವುದು ಟ್ರಂಪ್‌ಗೆ ಬಹಳ ಮುಖ್ಯ. ಇದೀಗ ಹೊಸತಾಗಿ ರೂಪುಗೊಳ್ಳುತ್ತಿರುವ ಭೂರಾಜಕೀಯ ವ್ಯವಸ್ಥೆಯಲ್ಲಿ ಪಾಕಿಸ್ತಾನ ತನಗೆ ಅಡ್ಡಿಯಾಗದಂತೆ ಟ್ರಂಪ್ ನೋಡಿಕೊಳ್ಳುತ್ತಿದ್ದಾರೆ. ಖಂಡಿತ ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಲ್ಲಿ ಅಮೆರಿಕ ರಂಗಪ್ರವೇಶ ಮಾಡುತ್ತದೆ ಎಂದು ಎಲ್ಲರೂ ಹೇಳಿದ್ದರು. ಅದರಂತೆಯೇ ರಣರಂಗಕ್ಕೆ ಅಮೆರಿಕ ಧುಮುಕಿದೆ. ದಿನಕ್ಕೊಂದು ನೀತಿ ಬದಲಾಯಿಸುವ ಟ್ರಂಪ್ ಬಗ್ಗೆ ಅಮೆರಿಕನ್ನರಿಗೇ ಒಳ್ಳೆಯ ಅಭಿಪ್ರಾಯವಿಲ್ಲ. ಈಗಿನ ಯುದ್ಧದಲ್ಲಿ ಅಮೆರಿಕ ಭಾಗವಹಿಸುವುದು ಅಮೆರಿಕನ್ನರಿಗೆ ಬೇಕಿಲ್ಲ. ಆದರೆ ಟ್ರಂಪ್ ಏನು ಮಾಡಬೇಕು ಅಂದುಕೊಳ್ಳುತ್ತಾರೋ ಅದನ್ನು ಮಾಡುತ್ತಾರೆ. ಅದಕ್ಕಿಂತ ಹೆಚ್ಚಾಗಿ, ಇರಾನ್ ಮೇಲೆ ಇಸ್ರೇಲ್ ದಾಳಿ ಮಾಡಿದ್ದರ ಹಿಂದೆ ಇಸ್ರೇಲ್‌ಗೆ ಕೇವಲ ತನ್ನ ಉದ್ದೇಶದ ಸಾಧನೆ ಮಾತ್ರ ಇಲ್ಲ, ಅಮೆರಿಕದ ಗುರಿಯನ್ನು ಸಾಧಿಸುವುದು ಕೂಡ ಈ ದಾಳಿಯ ಉದ್ದೇಶಗಳಲ್ಲೊಂದು. ಇಸ್ರೇಲ್‌ನ ದಾಳಿಯಿಂದ ಇರಾನ್‌ಗೆ ಬಹಳ ದೊಡ್ಡ ಹಾನಿಯಾಗಿದೆ. ಆದರೆ, ಇರಾನ್‌ನ ಪ್ರತಿ ದಾಳಿಯಿಂದ ಇಸ್ರೇಲ್‌ಗೂ ಬಹಳ ನಷ್ಟವಾಗಿದೆ. ಇಸ್ರೇಲ್ ತಾನೊಬ್ಬನೇ ಯುದ್ಧ ಮಾಡಿ ಇರಾನ್ ದೇಶ ಮಂಡಿಯೂರುವಂತೆ ಮಾಡುವ ಶಕ್ತಿ ಹೊಂದಿಲ್ಲ. ಈ ಕೆಲಸ ಮಾಡಬೇಕು ಅಂದರೆ ಇಸ್ರೇಲ್‌ಗೆ ಅಮೆರಿಕದ ನೆರವು ಬೇಕೇಬೇಕು. ಸದ್ಯಕ್ಕೆ ಇರಾನ್‌ಗೆ ನೆರವು ನೀಡಲು ರಷ್ಯಾ ಮುಂದೆ ಬರುವ ಸ್ಥಿತಿಯಲ್ಲಿಲ್ಲ. ಅದು ಉಕ್ರೇನ್ ಜೊತೆಗಿನ ಯುದ್ಧದಲ್ಲಿ ಹೈರಾಣಾಗಿದೆ. ಆದರೆ ಇರಾನ್‌ಗೆ ಚೀನಾ ಖಂಡಿತ ನೆರವು ನೀಡುತ್ತಿದೆ. ಗುಪ್ತಚರ ಮೂಲಗಳ ಪ್ರಕಾರ ಚೀನಾದ ಎರಡು ಸರಕು ಸಾಗಣೆ ವಿಮಾನಗಳು ಕ್ಷಿಪಣಿ ತಯಾರಿಸುವ ಸಲಕರಣೆಗಳು ಮತ್ತು ರಾಸಾಯನಿಕಗಳನ್ನು ಹೊತ್ತು ತೆಹ್ರಾನ್‌ಗೆ ಬಂದಿಳಿದಿವೆ. ಈ ಯುದ್ಧದಲ್ಲಿ ಇರಾನ್‌ಗೆ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡುತ್ತಾ ಚೀನಾ ಮುಗುಮ್ಮಾಗಿ ಎಂಜಾಯ್ ಮಾಡುತ್ತಿದೆ!

ಇರಾನ್ ಮತ್ತು ಪಾಕಿಸ್ತಾನದ ನಡುವೆ 909 ಕಿಮೀ ಗಡಿಯಿದೆ. ಬಲೂಚಿಸ್ತಾನ ಇದೇ ಪ್ರದೇಶದಲ್ಲಿ ಬರುತ್ತದೆ. ಇರಾನ್‌ನೊಳಗೆ ನುಗ್ಗುವ ಪ್ರಮೇಯವೇನಾದರೂ ತನಗೆ ಬಂದರೆ ಆಗ ಪಾಕಿಸ್ತಾನದ ಭೂಮಿ ಮತ್ತು ವಾಯು ಪ್ರದೇಶವನ್ನು ಬಳಸಿಕೊಳ್ಳಬಹುದು ಎಂಬ ಲೆಕ್ಕಾಚಾರದಲ್ಲಿ ಟ್ರಂಪ್ ಇದ್ದಾರೆ. ಅಫ್ಘಾನಿಸ್ತಾನದ ಯುದ್ಧದಲ್ಲಿ ಅಮೆರಿಕ ಇದನ್ನೇ ಮಾಡಿತ್ತು. ಮೂಲಗಳ ಪ್ರಕಾರ ಪಾಕಿಸ್ತಾನದಲ್ಲೂ ಅಮೆರಿಕ ರಹಸ್ಯವಾಗಿ ವಾಯುನೆಲೆಯನ್ನು ಹೊಂದಿದೆ. ಆಪರೇಷನ್ ಸಿಂದೂರ್ ಸಮಯದಲ್ಲಿ ಅಮೆರಿಕದ ವಾಯುಪಡೆಯ ವಿಮಾನಗಳು ನೂರ್ ಖಾನ್ ವಾಯುನೆಲೆಯ ಸಮೀಪದಲ್ಲೇ ನಿಂತಿರುವುದು ಬೆಳಕಿಗೆ ಬಂದಿತ್ತು. ನೂರ್ ಖಾನ್ ವಾಯುನೆಲೆಯ ಮೇಲೆ ಭಾರತ ದಾಳಿ ನಡೆಸಿತ್ತು. ಹೀಗಾಗಿ ಎಲ್ಲಾ ರೀತಿಯಿಂದಲೂ ಪಾಕಿಸ್ತಾನವನ್ನು ತನ್ನ ಪರವಾಗಿ ಇರಿಸಿಕೊಳ್ಳುವುದು ಅಮೆರಿಕಕ್ಕೆ ಅಗತ್ಯವಿದೆ.

ಇರಾನ್‌ನಲ್ಲಿರುವ ಹಲವು ಭೂಗತ ಪರಮಾಣು ಸ್ಥಾವರಗಳ ಮೇಲೆ ಅಮೆರಿಕ ಈಗಾಗಲೇ ಬಾಂಬ್ ದಾಳಿ ನಡೆಸಿದೆ. ಮುಂದೆ ಟ್ರಂಪ್ ಏನು ಮಾಡಲಿದ್ದಾರೆ? ಅಯೋತೊಲ್ಲಾ ಖಮೇನಿಯ ಅಧಿಕಾರವನ್ನು ಅಂತ್ಯಗೊಳಿಸಿ, ಅಮೆರಿಕದ ತಾಳಕ್ಕೆ ತಕ್ಕಂತೆ ಕುಣಿಯುವ ಸರ್ಕಾರವನ್ನು ಇರಾನ್‌ನಲ್ಲಿ ಸ್ಥಾಪಿಸಲಿದ್ದಾರೆಯೇ? ಇರಾನ್‌ನಲ್ಲೇ ಅಲ್ಲಿನ ಪರಮೋಚ್ಚ ನಾಯಕ ಖಮೇನಿಗೆ ಸಾಕಷ್ಟು ಆಂತರಿಕ ವಿರೋಧವಿದೆ. ಶರಿಯಾ ಕಾನೂನಿನ ಹೆಸರಿನಲ್ಲಿ ಆತ ಇರಾನಿನ ಜನರನ್ನು ತುಂಬಾ ಹಿಂಸಿಸಿದ್ದಾನೆ. ಅದರಲ್ಲೂ ಇರಾನ್‌ನ ಮಹಿಳೆಯರು ಖಮೇನಿಯ ಆಡಳಿತದಲ್ಲಿ ಚಿತ್ರಹಿಂಸೆ ಅನುಭವಿಸುತ್ತಿದ್ದಾರೆ. ರೆಜಾ ಶಾ ಪಹ್ಲಾವಿಯ ಅಧಿಕಾರದಲ್ಲಿ ಇರಾನಿನ ಮಹಿಳೆಯರು ಫುಟ್‌ಬಾಲ್ ಆಡಿಕೊಂಡು, ಕಾರು ಚಲಾಯಿಸಿಕೊಂಡು ಸ್ವತಂತ್ರ ಬದುಕು ನಡೆಸಿದ್ದರು. ಖಮೇನಿ ಬಂದಮೇಲೆ ಅದನ್ನೆಲ್ಲ ಬಂದ್ ಮಾಡಿಸಿದ್ದಾನೆ. ಮಹಿಳೆಯರು ಈಗ ಸ್ವಾತಂತ್ರ್ಯವಿಲ್ಲದೆ ಬದುಕುತ್ತಿದ್ದಾರೆ. ಹೀಗಾಗಿ ಇರಾನ್‌ನಲ್ಲಿ ಆಡಳಿತ ಬದಲಾವಣೆಯಾಗುವ ಸಾಧ್ಯತೆ ತುಂಬಾ ಹೆಚ್ಚಿದೆ. ಈಗಾಗಲೇ ಖಮೇನಿಯ ಹಲವು ಟಾಪ್ ಮಿಲಿಟರಿ ಕಮಾಂಡರ್‌ಗಳು ಹತ್ಯೆಯಾಗಿದ್ದಾರೆ. ಸ್ವತಃ ಖಮೇನಿ ಅಡಗಿ ಕುಳಿತಿದ್ದಾನೆ. ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಮೊಸಾದ್ (ಇಸ್ರೇಲ್‌ನ ಗುಪ್ತಚರ ಸಂಸ್ಥೆ) ಗೂಢಚರರು ಇರಾನ್‌ನೊಳಗೆ ಎಲ್ಲಾ ಕಡೆ ನುಸುಳಿದ್ದಾರೆ ಎಂದು ಹೇಳಲಾಗುತ್ತಿದೆ. ಡ್ರೋನ್ ಮತ್ತು ಕ್ಷಿಪಣಿಗಳಿಗೆ ಬೇಕಾದ ಸಲಕರಣೆಗಳನ್ನು ಇರಾನ್‌ನೊಳಗೆ ಸಾಗಿಸಿ, ಆ ದೇಶದ ಒಳಗಿನಿಂದಲೇ ಇರಾನ್ ಮೇಲೆ ದಾಳಿ ನಡೆಸಲಾಗಿದೆ ಎಂಬ ವರದಿಗಳೂ ಇವೆ. ಹೀಗಾಗಿ ನಿಸ್ಸಂಶಯವಾಗಿ ಖಮೇನಿ ಸಂಕಷ್ಟದಲ್ಲಿದ್ದಾನೆ. ಅವನ ಆಡಳಿತ ಬಹುತೇಕ ಕೊನೆಯ ಹಂತಕ್ಕೆ ಬಂದಿದೆ. ಹಾಗಿದ್ದರೆ ಅಧಿಕಾರಕ್ಕೆ ಬರುವವರು ಯಾರು? 1979ರಲ್ಲಿ ಇರಾನ್‌ನ ಪರಮೋಚ್ಚ ನಾಯಕ ಮೊಹಮ್ಮದ್ ರೆಜಾ ಪಹ್ಲಾವಿ ಆಗಿದ್ದ. ಇಸ್ಲಾಮಿಕ್ ಕ್ರಾಂತಿಯಲ್ಲಿ ಅವನನ್ನು ಪದಚ್ಯುತಗೊಳಿಸಲಾಗಿತ್ತು. ಅವನ ಮಗ ರೆಜಾ ಪಹ್ಲಾವಿ ಸದ್ಯ ಅಮೆರಿಕದಲ್ಲಿ ಆಶ್ರಯ ಪಡೆದುಕೊಂಡಿದ್ದಾನೆ. 'ನಾವು 46 ವರ್ಷಗಳಿಂದ ಹೋರಾಡುತ್ತಿದ್ದೇವೆ. ಈಗ ನಮ್ಮ ಸಮಯ ಬಂದಿದೆ! ಎಂದು ಅವನು ಹೇಳಿದ್ದಾನೆ. ಅವನ ಮಾತು ನಿಜವಾಗಲಿದೆಯೇ? ಕಾದು ನೋಡಿ. ಕಾಲವೇ ಎಲ್ಲದಕ್ಕೂ ಉತ್ತರ ಹೇಳುತ್ತದೆ.

ಕೊನೆಯದಾಗಿ ನಾನೊಂದು ಮಾತು ಹೇಳಬೇಕು. ಇರಾನ್ ಜೊತೆ ಸದ್ಯ ಭಾರತ ಒಳ್ಳೆಯ ಸಂಬಂಧವನ್ನೇ ಹೊಂದಿದೆ. ಆದರೆ ಮೊಹಮ್ಮದ್ ರೆಜಾ ಶಾ ಪಹ್ಲಾವಿಯ ಕಾಲದಲ್ಲಿ ಇನ್ನೂ ಒಳ್ಳೆಯ ಸಂಬಂಧವನ್ನು ಭಾರತ ಹೊಂದಿತ್ತು. ನಾವು ಅಲಿಪ್ತ ನೀತಿಯಲ್ಲಿ ನಂಬಿಕೆ ಇರಿಸಿರುವವರು. ಅಷ್ಟು ಸುಲಭಕ್ಕೆ ಯಾರ ಪರವನ್ನೂ ವಹಿಸುವುದಿಲ್ಲ, ವಿರೋಧವನ್ನೂ ವಹಿಸುವುದಿಲ್ಲ. ನಮ್ಮ ದೇಶಕ್ಕೆ ಶಾಂತಿ ಬೇಕೇ ಹೊರತು ಯುದ್ಧ ಬೇಕಿಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಅನಾಗರಿಕ ನಡವಳಿಕೆ

ಚಾಮರಾಜನಗರ ಜಿಲ್ಲೆಯ, ಆಲೂರು ತಾಲ್ಲೂಕಿನ, ಹೊಮ್ಮ ಪ್ರಾಥಮಿಕ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟದ ಅಡಿಗೆಯನ್ನು ದಲಿತ ಮಹಿಳೆ ಮಾಡುತ್ತಾರೆ ಎಂಬ ಕಾರಣಕ್ಕೆ, ಆ ಶಾಲೆಯ, 23 ಮಕ್ಕಳಲ್ಲಿ, 22 ಮಕ್ಕಳು ಟಿ.ಸಿ ಪಡೆದಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದೊಂದು ಅನಾಗರಿಕ ನಡವಳಿಕೆ, ರಾಜ್ಯಸರಕಾರಕ್ಕೂ ಕೆಟ್ಟ ಹೆಸರು. ಇದು ನಿಜಕ್ಕೂ ತಲೆ ತಗ್ಗಿಸುವ ಘಟನೆ. ಇವರು ಇನ್ನೂ ಯಾವ ಶತಮಾನದಲ್ಲಿ ಇದ್ದಾರೆ ? ಈ ಮಕ್ಕಳ ಪೋಷಕರಿಗೆ ಶಿಕ್ಷಣಾಧಿಕಾರಿಗಳು ತಿಳಿವಳಿಕೆ ಹೇಳಬಾರದೇ? ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಜಾತಿ ವ್ಯವಸ್ಥೆ ಆಚರಣೆಯಲ್ಲಿ ಇರುವುದಕ್ಕೆ ಇದೊಂದು ಜ್ವಲಂತ ಉದಾಹರಣೆ. ಜಿಲ್ಲಾಧಿಕಾರಿಗಳು ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳಬೇಕು. ಶಾಲೆಯ 23 ಮಕ್ಕಳಲ್ಲಿ, 22 ಮಕ್ಕಳು ಟ.ಸಿ. ಪಡೆದಿದ್ದಾರೆ ಎಂದರೆ, ಆ ಸರಕಾರಿ ಶಾಲೆ ಉಳಿಯುವುದಾದರೂ ಹೇಗೆ ? ಟಿ.ಸಿ ಪಡೆದ ಮಕ್ಕಳ ಪೋಷಕರ ಜೊತೆ ಮಾತಾನಾಡಿ ಅವರಿಗೆ ತಿಳಿವಳಿಕೆ ಹೇಳಿ, ಟಿ.ಸಿ ವಾಪಸ್ ಪಡೆದು, ಅದೇ ಸರಕಾರಿ ಶಾಲೆಯಲ್ಲಿ ಆ ಮಕ್ಕಳು ವಿದ್ಯಾಭ್ಯಾಸ ಮುಂದುವರಿಸುವಂತೆ ಮಾಡುವ ಕೆಲಸ ಶಿಕ್ಷಣಾಧಿಕಾರಿಗಳದು. ಇಲ್ಲದಿದ್ದರೆ ಸರಕಾರಕ್ಕೆ ಒಂದು ರೀತಿಯಲ್ಲಿ ಕಪ್ಪು ಚುಕ್ಕೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಸುಳ್ಳು ಸುದ್ದಿಗೆ ಕಡಿವಾಣ ಸ್ವಾಗತಾರ್ಹ

ಇತ್ತೀಚೆಗೆ ರಾಜ್ಯ ಸರಕಾರವು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಾಗೂ ತಪ್ಪು ಮಾಹಿತಿ ಹಂಚುವವರ ವಿರುದ್ಧ ಗಂಭೀರ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ 7 ವರ್ಷ ಜೈಲು ಶಿಕ್ಷೆ ಹಾಗೂ 10 ಲಕ್ಷ ರು. ದಂಡ ವಿಧಿಸುವ ಮಸೂದೆ ರೂಪಿಸಲು ಮುಂದಾಗಿರುವ ಸುದ್ದಿ ಕೇಳಿ ಖುಷಿಯಾಯಿತು. ಈ ಕ್ರಮ ಸಾರ್ವಜನಿಕ ಹಿತದೃಷ್ಟಿಯಿಂದ ಸ್ವಾಗತಾರ್ಹ.

ಸಾಮಾಜಿಕ ಜಾಲತಾಣಗಳ ಪ್ರಭಾವ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಈ ಸಮಯದಲ್ಲಿ, ಸುಳ್ಳು ಸುದ್ದಿಗಳು ಜನರ ಹಾಗೂ ಸರಕಾರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿವೆ. ಇದನ್ನು ನಿಯಂತ್ರಿಸಲು ಸರ್ಕಾರ ನಡೆಸುತ್ತಿರುವ ಪ್ರಯತ್ನಗಳು ಶ್ಲಾಘನೀಯ. ವಿಶೇಷವಾಗಿ ಸುಳ್ಳು ಸುದ್ದಿ ನಿಯಂತ್ರಣ ಪ್ರಾಧಿಕಾರ ರಚನೆ ಹಾಗೂ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳ ಸ್ಥಾಪನೆಗೆ ಮಸೂದೆ ಅವಕಾಶ ನೀಡಿರುವುದು ಗಮನಾರ್ಹವಾಗಿದೆ.ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ಸುಳ್ಳು ಸುದ್ದಿಗಳ ಬಗ್ಗೆ ಫೇಸ್ ಬುಕ್ ವ್ಯವಸ್ಥಾಪಕರಿಗೆ ದೂರು ನೀಡಲು ಕೇವಲ ಆಯ್ಕೆಗಳ ರೂಪದಲ್ಲಿರುವ ದೂರು ನಮೂದಿಸುವ ವ್ಯವಸ್ಥೆ ಸಾಕಷ್ಟು ವಿವರ ನೀಡಲು ಸಾಧ್ಯವಿಲ್ಲದಂತೆ ಮಾಡುತ್ತಿದೆ. ಇದರ ಫಲವಾಗಿ ಹಲವಾರು ನ್ಯಾಯೋಚಿತ ದೂರುಗಳು ಕಡೆಗಣನೆಗೆ ಒಳಗಾಗುತ್ತವೆ. ಅದೇ ರೀತಿ, ಹಲವರು ಪೊಲೀಸ್ ಠಾಣೆಗೆ ತೆರಳಿ ದೂರು ನೀಡುವ ಮನೋಭಾವವಿಲ್ಲದ ಕಾರಣ, ಸುಳ್ಳು ಸುದ್ದಿಗಳನ್ನು ಮೌನವಾಗಿ ಸಹಿಸುವ ಸ್ಥಿತಿಯಲ್ಲಿದ್ದಾರೆ. ಇದನ್ನು ಸರಿಪಡಿಸಲು ಸುಳ್ಳು ಹಾಗೂ ತಪ್ಪು ಮಾಹಿತಿಯ ಬಗ್ಗೆ ಸಾರ್ವಜನಿಕರು ಆನ್‌ಲೈನ್ ಮೂಲಕ ನೇರವಾಗಿ ಸಂಬಂಧಪಟ್ಟ ಇಲಾಖೆಗೆ ದೂರು ನೀಡಬಹುದಾದ ವಿಶಿಷ್ಟ ಪೋರ್ಟಲ್ ಅಥವಾ ಅಪ್ಲಿಕೇಶನ್ ವ್ಯವಸ್ಥೆಯನ್ನು ಸರಕಾರ ರೂಪಿಸಬೇಕಾಗಿದೆ. ಇದರಿಂದ ಜನ ಸಾಮಾನ್ಯರು ಸುಲಭವಾಗಿ ತಮ್ಮ ದೂರುಗಳನ್ನು ನೊಂದಾಯಿಸಬಹುದಾಗಿದ್ದು, ಇದರೊಂದಿಗೆ ಪೊಲೀಸ್ ಇಲಾಖೆಗೆ ಸಹ ಸಹಕಾರ ದೊರಕುತ್ತದೆ. ಈ ತಂತ್ರಜ್ಞಾನಾಧಾರಿತ ದೂರು ವ್ಯವಸ್ಥೆ ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸಲಿದೆ ಮತ್ತು ಸಕಾರಾತ್ಮಕ ಪ್ರಭಾವ ಬೀರುವಲ್ಲಿ ಸಹಕಾರಿಯಾಗುತ್ತದೆ.

ನಾಗೇಂದ್ರ ಕಾವೂರು, ಸಂಡೂರು

ಭಟ್ಟರ್ ಸ್ಕಾಚ್

- **ವಿ. ಹೇಮಂತಕುಮಾರ, ಬೆಂಗಳೂರು**
ಭಟ್ರೇ,ಮಾವನ ಹೆಸರಿನಲ್ಲಿ ಮನೆ ಇದ್ದರೂ, ಅತ್ತೆ ಮನೆ ಅಂತಾನೆ ಹೇಳ್ತಾರಲ್ಲ?
– **ಹಾಗೆ ಹೇಳಿದಾಗ ಮಾವ ಪ್ರತಿಭಟಿಸಿದ್ದನ್ನು ಕೇಳಿದ್ದೀಯಾ?!**

- **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ನಿಮಗೆ ಸ್ಕಾಚ್ ಅಂದ್ರೆ ಇಷ್ಟವಿದ್ದಂತಿದೆ, ಹೌದಾ?
– **ಉತ್ತರಗಳನ್ನು ಪ್ರಶ್ನೆ ಎನ್ನಬಾರದು!**

- **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಬಾಯಿ ತೆರೆದರೆ ಭಗವದ್ಗೀತೆ ಅಂತ ಹೇಲತಾರೆ, ರಾಮಾಯಣ ಅಂತ ಹೇಲತಾರೆ, ಈ ಹೇಲೋದರ ಬಗ್ಗೆ ಏನು ಹೇಲುತೀರಿ?
– **ನಾನು ಏನು ಹೇಲಲಿ?!**

- **ರವಿ, (ಇ-ಮೇಲ್ ಮೂಲಕ)**
ಭಟ್ರೇ, ವಿಶ್ವ ಯೋಗ ದಿನ ಆಯ್ತು, ಇಲ್ಲದಿರುವ ದಿನ ಯಾವುದು?
– **ವಿಶ್ವ ಸಂಭೋಗ ದಿನ !**

- **ಮಹೇಶ ಹಿರೇಮಠ, ಬಾಗಲಕೋಟೆ**
ಭಟ್ರೇ, ತೊಳೆದರೆ ಸರ್ಫ್ ಥರ ತೊಳೀಬೇಕು ಅಂತಾರಲ್ಲ?
– **ಆ ಮಾತು ಹಳತಾಯಿತು, ಈಗೇನಿದ್ದರೂ, ತೊಳೆದರೆ ರವಿ ಹಂಜ್ ಥರ ತೊಳೀಬೇಕು ಅಂತಾರಪ್ಪ!**

- **ಎಸ್.ಎಸ್.ಶೆಟ್ಟಿ, ಕಲಬುರ್ಗಿ**
ಭಟ್ರೇ, ಜಮೀರ್ ಹೇಳಿದಂತೆ ಲಂಚ ತೆಗೆದುಕೊಂಡೋರಿಗೆಲ್ಲ ಹುಳ ಬಿದ್ದರೆ?
– **ಇಷ್ಟೊತ್ತಿಗೆ ಸರಕಾರಿ ಕಚೇರಿಗಳು ಹುಳ ಹುಪ್ಪಡಿಗಳ ಮನೆಗಳಾಗಿರುತ್ತಿದ್ದವು!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಕನ್ನಡದಲ್ಲಿ ತೊಂಬತ್ತು ತಗೊಂಡ್ರೂ ನೆಟ್ಟಗೆ ಕನ್ನಡ ಬರೆಯಲು, ಓದಲು ಬರೋಲ್ಲವಲ್ಲ?
– **ಅವರ ಉತ್ತರ ಪತ್ರಿಕೆ ನೋಡಿದವರು ತೊಂಬತ್ತು ತೆಗೆದುಕೊಂಡಿರಬಹುದು!**

- **ಪ್ರಶಾಂತ ಬಕ್ಕದ, ಹಾವೇರಿ**
ಭಟ್ರೇ, ಸಚಿವ ಮಧು ಬಂಗಾರಪ್ಪ 'ಕನ್ನಡಕೆ ಹೋರಾಡು, ಕನ್ನಡದ ಕಂದ' ಅಂತ ಹೇಳಿದರಲ್ಲ?
– **ಮುಂದಿನ ಸಾಲು ಕನ್ನಡವ ಕಾಪಾಡು ಕನ್ನಡಿಗರಿಂದ!**

- **ಮಂಜುನಾಥ ಹತ್ತರವಾಟ, ಕೊಳವಿ**
ಭಟ್ರೇ, ಡೊನಾಲ್ಡ್ ಟ್ರಂಪ್‌ಗೆ ನೊಬೆಲ್ ಶಾಂತಿ ಕೊಡಬಹುದಾ?
– **ಅದೇನು ಡಿಸ್ಕೋ ಶಾಂತಿ ಅಂದುಕೊಂಡ್ಯಾ?!**

ಹೋರಾಡುವ ವೀರರು, ಕದಿಯುವ ಚೋರರು!

ಇಸ್ರೇಲ್ ನಿರ್ಮಿಸಿಕೊಂಡ ಉಕ್ಕಿನ ಪಂಜರಗಳಾದ ಐರನ್ ಡೋಮ್ ನಿರ್ಮಾಣದ ಕುರಿತ ರಹಸ್ಯ ಮಾಹಿತಿಯನ್ನು ಚೀನಾ ಇತ್ತೀಚೆಗೆ ಕದಿಯಿತು. ಆದರೆ ಈ ಕಳವು ನಡೆದದ್ದು ಸೈಬರ್ ಅಟ್ಯಾಕ್ ಮೂಲಕ. ಐರನ್ ಡೋಮ್ ತಯಾರಿಸುವ ಇಸ್ರೇಲ್ ಸಂಸ್ಥೆಯ ಪ್ರಕಾರ ಚೀನಾದ ಹ್ಯಾಕರ್‌ಗಳು ಪ್ರಮುಖ ಮಾಹಿತಿಗಳನ್ನು ಕದ್ದಿದ್ದಾರೆ.

ಕಾಡುದಾರಿ
ಹರೀಶ್ ಕೇರ
vveditoped@gmail.com

ಇರಾನ್ ಮೇಲಿನ ಇಸ್ರೇಲ್ ದಾಳಿಯ ಹಿಂದೆ ಮೊಸಾದ್‌ನ ಗೂಢಚರರು ಇದ್ದರು ಎಂಬುದು ನಿಮಗೆ ಗೊತ್ತಾಗಿದೆ. ಮೊಸಾದ್ ಏಜೆಂಟರೇನೋ ಇದನ್ನು ದೇಶಪ್ರೇಮಕ್ಕಾಗಿ ಮಾಡಿರಬಹುದು. ಆದರೆ ಅವರಿಗೂ ಮಾಹಿತಿ ಒದಗಿಸಿದ ಇರಾನ್ ಒಳಗಿನವರು ವೈಯಕ್ತಿಕ ಲಾಭಕ್ಕಾಗಿಯೇ ತಮ್ಮ ಪ್ರಾಣವನ್ನು ರಿಸ್ಕಿಗೆ ಒಡ್ಡಿ ರಹಸ್ಯ ಮಾಹಿತಿಗಳನ್ನು ಬಿಟ್ಟುಕೊಟ್ಟಿರುತ್ತಾರೆ. ಅಂಥ ಡಬಲ್ ಕ್ರಾಸರ್‌ಗಳೇ ಕೆಲವೊಮ್ಮೆ ಯುದ್ಧದ ಜಯಾಪಜಯಗಳನ್ನು ನಿರ್ಣಯಿಸಿಬಿಡುತ್ತಾರೆ. ಅಂಥ ಕೆಲವರ ಕತೆ ಬಹಳ ಕುತೂಹಲಕರ.

ಮೊನ್ನೆ ಇರಾನ್‌ನ ಮೂರು ಪರಮಾಣು ಸ್ಥಾವರಗಳ ಮೇಲೆ ಅಮೆರಿಕದ ಬಿ-12 ಸ್ಟೆಲ್ತ್ ಬಾಂಬರ್ ವಿಮಾನಗಳು ಬಾಂಬ್‌ಗಳ ಮಳೆ ಸುರಿಸಿ ಮರಳಿದವು. ಅಣುಸ್ಥಾವರಗಳು ಉಡೀಸ್ ಆಗಿವೆ ಎಂದು ಅಮೆರಿಕ ಹೇಳಿಕೊಂಡಿತು. ಆದರೆ ಬಾಂಬ್ ತಯಾರಿಸಬಲ್ಲಂಥ ಯುರೇನಿಯಂ ಅನ್ನು ಇರಾನ್ ಬೇರೆಲ್ಲೋ ಭದ್ರವಾಗಿ ಬಚ್ಚಿಟ್ಟುಕೊಂಡು ಒಳಗೊಳಗೇ ನಗುತ್ತಿದೆ, ಅದು ಬೇರೆ ಮಾತು. ಇದರ ನಡುವೆ ಅಮೆರಿಕದ ಮಾರಕಾಯುಧವಾಗಿ ಹೊರಹೊಮ್ಮಿರುವ ಬಿ-12 ಸ್ಟೆಲ್ತ್ ಬಾಂಬರ್‌ಗಳು ಸ್ಪಾಟ್‌ಲೈಟ್‌ಗೆ ಬಂದವು. ಒಮ್ಮೆ ಇಂಧನ ತುಂಬಿಸಿಕೊಂಡರೆ ನಲುವತ್ತು ಗಂಟೆಗಳ ಕಾಲ ಹಾರಬಲ್ಲ, ಇಡೀ ಭೂಮಂಡಲದಲ್ಲಿ ಎಲ್ಲಿ ಬೇಕಿದ್ದರೂ ಸದ್ದೇ ಇಲ್ಲದೆ ಹಾರಾಡಿ ನ್ಯೂಕ್ಲಿಯರ್ ಬಾಂಬ್ ಹಾಕಿ ಬರಬಲ್ಲ ಈ ವಿಮಾನದ ಶಕ್ತಿ ಭಯಾನಕ. ಸ್ಟೆಲ್ತ್ ಎಂಬುದು ಶತ್ರುಗಳ ರೇಡಾರ್‌ಗೆ ಸಿಗದಂತೆ ನುಣುಚಿಕೊಳ್ಳುವ ಒಂದು ತಂತ್ರಜ್ಞಾನ. ಈ ತಂತ್ರಜ್ಞಾನ ಬೇರೆ ಯಾವ ದೇಶದ ಬಳಿಯೂ ಇರಲಿಲ್ಲ. ಆದರೆ ಇಂಥದೊಂದು ಬಾಂಬರ್ ವಿಮಾನವನ್ನು ಚೀನಾ ಅಭಿವೃದ್ಧಿಪಡಿಸುತ್ತಿದೆ ಎಂಬುದು ಸದ್ಯ ಯುಎಸ್‌ಗೆ ಆತಂಕದ ವಿಷಯ. ಚೀನಾಗೆ ಈ ವಿಮಾನದ ಟೆಕ್ನಾಲಜಿಯನ್ನು ಅಮೆರಿಕದಿಂದ ಕದ್ದೊಯ್ದು ಒದಗಿಸಿಕೊಟ್ಟವನು ಒಬ್ಬ ಅಮೆರಿಕದ ಇಂಜಿನಿಯರ್! ಸದ್ಯ ದೇಶದ್ರೋಹದ ಈ ಕೆಲಸಕ್ಕಾಗಿ ಇವನು 30 ವರ್ಷದ ಜೈಲುಶಿಕ್ಷೆಗೆ ಒಳಗಾಗಿದ್ದಾನೆ. ಮತ್ತು ಇವನು ಭಾರತ ಮೂಲದವನು ಎಂಬುದು ನಿಮಗೆ ಗೊತ್ತಿರಲಿ.

ಇವನ ಹೆಸರು ನೊಶೀರ್ ಶೇರಿಯಾರ್ಜಿ ಗೊವಾಡಿಯಾ (Noshir Sheriarji Gowadia). ಮುಂಬಯಿಯಲ್ಲಿ ಪಾರ್ಸಿ ಕುಟುಂಬದಲ್ಲಿ ಜನಿಸಿ ಕಲಿತು ಅಮೆರಿಕಕ್ಕೆ ತೆರಳಿ ಅಲ್ಲಿ ಏರೋಸ್ಪೇಸ್ ಇಂಜಿನಿಯರ್ ಆದ. ಆಗ ಅಮೆರಿಕ ವಿಯೆಟ್ನಾಂ ಮೊದಲಾದ ಕಡೆ ತನ್ನ ಹಲವು ಯುದ್ಧವಿಮಾನಗಳನ್ನು ಕಳೆದುಕೊಂಡು ಒತ್ತಡದಲ್ಲಿತ್ತು. ಶತ್ರುಗಳ ರೇಡಾರ್‌ಗಳಿಗೆ ಸಿಗದ ಜೆಟ್ ನಿರ್ಮಿಸಲು ಬಯಸಿತ್ತು. ಆಗ ಶುರುವಾದದ್ದು ಬಿ-12 ಸ್ಪಿರಿಟ್ ಬಾಂಬರ್ ವಿಮಾನ ನಿರ್ಮಾಣ. ನಾರ್ತ್‌ರಾಪ್ ಎಂಬ ಸಂಸ್ಥೆ ಇದನ್ನು ನಿರ್ಮಿಸುತ್ತಿತ್ತು. ಅದರ ವಿನ್ಯಾಸದ ತಂಡದಲ್ಲಿ ನೊಶೀರ್ ಬಹು ಮಹತ್ವದ ಜಾಗದಲ್ಲಿ ಸೇರಿಕೊಂಡ. ಅವನಿಗೆ ಅದರ ಇಡೀ ವಿನ್ಯಾಸ ಗೊತ್ತಿತ್ತು. ಮಧ್ಯೆ ಅವನನ್ನು ರಕ್ತದ ಕಾಯಿಲೆಯೊಂದು ಬಾಧಿಸಿತು. ನಾರ್ತ್‌ರಾಪ್‌ನಲ್ಲಿ ಕೆಲಸ ಕಳೆದುಕೊಂಡ. ನ್ಯೂಮೆಕ್ಸಿಕೋದಲ್ಲಿ ತನ್ನದೇ ರಕ್ಷಣಾ ಸಲಹಾ ಸಂಸ್ಥೆ ಆರಂಭಿಸಿದ. ಇದೇ ಸಂದರ್ಭದಲ್ಲಿಯೇ ಚೀನಾದ ಏಜೆಂಟ್‌ಗಳು ಇವನ ಸಂಪರ್ಕಕ್ಕೆ ಬಂದರು. ದೊಡ್ಡ ಮೊತ್ತದ ಸಾಲ ಪಡೆದು ವಿಲಾಸಿ ವಿಲ್ಲಾ ಕಟ್ಟಿಸುತ್ತಿದ್ದ ಇವನಿಗೆ ಹಣ ಬೇಕಾಗಿತ್ತು. ತನ್ನಲ್ಲಿದ್ದ ಬಿ-12 ರಹಸ್ಯಗಳನ್ನು ಮಾರಿಕೊಂಡ. ಚೀನಾಕ್ಕೂ ಹಲವಾರು ಸಲ ಹೋಗಿ ಬಂದು ಅವರ ವಿಮಾನದ ಪ್ರಮುಖ ಭಾಗಗಳನ್ನು ಕಟ್ಟುವುದಕ್ಕೆ ನೆರವಾದ.

ಇವನಲ್ಲಿ ಶೇಖರವಾಗುತ್ತಿದ್ದ ಹಣ ಅಮೆರಿಕದ ಎಫ್‌ಬಿಐ ಏಜೆಂಟರ ಗಮನ ಸೆಳೆಯಿತು. ಸದ್ದಿಲ್ಲದೇ ಇವನ ಮಾಹಿತಿ ಕಲೆಹಾಕಲಾಯಿತು. ಎಲ್ಲ ದಾಖಲೆಗಳೊಂದಿಗೆ ಸಿಕ್ಕಿಬಿದ್ದ. ವಿಚಾರಣೆಯೂ ಆಗಿ, ತನ್ನ ದೇಶದ್ರೋಹವನ್ನು ಒಪ್ಪಿಕೊಂಡ. 30 ವರ್ಷಗಳ ಶಿಕ್ಷೆಯಾಯಿತು. ಆದರೆ ಆಗಬಾರದ ಹಾನಿ ಆಗಿಹೋಗಿತ್ತು. ಇತ್ತೀಚೆಗೆ ಬಿ-12 ವಿನ್ಯಾಸವನ್ನೇ ಹೋಲುವ ಚೀನಾದ ಒಂದು ಡ್ರೋನ್ ಅಮೆರಿಕದ ಸ್ಯಾಟ್‌ಲೈಟ್‌ಗಳಿಗೆ ಕಂಡುಬಂದಿದೆ. ಇದು ಆಕಸ್ಮಿಕ ಆಗಿರಲಿಕ್ಕಿಲ್ಲ. ಅಮೆರಿಕದ ರಹಸ್ಯವನ್ನೂ ಕದ್ದು ಚೀನಾ ಇನ್ನೂ ಮುಂದೆ ಹೋಗಿದೆ.

ತನ್ನ ಗುಪ್ತಚರ ಏಜೆಂಟ್‌ಗಳೇ ತನಗೇ ಮಣ್ಣು ಮುಕ್ಕಿಸಿದ ಅನುಭವ ಆಗುತ್ತಿರುವುದು ಅಮೆರಿಕಕ್ಕೆ ಇದೇ ಮೊದಲಲ್ಲ. ಅಮೆರಿಕದ ಇತಿಹಾಸದಲ್ಲಿಯೇ ಅತಿ ಬರ್ಬರವಾದ ಡಬಲ್ ಕ್ರಾಸ್ ಮಾಡಿದ ಇನ್ನೊಬ್ಬ ಏಜೆಂಟ್ ಇದ್ದಾನೆ. ಅವನ ಹೆಸರು ಆಲ್ಡ್ರಿಚ್ ಅಮಿಸ್. ಅದು ತೊಂಬತ್ತರ ದಶಕ, ಅಮೆರಿಕ- ಸೋವಿಯತ್ ಒಕ್ಕೂಟದ ನಡುವಿನ ಶೀತಲ ಸಮರದ ಕಾಲ. ಜಗತ್ತಿನ ಮೇಲೆ ಒಡೆತನ ಸ್ಥಾಪಿಸಲು ಹೆಣಗುತ್ತಿದ್ದ ಎರಡೂ ಬೃಹತ್ ದೇಶಗಳ ನಡುವೆ ಮಿಲಿಟರಿ ರಹಸ್ಯಗಳನ್ನು ಅತ್ತಿಂದಿತ್ತ ಸಾಗಿಸುವ ಸ್ಪೈಗಳ ದೊಡ್ಡ ಪಡೆಗಳೇ ಕಾರ್ಯನಿರತವಾಗಿದ್ದವು. ಯಾರು ಸಾಚಾ, ಯಾರು ಗೂಢಚರ ಎಂದು ಹೇಳಲೇ ಸಾಧ್ಯವಿಲ್ಲದ ಪರಿಸ್ಥಿತಿ ಇತ್ತು. ಅಂಥ ಹೊತ್ತಿನಲ್ಲಿ, ಇದ್ದಕ್ಕಿದ್ದಂತೆ, ರಷ್ಯಾದಲ್ಲಿ ಗುಟ್ಟಾಗಿ ಕೆಲಸ ಮಾಡುತ್ತಿದ್ದ ಅಮೆರಿಕದ ಏಜೆಂಟರುಗಳು ಒಬ್ಬೊಬ್ಬರಾಗಿ ರಷ್ಯಾದ ಪೊಲೀಸರ ಕೈಗೆ ಸಿಕ್ಕಿಯೋ ಬೇರೆ ರೀತಿಯಲ್ಲಿಯೋ ಸಾಯತೊಡಗಿದರು. ಬೆಲೆಬಾಳುವ ಹತ್ತಾರು ಏಜೆಂಟರು ಹೀಗೆ ಸತ್ತುಹೋದರು. ಸಿಐಎ, ಎಫ್‌ಬಿಐಗಳಿಗೆ ತಲೆಬಿಸಿಯಾಯಿತು. ಯಾರೋ ಒಳಗಿನಿಂದಲೇ ಈ ಬೇಹುಗಾರರ ಮಾಹಿತಿಯನ್ನು ವೈರಿಗೆ ಕೊಡದಿದ್ದರೆ ಹೀಗಾಗಲು ಸಾಧ್ಯವಿಲ್ಲ. ಎಷ್ಟೇ ನಿಗಾ ಇಟ್ಟರೂ ಇದರ ಕಾರಣ ಯಾರು ಅಂತ ಗೊತ್ತಾಗಲಿಲ್ಲ.

ಅಮಿಸ್ ಕಡೆಗೂ ಸಿಕ್ಕಿಬಿದ್ದದ್ದು ಅವನ ವಿಲಾಸಿ ಜೀವನಶೈಲಿಯಿಂದ. ವೈಭವೋಪೇತ ಮನೆ ಕಟ್ಟಿಸಿದ, ದುಬಾರಿ ಕಾರು ಖರೀದಿಸಿದ. ಅವನ ಸಂಬಳದಲ್ಲಂತೂ ಅದು ಸಾಧ್ಯವಿರಲಿಲ್ಲ. ಸಹಜವಾಗಿಯೇ ಎಫ್‌ಬಿಐ ಇವನನ್ನು ತಡವಿಕೊಂಡು ವಿಚಾರಿಸಿದಾಗ ಬಾಯಿಬಿಟ್ಟ. ಹತ್ತು ವರ್ಷಗಳ ಕಾಲ ಇವನು ದೇಶದ ಬೆನ್ನಿಗೆ ಚೂರಿ ಹಾಕಿದ್ದ. ಆ ಕಾಲದಲ್ಲಿ ಅವನು ಸಿಐಎ (ಸೆಂಟ್ರಲ್ ಇಂಟಲಿಜೆನ್ಸ್ ಏಜೆನ್ಸಿ- ಅಮೆರಿಕದ ಬೇಹು ಸಂಸ್ಥೆ) ಪ್ರಮುಖ ಹುದ್ದೆ- ರಷ್ಯಾದ ಬೇಹುಗಾರಿಕೆ ವಿಭಾಗದ ಹೆಡ್ ಆಗಿದ್ದ. ಎಲ್ಲ ಏಜೆಂಟರ ವಿವರವೂ ಇವನ ಮೂಲಕವೇ ಸಾಗಬೇಕಿತ್ತು. ಅದನ್ನಾತ ರಷ್ಯಾದ ಸ್ಪೈ ಏಜೆನ್ಸಿ ಕೆಜಿಬಿಗೆ ಮಾರಿಕೊಂಡಿದ್ದ. ಅವನ ದೇಶದ್ರೋಹಕ್ಕೆ ಕಾರಣ ಸರಳವಿತ್ತು- ಅವನ ಕುಡಿತ ಹಾಗೂ ಅವನ ರಸಿಕ ಜೀವನಶೈಲಿಗೆ ಸಂಬಳ ಸಾಲುತ್ತಿರಲಿಲ್ಲ. ಇವನ ಆಲ್ಕೋಹಾಲ್ ವ್ಯಸನ, ಹೊರಚಟಗಳು, ಮೊದಲ ಪತ್ನಿಯ ವಿಚ್ಛೇದನ, ಎರಡನೇ



ಪತ್ನಿಯ ವಿಲಾಸಿ ಶಾಪಿಂಗ್ ಶೈಲಿಗಳೆಲ್ಲ ಅವನನ್ನು ಡಬಲ್ ಕ್ರಾಸರ್ ಆಗಿಸಿದ್ದವು. ಇಂದಿಗೂ ಜೈಲಿನಲ್ಲಿರುವ ಆಮಿಸ್ ಅಮೆರಿಕಕ್ಕೆ ಅತ್ಯಂತ ಹಾನಿಯೆಸಗಿದ ಡಬಲ್ ಏಜೆಂಟ್ ಅನಿಸಿದ್ದಾನೆ.

ಹಾಗೆ ನೋಡಿದರೆ ಇರಾನ್‌ನ ಪರಮಾಣು ಬಾಂಬ್ ತಯಾರಿ ವ್ಯವಸ್ಥೆಯೇ ಕಳವು ಮಾಲು. ಇದಕ್ಕೆ ನೆರವಾದವನು ಪಾಕಿಸ್ತಾನ ಮೂಲದ ವಿಜ್ಞಾನಿ ಅಬ್ದುಲ್ ಖಾದಿರ್ ಖಾನ್. ಇವನು ಮೂಲತಃ ಮೆಟಲರ್ಜಿಸ್ಟ್ ಆದರೂ ಹಲವು ದೇಶಗಳಿಗೆ ಅಣುಬಾಂಬ್ ತಯಾರಿಸಬಲ್ಲ ತಂತ್ರಜ್ಞಾನವನ್ನು ಗುಪ್ತವಾಗಿ ಒದಗಿಸಿಕೊಟ್ಟ ಖದೀಮ. 1970ರ ದಶಕದಲ್ಲಿ ಇವನು ಯುರೋಪಿನ ಯುರೆಂಕೋ ಸಂಸ್ಥೆಯಲ್ಲಿ ಕೆಲಸದಲ್ಲಿದ್ದ. 1975ರಲ್ಲಿ ಪಾಕಿಸ್ತಾನಕ್ಕೆ ವಾಪಸಾಗುವಾಗ ಅಲ್ಲಿಂದ ಯುರೇನಿಯಂ ಸಶಕ್ತೀಕರಣ ಪ್ರಕ್ರಿಯೆ, ಸೆಂಟ್ರಿಫ್ಯೂಜ್ ವ್ಯವಸ್ಥೆಯ ಬ್ಲೂಪ್ರಿಂಟ್‌ಗಳನ್ನೆಲ್ಲ ಕದ್ದು ತಂದ. ಪಾಕಿಸ್ತಾನ ಇವನನ್ನು ತನ್ನ ನ್ಯೂಕ್ಲಿಯರ್ ಕಾರ್ಯಕ್ರಮದ ಪಿತಾಮಹ ಎಂದು ಕರೆಯಲು ಕಾರಣ ಅವನು ಇದೆಲ್ಲದರ ಮೂಲಕ ಆ ದೇಶದಲ್ಲಿ ಸೃಷ್ಟಿಸಿದ ಪರಮಾಣು ಬಾಂಬ್ ತಯಾರಿ ವ್ಯವಸ್ಥೆ. ಇವನು ಎಂಥ ಪಾಖಡಾ ಎಂದರೆ ಅರಬ್ ದೇಶಗಳು- ಯುರೋಪ್ ಮೊದಲಾದ ಕಡೆ ಹರಡಿದ ಒಂದು ಬೃಹತ್ ಭೂಗತ ಜಾಲವನ್ನೇ ಸೃಷ್ಟಿಸಿದ. ಇದರಲ್ಲಿ ತಂತ್ರಜ್ಞರು, ಬೇಹುಗಾರರು, ಏಜೆಂಟರು, ಮಾರಾಟಗಾರರು ಎಲ್ಲರೂ ಇದ್ದರು. ಹೀಗೆ ಈ ಜಾಲದ ಮೂಲಕ ಯುರೇನಿಯಂ ಸಂವರ್ಧನೆಯ ವ್ಯವಸ್ಥೆಯನ್ನು ಇರಾನ್ ಪಡೆಯಿತು. ಪೌರ ಬಳಕೆಯ ಯುರೇನಿಯಂ ಅನ್ನು ಅಮೆರಿಕದಿಂದ ಮೊದಲೇ ಪಡೆಯುತ್ತಿದ್ದ ಇರಾನ್, ಖಾನ್‌ನಿಂದ ಅಣುಬಾಂಬ್ ತಯಾರಿಯ ಭೂಗತ ವ್ಯವಸ್ಥೆಯನ್ನೂ ಪಡೆದುಕೊಂಡು ಕೊಬ್ಬಿತು. ಇದೆಲ್ಲ ಅಮೆರಿಕದ ಅರಿವಿಗೆ ಬರಲಿಲ್ಲ ಎಂದಲ್ಲ, ಕುರಿ ಕೊಬ್ಬಲಿ ಎಂಬುದು ಅದರ ನೀತಿ.

ಬೇಹುಗಾರಿಕೆಯ ಬಗ್ಗೆ ಮಾತನಾಡುತ್ತ ಇಸ್ರೇಲ್ ಅನ್ನು ಮರೆತರೆ ಆದೀತೆ? ಇಸ್ರೇಲ್‌ನ ಮೊಸಾದ್ ಅತ್ಯಂತ ಪ್ರತಿಷ್ಠಿತ, ಪಳಗಿದ ಗೂಢಚರ ಜಾಲ ಎಂದು ಲೆಕ್ಕ. ಆ ಸಂಸ್ಥೆಯ ಏಜೆಂಟರು ಬಹುಶಃ ಎಲ್ಲ ದೇಶಗಳಲ್ಲೂ ಹರಡಿಹೋಗಿರಬಹುದು. ವಾಸ್ತವವಾಗಿ, ಒಂದು ದೇಶ ಬಲಿಷ್ಠ ಎನಿಸಬೇಕಿದ್ದರೆ ಮಿಲಿಟರಿಯಷ್ಟೇ ಬಲವಾದ ಬೇಹುಗಾರಿಕೆ ಜಾಲವೂ ಬೇಕು. ಇಂಥ ಇಸ್ರೇಲನ್ನೂ ಚೀನಾ ವಂಚಿಸಿದೆ. ಪ್ಯಾಲೆಸ್ತೀನ್ ಕಡೆಯಿಂದ ಹಾರಿಬರುವ ರಾಕೆಟ್‌ಗಳನ್ನು ತಡೆಯಲೆಂದು ಇಸ್ರೇಲ್ ನಿರ್ಮಿಸಿಕೊಂಡ ಉಕ್ಕಿನ ಪಂಜರಗಳಾದ ಐರನ್ ಡೋಮ್ ನಿರ್ಮಾಣದ ಕುರಿತ ರಹಸ್ಯ ಮಾಹಿತಿಯನ್ನು ಚೀನಾ ಇತ್ತೀಚೆಗೆ ಕದಿಯಿತು. ಆದರೆ ಈ ಕಳವು ನಡೆದದ್ದು ಸೈಬರ್ ಅಟ್ಯಾಕ್ ಮೂಲಕ. ಐರನ್ ಡೋಮ್ ತಯಾರಿಸುವ ಇಸ್ರೇಲ್ ಸಂಸ್ಥೆಯ ಪ್ರಕಾರ ಚೀನಾದ ಹ್ಯಾಕರ್‌ಗಳು ಪ್ರಮುಖ ಮಾಹಿತಿಗಳನ್ನು ಕದ್ದಿದ್ದಾರೆ. ಅದನ್ನು ಅವರು ಎಲ್ಲಿ ಬಳಸುತ್ತಾರೋ ಗೊತ್ತಿಲ್ಲ. ಆಧುನಿಕ ಬೇಹುಗಾರಿಕೆ ಕೂಡ ನೇರ ಸಂಪರ್ಕಕ್ಕಿಂತಲೂ ಹೆಚ್ಚಾಗಿ ಆನ್‌ಲೈನ್‌ನಲ್ಲಿ ವ್ಯಾಪಿಸಿದೆ.

ಭಾರತದ ಮಿಲಿಟರಿ ಪ್ರಾಜೆಕ್ಟುಗಳೂ ವೈರಿಗಳ ಬೇಹುಗಾರಿಕೆಗೆ ತುತ್ತಾಗದೇ ಉಳಿದಿಲ್ಲ. ನಮ್ಮ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ಷಿಪಣಿ ವ್ಯವಸ್ಥೆಯನ್ನೇ ತೆಗೆದುಕೊಳ್ಳಬಹುದು. ಭಾರತದ ಡಿಆರ್‌ಡಿಒ ಹಾಗೂ ರಷ್ಯಾಗಳು ಸೇರಿಕೊಂಡು ಅಭಿವೃದ್ಧಿಪಡಿಸಿದ ಬ್ರಹ್ಮೋಸ್‌ನ ಮಾಹಿತಿಗಳನ್ನು ಡಿಆರ್‌ಡಿಒದ ಉದ್ಯೋಗಿಯೇ ಆಗಿದ್ದ ನಿಶಾಂತ್ ಅಗರ್‌ವಾಲ್ ಎಂಬ ಪಾಕಿಸ್ತಾನದ ಐಎಸ್‌ಐಗೆ ಮಾರಿಕೊಂಡಿದ್ದ. ಇವನನ್ನು ಹನಿಟ್ರ್ಯಾಪ್‌ನಲ್ಲಿ ಸಿಕ್ಕಿಸಲಾಗಿತ್ತು. ಇದೀಗ ವಿಚಾರಣೆ ನಡೆದು ಇವನಿಗೆ 14 ವರ್ಷ ಜೈಲುಶಿಕ್ಷೆಯಾಗಿದೆ. ಇನ್ನು ನಮ್ಮ ಮೂರು ಸಬ್‌ಮರೀನ್‌ಗಳು, ಯುದ್ಧವಿಮಾನ ವಾಹಕ ನೌಕೆಗಳನ್ನು ನಿಯಂತ್ರಿಸುವ ನೌಕಾಪಡೆ ಬೇಸ್ ಇರುವ ವಿಶಾಖಪಟ್ಟಣದಲ್ಲಿ ಸಬ್‌ಮರೀನ್‌ಗಳ ಮಾಹಿತಿ ಕದ್ದು ಐಎಸ್‌ಐಗೆ ನೀಡಲು ಮುಂದಾಗಿದ್ದ ಆರೋಪದಲ್ಲಿ ಕೆಲವರನ್ನು ಸೆರೆಹಿಡಿಯಲಾಗಿದೆ. ಇವರೂ ಈ ರಕ್ಷಣಾ ಸಾಮಗ್ರಿಗಳ ವಹಿವಾಟಿನಲ್ಲಿ ಒಂದಲ್ಲ ಒಂದು ಉನ್ನತ ಸ್ಥಾನದಲ್ಲಿರುವವರೇ. ಒಳ್ಳೆಯ ಉದ್ಯೋಗದಲ್ಲಿರುವವರು, ಮಿಲಿಟರಿಯ ರಹಸ್ಯಗಳನ್ನು ಒಡಲಿನಲ್ಲಿ ಇಟ್ಟುಕೊಂಡವರು ಅದನ್ನು ಇನ್ನೊಂದು ದೇಶಕ್ಕೆ ಮಾರಲು ಯಾಕೆ ಹೊರಡುತ್ತಾರೆ, ಇವರನ್ನು ಹೇಗೆ ಮರಳು ಮಾಡಲಾಗುತ್ತದೆ ಎಂಬುದು ಇನ್ನೊಂದೇ ಕುತೂಹಲಕರ ಸಂಗತಿ.

ಮಧುಕರಣ್ಣನ ಮಾತಲ್ಲಿ ತುರ್ತುಪರಿಸ್ಥಿತಿಯ ಕರಾಳದಿನ!

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ನಾನು ಆಗ ಸಿಂಡಿಕೇಟ್ ಬ್ಯಾಂಕ್‌ನ ಉದ್ಯೋಗಿಯಾಗಿದ್ದೆ. ಆಫೀಸಿನಲ್ಲಿ, ನೆರೆಹೊರೆಯಲ್ಲಿ ಗುಸುಗುಸು ಸುದ್ದಿ ಹರಿದಾಡುತ್ತಿತ್ತು. ನ್ಯಾಯಾಲಯದ ತೀರ್ಪು ಇಂದಿರಾಗಾಂಧಿ ವಿರುದ್ಧ ಬಂದಿದ್ದರಿಂದ, ದೇಶದಲ್ಲಿ ಏನೋ ಒಂದು ಕಠಿಣ ನಿರ್ಧಾರ ಕೈಗೊಳ್ಳಲಿದ್ದಾರೆ ಎಂಬ ಮಾಹಿತಿ ಜೋರಾಗಿಯೇ ಹರಿದಾಡುತ್ತಿತ್ತು ಎಂದು ತಮ್ಮ ನೆನಪಿನಬುತ್ತಿ ಬಿಚ್ಚಿಡುತ್ತ ಹೋದರು ಹಿರಿಯ ಜೀವ ಮಧುಕರ ನಾಯಕ್. ಅಪ್ರತಿಮ ದೇಶಪ್ರೇಮಿ, ಜನಸೇವೆಗೆಂದೇ ಇಡೀ ಜೀವನವನ್ನು ಮುಡಿಪಾಗಿಟ್ಟ ಸೇವಾಜೀವಿ!

ಈ ದೇಶಕಂಡ ಅತ್ಯಂತ ಕರಾಳದಿನವೆಂದರೆ ಅದು, ಇಂದಿರಾ ಗಾಂಧಿ ಹೇರಿದ ತುರ್ತು ಪರಿಸ್ಥಿತಿ. ನವ ಯುವಕರಿಂದ ಹಿಡಿದು ಇಳಿವಯಸ್ಸಿನವರೂ ಈ ಒಂದು ಕರಾಳತೆಗೆ ನಲುಗಿಹೋದರು. ಅಮಾಯಕರು ಜೀವತೆತ್ತರು, ದೇಶದ ತುಂಬೆಲ್ಲ ಲಕ್ಷೋಪಲಕ್ಷ ಜನರ ಬಂಧನವಾಯಿತು. ದೇಶದ ಚಿಂತಕರನ್ನು, ಹೋರಾಟಗಾರರನ್ನು, ರಾಜಕಾರಣಿಗಳನ್ನು ಸೆರೆಮನೆಗೆ ದೂಡಲಾಯಿತು. ಕೊನೆಗೆ ಪತ್ರಿಕೋದ್ಯಮವನ್ನೂ ಹತ್ತಿಕ್ಕಲಾಯಿತು. ರಾಷ್ಟ್ರಮಟ್ಟದಲ್ಲಿ ಜಯಪ್ರಕಾಶ ನಾರಾಯಣ, ವಾಜಪೇಯಿ, ಅಡ್ವಾಣಿ, ಜಾರ್ಜ್ ಫರ್ನಾಂಡಿಸ್, ದಂಡವತೆ ಸೇರಿದಂತೆ ಮುಂಚೂಣಿ ನಾಯಕರು ತತಕ್ಷಣವೇ ಬಂಧಿಸಲ್ಪಟ್ಟರು. ಕರ್ನಾಟಕದಲ್ಲಿ ಭಾವುರಾವ್ ದೇಶಪಾಂಡೆ, ಮೈಕಲ್ ಫರ್ನಾಂಡಿಸ್, ಲಾರೆನ್ಸ್ ಫರ್ನಾಂಡಿಸ್, ಜೆ.ಎಚ್.ಪಟೇಲ್, ಎಚ್.ಡಿ.ದೇವೇ ಗೌಡರಂತಹ ನಾಯಕರು ಬಂಧಿಸಲ್ಪಟ್ಟರು. ಆಗ, ಜನಸಾಮಾನ್ಯರು, ವಿದ್ಯಾರ್ಥಿಗಳು ಮುಂಚೂಣಿ ಹೋರಾಟವನ್ನು ಕೈಗೆತ್ತಿಕೊಂಡರು. ಇಂತಹ ಸಮಯದಲ್ಲಿ ನನ್ನಂತಹ ಅದೆಷ್ಟೋ ತರುಣರು, ರಾಷ್ಟ್ರೀಯ ಸ್ವಯಂಸೇವಕ ಕಾರ್ಯಕರ್ತರು ಗುಪ್ತವಾಗಿ ವಿವಿಧ ರೂಪದ ಚಳುವಳಿಯಲ್ಲಿ ಪಾಲ್ಗೊಂಡಿದ್ದವು.

ಜೂನ್ 25ರಂದು ತುರ್ತುಪರಿಸ್ಥಿತಿ ಹೇರಿದ ಬಳಿಕ, ಪೊಲೀಸರು ಕಠಿಣ ಕ್ರಮ ಕೈಗೊಳ್ಳುತ್ತಾರೆಂದು ತಿಳಿದಿದ್ದರಿಂದ, ಕಾರ್ಯಕರ್ತರು ಸೇರಿದಂತೆ ನಾವೆಲ್ಲ ಭೂಗತರಾಗಿದ್ದವು. ನಮ್ಮ ಕೆಲ ಹಿರಿಯರನ್ನು ಭೇಟಿ ಮಾಡಲು ನಾಯಕರುಗಳು ಊರಿಗೆ ಬರುತ್ತಿದ್ದುದರಿಂದ, ಅವರನ್ನು ಗುಪ್ತವಾಗಿ ಕರೆದುಕೊಂಡುಬರುವ ಮತ್ತು ಬೇರೊಂದು ಊರಿಗೆ ಸುರಕ್ಷಿತವಾಗಿ ಕಳುಹಿಸಿಕೊಡುವ ಹೊಣೆಯೂ ನನ್ನದಾಗಿತ್ತು. ಇದೆಲ್ಲವನ್ನು ಯಶಸ್ವಿಯಾಗಿ ಮಾಡುತ್ತಾ ಬರುತ್ತಿದ್ದೆ. ಇದೆಲ್ಲವೂ ಪೊಲೀಸಿನವರಿಗೆ ತಿಳಿಯಿತು. ನನ್ನ ಮೇಲೆ ತೀವ್ರ ನಿಗಾ ಇಡಲು ಶುರು ಮಾಡಿದರು. ರಾತ್ರಿಯಲ್ಲಿ ಎಲ್ಲೆಲ್ಲೋ ಕೆಲಸ ಮಾಡುವುದು, ಊಟದ ವ್ಯವಸ್ಥೆ, ಹೋರಾಟಗಾರರಿಗೆ ವಸತಿ, ಉಳಿದುಕೊಳ್ಳಲು ಜಾಗ, ಅವರ ಗುಪ್ತಸಭೆಯ ಭಾಷಣಗಳನ್ನು ಏರ್ಪಡಿಸುವುದು ಇತ್ಯಾದಿ ಇರುತ್ತಿತ್ತು. ಹಗಲಿನಲ್ಲಿ ಎಂದಿನಂತೆ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿರುತ್ತಿದ್ದೆ ಎಂದು ತಮ್ಮ ಹೋರಾಟದ ಕಿಚ್ಚನ್ನು ಬಿಚ್ಚಿಟ್ಟರು ಸಂಘದ ಕಾರ್ಯಕರ್ತರ ಅಕ್ಕರೆಯ ಅಣ್ಣ, ಮಧುಕರಣ್ಣ!

ನಿರಂಕುಶಾಡಳಿತ ಹೇರಿಕೆ ವಿರೋಧಿಸಿ, ತಡರಾತ್ರಿಯಲ್ಲಿ ಹೊರಟು, ಪೇಂಟಿನಲ್ಲಿ ಗೋಡೆಬರಹಗಳನ್ನು ಬರೆಯುವುದು, ಕೈಬರಹದ ಹಾಳೆಗಳನ್ನು ಬಹಿರಂಗವಾಗಿ ದೊಡ್ಡದೊಡ್ಡ ಗೋಡೆಗಳ ಮೇಲೆ ಅಂಟಿಸುವುದು, ಸರಕಾರಿ ಕಚೇರಿ, ಕಟ್ಟಡಗಳ ಗೋಡೆಗೆ, ಜಿಲ್ಲಾಧಿಕಾರಿಗಳ, ಪೊಲೀಸ್ ಅಧಿಕಾರಿಗಳ ಕಚೇರಿಗಳ ಕಾಂಪೌಂಡು, ಹೊರಗೋಡೆಗಳ ಮೇಲೆ ತೀವ್ರವಾಗಿ ವಿರೋಧಿಸಿ, ಕಠಿಣ ಶಬ್ದಗಳಲ್ಲಿ ಬರೆದಿರುತ್ತಿದ್ದವು. ಇದೆಲ್ಲ ಮಂಗಳೂರು ಆಡಳಿತಕ್ಕೆ, ಪೊಲೀಸಿನವರಿಗೆ ದೊಡ್ಡ ತಲೆಬಿಸಿಗೆ ಕಾರಣವಾಯಿತು. ಎರಡು ಕಡೆ ಬಹಳ ಗಂಭೀರ ಪರಿಸ್ಥಿತಿಯಲ್ಲಿ ಪೊಲೀಸರ ಕೈಗೆ ಸಿಕ್ಕುವ ಅವಕಾಶವಿತ್ತು, ಆದರೂ ನಾನು ಅವರಿಗೆ ಸಿಕ್ಕಲಿಲ್ಲ.

ನಾವೆಲ್ಲ ಆವಾಗ ದೇಶದ ಕ್ರಾಂತಿಕಾರಿಗಳನ್ನು ಓದಿಕೊಂಡಿದ್ದವಲ್ಲ. ಹಾಗಾಗಿ, ನಾವೂ ಅವರನ್ನು ನಮ್ಮ ಮೇಲೆ ಆಹ್ವಾನಿಸಿಕೊಂಡಂತೆ ಕಾಂಪೌಂಡುಗಳನ್ನು ಜಿಗಿಯುವುದೋ, ಆಳದ ಕಂದಕಕ್ಕೆ ಹಾರುವುದೋ, ಕಲ್ಲುಮುಳ್ಳುಗಳನ್ನು ಲೆಕ್ಕಿಸಿದೆ ಪರಾರಿಯಾಗುವುದೋ ಮಾಡುತ್ತಿದ್ದವು. ಸ್ಥಳೀಯ ಪೊಲೀಸರು ನಮ್ಮ ಹಿಂದೆ ನಿರಂತರ ಬೆನ್ನುಬಿದ್ದ ಕಾರಣ, ನಾವು ನಮ್ಮ ಕಾರ್ಯಚಟುವಟಿಕೆಯನ್ನು ಬದಲಾಯಿಸಿಕೊಂಡೆವು. ಭೂಗತವಾಗುತ್ತಿದ್ದ ಜಾಗಗಳನ್ನು ಆಗಾಗ ಬದಲಾಯಿಸುತ್ತಿದ್ದೆವು.

ಇದೇ ಸಂದರ್ಭದಲ್ಲಿ ಕಹಳೆ ಕೈಬರಹ ಪತ್ರಿಕೆ ಹೊರಬರುತ್ತಿತ್ತು. ಇಡೀ ರಾತ್ರಿ ಕುಳಿತು ಸುದ್ದಿಮೂಲ, ರೆಕಾರ್ಡ್‌ಗಳನ್ನು ಅಧ್ಯಯನ ಮಾಡಿ, ವಿಷಯ ಜೋಡಿಸಿ, ಪತ್ರಿಕೆಯನ್ನು ಕಾಪಿಗಳನ್ನಾಗಿಸುವ ಕೆಲಸವನ್ನೂ ಮಾಡುತ್ತಿದ್ದೆವು. ಡಾ. ಮಾಲಭಂಡಾರ ಮನೆಯಲ್ಲಿ ಎಲ್ಲ ಲೈಟುಗಳನ್ನು ಆರಿಸಿ, ಮಧ್ಯ ಕೋಣೆಯಲ್ಲಿ ಕುಳಿತು ಅಚ್ಚುಬರಹದ ಕೆಲಸಗಳನ್ನು ಮಾಡುತ್ತಿದ್ದೆವು. ಇದು ಹೇಗೋ ಪೊಲೀಸಿನವರಿಗೆ ಗೊತ್ತಾಗಿ, ನನಗೆ ನೇರ ಎಚ್ಚರಿಕೆ ಕೊಟ್ಟು, 'ನೋಡಿ ಮಧುಕರ್, ಇನ್ನೊಂದು ಬಾರಿ ನಿಮ್ಮ ಹೆಸರು ಯಾವುದರಲ್ಲಾದ್ರೂ ಬಂದರೆ, ನಿಮ್ಮನ್ನ ನೇರ ಎತ್ತಾಕೊಂಡು ಹೋಗುತ್ತೇವೆ' ಎನ್ನುತ್ತಿದ್ದರು. ಕೆಲ ಸ್ಥಳೀಯ ಪೊಲೀಸಿನವರಿಗೂ ನಾನು ಪೂರ್ವ ಪರಿಚಯ ಇದ್ದಿದ್ದರಿಂದ, 'ಒಳ್ಳೆಯ ಜನರಿದ್ದೀರಿ, ಯಾಕೆ ಈ ವ್ಯವಸ್ಥೆಯ ವಿರುದ್ಧ ಹೋಗುವುದು, ಕೆಲಕಾಲ ಸುಮ್ಮನಿದ್ದುಬಿಡಿ' ಎಂಬ ಕಿವಿಮಾತು ಹೇಳುತ್ತಿದ್ದರು.

ನಾವು ಅಶೋಕ ನಗರದ ಗುಡ್ಡೆ ಮೇಲೆ ಭಾಸ್ಕರ ಅಂಡ್ ಸನ್ಸ್ ಎಂಬ ಸೈಕಲ್ ಶಾಪ್‌ನಲ್ಲಿ ಮುದ್ರಣದ ಕಾರ್ಯವನ್ನು ಸ್ಥಳಾಂತರ ಮಾಡಿದೆವು. ಸೈಕಲ್ ಶಾಪ್ ಆಗಿದ್ದರಿಂದ ನಮ್ಮ ಕಾರ್ಯಕ್ಕೆ ಯಾವ ಅಡೆತಡೆಯು ಇದ್ದಿರಲಿಲ್ಲ. ಜೊತೆಗೆ, ನಮ್ಮ ಕಾರ್ಯಕರ್ತರ ಸೇವೆಯಲ್ಲಿ, ಸಂಘದಡಿಯಲ್ಲಿ ವಿನಮ್ರನಾಗಿ ದುಡಿದಿದ್ದರಿಂದ, ನಾನು ಹೋದಲೆಲ್ಲ ತಮ್ಮ ಮನೆಮಗನಂತೆ ನನ್ನನ್ನು ಕಾಣುತ್ತಿದ್ದರು. ಕೆಲವೆಡೆ ರಾತ್ರಿ ತಂಗಲು ಗುಪ್ತ ಜಾಗ ಸಿಗುತ್ತಿತ್ತು. ಊಟ ವಸತಿ ಅದ್ಹೇಗೋ ನಡೆದುಬಿಡುತ್ತಿತ್ತು.

ಇನ್ನೊಂದು ವಿಚಾರ ಏನಂದರೆ, ಕಹಳೆ ಪ್ರಿಂಟ್ ಅಂದರೆ ಅದು ಕೈಬರಹದ ನೂರಾರು ಕಾಪಿಗಳನ್ನು ಆ ಕ್ಷಣ ಬರೆದು ತಯಾರು ಮಾಡುವುದಾಗಿತ್ತು. ಈ ಒಂದು ಹೋರಾಟದಲ್ಲಿ ನಮಗೊಂದು ಸೂಚನೆಯಿತ್ತು. ನಿರಂಕುಶ ಆಡಳಿತ ವಿರೋಧಿಸಿ, ಬರೆಯುವ ಪೋಸ್ಟರ್ ಹಾಗೂ ಗೋಡೆಬರಹಗಳನ್ನು ಮೊದಲ ಆದ್ಯತೆಮೇರೆಗೆ ಡೆಪ್ಯೂಟಿ ಕಲೆಕ್ಟರ್, ಎಸ್.ಪಿ ಕಚೇರಿಗಳು, ಕಾಂಗ್ರೆಸ್ ಪಕ್ಷದ ದೊಡ್ಡ ದೊಡ್ಡ ಲೀಡರುಗಳ ಮನೆಗೆ ಮೊದಲು ಹಾಕಲೇಬೇಕಿತ್ತು.

ಇಲ್ಲಿ ಒಂದು ಪ್ರಮುಖ ವಿಚಾರ ನಿಮಗೆ ಹೇಳುತ್ತೇನೆ. ನಾವು ಎಂದೂ, ಎಲ್ಲಿಯೂ ಸುಳ್ಳು ಬರಹ, ಸುಳ್ಳು ಆರೋಪವಾಗಲಿ, ಕಟ್ಟಿನಿಂದನೆ ವಿಚಾರವನ್ನಾಗಲಿ ಹಾಕುತ್ತಿರಲಿಲ್ಲ. ಮುಖಕ್ಕೆ ಹೊಡೆದಂತೆ ಸತ್ಯವಿಷಯಗಳನ್ನು ಕೇವಲ ಕೈಬರಹದ ಪ್ರತಿಗಳನ್ನು ತಯಾರಿಸಿ, ಎಲ್ಲೆಲ್ಲಿ ತಲುಪಿಸಿ ನಮ್ಮ ಹೋರಾಟ, ಪ್ರತಿಭಟನೆ ತೋರಬೇಕೋ ಅಲ್ಲಿಗೆ ತಲುಪಿಸಿಯೇ ತೀರುತ್ತಿದ್ದವು. ಇಂತಹ ಒಂದು ವಾಸ್ತವಿಕ ಪ್ರಜ್ಞೆಯ ನೆಲೆಗಟ್ಟಿನಲ್ಲಿ ಮಾಡುತ್ತಿದ್ದ ನಮ್ಮ ಹೋರಾಟದಿಂದ ದೇಶದಲ್ಲಿ, ರಾಜ್ಯದ ಇತರೆ ಭಾಗದಲ್ಲಿ ಏನು ನಡೆಯುತ್ತಿದೆ. ಜನಪರರು ಯಾರು, ಎಲ್ಲಿ, ಏನು ಮಾಡುತ್ತಿದ್ದಾರೆ ಎಂಬೆಲ್ಲ ಮಾಹಿತಿಗಳು ಜನಸಾಮಾನ್ಯರಿಗೆ ಸರಾಗವಾಗಿ ತಲುಪುತ್ತಿದ್ದವು. ಇದು ಪೊಲೀಸರಿಗೆ ಬಹುದೊಡ್ಡ ತಲೆನೋವು ಕೊಟ್ಟಿತು. ಮೇಲಿನವರಿಂದ 'ಈ ಭೂಗತ ತಂಡವನ್ನು ಹೇಗಾದರೂ ಸರಿಯೇ ಬಂಧಿಸಿ ಜೈಲಿಗಟ್ಟಿ' ಎಂಬ ಕಠಿಣ ಆಜ್ಞೆ ಪಾಸುಮಾಡಿದ್ದಾರೆಂದು ನಮಗೆ ತಿಳಿಯಿತು. ಆದರೂ, ನಮ್ಮ ಕೆಲಸವನ್ನು ನಾವು ಜಾಗ್ರತೆಯಿಂದ ಮಾಡುತ್ತಿದ್ದೆವು. ಇದನ್ನು ನಾವು ರಾಷ್ಟ್ರಯಜ್ಞ ಎಂದು ಪರಿಭಾವಿಸಿದ್ದೆವು.

ಹಗಲು ಹೊತ್ತಿನಲ್ಲಿ, ಮೈದಾನದಲ್ಲಿ ಫುಟ್ಬಾಲ್ ಆಡುವುದು, ಇತರೆ ಶ್ರಮದ ಚಟುವಟಿಕೆಯಲ್ಲಿ ತೊಡಗುವುದು ಸೇರಿದಂತೆ ದೇಹದಾರೋಗ್ಯದ ಕಡೆಗೂ ನಮ್ಮ ಗಮನವಿರುತ್ತಿತ್ತು. ಕೆಲವೊಮ್ಮೆ ಸರಿಯಾದ ಊಟ ಸಿಗದೆ, ಊರಿಂದ ಊರಿಗೆ ಹೋಗುವ ಸಂದರ್ಭದಲ್ಲಿ ಕೆಲದಿನಗಳವರೆಗೆ ಉಪವಾಸವಿದ್ದ ಸಂದರ್ಭಗಳನ್ನೂ ನಾವು ಎದುರಿಸಿದ್ದೇವೆ. ಇಷ್ಟರಲ್ಲಾಗಲೇ ದೇಶಾದ್ಯಂತ ಸತ್ಯಾಗ್ರಹ ಘೋಷಣೆಯಾಗಿತ್ತು. ಹಾಗಾಗಿ, ನಮ್ಮ ಹಿರಿಯರ ಮುಂದಾಳತ್ವದಲ್ಲಿ ವಿರೋಧಿ ಜಾಥಾ, ಪ್ರತಿಭಟನೆಗಳು ನಗರದಲ್ಲಿ ನಡೆಯುತ್ತಿದ್ದವು. ಪ್ರತಿಭಟನೆಯ

ನೇತೃತ್ವ ವಹಿಸುತ್ತಿದ್ದ ನಾಯಕರನ್ನು ಬಂಧಿಸುವುದು ಪೊಲೀಸರ ಕಾರ್ಯಯೋಜನೆಯಾಗಿತ್ತು. ಅವರ ಎಲ್ಲ ಯೋಜನೆಗಳನ್ನು ತಲೆಕೆಳಗಾಗುವಂತೆ ನಾವು ಪ್ರತಿಯೋಜನೆ ರೂಪಿಸುತ್ತಿದ್ದೆವು.

ಬೆಳಿಗ್ಗೆ 11ಕ್ಕೆ ಕಾರ್ಯಕ್ರಮ ನಿಗದಿಯಾದರೆ, ಅದು ನಿಗದಿತ ಸಮಯಕ್ಕೆ ನಡೆಯುತ್ತಿತ್ತು. ಮುಂದಾಳತ್ವವಹಿಸಿದ ನಾಯಕರು ಬಂದು ಸಮಯಕ್ಕೆ ಸರಿಯಾಗಿ ಸಭೆ ಉದ್ದೇಶಿಸಿ ಭಾಷಣ ಮಾಡಿ ಮತ್ತೆ ಭೂಗತರಾಗುವಂತೆ ನಾವು ವ್ಯವಸ್ಥೆ ಮಾಡಿರುತ್ತಿದ್ದೆವು. ಕೆಲವೆಡೆ ಮಾಲಭಂಡಾರ ಅವರು ಭಾಷಣ ಮಾಡುತ್ತಿದ್ದರು, ಮತ್ತೊಂದೆಡೆ ಆನಂದ ಶೆಟ್ಟಿಯವರ ಭಾಷಣವಿರುತ್ತಿತ್ತು. ಇಷ್ಟೆಲ್ಲ ವ್ಯವಸ್ಥಿತವಾಗಿ ಯಾರು ಕಾರ್ಯಕ್ರಮ ಯೋಜನೆ ಮಾಡುತ್ತಿದಾರೆಯೋ ಅವರನ್ನು ಹಿಡಿಯಲೇಬೇಕೆಂದು ಕಟ್ಟಾಜ್ಞೆಯಾಯಿತು. ನಾನು ಬ್ಯಾಂಕ್‌ಗೆ ಹೋಗದೆ ಸುಮಾರು 18 ದಿನಕ್ಕೂ ಮೇಲಾಗಿತ್ತು. ಆಗ, ನಾನು ಕದ್ರಿ ವಿಭಾಗದ ಬ್ಯಾಂಕ್‌ನಲ್ಲಿ ನಿಯುಕ್ತನಾಗಿದ್ದೆ. ಮಣಿಪಾಲ್ ಮುಖ್ಯ ಕಚೇರಿಗೆ ದೂರು ಹೋಯಿತು. ಮಣಿಪಾಲ್ ನಿಂದ ನನಗೆ ಕರೆಬಂದು, ಕಚೇರಿಗೆ ಹೋಗಿ ಸಹಿಮಾಡಿ ಎಂದಾಗ, ನಾನು ಅದರಂತೆ ಬ್ಯಾಂಕ್‌ಗೆ ಹೋದೆ. ಅಲ್ಲಿ, ಎಸ್‌ಪಿ ಕಚೇರಿಯ ಅಧಿಕಾರಿಯೊಬ್ಬರು ಕುಳಿತಿದ್ದರು. 'ಬಾ..., ನಿಮ್ಮನ್ನು ಕರೆತರಲು ಹೇಳಿದ್ದಾರೆ' ಎಂದಾಗ, ನಾನು ನಿರಾಕರಿಸಿದೆ. ಬ್ಯಾಂಕಿನ ಮ್ಯಾನೇಜರ್ ಪುತ್ರನ್ ಕೂಡ ಕಳಿಸಲು ನಿರಾಕರಿಸಿದರು. ಆಗ ಬಲವಂತವಾಗಿ ಎಳೆದುಕೊಂಡು ಹೋದರು. ಪುತ್ರನ್, ಮಣಿಪಾಲ್ ಮುಖ್ಯ ಕಚೇರಿಗೆ ಫೋನ್ ಮಾಡಿ ನನ್ನ ಅರೆಸ್ಟ್ ಮಾಡಿದ ವಿಚಾರ ತಿಳಿಸಿದರು.

ಮಣಿಪಾಲ್ ಕಚೇರಿಯಿಂದ ಉಳಿದ ಶಾಖೆಗಳಿಗೆ ಈ ಸುದ್ದಿ ತಲುಪುವಂತೆ ನೋಡಿಕೊಂಡಿದ್ದರಿಂದ, ನನ್ನನ್ನು ಬಂಧಿಸಿದ ಸುದ್ದಿ ಬಹಿರಂಗವಾಯಿತು, ಜನರಿಗೆಲ್ಲ ತಿಳಿಯಿತು. ಇಲ್ಲದಿದ್ದರೆ ಜೀವಾಘಾತವಾಗುತ್ತಿತ್ತೇನೋ ಎಂಬ ವಿಚಾರ ಮನಪಟಲದಲ್ಲಿ ಇಂದಿಗೂ ಹರಿದಾಡುತ್ತಿದೆ. ನನ್ನನ್ನು ಪಾಂಡೇಶ್ವರ ಪೊಲೀಸ್ ಸ್ಟೇಷನ್‌ನಲ್ಲಿ ನನ್ನನ್ನು ಅರ್ಧಗಂಟೆ ಕೂರಿಸಲಾಯಿತು. ಮತ್ತೆ ಇಲ್ಲಿಂದ ಬ್ರಿಟಿಷರ ಕಾಲದಲ್ಲಿ ನಿರ್ಮಿಸಿದ್ದ, ಬಂದರು ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಅಗಲಪಟ್ಟಿ ಬೆಲ್ಟ್‌ನಿಂದ ಹೊಡೆಯುವುದು, ಎರಡೂ ಕೈಗಳ ಮಧ್ಯೆ ಲಾಟಿಯಿಟ್ಟು ಹಗ್ಗದಿಂದ ಕಟ್ಟಿ ಹೊಡೆಯುವುದು ಸೇರಿದಂತೆ ಇಲ್ಲಿ ನನಗೆ ವಿಪರೀತ ಚಿತ್ರಹಿಂಸೆ ಕೊಡಲಾಯಿತು. ಮೇಲೆ ಯಾವ ಗಾಯವೂ ಆಗುತ್ತಿರಲಿಲ್ಲ, ಆದರೆ ದೇಹದೊಳಗೆ ವಿಪರೀತ ನೋವುಗಳು, ಪೆಟ್ಟುಗಳು ಸಹಿಸಲಸಾಧ್ಯವಾಗಿದ್ದವು.

ನಾವು ಹಿಂದೆ ಆಯೋಜಿಸಿದ್ದ ಯಶಸ್ವಿ ಪ್ರತಿಭಟನೆ, ಬಹಿರಂಗ ಭಾಷಣ ಕಾರ್ಯಕ್ರಮಗಳು ಇವರಿಗೆ ಇನ್ನಿಲ್ಲದ ಸಿಟ್ಟು ತರಿಸಿತ್ತು. ನಾಳೆ ಮತ್ತು ಇನ್ನುಂದೆ ಯಾವೆಲ್ಲ ಯೋಜನೆಗಳನ್ನು ಹಾಕಿಕೊಂಡಿದ್ದೀರಿ, ಕಹಳೆ ಪತ್ರಿಕೆ ಹಿಂದಿರುವ ಎಲ್ಲರ ಮಾಹಿತಿ, ನಾಯಕರೆಲ್ಲ ಎಲ್ಲೆಲ್ಲಿ ಭೂಗತರಾಗಿದ್ದಾರೆ ಅವರ ಮಾಹಿತಿಕೊಡಿ ಎಂದಾಗ, ನಾನು ಸಂಪೂರ್ಣ ನಿರಾಕರಿಸಿದ್ದೆ. ಹಾಗಾಗಿ, ಚಿತ್ರಹಿಂಸೆಯ ದಾರಿ ಹಿಡಿದಿದ್ದರು.

ಏರೋಪ್ಲೇನ್ ರೀತಿಯಲ್ಲಿ ನನ್ನನ್ನು ಕಟ್ಟಿಹಾಕಿದ ಜಾಗ ಮೇಲಿತ್ತು. ಕೆಳಗೆ ದೊಡ್ಡದಾದ ತಡೆಗೋಡೆ, ಮುಂದೆ ಬಯಲು. ಇವರು ನೋಡಿದರೆ ಪ್ರಾಣ ತೆಗೆಯದೆ ಬಿಡಲಾರರು ಅನಿಸುತ್ತದೆ. ಬದುಕುವ ದಾರಿಯೆಂತು ಎಂದೆನಿಸುತ್ತಿರುವಾಗಲೇ ಬ್ಯಾಂಕಿನಿಂದ ಅರೆಸ್ಟ್ ಮಾಡಿ ಕರೆದುಕೊಂಡು ಬಂದಿದ್ದ ಅಧಿಕಾರಿ ನನ್ನನ್ನು ಅಚಾನಕ್ಕಾಗಿ ಜೋರಾಗಿ ತಳ್ಳಿದರು. ನಾನು ಅಷ್ಟು ಎತ್ತರದಿಂದ ಬಿದ್ದೆ, ಬಲಗಾಲಿಗೆ ಗಂಭೀರ ಪೆಟ್ಟಾಯಿತು. ಎಡಗಾಲು ಪಾದ ಒಡೆದುಹೋಗಿ ರಕ್ತ ವಿಪರೀತ ಸೋರುತ್ತಿತ್ತು. ಕೂಡಲೇ ನನ್ನನ್ನು ಜೀಪಿನಲ್ಲಿ ವೆನ್ಲಾಕ್ ಆಸ್ಪತ್ರೆಗೆ ಕರೆದುಕೊಡು ಹೋಗಲಾಯಿತು. ಅಲ್ಲಿನ ಒಂದು ಸೆಲ್‌ನಲ್ಲಿ ಹಾಕಲಾಯಿತು.

ಆ ಸಮಯದಲ್ಲಿ ಆಸ್ಪತ್ರೆಯ ಜವಾಬ್ದಾರಿ ಹೊತ್ತಿದ್ದ ಡಾ.ಶಾಂತರಾಮ ಶೆಟ್ಟಿ, ಡಾ.ಸುಧಾಕರ್ ಶೆಟ್ಟಿ ಮತ್ತು ಡಾ. ಉಮಾನಂದ ಮಲ್ಯರಂತಹ ಘನವೈದ್ಯರು ನನ್ನ ಶುಶ್ರೂಷೆಗೆ ನಿಂತರು. ಅರವಳಿಕೆ ಮದ್ದುನೀಡಿ, ಕೆಲ ಶಸ್ತ್ರಚಿಕಿತ್ಸೆಯೂ ಮುಗಿದವು. ಪ್ರಜ್ಞೆ ಬಂದಾಗ, ನನ್ನ ಸುತ್ತ ದೊಡ್ಡದೊಡ್ಡ ಅಧಿಕಾರಿಗಳು, ಎಸ್.ಪಿ. ಕುಳಿತು, ಒಂದೇ ಸಮನೆ ವಿಚಾರಿಸಿದರು. ಸತ್ಯ ಬಾಯಿಬಿಡಿಸುತ್ತಾರೆಂದು (ಚಂದ್ರಶೇಖರ್ ಆಜಾದ್ ಅವರ ಬದುಕಿನ ಘಟನೆ ಗೊತ್ತಿತ್ತಲ್ಲ! ಹಾಗಾಗಿ) ನನಗೇನು ಗೊತ್ತಿಲ್ಲವೆಂದೇ ಹೇಳುತ್ತ ಪ್ರಾರ್ಥನೆ ಮಾಡಿಕೊಂಡು ಮಲಗಿದ್ದೆ. ಶಸ್ತ್ರಚಿಕಿತ್ಸೆಯಾದ ಕಾರಣ, ಕೆಲ ತಿಂಗಳು ಕಾಲ ವಿಶ್ರಾಂತಿ ಪಡೆಯಬೇಕಾಯಿತು. ನಂತರ, ನನ್ನ ಬಗ್ಗೆ ಗಂಭೀರ ತನಿಖೆ ನಡೆಯಲಿಲ್ಲ. ಅಷ್ಟರಲ್ಲಿ ತುರ್ತುಪರಿಸ್ಥಿತಿ ಮುಗಿದು, ಚುನಾವಣೆಗೆ ತಯಾರಿ ನಡೆಯುತ್ತಿದ್ದವು. ಇದಿಷ್ಟು ಕಾಂಗ್ರೆಸ್ ಮತ್ತು ಇಂದಿರೆಯ ತುರ್ತುಪರಿಸ್ಥಿತಿಯ ಕರಾಳದಿನಗಳ ನೆನಪುಗಳು ಎಂದು ತಮ್ಮ ಅಂದಿನ ಹೋರಾಟದ ಹಾದಿಯನ್ನು ನಮ್ಮೊಂದಿಗೆ ಹಂಚಿಕೊಂಡರು. ಸಂಘಕ್ಕೆ ಸೇರುವ ಯುವ ಕಾರ್ಯಕರ್ತರಿಗೆ ಮಂಗಳೂರು ವಿಭಾಗದಲ್ಲಿ ಒಂದಿಷ್ಟು ಹಿರಿಯ, ಮಹಾನುಭಾವಿ ಮಾರ್ಗದರ್ಶಿಗಳಿದ್ದಾರೆ. ಅಂಥವರಲ್ಲಿ ಎಲ್ಲರ ಪ್ರೀತಿಯ ಮಧುಕರಣ್ಣ ಕೂಡ ಒಬ್ಬರು.

ಅಪರಿಚಿತರನ್ನೂ ಸಹ ಎಷ್ಟೋ ವರ್ಷಗಳಿಂದ ತಮ್ಮವರೆ ಎಂಬಂತೆ ಮಾತಾಡಿಸಿ ಆಪ್ಯಾಯಮಾನ ಪ್ರೀತಿ ತೋರುವ, ಇಂದಿಗೂ ತಾವು ಅನುಭವಿಸಿದ ನೋವುಗಳ ಜೊತೆಗೆ, ಅಂದಿನ ಸಮಾಜ ಜಾಗೃತಿಗೆ, ಯುವಜನತೆಯೊಂದಿಗೆ ಒಗ್ಗೂಡಿ ಹೋರಾಡಿದ ಕಿಚ್ಚು, ಈ ಇಳಿವಯಸ್ಸಿನ ಕಣ್ಣಂಚಿನಲ್ಲೂ ಕಿಡಿರೂಪದಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು!

ಪ್ರಸ್ತುತ

ಡಾ. ಕರವೀರಪ್ರಭು ಕ್ಯಾಲಕೊಂಡ

ಮಾದಕವಸ್ತು ಬಳಕೆ: ಸಮಾಜಕ್ಕೆ ಶಾಪ

ಸಾಮಾಜಿಕ ಬದುಕನ್ನೇ ಕುಲಗೆಡಿಸಿ ಭಯಂಕರವಾದ ಒಂದು ರಾಷ್ಟ್ರೀಯ ಸಾಂಕ್ರಾಮಿಕ ರೋಗವಾಗುತ್ತಿರುವ ಮಾದಕ ವಸ್ತು ಸೇವನೆ ಈಗಾಗಲೇ ನಮ್ಮ ದೇಶದ ನಗರಗಳನ್ನು ಕಬಳಿಸ ತೊಡಗಿದೆ. ಜನತೆ ಜಾಗೃತವಾಗದಿದ್ದಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಈ ಸಾಂಕ್ರಾಮಿಕ ರೋಗವು ದೇಶದ ಸಣ್ಣ ಪುಟ್ಟ ಹಳ್ಳಿಗಳಿಗೂ ಹರಡಿ ತಲೆಮಾರೊಂದು ಅದರ ಕರಿನೆರಳಲ್ಲಿಯೇ ಬದುಕಬೇಕಾದೀತು. ಮಾದಕವಸ್ತು ವ್ಯಕ್ತಿಯ ಮಾನವೀಯ ಮೌಲ್ಯಗಳನ್ನು ದೂರ ಇರಿಸುತ್ತದೆ. ಸುಖ, ಶಾಂತಿ, ಆನಂದವು ಮಾನವ ಜೀವನದ ಪ್ರಬಲ ಆಸೆಗಳು, ಆಕರ್ಷಣೆಗಳು ಎಂದಿದ್ದಾನೆ ಪ್ರಸಿದ್ಧ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್.

ಚಟಕ್ಕೆ ಬಲಿಬೀಳುವವರ ಯಾರು?: ಕಲಿತ ಚಟಕ್ಕೆ ಕಲ್ಲು ಹಾಕಿದರೂ ಬಿಡುವುದಿಲ್ಲ ಎಂಬುದು ಮತ್ತಿನ ವಸ್ತುಗಳ ವಿಷಯದಲ್ಲಂತೂ ಸತ್ಯ. ಬಹಳ ಮಂದಿ ಆಗೊಮ್ಮೆ ಈಗೊಮ್ಮೆ ಮೋಜಿಗಾಗಿ, ಕುತೂಹಲಕ್ಕಾಗಿ, ಖುಷಿಗಾಗಿ ಮಾದಕವಸ್ತುಗಳನ್ನು ಸೇವಿಸುತ್ತಾರೆ, ಕೆಲವರು ಅದರ ದಾಸರಾಗುತ್ತಾರೆ. ಮಾದಕವಸ್ತುಗಳ ಮಾಯಾಜಾಲದ ವ್ಯಾಮೋಹಕ್ಕೆ ಬಲಿಯಾಗುವವರನ್ನು ಮೊದಲೇ ಗಮನಿಸಿ, ಎಚ್ಚರ ವಹಿಸಿ, ಅವರು ಚಟಕ್ಕೆ ಬೀಳದಂತೆ ಮಾಡಲು ಸಾಧ್ಯವೇ ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ.

ಜೈವಿಕ ಕಾರಣಗಳಿಂದ ಅಥವಾ ಬೆಳೆದ ವಾತಾವರಣದಲ್ಲಿನ ಕೆಟ್ಟ ಮಾದರಿ-ನ್ಯೂನತೆಗಳಿಂದ ಅಥವಾ ತಂದೆ-ತಾಯಿಯರ, ಅನಾರೋಗ್ಯಕರ ದ್ವಂದ್ವ ಧೋರಣೆಯ ಮತ್ತು ತಪ್ಪು ಪ್ರೋತ್ಸಾಹ, ಮಾರ್ಗದರ್ಶನಗಳಿಂದ ವ್ಯಕ್ತಿಯ ವ್ಯಕ್ತಿತ್ವ ಪರಿಪೂರ್ಣವಾಗಿ, ಆರೋಗ್ಯಕರವಾಗಿ ವಿಕಾಸವಾಗುವುದಿಲ್ಲ. ಅವನ ವ್ಯಕ್ತಿತ್ವ ದೋಷಪೂರ್ಣವಾಗಿ ದುರ್ಬಲವಾಗುತ್ತದೆ. ಆತ ವಿಪರೀತ ಸ್ವಾರ್ಥಿ, ಸುಖಲೋಲನಾಗಬಹುದು. ಮೈಮನಸ್ಸುಗಳ ಆಸೆಗಳನ್ನು ಹತೋಟಿಯಲ್ಲಿಡಲು ವಿಫಲನಾಗಬಹುದು. ಇಂಥ ವ್ಯಕ್ತಿಗಳು ಮಾದಕವಸ್ತುವನ್ನು ಸೇವಿಸಲಾರಂಭಿಸಿದರೆ ಅದೊಂದು ಚಟವಾಗಬಲ್ಲದು.

ಸರ್ವಸಾಮಾನ್ಯವಾಗಿ ಎಲ್ಲಡೆ ಉಪಯೋಗದಲ್ಲಿರುವ ಮಾದಕವಸ್ತುಗಳು

1. **ಕೇವಲ ಮಾನಸಿಕ ದಾಸ್ಯತ್ವವನ್ನುಂಟು ಮಾಡುವ ಔಷಧಿಗಳು:** ಕೊಕೇನ್, ಎಲ್.ಎಸ್. ಡಿ, ಸೈಲೋಸೈಬಿನ್, ಮಸ್ಕಾಲಿನ್, ಕೆನಾಬಿಸ್, ನಿಕೋಟಿನ್, ಕೆಫೀನ್
2. ಸಂಪೂರ್ಣ ಮಾನಸಿಕ ಹಾಗೂ ಸಂದೇಹಾಸ್ಪದ ದೈಹಿಕ ದಾಸ್ಯತ್ವವನ್ನುಂಟು ಮಾಡುವ ಔಷಧಿಗಳು.
ಎ. ಅಫೀಮು ಪ್ರತಿರೋಧಕಗಳು: ನಲಾರ್ಫಿನ್, ಲೆವಾಲಾರಫೆನ್, ಸೈಕ್ಲಜೋಸಿನ್.
ಬಿ.ಆಂಫಿಟಮಿನ್‌ಗಳು: ಆಂಫಿಟಮಿನ್, ಮೆಥಾಂಫಿಟಮಿನ್, ಫೆನ್ ಮೆಟ್ರಾಜೈನ್, ಮೀಥೈಲ್ ಫ್ಲೆನಿಡೇಟ್, ಪಿಪ್ರಡಾಲ್
3. ಸಂಪೂರ್ಣ ಮಾನಸಿಕ ಹಾಗೂ ದೈಹಿಕ ದಾಸ್ಯತ್ವವನ್ನುಂಟು ಮಾಡುವ ಔಷಧಿಗಳು
ಎ. ಅಫೀಮು ತರಹದವು: ಮಾರ್ಫಿನ್, ಕೋಡಿನ್, ಡೈಹೈಡ್ರೋ ಮಾರ್ಫಿನಾನ್, ಹೆರಾಯಿನ್, ಪೆಥಡಿನ್, ಮೆಥಾಡೋನ್, ಫೆನಾಜೋಸಿನ್, ಲೋಮೋಟಿಲ್ .
ಬಿ. ಮದ್ಯಸಾರ-ಬಾರ್ಬಿಚುರೇಟ್ ತರಹದವು: ಈಥೈಲ್ ಆಲ್ಕೋಹಾಲ್, ಬಾರ್ಬಿಚುರೇಟ್, ಪೆರಾಲ್ಡಿಹೈಡ್, ಕ್ಲೋರಾಲ್ ಹೈಡ್ರೇಟ್ , ಮೆಪ್ರೋಬಮೇಟ್, ಗ್ಲುಟಥೆಮಿಡ್, ಮಿಥೈಲ್ ಫೈಲಾನ್, ಎಥೀನ್ ಮೈಟ್, ಎಥಾಕ್ಲೋರ್ ವೈನಾಲ್, ಬೆಂಜೋಡಯಾಜಿಪೈನ್ಸ್, ಮೆಥಾಕ್ವಾಲೋನ್.

ಇಂದು ಸಾಮಾನ್ಯವಾಗಿ ದುರುಪಯೋಗವಾಗುತ್ತಿರುವ ಔಷಧಿಗಳಲ್ಲಿ ಮುಖ್ಯವಾದವು ಆರು-ಅಂಫಿಟಮಿನ್, ಕೊಕೇನ್, ಕೆನಾಬಿಸ್ , ಬಾರ್ಬಿಚುರೇಟ್, ಅಫೀಮು, ಎಲ್.ಎಸ್.ಡಿ.

ಕಾರ್ಯನಿರ್ವಹಣೆ : ಇಂಜೆಕ್ಷನ್ ಮೂಲಕವಾಗಲಿ, ಗುಳಿಗೆಗಳನ್ನು ನುಂಗುವುದರಿಂದಾಗಲಿ, ಪಾನೀಯ ಸೇವಿಸುವುದರಿಂದಾಗಲಿ ದೇಹ ಸೇರುವ ಮಾದಕವಸ್ತುಗಳು ಅಂತಿಮ ಹಂತದಲ್ಲಿ ರಕ್ತದಲ್ಲಿ ಸಂಚರಿಸಿ, ಕಾರ್ಯನಿರ್ವಹಣೆಯ ದೇಹದ ಭಾಗದ ಕೇಂದ್ರಗಳಿಗೆ ಲಗ್ಗೆ ಹಾಕುತ್ತವೆ.

ಭ್ರಮಾಲೋಕದ ಬ್ರಹ್ಮಾಂಡದಲ್ಲಿ ಅವು ವಿಹರಿಸುವಂತೆ ಮಾಡುತ್ತವೆ. ಬುದ್ಧಿಮತ್ತೆಯ ಕಾರ್ಯಕಲಾಪಗಳ ಕೇಂದ್ರಗಳಿಗೆ ಕೀಲಿ ಹಾಕಿ, ಭಾವಾವೇಶದ ಬಾನಿನಲ್ಲಿ ಗೊತ್ತುಗುರಿಯಿಲ್ಲದೇ ಗರಿಬಿಚ್ಚಿ ಹಾರಾಡುವ ವಾತಾವರಣ ನಿರ್ಮಿಸುವುದರಿಂದಾಗಿ ಇದಕ್ಕೆ ವೈದ್ಯಕೀಯ ನಿರ್ವಾಣ ಎನ್ನುವರು. ನಿದ್ರಾಜನಕಗಳ ಪರಿಣಾಮಗಳು ಪ್ರಭಾವಶಾಲಿಯಾಗುವಲ್ಲಿ ನೆಮ್ಮದಿಕಾರಕಗಳು ನೆರವಾಗುತ್ತವೆ. ಮಾದಕ ಪಾನೀಯಗಳು ಯಕೃತ್‌ನಲ್ಲಿ ಉತ್ಕರ್ಷಣೆಗೊಳಗಾಗಿ ರಕ್ತದಲ್ಲಿ ಸಂಚರಿಸಿ, ಕೇಂದ್ರ ನರಮಂಡಲದ ಜೀವಕೋಶಗಳಿಗೆ ಮುತ್ತಿಗೆ ಹಾಕಿ, ದೈಹಿಕ ಮಾನಸಿಕ ಚಟುವಟಿಕಾ ಕೇಂದ್ರ, ವಿಚಾರಿಸುವ ಕೇಂದ್ರ, ಮಾತನಾಡುವ ಕೇಂದ್ರ, ಉಷ್ಣ ನಿಯಂತ್ರಣ ಕೇಂದ್ರಗಳ ಮೇಲೆ ಪ್ರಭಾವ ಬೀರಿ, ಕಾರ್ಯನಿರ್ವಹಣೆಯ ನಿಯಂತ್ರಣ ತಪ್ಪಿಸುತ್ತವೆ.

ಪ್ರಾರಂಭದಲ್ಲಿ ಅಲ್ಪ ಸ್ವಲ್ಪ ಪ್ರಮಾಣಕ್ಕೆ ಖುಷಿ ಕೊಡುವ ಮಾದಕವಸ್ತುಗಳು ಆ ಖುಷಿಯನ್ನು ದಿನಗಳೆದಂತೆ ಕೊಡುವಲ್ಲಿ ವಿಫಲವಾಗುತ್ತದೆ. ಮೊದಲಿನ ಖುಷಿಯನ್ನು ಪಡೆಯುವ ಮನೋಭಾವಕ್ಕೆ ಮಣಿದು ಹೆಚ್ಚುಹೆಚ್ಚು ಪ್ರಮಾಣ ಸೇವಿಸುತ್ತ ಹೋಗುವುದು ಅನಿವಾರ್ಯವಾಗುತ್ತದೆ.

ಸ್ವಭಾವತಃ ಯಾರೂ ವ್ಯಸನಿಗಳಲ್ಲ, ಅವರು ಪರಿಸ್ಥಿತಿಯ ಕೈಗೊಂಬೆಯಾಗಿರುವುದು ಸಹಜ. ಮಾದಕವಸ್ತುಗಳು ಸೃಷ್ಟಿಸಿರುವ ಸಮಸ್ಯೆಗಳಿಗೆ ಏಕೈಕ ಉತ್ತರ ಅದನ್ನು ತಡೆಗಟ್ಟುವುದಾಗಿದೆ. ಜಗದ ಜಂಜಾಟದ ಬದುಕಿನಲ್ಲಿ ಜರ್ಜರಿತರಾಗಿ ಮಾದಕವಸ್ತುಗಳ ದಾಳಿಯ ಗಾಳಕ್ಕೆ ಸಿಕ್ಕಿಕೊಳ್ಳಬಾರದು. ಆ ದಿಶೆಯಲ್ಲಿಯ ಪ್ರಯತ್ನದಿಂದ ಅಸಾಧ್ಯವೇನಲ್ಲ ಎಂಬುದು ಸತ್ಯ. ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಬೇಕು. ಇದರಿಂದ ಅಸ್ತಿತ್ವ ಗಟ್ಟಿಗೊಳ್ಳುವುದು. ವ್ಯಕ್ತಿತ್ವ ವಿಕಾಸಗೊಳ್ಳುವುದು.

ಮಾದಕವಸ್ತುಗಳ ಚಕ್ರವ್ಯೂಹ ಭೇದಿಸಿ ಹೊರಗೆ ಬರಲು ಮನಸ್ಸಿನ ದೃಢನಿರ್ಧಾರ ಅತ್ಯಗತ್ಯ, ಮನಸ್ಸಿದ್ದಲ್ಲಿ ಮಾರ್ಗವಿದೆ. ಡ್ರಗ್ ಒಂದು ಗೌಪ್ಯ ದಂದೆ. ಆನ್ ಲೈನ್ ಮೂಲಕ ಮನೆ ಬಾಗಿಲಿಗೆ ಸರಬರಾಜು. ಎಲ್ಲೂ ಸುಳಿವು ಸಿಗದಂತೆ ನಡೆಯುವ ದಂದೆ. ಡ್ರಗ್ ಪೆಡ್ಲರ್‌ಗಳಿಂದ ದಾಳಿ ವೇಳೆ ಪೋಲಿಸರಿಗೆ ಆ ಜಾಲದ ಮಾಹಿತಿ ಸಿಗುತ್ತದೆ. ಹಾಗೆ ನೋಡಿದರೆ ಡ್ರಗ್ ಮಾಫಿಯಾ ಈ ದೇಶದ ಹೊಸ ದಂದೆ ಏನಲ್ಲ, ಅದು ಬಹಳ ವರ್ಷಗಳಿಂದ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಈ ಪೋಲಿಸ್ ದಾಳಿಗಳು, ವಶಪಡಿಸಿಕೊಳ್ಳುವಿಕೆ, ಬಂಧನ, ವಿಚಾರಣೆ, ಬಿಡುಗಡೆ, ಪ್ರತಿಷ್ಠಿತರ ಹೆಸರು ಎಲ್ಲವೂ ಹಳಸಲು ಸುದ್ದಿಗಳೆನಿಸುತ್ತದೆ.

ಡ್ರಗ್ ವಿಷಯವು ಆಗಾಗ ಸಮಾಜದ ಮುಖ್ಯ ವಾಹಿನಿಯಲ್ಲಿ ಕಾಣಿಸಿಕೊಂಡು ಬಹು ಚರ್ಚಿತವಾಗಿ ಮತ್ತೆ ತೆರೆಯ ಮರೆಗೆ ಸರಿಯುತ್ತದೆ. ಎಲ್ಲರೂ ಮರೆತಾಗ ಮತ್ತೆ ಸ್ವಚ್ಛಂದವಾಗಿ ತನ್ನ ಕದಂಬ ಬಾಹು ಚಾಚಿ ನಿರಾಳವಾಗಿ ತನ್ನ ವ್ಯವಹಾರ ಮುಂದುವರೆಸುತ್ತದೆ. ಡ್ರಗ್ ಮಾಫಿಯಾವನ್ನು ಬೇರು ಸಹಿತ ಕಿತ್ತೊಗೆಯುವುದು ಬಲು ಕಷ್ಟ. ಇದರ ಕಡಿವಾಣಕ್ಕೆ , ಬಳಸುವವರೇ ಮನಸ್ಸನ್ನು ಬದಲಾಯಿಸಿ ತಿರಸ್ಕರಿಸಬೇಕು, ಅದರ ಜಾಲ ಬೇರು ಸಮೇತ ನಾಶವಾಗಬಹುದು.

ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು, ಕಾಲೇಜುಗಳಲ್ಲಿನ ವಿದ್ಯಾರ್ಥಿಗಳು ಅದರ ದಾಸರಾಗಿದ್ದರು. ಆದರೆ ಇತ್ತೀಚೆಗೆ ಬಾಲಿವುಡ್, ಸ್ಯಾಂಡಲ್ ವುಡ್‌ಗಳಿಗೆ ಇದರ ಕರಿಛಾಯೆ ಮೂಡಿದ್ದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ. ಅಲ್ಲಿ ಏನು ನಡೆಯುತ್ತಿದೆ ಎನ್ನುವುದು ನಿಗೂಢವಾಗಿ ಉಳಿಯುತ್ತಿದೆ.

ಏನು ಮಾಡಬೇಕು?: ಮೊಟ್ಟ ಮೊದಲು ಡ್ರಗ್ ದೂರವಿರಿಸುವ ಇಚ್ಛಾಶಕ್ತಿ ಬೇಕು. ಮುಂದಾಗುವ ಅನಾಹುತಗಳನ್ನು, ಅಪಾಯಗಳನ್ನು, ಗಂಡಾಂತರಗಳನ್ನು ತಡೆಗಟ್ಟಬೇಕಾದರೆ, ಅಗತ್ಯ ಕ್ರಮಗಳನ್ನು ತ್ವರಿತವಾಗಿ ತಗೆದುಕೊಂಡು ಅಕ್ರಮ ಜಾಲ ಭೇದಿಸುವುದು ಅನಿವಾರ್ಯವಾಗಿದೆ. ಸಮಗ್ರ ತನಿಖೆಯಾಗಿ, ಸರಿಯಾದ ನ್ಯಾಯ ಒದಗಿಸಿ ಜನರಿಗೂ ಅವುಗಳ ಮೇಲೆ ಭರವಸೆ ಮೂಡುವ ಹಾಗೆ ಮಾಡಿ, ಜನರು ನಿಟ್ಟುಸಿರು ಬಿಟ್ಟು, ನೆಮ್ಮದಿಯಿಂದ ಬದುಕುವ ಹಾಗೆ ಆಗಬೇಕಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Isue: 163

ಸಮಾಚಾರ ಸಣ್ಣದಲ್ಲ

ಕುಸಿದುಬಿದ್ದ ಉಪ ರಾಷ್ಟ್ರಪತಿ ಧನಕರ್

ಡೆಹರಾಡೂನ್: ಉತ್ತರಾಖಂಡ ರಾಜ್ಯದ ಕುಮಾವೂನ್ ವಿವಿ 50ನೇ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಉಪ

ರಾಷ್ಟ್ರಪತಿ ಜಗದೀಪ್ ಧನಕರ್ ಬುಧವಾರ ಹಲ್ದ್ವಾನಿಯಲ್ಲಿನ ಕಾರ್ಯಕ್ರಮದಲ್ಲಿ ಹಠಾತ್ ಕುಸಿದು ಬಿದ್ದರು. ತಕ್ಷಣ ಪ್ರಾಥಮಿಕ ಚಿಕಿತ್ಸೆ ನೀಡಿ ನೈನಿತಾಲ್ ರಾಜಭವನಕ್ಕೆ ಕರೆದೊಯ್ಯಲಾಯಿತು. ಕಾರ್ಯಕ್ರಮ ಮುಗಿದ ಸ್ವಲ್ಪ ಸಮಯದ ಬಳಿಕ ಧನಕರ್ ಆರೋಗ್ಯ ತುಸು ಏರುಪೇರಾಯಿತು. ಪಕ್ಕದಲ್ಲೇ ಇದ್ದ ಮಾಜಿ ಸಂಸದ ಡಾ. ಮಹೇಂದ್ರ ಸಿಂಗ್ ಪಾಲ್ ಅವರ ಮೇಲೆಯೇ ಧನಕರ್ ಕುಸಿದುಬಿದ್ದರು. ಸದ್ಯ ಧನಕರ್ ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ವೈದ್ಯರು ದೃಢಪಡಿಸಿದ್ದಾರೆ.

ಅಭಿನಂದನ್ ಬಂಧಿಸಿದ್ದ ಪಾಕ್ ಮೇಜರ್ ಹತ್ಯೆ

ಇಸ್ಲಾಮಾಬಾದ್: ಭಾರತೀಯ ವಾಯುಪಡೆ 2019ರಲ್ಲಿ ಪಾಕಿಸ್ತಾನದ ಬಾಲಾಕೋಟ್‌ನ ಉಗ್ರರ ಶಿಬಿರದ ಮೇಲೆ ವೈಮಾನಿಕ ದಾಳಿ ನಡೆಸಿದ್ದಾಗ

ವಿಮಾನ ಪತನವಾದಾಗ ಅಭಿನಂದನ್ ವರ್ಧಮಾನ್‌ರನ್ನು ಬಂಧಿಸಿದ್ದ ಪಾಕ್‌ನ ಮೇಜರ್ ಸೈಯದ್ ಮೊಯಿಜ್ ಅಬ್ಬಾಸ್ ಶಾ ಉಗ್ರರ ಗುಂಡೇಟಿಗೆ ಬಲಿಯಾಗಿದ್ದಾರೆ. ದಕ್ಷಿಣ ವಜಿರಿಸ್ತಾನದ ಸರ್ಗೋಧಾ ಪ್ರದೇಶದಲ್ಲಿ 'ಟಿಟಿಪಿ' ಉಗ್ರ ಸಂಘಟನೆ ನಡೆಸಿದ ದಾಳಿಯಲ್ಲಿ ಸೈಯದ್ ಸಾವಿಗೀಡಾಗಿದ್ದಾರೆ. ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆಗಳಲ್ಲಿ ಮೇಜರ್ ಸೈಯದ್ ಕೆಚ್ಚೆದೆಯಿಂದ ಹೋರಾಡುತ್ತಿದ್ದರು. ಜತೆಗಿದ್ದ ಲ್ಯಾನ್ಸ್ ನಾಯಕ್ ಜಿಬ್ರಾನ್ ಎಂಬವರೂ ಸಾವನ್ನಪ್ಪಿದ್ದಾರೆ. ಇದೇ ವೇಳೆ ನಡೆದ ಕಾರ್ಯಾಚರಣೆಯಲ್ಲಿ 'ಟಿಟಿಪಿ'ಯ 11 ಉಗ್ರರನ್ನು ಕೊಂದಿರುವುದಾಗಿ ಪಾಕಿಸ್ತಾನ ಸೇನೆ ಹೇಳಿಕೊಂಡಿದೆ.

ತರಗತಿ 10ಕ್ಕೆ 2ಬಾರಿ ಪರೀಕ್ಷೆ: ಸಿಬಿಎಸ್‌ಇ

ದೆಹಲಿ: 2026ರಿಂದ 10ನೇ ತರಗತಿ ವಿದ್ಯಾರ್ಥಿಗಳು ಒಂದೇ ಶೈಕ್ಷಣಿಕ ಅವಧಿಯಲ್ಲಿ ಎರಡು ಬಾರಿ ಬೋರ್ಡ್ ಪರೀಕ್ಷೆ ಬರೆಯಬಹುದಾಗಿದೆ. ಆದರೆ

ಫೆಬ್ರವರಿಗೆ ನಡೆಯುವ ಮೊದಲ ಪರೀಕ್ಷೆಗೆ ಹಾಜರಿ ಕಡ್ಡಾಯ ಎಂದು 'ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ'(ಸಿಬಿಎಸ್‌ಇ) ಬುಧವಾರ ತಿಳಿಸಿದೆ. 2ನೇ ಬಾರಿಯ ಪರೀಕ್ಷೆ ಮೇ ತಿಂಗಳಲ್ಲಿ ನಡೆಯಲಿದ್ದು, ಇದು ಐಚ್ಛಿಕವಾಗಿರುತ್ತದೆ. ವಿದ್ಯಾರ್ಥಿಗಳು ತಮ್ಮ ಕಾರ್ಯಕ್ಷಮತೆ ಸುಧಾರಿಸಲು ಬಯಸಿದರೆ ಹಾಜರಾಗಬಹುದಾಗಿದೆ. ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಭಾಷಾ ವಿಷಯ ಹೊರತುಪಡಿಸಿ ಇತರೆ 3 ವಿಷಯಗಳಲ್ಲಿ ವಿದ್ಯಾರ್ಥಿಗಳು ತಮ್ಮ ಕಾರ್ಯಕ್ಷಮತೆ ಸುಧಾರಿಸಿಕೊಳ್ಳಲು ಅವಕಾಶವಿದೆ. ಫೆಬ್ರವರಿ ಪರೀಕ್ಷೆ ಫಲಿತಾಂಶ ಏಪ್ರಿಲ್‌ಗೆ ಮತ್ತು ಮೇ ಪರೀಕ್ಷೆ ಫಲಿತಾಂಶ ಜೂನ್‌ಗೆ ಪ್ರಕಟವಾಗಲಿದೆ. ಈ ಹೊಸ ಪರೀಕ್ಷಾ ಕ್ರಮವನ್ನು 'ರಾಷ್ಟ್ರೀಯ ಶಿಕ್ಷಣ ನೀತಿ'ಯಲ್ಲಿ(ಎನ್‌ಇಪಿ) ಸೇರಿಸಲು ಶಿಫಾರಸು ಮಾಡಲಾಗಿದೆ ಎಂದು ಸಿಬಿಎಸ್‌ಇ ತಿಳಿಸಿದೆ.

ಇಸ್ರೇಲ್ ಪರ ಬೇಹು: ಮೂವರಿಗೆ ಗಲ್ಲು ಶಿಕ್ಷೆ

ಟೆಹರಾನ್: ಇಸ್ರೇಲ್ ದೇಶದ ಪರವಾಗಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದಡಿ ಮತ್ತೆ ಮೂವರಿಗೆ ಇರಾನ್ ಸರಕಾರ ಬುಧವಾರ ಗಲ್ಲಿಗೇರಿಸಿದೆ. ದೇಶದ ವಾಯುವ್ಯ ಪ್ರಾಂತ್ಯ ಪಶ್ಚಿಮ ಅಜರ್‌ಬೈಜಾನ್‌ನಲ್ಲಿನ ಉರ್ಮಿಯಾ ಜೈಲಿನಲ್ಲಿರಿಸಲಾಗಿದ್ದ ಮೂವರು ಇಸ್ರೇಲ್ ಬೇಹುಗಾರರನ್ನು ಗಲ್ಲಿಗೇರಿಸಲಾಗಿದೆ ಎಂದು ಸರಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆ ವರದಿ ಮಾಡಿದೆ. ದೇಶದೊಳಕ್ಕೆ ಸಾಮೂಹಿಕ ಹತ್ಯಾ ಸಾಧನಗಳನ್ನು ತಂದಿದ್ದರು ಎಂದು ಮೂವರು ಪುರುಷ ಬೇಹುಗಾರರ ವಿರುದ್ಧ ಆರೋಪಿಸಲಾಗಿತ್ತು. ಇಸ್ರೇಲ್ ಜತೆಗಿನ ಈಗಿನ ಯುದ್ಧದ ಸಮಯದಲ್ಲಿಯೇ ಒಟ್ಟು ಐವರನ್ನು ಈವರೆಗೆ ಬೇಹುಗಾರಿಕೆ ಆರೋಪದಲ್ಲಿ ಗಲ್ಲಿಗೇರಿಸಿದಂತಾತಿದೆ. ಇದಕ್ಕೆ ಮುನ್ನ ಇಬ್ಬರಿಗೆ ಗಲ್ಲು ಶಿಕ್ಷೆ ಜಾರಿಯಾಗಿದೆ.

ವಿರಾಮ
ಪ್ರತಿ ಭಾನುವಾರ

{ಮಲ್ಲಿಕಾರ್ಜುನ ಖರ್ಗೆ } ಕಾಂಗ್ರೆಸ್ ಅಧ್ಯಕ್ಷ

ಭಾರತದ ಚುನಾವಣಾ ಆಯೋಗ ಕೇಂದ್ರ ಸರಕಾರದ ಕೈಗೊಂಬೆಯಾಗಿದೆ. ಹಾಗಾಗಿಯೇ ನೀವು(ಪ್ರಧಾನಿ ಮೋದಿ) ಚುನಾವಣೆ ಗೆಲ್ಲುತ್ತಿದ್ದೀರಿ. ಚುನಾವಣೆಯಲ್ಲಿನ ಅಕ್ರಮಗಳನ್ನು ಕಾಂಗ್ರೆಸ್ ಪ್ರಶ್ನಿಸುತ್ತಿದೆ. ಆದರೆ ಆಯೋಗ ಉತ್ತರ ನೀಡುವುದಕ್ಕೇ ಸಿದ್ಧವಿಲ್ಲ. ನಾನು 13 ಚುನಾವಣೆಗಳಲ್ಲಿ ಸ್ಪರ್ಧಿಸಿದ್ದೇನೆ. ಆದರೆ ಇಂತಹ ಅಕ್ರಮಗಳನ್ನು ಈ ಹಿಂದೆ ನೋಡಿರಲಿಲ್ಲ.

1975ರ ಜೂ.25 ತುರ್ತು ಪರಿಸ್ಥಿತಿ ಜಾರಿ ದಿನಕ್ಕೆ 50 ವರ್ಷ | ತುರ್ತು ಪರಿಸ್ಥಿತಿ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಟೀಕೆ

ಪ್ರಜಾಪ್ರಭುತ್ವವನ್ನೇ ಒತ್ತೆಯಾಳಾಗಿಸಿಕೊಂಡಿದ್ದ ಕಾಂಗ್ರೆಸ್

ದೆಹಲಿ: ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ 1975 ಜೂನ್ 25ರಂದು ತುರ್ತು ಪರಿಸ್ಥಿತಿ ಹೇರುವ ಮೂಲಕ ಅಂದಿನ ಕಾಂಗ್ರೆಸ್ ಪಕ್ಷದ ಸರಕಾರ 'ಪ್ರಜಾಪ್ರಭುತ್ವವನ್ನೇ ಒತ್ತೆಯಾಳಾಗಿ ಇರಿಸಿ ಕೊಂಡಿತ್ತು' ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದ್ದಾರೆ.

'ತುರ್ತು ಪರಿಸ್ಥಿತಿ ಜಾರಿಗೊಳಿಸಿದ 1975ರ ಜೂ.25ನೇ ದಿನಾಂಕಕ್ಕೆ ಬುಧವಾರ 50 ವರ್ಷ ತುಂಬಿರುವ ಸಂದರ್ಭದಲ್ಲಿ ತಮ್ಮ ಅಧಿಕೃತ 'ಎಕ್ಸ್' ಖಾತೆಯಲ್ಲಿ ಸರಣಿಯೋಪಾದಿ ಸಂದೇಶಗಳನ್ನು ಹಂಚಿಕೊಂಡಿರುವ ಪ್ರಧಾನಿ ಮೋದಿ, ದೇಶದ ಪ್ರಜಾಪ್ರಭುತ್ವ 50 ವರ್ಷಗಳ ಹಿಂದೆ 21 ತಿಂಗಳುಗಳ ಕಾಲ ಹೇಗೆ ಪರಿತಪಿಸಿತು ಎಂಬುದನ್ನು ದೇಶವಾಸಿಗಳಿಗೆ ನೆನಪಿಸುವ ಪ್ರಯತ್ನ ಮಾಡಿದ್ದಾರೆ.

ಕಾಂಗ್ರೆಸ್ ಪಕ್ಷದ ಆಡಳಿತದ 1975-77ರ ನಡುವಿನ ಅವಧಿ ದೇಶದ ಇತಿಹಾಸದಲ್ಲೇ ಅತ್ಯಂತ ಕರಾಳ ಅಧ್ಯಾಯವಾಗಿದೆ ಎಂದು ಮೋದಿ ಬಣ್ಣಿಸಿದ್ದಾರೆ. ತುರ್ತು ಪರಿಸ್ಥಿತಿ ವೇಳೆ ಭಾರತದ ಸಂವಿಧಾನದ ಚೈತನ್ಯವನ್ನು ಕಾಂಗ್ರೆಸ್ ಪಕ್ಷದ ಸರಕಾರ ಉಡುಗಿಸಿದ ಬಗೆಯನ್ನು ಯಾವುದೇ ಭಾರತೀಯ ಎಂದೂ ಮರೆಯುವುದಿಲ್ಲ ಎಂದೂ ಹೇಳಿದ್ದಾರೆ. ನಮ್ಮ ದೇಶದ ಪವಿತ್ರವಾದ ಸಂವಿಧಾನದ ಧ್ವನಿಯನ್ನೇ ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಹತ್ತಿಕ್ಕಲಾಯಿತು. ಅದನ್ನು ಭಾರತೀಯರು ಮರೆಯಲು ಸಾಧ್ಯವೇ ಇಲ್ಲ. ಸಂಸತ್ತಿನ ಧ್ವನಿಯನ್ನು ಉಡುಗಿಸಲಾಯಿತು, ನ್ಯಾಯಾಲಯಗಳನ್ನೂ ನಿಯಂತ್ರಿಸಲು ಪ್ರಯತ್ನಿಸಲಾಯಿತು ಎಂದು ಮೋದಿ. ತುರ್ತು ಪರಿಸ್ಥಿತಿಯ ಅವಧಿಯ ದಿನಗಳಲ್ಲಿನ ಆಡಳಿತದ ಚಿತ್ರಣ ನೀಡಲೆತ್ನಿಸಿದ್ದಾರೆ.

ತುರ್ತು ಪರಿಸ್ಥಿತಿ ಜಾರಿ ದಿನಕ್ಕೆ 50 ವರ್ಷವಾದ ಹಿನ್ನೆಲೆ ಮಧ್ಯಪ್ರದೇಶ ಬಿಜೆಪಿ ಘಟಕ ಭೋಪಾಲ್‌ನಲ್ಲಿ 'ಆ ದಿನಗಳನ್ನು' ನೆನಪಿಸುವ ಸಲುವಾಗಿ ಜೈಲಿನ ಪ್ರತಿಕೃತಿ ರಚಿಸಿ ಪ್ರದರ್ಶನಕ್ಕಿರಿಸಿತ್ತು.

ಸಂವಿಧಾನದ ತತ್ವಗಳ ಉಳಿಸಲು ಬದ್ಧ

ಸಂವಿಧಾನದ ತತ್ವಗಳನ್ನು ಉಳಿಸಿ ಬಲಪಡಿಸಲು ತಮ್ಮ ನೇತೃತ್ವದ ಎನ್‌ಡಿಎ ಸರಕಾರ ಬದ್ಧವಾಗಿದೆ ಎಂದೂ ಮೋದಿ ದೇಶದ ಜನತೆಗೆ ಭರವಸೆ ನೀಡಿದ್ದಾರೆ. ಸಂವಿಧಾನದಲ್ಲಿನ ತತ್ವಗಳನ್ನು ಬಲಪಡಿಸುವ ಮತ್ತು ವಿಕಸಿತ ಭಾರತದ ಕನಸನ್ನು ಸಾಕಾರಗೊಳಿಸಲು ಒಟ್ಟಾಗಿ ಕೆಲಸ ಮಾಡುವ ಬದ್ಧತೆಯನ್ನು ಮೋದಿ ಪುನರುಚ್ಚರಿಸಿದ್ದಾರೆ. ಪ್ರಗತಿಯ ಹೊಸ ಎತ್ತರಕ್ಕೆ ಏರೋಣ, ಬಡವರು ಮತ್ತು ದೀನದಲಿತರ ಕನಸುಗಳನ್ನು ನನಸಾಗಿಸೋಣ ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಕಾಂಗ್ರೆಸ್‌ಗೆ ಸೋಲುಣಿಸಿದ ಜನತೆ

ದೇಶದ ವಿವಿಧ ಪ್ರದೇಶಗಳಿಂದ ಬಂದ ವಿಭಿನ್ನ ಸಿದ್ಧಾಂತಗಳು ಜನರು ಆಗ ಒಂದೇ ಉದ್ದೇಶದಿಂದ ಒಟ್ಟಾಗಿ ಸೇರಿ ತುರ್ತು ಪರಿಸ್ಥಿತಿ ವಿರುದ್ಧ ಹೋರಾಟ ನಡೆಸಿದರು. ಭಾರತದ ಪ್ರಜಾಪ್ರಭುತ್ವ ರಚನೆ ರಕ್ಷಿಸುವುದೇ ಅವರ ಗುರಿಯಾಗಿತ್ತು. ಆ ಬಳಿಕ ಕಾಂಗ್ರೆಸ್ ಸರಕಾರ ಪ್ರಜಾಪ್ರಭುತ್ವದ ಮರುಸ್ಥಾಪನೆಗೆ ಹೊಸದಾಗಿ ಚುನಾವಣೆಗಳನ್ನು ನಡೆಸಬೇಕಾಯಿತು. ಆ ಚುನಾವಣೆಯಲ್ಲಿ ಜನರು ಕಾಂಗ್ರೆಸ್ ಪಕ್ಷವನ್ನು ಹೀನಾಯವಾಗಿ ಸೋಲಿಸಿದರು ಎಂದು ಪ್ರಧಾನಿ ಮೋದಿ ನೆನಪಿಸಿಕೊಂಡಿದ್ದಾರೆ. ತುರ್ತು ಪರಿಸ್ಥಿತಿಯ ವಿರುದ್ಧದ ಹೋರಾಟದಲ್ಲಿ ದೃಢವಾಗಿ ನಿಂತ ಪ್ರತಿಯೊಬ್ಬ ವ್ಯಕ್ತಿಗೂ ನಮಸ್ಕರಿಸುವೆ ಎಂದಿದ್ದಾರೆ.

ಸಂವಿಧಾನಕ್ಕೆ ತರಲಾದ 42ನೇ ತಿದ್ದುಪಡಿ 1975ರಲ್ಲಿನ ಕಾಂಗ್ರೆಸ್ ಸರಕಾರದ ಕ್ರಮಗಳಿಗೆ ಒಂದು ದೊಡ್ಡ ಉದಾಹರಣೆ. ಬಡವರು ಮತ್ತು ದಲಿತರನ್ನು ನಿರ್ದಿಷ್ಟವಾಗಿ ಗುರಿಯಾಗಿಸಿ ಹಿಂಸಿಸಲಾಯಿತು

ತುರ್ತು ಪರಿಸ್ಥಿತಿ ಜಾರಿಗೊಳಿಸಿದ ದಿನಗಳಲ್ಲಿ ನಾನು ಆರ್‌ಎಸ್‌ಎಸ್ ಪ್ರಚಾರಕನಾಗಿದ್ದೆ. ತುರ್ತು ಪರಿಸ್ಥಿತಿ ವಿರೋಧಿ ಚಳವಳಿ ನನಗೆ ಕಲಿಕೆಯ ಅನುಭವವಾಗಿತ್ತು. ಅದು ಪ್ರಜಾಪ್ರಭುತ್ವ ರಚನೆ ರಕ್ಷಿಸುವ ಮಹತ್ವವನ್ನು ತೋರಿಸಿಕೊಟ್ಟಿತು. ಆಗಿನ ಹೋರಾಟದ ದಿನಗಳಲ್ಲಿ ಹೋರಾಟಗಾರರು, ಸಾಮಾನ್ಯ ಜನರಿಂದ ನಾನು ಬಹಳಷ್ಟು ಕಲಿಯಲು ಸಾಧ್ಯವಾಯಿತು.

-ನರೇಂದ್ರ ಮೋದಿ ಪ್ರಧಾನಿ

ಎಂದಿದ್ದಾರೆ. ತುರ್ತು ಪರಿಸ್ಥಿತಿ ಅವಧಿಯಲ್ಲಿ ಸಂವಿಧಾನದ ಮೌಲ್ಯಗಳನ್ನು ನಿರ್ಲಕ್ಷಿಸಲಾಯಿತು, ಮೂಲಭೂತ ಹಕ್ಕುಗಳನ್ನು ಕಿತ್ತುಕೊಳ್ಳಲಾಯಿತು, ಪತ್ರಿಕಾ ಸ್ವಾತಂತ್ರ್ಯದ ಧಮನವಾಯಿತು. ಸಾವಿರಾರು ಸಂಖ್ಯೆಯ ರಾಜಕೀಯ ನಾಯಕರು, ಲಕ್ಷಾಂತರ ಸಾಮಾಜಿಕ ಕಾರ್ಯಕರ್ತರು, ವಿದ್ಯಾರ್ಥಿಗಳು ಮತ್ತು ಸಾಮಾನ್ಯ ನಾಗರಿಕರನ್ನು ಜೈಲಿಗೆ ಹಾಕಿ ಹಿಂಸಿಸಲಾಯಿತು. ಅಂದಿನ ಕಾಂಗ್ರೆಸ್ ಸರಕಾರ ಇಡೀ ದೇಶವನ್ನು, ಪ್ರಜಾಪ್ರಭುತ್ವವನ್ನು ಬಂಧನದಲ್ಲಿ ಇರಿಸಿತ್ತು ಎಂದು ಪ್ರಧಾನಿ ಮೋದಿ ವಾಗ್ದಾಳಿ ನಡೆಸಿದ್ದಾರೆ.

ದೇಶದ ವಿವಿಧೆಡೆ ಬಿಜೆಪಿ ನಾಯಕರು, ಕಾರ್ಯಕರ್ತರ ಜತೆಗೂಡಿ 'ಕರಾಳ ದಿನ' ಆಚರಿಸಿದ್ದಾರೆ. ಕೆಲವೆಡೆ 'ಪ್ರಜಾಪ್ರಭುತ್ವ ಹತ್ಯಾದಿನ' ಹೆಸರಿನಲ್ಲಿಯೂ ತುರ್ತು ಪರಿಸ್ಥಿತಿಯ 50ನೇ ವರ್ಷವನ್ನು ನೆನಪಿಸಿಕೊಳ್ಳಲಾಗಿದೆ.

ದೇಶದಲ್ಲೀಗ ಅಘೋಷಿತ ತುರ್ತು ಪರಿಸ್ಥಿತಿ: ಖರ್ಗೆ

ದೆಹಲಿ: ದೇಶದಲ್ಲಿ ಈಗ ಅಘೋಷಿತ ತುರ್ತುಪರಿಸ್ಥಿತಿ ಎದುರಿಸುತ್ತಿದ್ದೇವೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ಹೇಳಿದ್ದಾರೆ.

ಎಐಸಿಸಿ ಕೇಂದ್ರ ಕಚೇರಿಯಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಖರ್ಗೆ, 'ಸಂವಿಧಾನ ಬಚಾವೋ ಯಾತ್ರೆ'ಯಿಂದ ದಿಕ್ಕೆಟ್ಟಿರುವ ಬಿಜೆಪಿ, ಈಗ 50 ವರ್ಷಗಳ ಹಿಂದಿನ ತುರ್ತುಪರಿಸ್ಥಿತಿ ಬಗ್ಗೆ ಮಾತನಾಡ ತೊಡಗಿದೆ. ನಿರುದ್ಯೋಗ, ಹಣದುಬ್ಬರ, ನೋಟು ಅಮಾನ್ಯೀಕರಣ ಸಮಸ್ಯೆಗಳಿಗೆ ಉತ್ತರ ನೀಡಲಾಗದವರು ತಮ್ಮ ಸರಕಾರದ ವೈಫಲ್ಯ ಮುಚ್ಚಿಡಲು ಪದೇ ಪದೇ ಸುಳ್ಳುಗಳನ್ನು ಹೇಳುತ್ತಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದರು. ಸದ್ಯ ಅಧಿಕಾರದಲ್ಲಿರುವವರು ದ್ವೇಷ ಮತ್ತು ಧರ್ಮಾಂಧತೆಯನ್ನು ಹರಡುತ್ತಿದ್ದಾರೆ. ಪ್ರತಿಭಟನಾ ನಿರತ ರೈತರನ್ನು ಖಲಿಸ್ತಾನಿಗಳು ಎಂದು ಬ್ರಾಂಡ್ ಮಾಡಿದ್ದಾರೆ. ಜಾತಿ ಜನಗಣತಿಯ ಬೆಂಬಲಿಗರನ್ನು ನಗರ ನಕ್ಸಲರು ಎಂದು ಬಿಂಬಿಸಿ ಟೀಕಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಯ ಸಾಧಕಿ | 2029ಕ್ಕೆ ಅಮೆರಿಕ ಟೈಟನ್ ಸ್ಪೇಸ್ ಇಂಡಸ್ಟ್ರೀಸ್ ಮೂಲಕ ಗಗನಯಾನ

ಭಾವಿ ಗಗನಯಾತ್ರಿ ಜಾಹ್ನವಿ ದಂಗೇಟಿ

ಅಮರಾವತಿ: ಆಂಧ್ರಪ್ರದೇಶದ ಹೆಮ್ಮೆಯ ಪುತ್ರಿ, 23 ವರ್ಷದ ಜಾಹ್ನವಿ ದಂಗೇಟಿ ಭಾವಿ ಗಗನಯಾತ್ರಿಯಾಗಿದ್ದು, 2029ರಂದು ಬಾಹ್ಯಾಕಾಶಯಾನ ಕೈಗೊಳ್ಳಲು ಆಯ್ಕೆಯಾಗಿದ್ದಾಳೆ. ಆ ಮೂಲಕ ವಿಶ್ವದ ಗಗನಯಾನಿಗಳ ಪಟ್ಟಿಗೆ

ಭಾರತದಿಂದ ಹೊಸ ಸೇರ್ಪಡೆಯಾಗಲಿದೆ.

ಗುಳಿ ಕೆನ್ನೆಯ, ನೀಳ ಕೇಶರಾಶಿಯ ಯುವತಿ ಜಾಹ್ನವಿ, ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಯ ಬಾಲೆ. ಅತಿ ಚಿಕ್ಕ ಪ್ರಾಯದಲ್ಲೇ ಬಾಹ್ಯಾಕಾಶಯಾನಕ್ಕೆ ಆಯ್ಕೆಯಾದ ಸಾಧಕಿ. ತಂದೆ ಶ್ರೀನಿವಾಸ್, ತಾಯಿ ಪದ್ಮಶ್ರೀ ಸದ್ಯ ವೃತ್ತಿ ಸಂಬಂಧ ಕುವೇತ್‌ನಲ್ಲಿ ನೆಲೆಸಿದ್ದಾರೆ.

ಅಮೆರಿಕದ ಖಾಸಗಿ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ಟೈಟನ್ ಸ್ಪೇಸ್ ಇಂಡಸ್ಟ್ರೀಸ್'(ಟಿಎಸ್‌ಐ) 2029ರಲ್ಲಿ ಬಾಹ್ಯಾಕಾಶ ಯಾನ ಕೈಗೊಳ್ಳಲಿದ್ದು, ಅದಕ್ಕೆ ಗಗನಯಾತ್ರಿಯಾಗಿ ಜಾಹ್ನನಿ ದಂಗೇಟಿಯನ್ನು ಆಯ್ಕೆ ಮಾಡಿಕೊಂಡಿದೆ. ಟೈಟನ್ ಸ್ಪೇಸ್ ಇಂಡಸ್ಟ್ರೀಸ್ 2029ರಲ್ಲಿ 'ಎ ಎಸ್‌ಸಿಎಎನ್' ಯೋಜನೆಯಡಿ ಬಾಹ್ಯಾಕಾಶ ಯಾನ ಯೋಜನೆ ಹಮ್ಮಿಕೊಂಡಿದೆ. ಈ ಗಗನಯಾನಕ್ಕೆ ಆಯ್ಕೆಯಾಗಿರುವ ಜಾಹ್ನವಿ ದಂಗೇಟಿಗೆ 2026ರಿಂದ 3 ವರ್ಷಗಳ ಕಾಲ ಬಾಹ್ಯಾಕಾಶ ಯಾನ ಕುರಿತು ಕಠಿಣ ತರಬೇತಿ ನಡೆಯಲಿದೆ. ಗಗನನೌಕೆಯ ಚಾಲನೆ, ಗಗನನೌಕೆಯಲ್ಲಿನ ಪ್ರಕ್ರಿಯೆಗಳು, ಸಂಕಷ್ಟ ಸಮಯದಲ್ಲಿ ಜೀವ ಉಳಿಸಿಕೊಳ್ಳುವ ವಿಧಾನಗಳು, ವೈದ್ಯಕೀಯ ಮತ್ತು ಮನೋಚಿಕಿತ್ಸಕ ವಿಧಾನಗಳ ಬಗ್ಗೆ ತರಬೇತಿ ನೀಡಲಾಗುತ್ತದೆ.

ಜಾಹ್ನವಿ ಗೋದಾವರಿ ಜಿಲ್ಲೆಯ ಹುಟ್ಟೂರಿನಲ್ಲಿ ಶಾಲಾ ಶಿಕ್ಷಣ ಪಡೆದಿದ್ದು, ಪಂಜಾಬ್‌ನ ಲವ್ಲಿ ಪ್ರೊಫೆಷನಲ್ ಯುನಿವರ್ಸಿಟಿಯಲ್ಲಿ ಬಿಇ(ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್) ಪದವಿ ಗಳಿಸಿದ್ದಾರೆ. ಬಳಿಕ ಪೋಲೆಂಡ್‌ನ ದಕ್ಷಿಣದ ನಗರ ಕ್ರಕೌನಲ್ಲಿನ ಅನಲಾಗ್ ಅಸ್ಟ್ರೊನಾಟ್ ತರಬೇತಿ ಕೇಂದ್ರದಲ್ಲಿ ಅನಲಾಗ್ ಅಸ್ಟ್ರೊನಾಟ್ ಆಗಲು ಬೇಕಾದ ತರಬೇತಿ ಪಡೆದಿದ್ದಾರೆ. ಆ ಮೂಲಕ ಅನಲಾಗ್ ಅಸ್ಟ್ರೊನಾಟ್ ತರಬೇತಿ ಪಡೆದ ಅತಿಚಿಕ್ಕ ಪ್ರಾಯದ ಭಾರತೀಯ ಯುವತಿ ಎನಿಸಿಕೊಂಡಿದ್ದಾರೆ. ಅದಲ್ಲದೇ, ಅಮೆರಿಕದ ಪ್ರತಿಷ್ಠಿತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ 'ನಾಸಾ' ಪ್ರಾಯೋಜನೆಯ 'ಇಂಟರ್‌ನ್ಯಾಷನಲ್ ಅಸ್ಟ್ರೊನಾಮಿಕಲ್ ಸರ್ಚ್ ಕೊಲಬರೇಷನ್'(ಐಎಎಸ್‌ಸಿ)ಯಲ್ಲಿ ಕೆಲಕಾಲ ಸೇವೆ ಸಲ್ಲಿಸಿ ಅನುಭವ ಪಡೆದಿದ್ದಾರೆ. ಹವಾಯಿಯ ಪ್ಯಾನ್ ಸ್ಟಾರ್ ಟೆಲಿಸ್ಕೋಪ್ ಮೂಲಕ ಕ್ಷುದ್ರ ಗ್ರಹಗಳ ಅಧ್ಯಯನ ನಡೆಸಿದ್ದಾರೆ.

ಗುಜರಾತ್ ಆರೋಗ್ಯ ಇಲಾಖೆ ಪ್ರಕಟಣೆ | ಬೋಯಿಂಗ್ 787 ಡ್ರೀಮ್‌ಲೈನರ್

ವಿಮಾನ ಪತನ: ಮೃತರ ಸಂಖ್ಯೆ 275ಕ್ಕೆ

ಅಹಮದಾಬಾದ್: ಗುಜರಾತ್‌ನ ಅಹಮದಾಬಾದ್‌ನಲ್ಲಿನ ಸರದಾರ್ ವಲ್ಲಭಭಾಯಿ ಪಟೇಲ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಏರ್ ಇಂಡಿಯದ 'ಎಐ-171 ಬೋಯಿಂಗ್ 787-8 ಡ್ರೀಮ್‌ಲೈನರ್ ವಿಮಾನ ಜೂ.12ರ ಮಧ್ಯಾಹ್ನ 1.38ರಲ್ಲಿ ಟೇಕಾಫ್ ಆದ ಕೆಲ ಕ್ಷಣಗಳಲ್ಲೇ ಮೇಘನಿ ನಗರದಲ್ಲಿರುವ ಬಿಜೆ ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿಲಯದ ಕಟ್ಟಡಕ್ಕೆ ಅಪ್ಪಳಿಸಿದ್ದರಿಂದ ಮೃತರಾದವರ ಒಟ್ಟು ಸಂಖ್ಯೆ 275ಕ್ಕೆ ಏರಿಕೆಯಾಗಿದೆ ಎಂದು ಗುಜರಾತ್ ಆರೋಗ್ಯ ಇಲಾಖೆ ಬುಧವಾರ ಸ್ಪಷ್ಟಪಡಿಸಿದೆ.

ಲಂಡನ್‌ನ ಗ್ಯಾಟ್ವಿಕ್ ವಿಮಾನ ನಿಲ್ದಾಣಕ್ಕೆ ತೆರಳುತ್ತಿದ್ದ ಎಐ-171 ವಿಮಾನದಲ್ಲಿ 230 ಪ್ರಯಾಣಿಕರು, ಇಬ್ಬರು ಪೈಲಟ್‌ಗಳು, 10 ಗಗನಸಖಿಯರು ವಿಮಾನದಲ್ಲಿದ್ದರು. 11ಎ ಆಸನದಲ್ಲಿದ್ದ ಒಬ್ಬ ಪ್ರಯಾಣಿಕ(ಬ್ರಿಟನ್ ನಿವಾಸಿ) ಮಾತ್ರ ಬದುಕಿದ್ದು, 241 ಮಂದಿ ಮೃತರಾದರು. ಹಾಸ್ಟೆಲ್ ಕಟ್ಟಡದಲ್ಲಿದ್ದ ವೈದ್ಯಕೀಯ ವಿದ್ಯಾರ್ಥಿಗಳು, ಕಟ್ಟಡದ ಸಮೀಪದಲ್ಲಿದ್ದ ನಾಗರಿಕರು ಸೇರಿದಂತೆ 34 ಮಂದಿ ಸಾವಿಗೀಡಾದರು ಎಂದು

ಅಧಿಕಾರಿಗಳು ತಿಳಿಸಿದ್ದಾರೆ.

ತನಿಖೆ ಪ್ರಗತಿಯಲ್ಲಿದೆ: ವಿಮಾನ ಪತನಕ್ಕೆ ನೈಜ ಕಾರಣ ಏನು? ಎನ್ನುವುದನ್ನು ನಿಖರವಾಗಿ ಕಂಡುಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ವಿಮಾನದ ಬ್ಲ್ಯಾಕ್ ಬಾಕ್ಸ್ ಮತ್ತು ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್‌ಗಳ ದತ್ತಾಂಶವನ್ನು ವಿಮಾನ ನಿಲ್ದಾಣ ಪ್ರಾಧಿಕಾರದ ತನಿಖಾ ಬ್ಯೂರೊ(ಎಎಐಬಿ) ಅಧಿಕಾರಿಗಳ ತಂಡ ಪರಿಶೀಲಿಸುತ್ತಿದೆ. ಇನ್ನೊಂದೆಡೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ(ಡಿಜಿಸಿಎ) ಮತ್ತು ಏರ್ ಇಂಡಿಯ ಸಂಸ್ಥೆಯಿಂದಲೂ ತನಿಖೆ ನಡೆಯುತ್ತಿದ್ದು, ಪ್ರಗತಿಯಲ್ಲಿದೆ.

9 ಮೃತದೇಹ ಗುರುತು ಬಾಕಿ

ಮೃತದೇಹ ಗುರುತಿಸುವುದಕ್ಕೆ ಸಹಾಯವಾಗುವಂತೆ ವಿಧಿವಿಜ್ಞಾನ ತಜ್ಞರ ತಂಡಗಳನ್ನು ನಿಯೋಜಿಸಲಾಗಿದೆ. ಅವಶೇಷಗಳಡಿಯಿಂದ ಎಲ್ಲಾ ಮೃತದೇಹಗಳನ್ನು ಹೊರತೆಗೆದು, ಮುಖ ಗುರುತಿಸುವಿಕೆಯಿಂದ 6 ಶವಗಳನ್ನು ಗುರುತಿಸಲಾಗಿದೆ. ಈವರೆಗೆ 120 ಪುರುಷರು, 124 ಮಹಿಳೆಯರು ಮತ್ತು 16 ಮಕ್ಕಳು ಸೇರಿದಂತೆ 260 ಮೃತದೇಹಗಳ ಗುರುತನ್ನು ಡಿಎನ್‌ಎ ಹೊಂದಾಣಿಕೆ ಮೂಲಕ ಪತ್ತೆ ಹಚ್ಚಲಾಗಿದೆ. 256 ಮೃತದೇಹಗಳನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಇನ್ನು 9 ಮೃತದೇಹಗಳನ್ನು ಸಂಬಂಧಿಕರ ಡಿಎನ್‌ಎಗೆ ಹೋಲಿಸಿ ಗುರುತು ದೃಢೀಕರಿಸುವುದು ಬಾಕಿಯಾಗಿದ್ದು, ಪ್ರಕ್ರಿಯೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಕೇಶ್ ಶರ್ಮಾ

ಭಾರತದ ಮೊಟ್ಟಮೊದಲ ಗಗನಯಾತ್ರಿ ಎನಿಸಿಕೊಂಡ ಹಿರಿಮೆ ರಾಕೇಶ್ ಶರ್ಮಾ ಅವರದ್ದಾಗಿದೆ. 1949ರ ಜನವರಿ 13ರಂದು ಪಂಜಾಬ್‌ನ ಪಟಿಯಾಲದಲ್ಲಿ ಜನಿಸಿದ ರಾಕೇಶ್ ಶರ್ಮಾ ಅವರಿಗೀಗ 76 ವರ್ಷ. ರಾಕೇಶ್ ಶರ್ಮಾ ಭಾರತೀಯ ವಾಯುಪಡೆಯಲ್ಲಿ ವಿಂಗ್ ಕಮಾಂಡರ್ ಆಗಿದ್ದವರು. ಅಶೋಕ ಚಕ್ರ ಪುರಸ್ಕಾರಕ್ಕೂ ಪಾತ್ರರಾಗಿದ್ದಾರೆ. 1984ರ ಏಪ್ರಿಲ್ 3ರಂದು ಸೋವಿಯತ್ ರಷ್ಯಾದ ಬಾಹ್ಯಾಕಾಶ ಸಂಶೋಧನಾ ಯೋಜನೆಯಡಿ 'ಸ್ಯೂಯೆಜ್ ಟಿ-11' ಗಗನನೌಕೆಯಲ್ಲಿ ಬಾಹ್ಯಾಕಾಶ ಯಾತ್ರೆ ಕೈಗೊಂಡಿದ್ದಾರೆ. ಅಲ್ಲದೇ, ರಷ್ಯಾದ ಸ್ಯೂಯೆಜ್ ಟಿ-10 ಯೋಜನೆಯಲ್ಲಿಯೂ ಭಾಗಿಯಾಗಿದ್ದಾರೆ. ಶರ್ಮಾ, ಹೈದರಾಬಾದ್‌ನ ಸೇಂಟ್ ಜಾರ್ಜ್ ಗ್ರಾಮರ್ ಹೈಸ್ಕೂಲ್, ನಿಜಾಮ್ ಕಾಲೇಜ್‌ನಲ್ಲಿ ಶಿಕ್ಷಣ ಪಡೆದಿದ್ದಾರೆ. ಬಳಿಕ 1966ರಲ್ಲಿ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ(ಎನ್‌ಡಿಎ) ಸೇರಿ ವಾಯುಪಡೆ ಅಧಿಕಾರಿಯಾಗಲು ಸಿದ್ಧತೆ ಮಾಡಿಕೊಂಡಿದ್ದಾರೆ. 1970ರಲ್ಲಿ ತರಬೇತಿ ಪೈಲಟ್ ಆಗಿ ವಾಯುಪಡೆ ಸೇರಿದ ಶರ್ಮಾ, 1971ರಲ್ಲಿ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿಯೂ ಭಾಗಿಯಾದರು. ಆ ಯುದ್ಧದಲ್ಲಿ ಮಿಗ್-21 ವಿಮಾನವನ್ನು 21 ಬಾರಿ ಚಲಾಯಿಸಿದ್ದರು. 1982ರ ಸೆ.20ರಂದು ರಷ್ಯಾ ಕೈಗೊಳ್ಳಲಿದ್ದ 'ಇಂಟರ್‌ಕೊಸ್ಮೋಸ್' ಗಗನಯಾನಕ್ಕೆ ಭಾರತದ ಮೊಟ್ಟಮೊದಲ ಕಾಸ್ಮೊನಾಟ್ ಆಗಲು ಆಯ್ಕೆಯಾದರು.

ಕಲ್ಪನಾ ಚಾವ್ಲಾ

ಅಮೆರಿಕದ ಬಾಹ್ಯಾಕಾಶಯಾನಿಯಾಗಿದ್ದ ಕಲ್ಪನಾ ಚಾವ್ಲಾ ಹರಿಯಾಣದ ಕರ್ನಲ್ ಜಿಲ್ಲೆಯಲ್ಲಿ 1962ರ ಮಾರ್ಚ್ 17ರಂದು ಜನಿಸಿದರು. ಪಂಜಾಬ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಬಿಇ ಪದವಿ ಬಳಿಕ ಅಮೆರಿಕದ ಟೆಕ್ಸಾಸ್‌ಗೆ ತೆರಳಿ ಟೆಕ್ಸಾಸ್ ವಿವಿಯಲ್ಲಿ ಎಂಎಸ್ ವ್ಯಾಸಂಗ ಮಾಡಿದರು. ಬಳಿಕ ಕೊಲೊರ್ಯಾಡೊ ವಿವಿಯಲ್ಲಿ ಸಂಶೋಧನೆ ನಡೆಸಿ ಪಿಎಚ್‌ಡಿ ಪೂರ್ಣಗೊಳಿಸಿದರು. 1990ರಲ್ಲಿ ಅಮೆರಿಕ ಪೌರತ್ವ ಪಡೆದರು. 1997ರಲ್ಲಿ ಸ್ಪೇಸ್ ಷಟಲ್ ಕೊಲಂಬಿಯ ಗಗನನೌಕೆಯಲ್ಲಿ ಬಾಹ್ಯಾಕಾಶ ಯಾನ ಕೈಗೊಂಡರು. 2003ರಲ್ಲಿ ಎರಡನೇ ಬಾರಿಗೆ ಬಾಹ್ಯಾಕಾಶ ಯಾನಕ್ಕೆ ಆಯ್ಕೆಯಾದ ಕಲ್ಪನಾ ಚಾವ್ಲಾ, ಎಸ್‌ಟಿಎಸ್-107 ಕೊಲಂಬಿಯಾ ಗಗನಯಾನ ಯೋಜನೆಯಲ್ಲಿ ಭಾಗಿಯಾದರು. ಆದರೆ, ಗಗನಯಾನ ಪೂರ್ಣಗೊಳಿಸಿ ಭೂಮಿಗೆ ಫೆಬ್ರವರಿ 1ರಂದು ಮರಳುವಾಗ ಭೂಮಿಯ ವಾತಾವರಣದ ಪ್ರವೇಶದ ವೇಳೆಯ ಘರ್ಷಣೆಯಲ್ಲಿ ಗಗನನೌಕೆಗೆ ಬೆಂಕಿ ಹೊತ್ತಿದ್ದರಿಂದ ಇತರೆ ಸಹ ಗಗನಯಾನಿಗಳ ಜತೆಗೇ ಭಸ್ಮವಾದರು. ಚಾವ್ಲಾ ಅವರಿಗೆ ಕಾಂಗ್ರೆಸನಲ್ ಸ್ಪೇಸ್ ಮೆಡಲ್ ಆಫ್ ಹಾನರ್ ಮರಣೋತ್ತರ ಪ್ರಶಸ್ತಿಯನ್ನು ಅಮೆರಿಕ ಸರಕಾರ ನೀಡಿ ಗೌರವಿಸಿದೆ. ನಾಸಾ ಸೇವಾ ಪದಕವೂ ಸಂದಿದೆ.

ಭಾರತ ಮಾನವ ಸಹಿತ ಗಗನಯಾನ: 2018ರ ಆ.15ರಂದು ಪ್ರಧಾನಿ ನರೇಂದ್ರ ಮೋದಿ ಸಮ್ಮತಿ

ಮಾನವ ಸಹಿತ ಭಾರತ ಗಗನಯಾನಕ್ಕೆ 'ಜಿಎಸ್‌ಎಲ್‌ವಿ ಎಂಕೆ-3' ರಾಕೆಟ್ ಬಳಕೆಗೆ ಇಸ್ರೊ ಚಿಂತನೆ

ಭಾರತದ ಮಹತ್ವದ ಯೋಜನೆಯ ಮೊದಲ ಹೆಜ್ಜೆ ಶುಭಾಂಶು ಶುಕ್ಲಾ ಬಾಹ್ಯಾಕಾಶ ಯಾನ

ಭಾರತ ಮೂಲದ ಗಗನಯಾತ್ರಿ ಸಂಖ್ಯೆ 4

ದೆಹಲಿ: ಭಾರತದಲ್ಲಿ ಜನಿಸಿ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಗಗನಯಾತ್ರೆ ಕೈಗೊಂಡವರ ಸಾಲಿನಲ್ಲಿ ಭಾರತೀಯ ವಾಯುಪಡೆಯ ವಿಂಗ್ ಕಮಾಂಡರ್ ರಾಕೇಶ್ ಶರ್ಮಾ ಮೊದಲಿಗರಾಗಿದ್ದಾರೆ. ನಂತರದಲ್ಲಿ ಕಲ್ಪನಾ ಚಾವ್ಲಾ ಹೆಸರಿದೆ. ಈಗ ಶುಭಾಂಶು ಶುಕ್ಲ ಈ ಸಾಧಕರ ಪಟ್ಟಿಗೆ ಹೊಸದಾಗಿ ಸೇರ್ಪಡೆಗೊಂಡಿದ್ದಾರೆ. ಅಮೆರಿಕದಲ್ಲಿ ಜನಿಸಿದ್ದರೂ ಸುನೀತಾ ವಿಲಿಯಮ್ಸ್ ಅವರ ಬೇರುಗಳು ಭಾರತದ ಗುಜರಾತ್‌ನಲ್ಲಿವೆ. ಇನ್ನು 4 ವರ್ಷಗಳ ಬಳಿಕ ಈ ಸಾಲಿಗೆ ಸೇರಲು ಆಂಧ್ರಪ್ರದೇಶದ ಗೋದಾವರಿ ಜಿಲ್ಲೆಯ 23ರ ಯುವತಿ ಜಾಹ್ನವಿ ದಂಗೇಟಿ ಸಜ್ಜಾಗುತ್ತಿದ್ದಾರೆ. ಸದ್ಯ ಭಾವಿ ಗಗನಯಾತ್ರಿ ಎಂದು ಗುರುತಿಸಿಕೊಂಡಿರುವ ಜಾಹ್ನವಿ, 2029ಕ್ಕೆ ಅಮೆರಿಕ ಸಂಸ್ಥೆ ಮೂಲಕ ಗಗನಯಾನ ಕೈಗೊಳ್ಳಲಿದ್ದಾರೆ.

ಸುನೀತಾ ವಿಲಿಯಮ್ಸ್



ಅಮೆರಿಕದ ನೌಕಾಪಡೆಯ ನಿವೃತ್ತ ಅಧಿಕಾರಿಯಾಗಿರುವ ಸುನೀತಾ ವಿಲಿಯಮ್ಸ್, ಗಗನಯಾನಿ, ಬಾಹ್ಯಾಕಾಶ ಸಂಶೋಧಕಿಯಾಗಿ ಪ್ರಸಿದ್ಧರು. ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಅತಿ ದೀರ್ಘ ಅವಧಿಗೆ ಸೇವೆ ಸಲ್ಲಿಸಿದ ಮಹಿಳೆ ಎನಿಸಿಕೊಂಡಿದ್ದಾರೆ. ಅತ್ಯಧಿಕ ಸಂಖ್ಯೆಯಲ್ಲಿ 'ಸ್ಪೇಸ್ ವಾಕ್'(ಬಾಹ್ಯಾಕಾಶ ನಡಿಗೆ) ಪ್ರಯೋಗದಲ್ಲೂ ಭಾಗಿಯಾಗಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. 'ನಾಸಾ' ಕೈಗೊಂಡ ಗಗನಯಾನ-14ರಲ್ಲಿ ಮೊದಲು ಭಾಗಿಯಾದ ಸುನೀತಾ, ಬಳಿಕ ಗಗನಯಾನ-15 ಮತ್ತು ಗಗನಯಾನ-32ರ ಯೋಜನೆಯಲ್ಲಿ ಫ್ಲೈಟ್ ಇಂಜಿನಿಯರ್ ಆಗಿದ್ದರು. ಗಗನಯಾನ-33ರಲ್ಲಿ ಕಮಾಂಡರ್ ಆಗಿದ್ದರು.

ಸುನೀತಾ ಅಮೆರಿಕದ ಒಹಿಯೊ ರಾಜ್ಯದ ಯುಕ್ಲಿಡ್ ನಗರದಲ್ಲಿ 1965ರ ಸೆಪ್ಟೆಂಬರ್ 19ರಂದು ಜನಿಸಿದ್ದರೂ ಅವರಿಗೆ ಭಾರತದ ನಂಟಿದೆ. ಅವರ ತಂದೆ ದೀಪಕ್ ಪಾಂಡ್ಯ ಭಾರತೀಯರು. ಗುಜರಾತ್ ರಾಜ್ಯದ ಮೆಹ್ಸಾನಾ ಜಿಲ್ಲೆಯಲ್ಲಿ ಜನಿಸಿದವರು. ಹಾಗಾಗಿ, ಸುನೀತಾ ವಿಲಿಯಮ್ಸ್ ಹಲವು ಬಾರಿ ಭಾರತಕ್ಕೆ ಆಗಮಿಸಿ ಅಜ್ಜ-ಅಜ್ಜಿಯ ಗುಜರಾತ್ ಮನೆಯಲ್ಲಿ ಕೆಲಕಾಲವಿದ್ದು ಹೋಗಿದ್ದಾರೆ. ಸುನೀತಾ ಅವರ ತಾಯಿ ಉರ್ಸುಲೀನ್ ಬೋನಿ ಪಾಂಡ್ಯ, ಸ್ಲೊವೇನ್ ಅಮೆರಿಕನ್ ಪ್ರಜೆ. ಸದ್ಯ ಅಮೆರಿಕದ ಮೆಸಾಚುಸೆಟ್ಸ್‌ನ ಫಾಲ್‌ಮೌತ್‌ನಲ್ಲಿ ನೆಲೆಸಿದ್ದಾರೆ.

ಶುಭಾಂಶು ಶುಕ್ಲಾ

ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ(39), ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ(ಇಸ್ರೊ) ಬಾಹ್ಯಾಕಾಶ ಸಂಶೋಧಕರಾಗಿದ್ದಾರೆ. ಸದ್ಯ ನಾಸಾ-ಇಸ್ರೊ ಸಹಭಾಗಿತ್ವದಲ್ಲಿ ಅಮೆರಿಕದ ಖಾಸಗಿ ಸಂಸ್ಥೆ ಕೈಗೊಂಡಿರುವ 'ಆಕ್ಸಿಯೋಂ ಮಿಷನ್-4'ರಲ್ಲಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದಾರೆ. ಉತ್ತರ ಪ್ರದೇಶದ ಲಖನೌನಲ್ಲಿ 1985ರ ಅಕ್ಟೋಬರ್ 10ರಂದು ಜನಿಸಿದ ಶುಭಾಂಶು, ಬೆಂಗಳೂರಿನಲ್ಲಿ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್' ಶಿಕ್ಷಣ ಸಂಸ್ಥೆಯಲ್ಲಿ ಹಾಗೂ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲಿ ವ್ಯಾಸಂಗ ಮಾಡಿದ್ದಾರೆ. ಐಎಎಫ್‌ನಲ್ಲಿ ಸು-30 ಎಂಕೆ1, ಮಿಗ್-21, ಮಿಗ್-29, ಜಾಗ್ವಾರ್, ಹಾಕ್, ಡಾರ್ನಿಯರ್ 228 ಮತ್ತು ಎಎನ್-32 ಯುದ್ಧ ವಿಮಾನಗಳನ್ನು ಚಲಾಯಿಸಿ ಅನುಭವ ಪಡೆದಿರುವ ಶುಭಾಂಶು, 2 ಸಾವಿರಕ್ಕೂ ಹೆಚ್ಚು ಸಮಯ ಹಾರಾಟದ ಅನುಭವ ಹೊಂದಿದ್ದಾರೆ. ಗಗನಯಾತ್ರಿ, ಬಾಹ್ಯಾಕಾಶ ಸಂಶೋಧಕ ಸೇವೆಗೆ 2019ರಲ್ಲಿ ಆಯ್ಕೆಯಾದ ಶುಭಾಂಶು, 'ಇಸ್ರೊ' ಪರೀಕ್ಷೆಗಳಲ್ಲೆಲ್ಲಾ ಸಾಧನೆ ತೋರಿ ಅಂತಿಮ ಸುತ್ತಿಗೆ ಬಂದರು. ಬಳಿಕ, 2020ರಲ್ಲಿ ರಷ್ಯಾದಲ್ಲಿ ಗಗನಯಾನಿಗಳಿಗೆ ನೀಡುವ ಪ್ರಾಥಮಿಕ ತರಬೇತಿ ಪಡೆದುಕೊಂಡರು.

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕನ್ನಡ ಜಾನಪದ ರಾಜ್ಯ ಮಟ್ಟದ ಮೊದಲ ಸಮ್ಮೇಳನದಲ್ಲಿ ಡಾ.ಸೋಮಶೇಖರ್ ಅಭಿಮತ

ಎಲ್ಲ ಸಾಹಿತ್ಯಕ್ಕೆ ಮೂಲ ಜನಪದ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಶ್ರಮ ಸಂಸ್ಕೃತಿ, ಬೆವರಿನ ಸಂಸ್ಕೃತಿ, ಮಣ್ಣಿನ ಸೊಗಡಿನ ಸಂಸ್ಕೃತಿ ಸಾಹಿತ್ಯ ಜಾನಪದ ಸಾಹಿತ್ಯವಾಗಿದೆ ಎಂದು ಮೊದಲ ಕನ್ನಡ ಜಾನಪದ ಸಮ್ಮೇಳನಾಧ್ಯಕ್ಷ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿ ಸೋಮಶೇಖರ್ ಹೇಳಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ಘಟಕದ ಕನ್ನಡ ಜಾನಪದ ಪರಿಷತ್ ಸಹಯೋಗದಲ್ಲಿ ಬುಧವಾರ ನಡೆದ ಕನ್ನಡ ಜಾನಪದ ರಾಜ್ಯ ಮಟ್ಟದ ಮೊದಲ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿ, ಈ ಜಾನಪದ ಸಾಹಿತ್ಯದ ಪ್ರಕಾರವು ಎಲ್ಲಾ ಸಾಹಿತ್ಯ ಮೂಲ ಪ್ರಕಾರವಾಗಿದ್ದು, ಜನಪದರ ಅಂತರಾಳದಲ್ಲಿ ಅರಳಿದಂತಹ ಕಲೆ, ಸಂಸ್ಕೃತಿ. ಜಾನಪದ ಸಾಹಿತ್ಯವನ್ನು ರಚಿಸಿದವರು ಅಜ್ಞಾತರು, ಅನಾಮಿಕರು. ಎಲ್ಲೂ ಕೂಡ ಜಾನಪದ ಸಾಹಿತ್ಯದ ರಚನಕಾರರ ಹೆಸರು ಉಲ್ಲೇಖ ಆಗಿಲ್ಲ. ಜಾನಪದ ಸಾಹಿತ್ಯ ಸಾಗರದಷ್ಟು ಆಳ, ಆಕಾಶದಷ್ಟು ವಿಶಾಲ. ಹೀಗಾಗಿ ಜಾನಪದ ಸಾಹಿತ್ಯವನ್ನು ರಚಿಸಿದವರು ಅಕ್ಷರಬಲ್ಲ ಪಂಡಿತರಲ್ಲ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಮಾತನಾಡಿ ಜನಪದ ಗೀತೆ, ಸಂಸ್ಕೃತಿಯನ್ನು ಇಂದಿನ ಯುವಪೀಳಿಗೆಗೆ ತಲುಪಿಸುವಂತಹ ಕೆಲಸವಾಗಬೇಕಾಗಿದೆ. ಹುಟ್ಟಿದಾಗಿನಿಂದ ಸಾಯುವವರೆಗೂ ಹಾಡುವ ಸಾಲುಗಳೇ ಜಾನಪದ ಸಾಹಿತ್ಯವಾಗಿದೆ. ಯಾವುದಾದರೊಂದು ಹಾಡಿಗೆ ಸಣ್ಣ ತಿರುವು ನೀಡಿ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಹಾಡಿದರೆ ಅದು ಎಲ್ಲಾ ಮಕ್ಕಳ ಬಾಯಿಯಲ್ಲಿರುತ್ತದೆ. ಜನಪದದ ಎಲ್ಲಾ ಸಂಗೀತದ ಉಗಮಕ್ಕೆ ಮೂಲ. ಎಲ್ಲಾ ಸಂಗೀತಗಳು ಹುಟ್ಟಿದ್ದು ಜನಪದದಿಂದ ಎಂದರು.

ಕಾರ್ಯಕ್ರಮದಲ್ಲಿ ಸೋಬಾನ ಸ್ಮರಣ ಸಂಚಿಕೆ, ಜಾನಪದ ನೂರೊಂದು ಕೃತಿ, ಜಾನಪದ ಬಂಡಿ ಬಾಗಲಕೋಟೆ ಸ್ಮರಣ ಸಂಚಿಕೆ, ಜಲ ಜಾನಪದ ಕೃತಿಯನ್ನು ಲೋಕಾರ್ಪಣೆ ಮಾಡಲಾಯಿತು. ಬಿಡುಗಡೆಗೊಳಿಸಲಾಯಿತು. ಅಲ್ಲದೇ ಜಾನಪದ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಡಾ. ಜಾನಪದ ಎಸ್ ಬಾಲಾಜಿ , ನಾಗನೂರು ರುದ್ರಾಕ್ಷಿಮಠದ ಡಾ. ಅಲ್ಲಮಪ್ರಭು ಮಹಾಸ್ವಾಮಿ, ಅಥಣಿ ಶ್ರೀಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಜಿ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ರ. ನರಸಿಂಹಮೂರ್ತಿ, ಡಾ. ರಿಯಾಜ್ ಪಾಷಾ, ಗುರುರಾಜ ಹೊಸಕೋಟೆ ಮತ್ತಿತರರು ಇದ್ದರು.

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕನ್ನಡ ಜಾನಪದ ರಾಜ್ಯ ಮಟ್ಟದ ಮೊದಲ ಸಮ್ಮೇಳನದಲ್ಲಿ ಸಾಧಕರಿಗೆ ದಶಮಾನೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಾಧಕರಿಗೆ ದಶಮಾನೋತ್ಸವ ರಾಷ್ಟ್ರ ಪ್ರಶಸ್ತಿ ಪ್ರದಾನ

ಕಾರ್ಯಕ್ರಮಕ್ಕೂ ಮುನ್ನ ರಾಷ್ಟ್ರ ಧ್ವಜ, ನಾಡಧ್ವಜ ಮತ್ತು ಪರಿಷತ್ತಿನ ಧ್ವಜಾರೋಹಣ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ನಂತರ ಪುರಭವನದಿಂದ ರವೀಂದ್ರ ಕಲಾಕ್ಷೇತ್ರದ ಮಹಾದ್ವಾರದವರೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಸಲಾಯಿತು. ಅಲ್ಲದೇ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಕನ್ನಡ ಜಾನಪದ ಪರಿಷತ್ ದಶಮಾನೋತ್ಸವ ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಶಿವಲೀಲಾ ನೃತ್ಯ ಅಕಾಡೆಮಿ ವತಿಯಿಂದ ಸಮೂಹ ಜಾನಪದ ನೃತ್ಯ ರೂಪಕವನ್ನು ಪ್ರದರ್ಶಿಸಲಾಯಿತು. ಈ ಸಂದರ್ಭದಲ್ಲಿ ಜಾನಪದ ಗೋಷ್ಠಿ ಮತ್ತು ಜಾನಪದ ಮಹಿಳಾ ಗೋಷ್ಠಿಗಳನ್ನು ನಡೆಸಲಾಯಿತು.

ಕರ್ನಾಟಕ ಸರಕಾರ ಜಾನಪದ ವಿವಿಗಳನ್ನು , ಜಾನಪದ ಅಕಾಡೆಮಿ ರಚಿಸಿದ್ದು, ಜಾನಪದ ಸಾಹತ್ಯದ ಪರವಾಗಿ ಇರುವಂತಹ ಒಲವನ್ನು ತೋರುತ್ತಿದೆ. ಜಾನಪದ ಸಾಹಿತ್ಯವನ್ನು ಉಳಿಸುವ ಕೆಲಸವನ್ನು ಜಾನಪದ ಸಂಶೋಧನಾ ಕೇಂದ್ರಗಳು ಮಾಡಬೇಕು. ಜಾನಪದ ಕಲೆಗೆ ಪ್ರೋತ್ಸಾಹದ ಜತೆಗೆ ಪ್ರತಿ ಜಿಲ್ಲೆಯಲ್ಲೂ ಮೂಲ ಜಾನಪದ ಕಲಾವಿದರ ಸೇವೆಗಳನ್ನು ಗುರುತಿಸಿ, ನಶಿಸಿ ಹೋಗುತ್ತಿರುವ ಜಾನಪದ ಕಲೆ, ಕಲಾವಿದರ ಬದುಕಿನ ಚಿತ್ರಣ ನೀಡಬೇಕು.

- ಡಾ. ಸಿ ಸೋಮಶೇಖರ್ ಕನ್ನಡ ಜಾನಪದ ಸಮ್ಮೇಳನಾಧ್ಯಕ್ಷ

ಜಾನಪದ ಸಮ್ಮೇಳನದಲ್ಲಿ ಪಾಲ್ಗೊಂಡ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ ಅವರು ತಂಬೂರಿಗಳನ್ನು ವೀಕ್ಷಣೆ ಮಾಡಿದರು.

ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಜಾನಿ ಬಯೋಸ್ಪಿಯರ್ ಅಧಿವೇಶನ

ಬೆಂಗಳೂರು: ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಜಾನಿ ಬಯೋಸ್ಪಿಯರ್ ಅಧಿವೇಶನ ಕಾರ್ಯಕ್ರಮ ಬುಧವಾರ ನಗರದ ಬ್ಲೇಜ್ ಹೆಣ್ಣು ಮಕ್ಕಳ ಪ್ರೌಢ ಶಾಲೆಯಲ್ಲಿ ನಡೆಯಿತು.

ಶಾಲೆಯ ಸಿಇಎಸ್ ವಿಭಾಗ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಮತ್ತು ಎಫ್ ಇಆರ್‌ಎನ್‌ಎಸ್‌ಎಸ್ ಜಂಟಿಯಾಗಿ ಆಯೋಜಿಸಿದ್ದ ಅಧಿವೇಶನ ಮತ್ತು ಕ್ಲೈಮೆಟ್ ಆಕ್ಷನ್ ಫೋರಂ ಅನ್ನು ಹಿರಿಯ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಪ್ಲಾಸ್ಟಿಕ್ ಮುಕ್ತ ಸಮಾಜ ಮತ್ತು ಆರೋಗ್ಯಕರ ಆಹಾರದ ಬಗ್ಗೆ ಮಾಹಿತಿ ನೀಡಿದರು. ಪ್ಲಾಸ್ಟಿಕ್ ಬಳಸುವುದರಿಂದ ಎದುರಿಸ ಬೇಕಾದ ಸಮಸ್ಯೆ ಜತೆಗೆ ಮರಗಳ ಮಹತ್ವ ತಿಳಿಸಿಕೊಟ್ಟರು.

ಎಫ್‌ಇಆರ್‌ಎನ್‌ಎಸ್‌ಎಸ್ ಸ್ಥಾಪಕ ವ್ರಿಜುಲಾಲ್.ಎಂ.ವಿ ಅವರು ಹವಾಮಾನ ಬದಲಾವಣೆ ತಗ್ಗಿಸುವಿಕೆ-ಥಿಂಕ್ ಗ್ಲೋಬಲ್, ಆಕ್ಟ್ ಲೋಕಲ್ ಕುರಿತು ಸಮಾರೋಪ ನಡೆಸಿದರು. ಇದರಲ್ಲಿ ಹವಾಮಾನ ಬದಲಾವಣೆ ಮತ್ತು ಪರಿಸರದ ಮೇಲೆ ಹೇಗೆ ನಕಾರತ್ಮಕ ಅಥವಾ ಧನಾತ್ಮಕ ಪರಿಣಾಮವನ್ನು ಬೀರುತ್ತದೆ ಮತ್ತು ಉತ್ತಮ ಹವಾಮಾನ ಸ್ಥಿತಿಸ್ಥಾಪಕತ್ವಕ್ಕಾಗಿ ಧನಾತ್ಮಕ ಬದಲಾವಣೆಯತ್ತ ಖಚಿತಪಡಿಸಿ ಕೊಳ್ಳುವ ಕ್ರಮಗಳನ್ನು ವಿವರಿಸಿದರು. ಕೆಕೆ ಇಂಗ್ಲಿಷ್ ಶಾಲೆಯ ಅಧ್ಯಕ್ಷ ಡಾ. ಎಂ.ಎ.ಖಾನ್, ಐಐಎಸ್‌ಸಿಯ ತುಲಿಕಾ, ಐಐಎಸ್‌ಸಿಯ ಲಕ್ಷ್ಮಿಪ್ರಿಯಾ, ಬೆಂಗಳೂರು ವಿವಿಯ ಐಪಿಆರ್ ಸಂಯೋಜಕಿ ಎ.ವಿ.ನಾಗರತ್ನ ಉಪಸ್ಥಿತರಿದ್ದರು.

ಬ್ಲೇಜ್ ಹೆಣ್ಣು ಮಕ್ಕಳ ಪ್ರೌಢ ಶಾಲೆಯಲ್ಲಿ ನಡೆದ ಜಾನಿ ಬಯೋಸ್ಪಿಯರ್ ಅಧಿವೇಶನದಲ್ಲಿ ಹಿರಿಯ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ, ಎಫ್‌ಇಆರ್‌ಎನ್‌ಎಸ್‌ಎಸ್ ಸ್ಥಾಪಕ ವ್ರಿಜುಲಾಲ್. ಎಂ.ವಿ, ಕೆಕೆ ಇಂಗ್ಲಿಷ್ ಶಾಲೆಯ ಅಧ್ಯಕ್ಷ ಡಾ.ಎಂ.ಎ.ಖಾನ್ ಮತ್ತಿತರರು ಭಾಗವಹಿಸಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಜುಲೈ 7ರಂದು ಪ್ರತಿಭಟನೆ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಪೂರೈಸುವಂತೆ ಕೋರಿ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆ ಅಧಿಕಾರಿ, ನೌಕರರು ಸಾಮೂಹಿಕ ರಜೆ ಹಾಕಿ ಜುಲೈ 7ರಂದು ಬಹತ್ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

ಸಂಘದ ಅಧ್ಯಕ್ಷ ಅಮೃತ್ ರಾಜ್ ಮಾತನಾಡಿ, ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತು ಹಾಗೂ ಮಹಾನಗರ ಪಾಲಿಕೆಯ 10 ಮಹಾನಗರ ಪಾಲಿಕೆಯ ಅಧಿಕಾರಿ ಮತ್ತು ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ಹಲವಾರು ಬಾರಿ ಮನವಿ ಮಾಡಿಕೊಂಡಿದ್ದರೂ ಯಾವುದೇ ಪ್ರಯೋಜನವಾಗದ ಹಿನ್ನೆಲೆ ಹೋರಾಟದ ಹಾದಿ ಹಿಡಿಯಬೇಕಾಯಿತು. ಈ ಹಿನ್ನೆಲೆ ಜು.7 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಎಲ್ಲಾ ಮಹಾನಗರ ಪಾಲಿಕೆಯ ಅಧಿಕಾರಿ ನೌಕರರು ಸಾಮೂಹಿಕ ರಜೆ ಹಾಕಿ ಕೆಲಸ ಕಾರ್ಯಗಳನ್ನು ಸ್ಥಗಿತಗೊಳಿಸಿ ಬೃಹತ್ ಪ್ರತಿಭಟನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

7ನೇ ವೇತನ ಆಯೋಗದ ಸೌಲಭ್ಯವನ್ನು ರಾಜ್ಯ ಸರಕಾರಿ ನೌಕರರಿಗೆ ಮಹಾನಗರ ಪಾಲಿಕೆ ಅಧಿಕಾರಿ ನೌಕರರಿಗೆ ಯಥಾವತ್ತಾಗಿ ಸರಕಾರ ಆರ್ಥಿಕ ಇಲಾಖೆಯಿಂದಲೇ ಅನುದಾನವನ್ನು ಬಿಡುಗಡೆ ಮಾಡಬೇಕು. ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ತಿದ್ದುಪಡಿ ಮಾಡಿ ಕರಡು ಅಧಿಸೂಚನೆಯನ್ನು ಪ್ರಕಟಿಸಬೇಕು. ಕರ್ನಾಟಕ ರಾಜ್ಯ ಸರಕಾರಿ ನೌಕರರಿಗೆ ಜಾರಿ ಮಾಡಿರುವ ಕೆ.ಜಿ.ಐ.ಡಿ ಮತ್ತು ಜಿ.ಪಿ.ಎಫ್ ಸೌಲಭ್ಯವನ್ನು ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರಿಗೆ ಜಾರಿಗೊಳಿಸುವುದು ನಮ್ಮ ಪ್ರಮುಖ ಬೇಡಿಕೆಯಾಗಿದೆ ಎಂದು ಅವರು ಹೇಳಿದರು.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **19.05.2021** ರಂದು ಕರೆದು ಸಾಲಗಾರ **ಗಿರೀಶ್ ಎಸ್ ಮತ್ತು ಉಷಾರಾಣಿ ಎಸ್ ಕೆ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 36,89,775.46 (ಮೂವತ್ತಾರು ಲಕ್ಷದ ಎಂಬತ್ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತೈದು ರೂಪಾಯಿಗಳು ಮತ್ತು ನಲವತ್ತಾರು ಪೈಸೆ ಮಾತ್ರ)** ಸಾಲ ಖಾತೆ ನಂ. **HHLMAL00475393** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **30.04.2021** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **23.06.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ. ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ. 36,89,775.46 (ಮೂವತ್ತಾರು ಲಕ್ಷದ ಎಂಬತ್ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತೈದು ರೂಪಾಯಿಗಳು ಮತ್ತು ನಲವತ್ತಾರು ಪೈಸೆ ಮಾತ್ರ) 30.04.2021** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಸಂ. ಎಸ್ -10, 2ನೇ ಮಹಡಿ, ಅಮಿಟಿ ಶೆಲ್ಟರ್ಸ್ ಅಪಾರ್ಟ್ಮೆಂಟ್, ಚೂಡೇನಪುರ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು -560059

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 23.06.2025
ಸ್ಥಳ : ಬೆಂಗಳೂರು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಸಮ್ಮಾನ್ ಕ್ಯಾಪಿಟಲ್ ಲಿ. (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಅಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **30.01.2024** ರಂದು ಕರೆದು ಸಾಲಗಾರ **ಲಾವಣ್ಯ ವೇಲು ಮತ್ತು ವೇಲು ಪಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ.7,34,365.23 (ಏಳು ಲಕ್ಷದ ಮೂವತ್ತನಾಲ್ಕು ಸಾವಿರದ ಮುನ್ನೂರ ಅರವತ್ತೈದು ರೂಪಾಯಿಗಳು ಮತ್ತು ಇಪ್ಪತ್ತಮೂರು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBAG00338021** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **23.01.2024** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **21.06.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿ. ನ** (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ಬಾಕಿ ಇರುವ ಮೊತ್ತ **ರೂ.7,34,365.23 (ಏಳು ಲಕ್ಷದ ಮೂವತ್ತನಾಲ್ಕು ಸಾವಿರದ ಮುನ್ನೂರ ಅರವತ್ತೈದು ರೂಪಾಯಿಗಳು ಮತ್ತು ಇಪ್ಪತ್ತಮೂರು ಪೈಸೆ ಮಾತ್ರ) 23.01.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್. ಸಂ. ಜಿ-02 ನೆಲಮಹಡಿ, 953 ಚದರ ಅಡಿ ಆಳತೆ, ಸೂಪರ್ ಬಿಲ್ಟ್-ಆಪ್ ಪ್ರದೇಶ, 278 ಚದರ ಅಡಿ, ಅವಿಭಜಿತ ಹಂಚಿಕೆ, ಹಕ್ಕು ಶೀರ್ಷಿಕೆ ಮತ್ತು ಸಾಮಾನ್ಯ ಪ್ರದೇಶಗಳಲ್ಲಿ ಅನುಪಾತದ ಹಂಚಿಕೆಯೊಂದಿಗೆ ಭೂಮಿಯಲ್ಲಿ ಆಸಕ್ತಿ ಹೊಂದಿದ್ದು, ಗೊಲ್ಲಹಳ್ಳಿ ಗ್ರಾಮ ಅಟ್ಟಿಬೆಲೆ ಹೋಬಳಿ ಅನೇಕಲ್ ತಾಲ್ಲೂಕು ಬೆಂಗಳೂರು - 560100 ನಲ್ಲಿ ನೆಲೆಗೊಂಡಿರುವ ''ಶುಭ ಓಂಕಾರ'' ಎಂದು ಕರೆಯಲ್ಪಡುವ ಬಹುಮಹಡಿಯಲ್ಲಿ ಒಂದು ಮುಚ್ಚಿದ ಕಾರು ಪಾರ್ಕಿಂಗ್ ಹೊಂದಿದೆ. ಮತ್ತು ಫ್ಲಾಟ್ ಈ ಕೆಳಗಿನಂತೆ ಸೀಮಿತವಾಗಿದೆ ಎಂದು ಹೇಳಲಾಗಿದೆ:

ಪೂರ್ವದಲ್ಲಿ : ಕಾರಿಡಾರ್ ಎಂಡ್ ಫ್ಲಾಟ್ ಸಂ ಜಿ-09 ಪಶ್ಚಿಮದಲ್ಲಿ : ಆಕಾಶಕ್ಕೆ ಮುಕ್ತ
ಉತ್ತರದಲ್ಲಿ : ಫ್ಲಾಟ್ ಸಂ ಜಿ-01 ದಕ್ಷಿಣದಲ್ಲಿ : ಫ್ಲಾಟ್ ಸಂ ಜಿ-03

ಅಧಿಕಾರವಿರುವ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿ.
(ಹಿಂದಿನ ಹೆಸರು: ಇಂಡಿಯಬುಲ್ಸ್ ಹೌಸಿಂಗ್‌ಫೈನಾನ್ಸ್ ಲಿಮಿಟೆಡ್)

ದಿನಾಂಕ : 21.06.2025
ಸ್ಥಳ : ಬೆಂಗಳೂರು

ಸಚಿವರಿಂದ ಚಾಲಕರಿಗೆ ನೇಮಕ ಪತ್ರ ವಿತರಣೆ

ಬೆಂಗಳೂರು: ನಗರದ ಕೆಎಸ್‌ಆರ್‌ಟಿಸಿ ಸಭಾಂಗಣದಲ್ಲಿ ಎನ್‌ಡಬ್ಲ್ಯೂಕೆಆರ್‌ಟಿಸಿಗೆ ಹೊಸದಾಗಿ ನೇಮಕವಾದ ಚಾಲಕರಿಗೆ ನೇಮಕಾತಿ ಪತ್ರ ವಿತರಣೆ ಹಾಗೂ ವಾಣಿಜ್ಯ ಮಳಿಗೆಗಳ ಪರವಾನಗಿ ನಿರ್ವಹಣಾ ತಂತ್ರಾಂಶವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅನಾವರಣಗೊಳಿಸಿದರು.

ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿ ಹೊಸದಾಗಿ ನೇಮಕಗೊಂಡವರಿಗೆ ಶುಭಾಷಯ ತಿಳಿಸಿ, 2019 ರಲ್ಲಿ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದ್ದು, ದೇಶದಲ್ಲೆಡೆ ಹರಡಿದ ಕೋವಿಡ್-19 ಕಾರಣದಿಂದ ಸ್ಥಗಿತಗೊಂಡಿತ್ತು. ಬಳಿಕ ಹೊಸ ಸರಕಾರ ಅಸ್ತಿತ್ವಕ್ಕೆ ಬಂದ ಬಳಿಕ ವಾ.ಕ.ರ.ಸಾ. ಸಂಸ್ಥೆಯಲ್ಲಿ 1000 ಚಾಲಕ ಮತ್ತು ಚಾಲಕ ಕಂ ನಿರ್ವಾಹಕ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿ, ಬಹಳ ಯಶಸ್ವಿಯಾಗಿ ಹಾಗೂ ಸಂಪೂರ್ಣ ಪಾರದರ್ಶಕತೆ ಯಿಂದ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದೇವೆ ಎಂದರು.

ಸರಕಾರವು 2000 ಚಾಲಕ-ಕಂ-ನಿರ್ವಾಹಕ ಹುದ್ದೆಗಳಿಗೆ 2023 ರಲ್ಲಿ ಅನುಮತಿ ನೀಡಿತ್ತು, ಆದರೆ ಚಾಲಕ ಹುದ್ದೆಗೆ ಅಧಿಸೂಚನೆ ಹೊರಡಿಸಿದ್ದರಿಂದ, 1000 ಚಾಲಕರನ್ನು ನೇಮಕಾತಿ ಮಾಡಿಕೊಂಡು, ಹೊಸದಾಗಿ ಚಾಲಕ-ಕಂ-ನಿರ್ವಾಹಕ ಹುದ್ದೆಗೆ ಅಧಿಸೂಚನೆ ಹೊರಡಿಸಲು ಕ್ರಮ ತೆಗೆದುಕೊಳ್ಳುವಾಗ ಈಗಾಗಲೇ 57000 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ಅವರಿಗೆ ಅನ್ಯಾಯವಾಗಬಾರದೆಂಬ ಸದುದ್ದೇಶದಿಂದ ವಯೋಮಿತಿ ಸಡಿಲಿಕೆಗಾಗಿ ಡಿಪಿಎಆರ್ ಮತ್ತು ಕಾನೂನು ಇಲಾಖೆ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ ಎಂದರು.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧ್ಯಕ್ಷ ಭರಮಗೌಡ ಕಾಗೆ, ವ್ಯವಸ್ಥಾಪಕ ನಿರ್ದೇಶಕ ಪ್ರಿಯಾಂಗಾ ಎಮ್, ಉಪಾಧ್ಯಕ್ಷ ಪೀರಸಾಬ್ ಕೌತಾಳ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್, ಕಕರಸಾ ವ್ಯವಸ್ಥಾಪಕ ನಿರ್ದೇಶಕ ರಾಚಪ್ಪ ಮತ್ತಿತರರು ಇದ್ದರು.

ನಗರದ ಕೆಎಸ್‌ಆರ್‌ಟಿಸಿ ಸಭಾಂಗಣದಲ್ಲಿ ವಾಯುವ್ಯ ಕೆಆರ್‌ಟಿಸಿಗೆ ಹೊಸದಾಗಿ ನೇಮಕವಾದ ಚಾಲಕರಿಗೆ ನೇಮಕಾತಿ ಪತ್ರವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಿತರಿಸಿದರು.

ಬಿಡಿಎ ವತಿಯಿಂದ ನಿರ್ಮಿಸುತ್ತಿರುವ ಹೆಬ್ಬಾಳ ಮೇಲ್ಸೇತುವೆ ಕಾಮಗಾರಿಯನ್ನು ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ಬುಧವಾರ ಪರಿಶೀಲಿಸಿ, ತ್ವರಿತವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದರು. ಈ ವೇಳೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್,ಬಿಡಿಎ ಅಭಿಯಂತರ ಸದಸ್ಯ ಡಾ. ಶಾಂತರಾಜಣ್ಣ ಎಚ್.ಆರ್, ಬಿಬಿಎಂಪಿ ಅಭಿಯಂತರ ಲೋಕೇಶ್, ಅಧಿಕಾರಿಗಳು ಇದ್ದರು.

2026ಕ್ಕೆ ಮೆಟ್ರೋದ ಗುಲಾಬಿ ನೀಲಿ ಮಾರ್ಗಗಳು ಪೂರ್ಣ

ಬೆಂಗಳೂರು: ನಮ್ಮ ಮೆಟ್ರೋದ ಹೊಸ ಮಾರ್ಗಗಳ ಕಾಮಗಾರಿಯು ಭರದಿಂದ ಸಾಗಿದ್ದು, ಮುಂದಿನ ವರ್ಷ ಹಲವು ಕಾಮಗಾರಿಗಳು ಪೂರ್ಣಗೊಳ್ಳಲಿದೆ.

ಈ ಪೈಕಿ ನೀಲಿ ಮಾರ್ಗ ಹಾಗೂ ಗುಲಾಬಿ ಮಾರ್ಗದಲ್ಲಿ 7 ಕಿ.ಮೀ ಗುಲಾಬಿ ಮಾರ್ಗ ಕೆಲಸ ಶೇ.100ರಷ್ಟು ಮುಗಿದಿದ್ದು, ಈ ಮಾರ್ಗಕ್ಕೆ ಸಕಾಲದಲ್ಲಿ ಅಗತ್ಯ ಮೆಟ್ರೋ ಬೋಗಿಗಳನ್ನು ಒದಗಿಸುವುದಾಗಿ ಬಿಇಎಂಎಲ್ ಭರವಸೆ ನೀಡಿದೆ. ನಮ್ಮ ಮೆಟ್ರೋ ಮತ್ತು ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಒಪ್ಪಂದ ಮಾಡಿಕೊಂಡಿದ್ದು, ಮೊದಲು 3000 ಕೋಟಿ ರು.ಗೂ ಅಧಿಕ ಅಂದಾಜು ವೆಚ್ಚದ ಒಪ್ಪಂದ ನಂತರ ಹೆಚ್ಚುವರಿಯಾಗಿ 405 ಕೋಟಿ ರು. ವೆಚ್ಚದ ಹೆಚ್ಚುವರಿ ಒಪ್ಪಂದ ಮಾಡಿಕೊಂಡಿತು. 318 ಬೋಗಿಗಳು (52 ರೈಲುಗಳ) ಜತೆಗೆ ಹೆಚ್ಚುವರಿಯಾಗಿ 42 ಬೋಗಿಗಳನ್ನು ಒದಗಿಸುವ ಒಪ್ಪಂದ ಇವಾಗಿವೆ.

ಮೆಟ್ರೋ ಗುಲಾಬಿ ಮಾರ್ಗಕ್ಕೆ ಒಟ್ಟು 16 ರೈಲುಗಳು, ಉಳಿದವುಗಳು ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್ ಪುರ ಮಾರ್ಗವಾಗಿ ದೇವನಹಳ್ಳಿ ಏರ್‌ಪೋರ್ಟ್‌ಗೆ ಸಂಪರ್ಕ ಕಲ್ಪಿಸುವ ನಮ್ಮ ಮೆಟ್ರೋ ನೀಲಿ ಮಾರ್ಗಕ್ಕೆ ನಿಯೋಜಿಸಲಾಗುವುದು. ಈ ಎರಡು ಮಾರ್ಗಗಳ ಕಾಮಗಾರಿಗಳನ್ನು 2026ರಲ್ಲಿ ಪೂರ್ಣಗೊಳಿಸುವಂತೆ ಗಡುವು ನೀಡಲಾಗಿದೆ. ಅಷ್ಟರೊಳಗೆ ಬೋಗಿ ಪೂರೈಕೆ ಆದರೆ ಅಂದು ಕೊಂಡಂತೆ ಎರಡು ಹೊಸ ಮಾರ್ಗಗಳು ಸಾರ್ವಜನಿಕರಿಗೆ ಮುಕ್ತಗೊಳ್ಳುವುದು ಖಚಿತವಾಗುತ್ತದೆ.

ಮಾರ್ಚ್‌ಗೆ 20 ಬೋಗಿಗಳ ಪೂರೈಕೆ

ನಮ್ಮ ಮೆಟ್ರೋ ಕಾಳೇನ ಅಗ್ರಹಾರದಿಂದ -ನಾಗವಾರ ಗುಲಾಬಿ ಮಾರ್ಗದಲ್ಲಿ ಏಳು ಕಿ.ಮೀ ಎತ್ತರಿಸಿದ ಮಾರ್ಗ (ಕಾಳೇನ ಅಗ್ರಹಾರ-ತಾವರೆಕೆರೆ) ನಿರ್ಮಾಣ ಪೂರ್ಣಗೊಂಡಿದ್ದು, ಈ ಮಾರ್ಗದಲ್ಲಿ ಮೊದಲು ರೈಲು ಸಂಚಾರ ಆರಂಭಿಸುವ ನಿರೀಕ್ಷೆ ಇದೆ. ಒಪ್ಪಂದಂತೆ ಸಕಾಲಕ್ಕೆ ಬಿಇಎಂಎಲ್ 20 ಬೋಗಿಗಳನ್ನು ಪೂರೈಕೆ ಮಾಡಲಿದ್ದು, ಈ ಬೋಗಿಗಳನ್ನು ಸಂಪೂರ್ಣವಾಗಿ ಗುಲಾಬಿ ಮಾರ್ಗಕ್ಕೆ ಬಳಸಿಕೊಳ್ಳಲಾಗುವುದು. ಗುಲಾಬಿ ಮಾರ್ಗದಲ್ಲಿ ಬಾಕಿ ಇರುವ 13.70 ಕಿ. ಮೀ ಮಾರ್ಗದಲ್ಲಿ ಸುರಂಗ ಕಾಮಗಾರಿ ನಡೆದಿದೆ. ಅಂಡರ್‌ಗ್ರೌಂಡ್ ಕಾಮಗಾರಿ ಹಿನ್ನೆಲೆ ಕೆಲಸ ತಡವಾಗಿದೆ. ಮುಂದಿನ ವರ್ಷ ಗುಲಾಬಿ ಮಾರ್ಗ ಪೂರ್ಣಗೊಳ್ಳಲಿದೆ. 2026 ಮಾರ್ಚ್ ಗೆ 20 ಮೆಟ್ರೋ ಬೋಗಿಗಳು ಇದೇ ಮಾರ್ಗಕ್ಕೆ ಪೂರೈಕೆ ಮಾಡಲಾಗುವುದು ಎಂದು ಬಿಇಎಂಎಲ್ ಭರಸವೆ ನೀಡಿದೆ.

ಅಸೆಟ್ಸ್ ಕೇರ್ ಆ್ಯಂಡ್ ರೀಕನ್‌ಸ್ಟ್ರಕ್ಷನ್‌ಎಂಟರ್‌ಪ್ರೈಸ್ ಲಿಮಿಟೆಡ್
ಕಾರ್ಪೊರೇಟ್ ಕಚೇರಿ : ಘಟಕ ಸಂಖ್ಯೆ. 502, ಸಿ ವಿಂಗ್, ಒನ್ ಬಿಕೆಸಿ, ಪ್ಲಾಟ್ ಸಂಖ್ಯೆ. ಸಿ – 66, ಜಿ – ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ – 400051. **ದೂರವಾಣಿ :** 022 68643101.
ನೋಂದಾಯಿತ ಕಚೇರಿ : 14 ನೇ ಮಹಡಿ, ಇರಾಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ – 110019.
ಇಮೇಲ್ : acre.arc@acreindia.in I **ವೆಬ್‌ಸೈಟ್:** www.acreindia.in I **CIN :** U65993DL2002PLC115769

ಅನುಬಂಧ IV-ಎ
ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ-ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಅಸೆಟ್ಸ್ ಕೇರ್ ಆ್ಯಂಡ್ ರೀಕನ್‌ಸ್ಟ್ರಕ್ಷನ್ ಎಂಟರ್ಪ್ರೈಸ್ ಲಿ. [CIN: U65993DL2002PLC115769] (''ಸೆಕ್ಯೂರ್ಡ್ ಕ್ರೆಡಿಟರ್'')** ಇವರಿಗೆ ಮಾರ್ಟ್‌ಗೇಜ್ ಮಾಡಲಾದ/ ಚಾರ್ಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀನತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಧಿಕೃತ ಅಧಿಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ **ಪ್ರೇಮ್ ರಾಜ್ ಪ್ರೇಸನ್ನ ಕುಮಾರ್** ಮತ್ತು ಸುಬಿತಾ ಎಸ್ ಇವರಿಂದ **ಸಾಲ ಖಾತೆ ನಂ. HHLMYS00126989** ಇದರಲ್ಲಿನ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **20.06.2025**ರ ತನಕದ ಬಡ್ಡಿ **ರೂ. 16,79,373/- (ರೂಪಾಯಿ ಹದಿನಾರು ಲಕ್ಷ ಎಪ್ಪತ್ತ ಒಂಬತ್ತು ಸಾವಿರದ ಮುನ್ನೂರ ಎಪ್ಪತ್ತ ಮೂರು ಮಾತ್ರ)** ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು)ನಂತೆ ಕಾನೂನು ಸಂಬಂಧಿತ ವೆಚಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರ ಬೇಕಾದ ಇತರ ಶುಲ್ಕಗಳೊಂದಿಗೆ **21.06.2025**ರಿಂದ ಭವಿಷ್ಯದ ಬಡ್ಡಿ ಯ ವಸೂಲಿಗಾಗಿ **''ಎಲ್ಲಿದೆಯೊ ಹಾಗೆ'', ''ಏನಿದೆಯೊ ಹಾಗೆ''** ಮತ್ತು **''ಯಾವುದೇ ರಿಕೊರ್ಸ್ ಇಲ್ಲದ''** ಆಧಾರದಲ್ಲಿ ತಾರೀಖು **29.07.2025**ರಂದು **ಸಂಜೆ 05.00 ರಿಂದ ಸಂಜೆ 06.00 ರವರೆಗೆರ** ತನಕ ಮಾರಾಟ ಮಾಡಲಿದ್ದಾರೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (**''ಎಸ್‌ಸಿಎಲ್''**) (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ಇವರು, **HHLMYS00126989** ಸಂಖ್ಯೆಯ ಸಾಲದ ಖಾತೆಯನ್ನು, ಅದರ ಎಲ್ಲ ಹಕ್ಕುಗಳು, ಶೀರ್ಷಿಕೆಗಳು, ಆಸಕ್ತಿಗಳು, ಆಧಾರವಾಗಿರುವ ಭದ್ರತೆಗಳು, ಅಡಮಾನಗಳು ಮತ್ತು / ಅಥವಾ ಗ್ಯಾರಂಟಿಗಳು, ಸ್ಥಿರಾಸ್ತಿಯನ್ನೂ ಒಳಗೊಂಡಂತೆ, ದಿನಾಂಕ **27.06.2023** ರ ನಿಯೋಜನೆ ಒಪ್ಪಂದದ ಮೂಲಕ **ಎ.ಸಿ.ಆರ್.ಇ-102-ಟ್ರಸ್ಟ್‌ನ ಟ್ರಸ್ಟಿಯಾಗಿ** ಕಾರ್ಯನಿರ್ವಹಿಸುತ್ತಿರುವ ಸುರಕ್ಷಿತ ಸಾಲದಾತರಿಗೆ ನಿಯೋಜಿಸಲಾಗಿದೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 44,50,000/- (ರೂಪಾಯಿ ನಲವತ್ತ ನಾಲ್ಕು ಲಕ್ಷ ಐವತ್ತು ಸಾವಿರ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್‌ಮನಿ ಡಿಪಾಸಿಟ್ **(''ಇಎಮ್‌ಡಿ'') ರೂ. 4,45,000/- (ರೂಪಾಯಿ ನಾಲ್ಕು ಲಕ್ಷ ನಲವತ್ತ ಐದು ಸಾವಿರ ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

ಆಸ್ತಿ ಹೊಂದಿರುವ ಸೈಟ್ ನಂ. 330, **ಸರ್ವೆ ಸಂಖ್ಯೆ.** 89/2ಬಿ, **ರಾಯಲ್ ಹೆರಿಟೇಜ್ ಗಾರ್ಡನ್, ಮೈದನಹಳ್ಳಿ ಗ್ರಾಮ, ಇಲವಾಲ ಹೋಬಳಿ, ಮೈಸೂರು, ಕರ್ನಾಟಕ** - 570020. **ಗಡಿರೇಖೆಗಳು:**

ಉತ್ತರ	: **ಖಾಸಗಿ ಆಸ್ತಿ**	**ಪೂರ್ವ**	: **ಸೈಟ್ ಸಂಖ್ಯೆ** 331
ದಕ್ಷಿಣ	: **ರಸ್ತೆ**	**ಪಶ್ಚಿಮ**	: **ರಸ್ತೆ**

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.acreindia.in; ಸಂಪರ್ಕ ಸಂಖ್ಯೆ: 0124-6910910, +91 7065451024; ಇ-ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionfocus.in ಗೆ ಲಾಗಿನ್ ಮಾಡಿ.

ಸಹಿ
ಅಧಿಕೃತ ಅಧಿಕಾರಿ
ಅಸೆಟ್ಸ್ ಕೇರ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸ್ ಲಿ
ಎ.ಸಿ.ಆರ್.ಇ -102 **-ಟ್ರಸ್ಟ್‌ನ ಟ್ರಸ್ಟೀ .**

ದಿನಾಂಕ : 24.06.2025
ಸ್ಥಳ : ಮೈಸೂರು

''ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹಮ್ಮದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್ : complaint@acreindia.in ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ಪಾಲಿಸಿಯನ್ನು https://www.acreindia.in/compliance ನಲ್ಲಿ ಪಡೆಯಬಹುದು''.

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ವತಿಯಿಂದ ಪಟ್ಲ ಯಕ್ಷಾಶ್ರಯ ಯೋಜನೆಯಡಿ ಅರ್ಹ ಫಲಾನುಭವಿ ತೆಂಕು ಬಡಗಿನ ಕಲಾವಿದರುಗಳಿಗೆ ಸುಮಾರು 17 ಲಕ್ಷ ರು.ಗಳ ಅನುದಾನ ವಿತರಿಸಲಾಯಿತು. ಕೇಂದ್ರೀಯ ಸಮಿತಿ ಪದಾಧಿಕಾರಿಗಳು, ಫೌಂಡೇಶನ್‌ನ ಕೋಶಾಧಿಕಾರಿ ಸಿ.ಎ.ಸುದೇಶ್ ರೈ ಉಪಸ್ಥಿತರಿದ್ದರು.

ತುರ್ತು ಪರಿಸ್ಥಿತಿಯಲ್ಲಿ ಎಲ್ಲರೂ ಜೈಲು ಪಾಲಾಗಿದ್ದರು

ಬೆಂಗಳೂರು: 50 ವರ್ಷದ ಹಿಂದಿನ ಕರಾಳ ಅಧ್ಯಾಯ ತುರ್ತು ಪರಿಸ್ಥಿತಿಯಾಗಿದ್ದು, ಈ ವೇಳೆ ಯುವ ಮುಖಂಡನಾಗಿ ಹೋರಾಟ ನಡೆಸಿ ಯಶಸ್ವಿ ನಾಯಕರಾಗಿ ಹೊರಹೊಮ್ಮಿದವರಲ್ಲಿ ಮೋದಿಯವರು ಪ್ರಮುಖರಾಗಿದ್ದಾರೆ ಎಂದು ಮಾಜಿ ಪ್ರಧಾನಿ ದೇವೇಗೌಡ ಎಚ್.ಡಿ. ದೇವೇಗೌಡ ಹೇಳಿದರು.

ಜೆಪಿ ನಗರದ ಆರ್.ವಿ. ಡೆಂಟಲ್ ಕಾಲೇಜಿನ ಸಭಾಂಗಣದಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಹೊರತಂದಿರುವ 1975-77ರ ತುರ್ತುಪರಿಸ್ಥಿತಿ ವಿರುದ್ಧ ಹೋರಾಟದ ಸತ್ಯಕಥೆ ಭುಗಿಲು ಪುಸ್ತಕದ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿ, ರಾಷ್ಟ್ರದ ಬಹುತೇಕ ರಾಜಕೀಯ ವಿರೋಧಿಗಳೆಲ್ಲರೂ ಜೈಲು ಪಾಲಾದರು. ಸರಕಾರದ ವಿರುದ್ಧ ಟೀಕೆ ಮಾಡುತ್ತಿದ್ದ ನನ್ನನ್ನು ಸೇರಿದಂತೆ ಹಲವು ಸಮಾಜವಾದಿ, ಕಮ್ಯುನಿಸ್ಟ್, ಆರ್.ಎಸ್.ಎಸ್ ಮುಖಂಡರನ್ನೂ ಜೈಲಿಗೆ ಕಳುಹಿಸಲಾಯಿತು. ಇದನ್ನೆಲ್ಲ ಉಲ್ಲೇಖಿಸಿ ಹೊಸ ರೂಪದಲ್ಲಿ ಪುಸ್ತಕವನ್ನು ಹೊರತಂದಿರುವುದು ಶ್ಲಾಘನೀಯ ಎಂದರು.

ಅಟಲ್ ಬಿಹಾರಿ ವಾಜಪೇಯಿ, ಎಲ್. ಕೆ. ಅಡ್ವಾಣಿ, ಜಯಪ್ರಕಾಶ್ ನಾರಾಯಣ್, ಮೊರಾರ್ಜಿ ದೇಸಾಯಿಯಂತಹ ವಿರೋಧ ಪಕ್ಷದ ನಾಯಕರನ್ನು ಬಂಧಿಸಲಾಯಿತು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ಮತ್ತು ತಮ್ಮ ರಾಜಕೀಯ ನಂಬಿಕೆಗಳ ಜತೆ ನಿಂತಿದ್ದ ಅನೇಕರಿಗೆ ಇದು ಆಘಾತಕಾರಿ ಸಮಯವಾಗಿತ್ತು. ಇದನ್ನೆಲ್ಲ ಮನಗಂಡು ಯುವ ಪೀಳಿಗೆ ಪ್ರಜಾಪ್ರಭುತ್ವವನ್ನು ಸಂರಕ್ಷಿಸಲು ತುರ್ತು ಪರಿಸ್ಥಿತಿ ಸಮಯದಲ್ಲಿ ಅನೇಕರು ಮಾಡಿದ ತ್ಯಾಗವನ್ನು ಸ್ಮರಿಸಬೇಕು ಎಂದು ಎಚ್.ಡಿ. ದೇವೇಗೌಡ ಮನವಿ ಮಾಡಿದರು.

ಪುತ್ತೂರಿನ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ ಕಲ್ಲಡ್ಕ ಪ್ರಭಾಕರ್‌ಭಟ್ ಮಾತನಾಡಿ, ಇಂದಿರಾಗಾಂಧಿ ಚುನಾವಣೆಯಲ್ಲಿ ಅಕ್ರಮ ಮಾಡಿದ್ದಾರೆ ಎನ್ನುವ ತೀರ್ಪು ಅಲಹಾಬಾದ್ ಹೈಕೋರ್ಟ್ ತೀರ್ಪು ಮತ್ತು ಅದನ್ನು ಸುಪ್ರೀಂ ಕೋರ್ಟ್ ಕೋರ್ಟ್ ಎತ್ತಿ ಹಿಡಿದ ಪರಿಣಾಮ ಜೂನ್ 25ರ ಮಧ್ಯ ರಾತ್ರಿ ರಾಷ್ಟ್ರಪತಿ ಫಕ್ರುದ್ದೀನ್ ಅಹಮದ್ ಅವರ ಸಹಿಯನ್ನು ಪಡೆದು ತುರ್ತು ಪರಿಸ್ಥಿತಿಯನ್ನು ಹೇರಲಾಯಿತು. ಈ ನಿರ್ಧಾರದ ಹಿಂದೆ ಗಂಡೆದೆಯ ಸ್ವಯಂ ಸೇವಕರು ಕಾರಣರಾಗಿದ್ದರು. ಈಗಲೂ ತುರ್ತು ಪರಿಸ್ಥಿತಿಯ ಛಾಯೆ ರಾಜ್ಯದಲ್ಲಿ ಕಂಡುಬರುತ್ತಿದ್ದು, ಮರುಕಳಿಸದಂತೆ ತಡೆಯಲು ಜಾಗೃತಿ ಮುಖ್ಯವಾಗಿದೆ ಎಂದು ತಿಳಿಸಿದರು. ಈ ವೇಳೆ ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ ಕುಮಾರ್ ಮತ್ತಿತರು ಇದ್ದರು.

ರಾಷ್ಟ್ರೋತ್ಥಾನ ಸಾಹಿತ್ಯ ಹೊರತಂದಿರುವ ಸತ್ಯಕಥೆ ಭುಗಿಲು ಪುಸ್ತಕವನ್ನು ಜೆ.ಪಿ ನಗರದ ಆರ್.ವಿ.ಡೆಂಟಲ್ ಕಾಲೇಜಿನ ಸಭಾಂಗಣದಲ್ಲಿ ಲೋಕಾರ್ಪಣೆ ಮಾಡಲಾಯಿತು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಶಾಸಕ ಸುರೇಶ್ ಕುಮಾರ್, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ ಕುಮಾರ್, ಕಲ್ಲಡ್ಕ ಪ್ರಭಾಕರ್‌ಭಟ್ ಇದ್ದರು.

ಎಸ್‌ಬಿಐ: ಎಲ್‌ಬಿಒ ಹುದ್ದೆ ಭರ್ತಿಗೆ ಮರು ಅಧಿಸೂಚನೆ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಉದ್ಯೋಗಾಕಾಂಕ್ಷಿಗಳಿಗೆ, ಮೇ ಕೊನೆಯ ವಾರದಲ್ಲಿ ಸರ್ಕಲ್ ಬೇಸ್ಡ್ ಹುದ್ದೆಗಳಿಗಾಗಿ ಅರ್ಜಿ ಸಲ್ಲಿಕೆ ಕೊನೆಗೊಳಿಸಿದ್ದರೂ, ಇದೀಗ ಅದೇ ಅಧಿಸೂಚನೆ ಮತ್ತೆ ಪ್ರಕಟವಾಗಿದ್ದು, ಅರ್ಜಿ ಸಲ್ಲಿಸದವರಿಗೆ ಮತ್ತೆ ಅವಕಾಶ ನೀಡಲಾಗಿದೆ. ಹೊಸ ಪ್ರಕಟಣೆಯ ಪ್ರಕಾರ, ಅಭ್ಯರ್ಥಿಗಳು ಜೂನ್ 30ರೊಳಗೆ ಅರ್ಜಿ ಸಲ್ಲಿಸಬಹುದು. ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮತ್ತೆ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ.

ಹುದ್ದೆಗಳ ಸಂಖ್ಯೆ: ದೇಶಾದ್ಯಂತ ಒಟ್ಟು ರೆಗ್ಯುಲರ್ 2,600 ಮತ್ತು ಬ್ಯಾಕ್ಲಾಗ್ 364 ಹುದ್ದೆಗಳು. ಒಟ್ಟು 2,964ರಲ್ಲಿ ಕರ್ನಾಟಕದಿಂದ 250 ರೆಗ್ಯುಲರ್ ಹಾಗೂ 39 ಮಂದಿಗೆ ಬ್ಯಾಕ್‌ಲಾಗ್ ಅವಕಾಶ ಸಿಗಲಿದೆ.

ಹುದ್ದೆಯ ಹೆಸರು: ಜೂನಿಯರ್ ಮ್ಯಾನೇಜ್‌ಮೆಂಟ್ ಗ್ರೇಡ್-1

ವೇತನ ಶ್ರೇಣಿ: 48,480-85,920 ರು.

ಅರ್ಜಿ ಶುಲ್ಕ : ಸಾಮಾನ್ಯ, ಒಬಿಸಿ ಹಾಗೂ ಇತರೆ **ಅಭ್ಯರ್ಥಿಗಳಿಗೆ:** ರು. 750. ಪ.ಜಾ, ಪ.ಪಂ ಮತ್ತು ವಿಶೇಷ ಚೇತನ ಅಭ್ಯರ್ಥಿಗಳಿಗೆ ನೋಂದಣಿ ಶುಲ್ಕ ಇರುವುದಿಲ್ಲ.

ವಯೋಮಿತಿ: ಕನಿಷ್ಠ 21 ವರ್ಷ ಹಾಗೂ ಗರಿಷ್ಠ 30 ವರ್ಷಗಳಿಗಿಂತ ಹೆಚ್ಚಿರಬಾರದು. ಸರಕಾರದ ನಿಯಮಾನುಸಾರ ಎಸ್.ಸಿ/ಎಸ್‌ಟಿ/ಒಬಿಸಿ ಅಭ್ಯರ್ಥಿಗಳಿಗೆ/ಅಂಗವಿಕಲ ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆ ಮಾಡಲಾಗಿದೆ.

ಶೈಕ್ಷಣಿಕ ಅರ್ಹತೆ: ಯಾವುದೇ ವಿಷಯಗಳಲ್ಲಿ ಪದವಿ ಪಡೆದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ವೈದ್ಯಕೀಯ, ಎಂಜಿನಿಯರಿಂಗ್, ಸಿ.ಎ. ಮಾಡಿದವರು ಕೂಡ ಅರ್ಜಿ ಸಲ್ಲಿಸಬಹುದು ಪದವಿಯ ಜತೆಯಲ್ಲಿ ಸ್ಥಳೀಯ ಭಾಷಾ ಜ್ಞಾನವನ್ನು (ಬರೆಯುವ, ಓದುವ ಮತ್ತು ಅರ್ಥ ಮಾಡಿಕೊಳ್ಳುವ) ಅಭ್ಯರ್ಥಿಯು ಹೊಂದಿರಬೇಕು. ಎರಡು ವರ್ಷ ಯಾವುದೇ ವಾಣಿಜ್ಯ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಅಥವಾ ಆರ್‌ಬಿಐನಿಂದ ಅಂಗೀಕೃತವಾಗಿರುವ ಯಾವುದೇ ಬ್ಯಾಂಕ್‌ನಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕಿ ರುತ್ತದೆ. ಅಲ್ಲದೆ ಉತ್ತಮ ಸಿಬಿಲ್ ಸ್ಕೋರ್ ಹೊಂದಿರಬೇಕು.

ಆನ್‌ಲೈನ್ ಪರೀಕ್ಷಾ ಕೇಂದ್ರಗಳು: ಬೆಂಗಳೂರು, ಧಾರವಾಡ-ಹುಬ್ಬಳ್ಳಿ, ಕಲಬುರಗಿ, ಮೈಸೂರು.

ಕನ್ನಡದಲ್ಲಿ ಪರೀಕ್ಷೆ ಇರುವುದಿಲ್ಲ.

ಅರ್ಜಿಯ ಅಧಿಸೂಚನೆಯ ವೆಬ್‌ಸೈಟ್ ಲಿಂಕ್:
https://bank.sbi/web/careers/current-openings

ಎಸ್‌ಬಿಐ: ಎಲ್‌ಬಿಒ ಹುದ್ದೆ ಆಯ್ಕೆಗೆ ಟಿಪ್ಸ್

ಹೊಸ ವೃತ್ತಿಯನ್ನು ಆರಿಸಿಕೊಳ್ಳುವವರಿಗೆ ಮತ್ತು ಅನುಭವಿ ವೃತ್ತಿಪರರಿಗೆ ಬ್ಯಾಂಕಿಂಗ್ ಕ್ಷೇತ್ರವು ಅತ್ಯಂತ ಪ್ರತಿಷ್ಠಿತ ಉದ್ಯೋಗವಾಗಿದೆ. ಎಸ್‌ಬಿಐನ ಎಲ್‌ಬಿಒ ಹುದ್ದೆಗಳೆಂದರೆ ರಾಜ್ಯಗಳ ರಾಜಧಾನಿಯನ್ನು ಆಯ್ದುಕೊಂಡು ಒಂದು ಸರ್ಕಲ್ (ವೃತ್ತ) ಎಂದು ಪರಿಗಣಿಸಿ, ಅದರ ವ್ಯಾಪ್ತಿಗೆ ಒಂದೆರಡು ರಾಜ್ಯಗಳನ್ನು ಸೇರಿಸಿ ಆಡಳಿತಾತ್ಮಕ ಅನಕೂಲಕ್ಕಾಗಿ ಮಾಡಿಕೊಂಡಿರುವ ವ್ಯವಸ್ಥೆಯಾಗಿದೆ.

ಈ ಹುದ್ದೆ ಏಕೆ ಮುಖ್ಯ?: ಆಯ್ಕೆಯಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ವೃತ್ತದಲ್ಲಿ ನಿಯೋಜಿಸಲಾಗುತ್ತದೆ. ಉಳಿದಂತೆ ಪ್ರತೀ ಮೂರು ವರ್ಷಕ್ಕೊಮ್ಮೆ ಅಂತರರಾಜ್ಯ ವರ್ಗಾವಣೆಯ ಹಂಗಿಲ್ಲ. SMGS-IV ದರ್ಜೆ ಸೇವೆಗೆ ಬಡ್ತಿ ಪಡೆಯುವವರೆಗೆ ಅಥವಾ 12 ವರ್ಷಗಳು, ಯಾವುದು ನಂತರವೋ ಅಲ್ಲಿಯವರೆಗೆ ವರ್ಗಾವಣೆ ಇಲ್ಲ.

ಪ್ರಿಲಿಮ್ಸ್, ಮೇನ್ಸ್ ಪರೀಕ್ಷೆಗಳ ಹಂಗಿಲ್ಲ: ಬ್ಯಾಂಕ್ ಪರೀಕ್ಷೆ ಎಂದರೆ, ಎರಡೂ ಪರೀಕ್ಷೆ ಪಾಸಾದ ನಂತರ ಸಂದರ್ಶನ. ಪ್ರಿಲಿಮ್ಸ್ ಒಂದು ಗಂಟೆಯ 100 ಅಂಕಗಳಿಗಾದರೆ, ಮೇನ್ಸ್ 225 ಅಂಕಗಳ ಮೂರೂವರೆ ಗಂಟೆಯ ಪರೀಕ್ಷೆಯಾಗಿರುತ್ತದೆ. ವಿಷಯವೂ ಸುಲಭದ್ದಾಗಿದೆ, ಗಣಿತ ರೀಸನಿಂಗ್ ಇಲ್ಲ.

ಋಣಾತ್ಮಕ ಮೌಲ್ಯಮಾಪನ ಇಲ್ಲ: ಆನ್ಲೈನ್ ಪರೀಕ್ಷೆಯು ವಸ್ತುನಿಷ್ಠ ಮಾದರಿಯಲ್ಲಿ ನಡೆಯುತ್ತದೆ ಮತ್ತು ಈ ಪರೀಕ್ಷೆಯ ಪ್ರತಿ ವಿಭಾಗದಲ್ಲಿಯೇ ಇಂತಿಷ್ಟೇ ಅಂಕ ಪಡೆದಿರಲೇಬೇಕೆಂಬ ನಿಯಮವೇನೂ ಇರುವುದಿಲ್ಲ ಹಾಗೂ ಋಣಾತ್ಮಕ ಮೌಲ್ಯಮಾಪನ ಇರುವುದಿಲ್ಲ.

ನೇಮಕಾತಿ ಪ್ರಕ್ರಿಯೆ ಹೇಗೆ?: ಮೊದಲಿಗೆ ಆನ್ಲೈನ್ ಪರೀಕ್ಷೆ ನಡೆಸಲಾಗುತ್ತದೆ. ಇದರಲ್ಲಿ ಅರ್ಹತೆ ಪಡೆದ ಅಭ್ಯರ್ಥಿಯ ದಾಖಲೆಗಳನ್ನು ಬ್ಯಾಂಕಿನ ಪರಿಶೀಲನಾ ಸಮಿತಿಯು ಪರಿಶೀಲಿಸಿ, ವೃತ್ತವಾರು ಮೆರಿಟ್ ಪಟ್ಟಿಯನ್ನು ಪ್ರಕಟಿಸಲಿದೆ. ಈ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ಸಂದರ್ಶನ ನಡೆಸಿ, ಆನ್ಲೈನ್ ಪರೀಕ್ಷೆಯಲ್ಲಿ ಪಡೆದ ಅಂಕ ಮತ್ತು ಸಂದರ್ಶನದಲ್ಲಿ ಪಡೆದ ಅಂಕವನ್ನು 75:25 ಅನುಪಾತದಲ್ಲಿ ಲೆಕ್ಕಾಚಾರ ಹಾಕಿ, ಹೆಚ್ಚು ಅಂಕಪಡೆದ ಅಭ್ಯರ್ಥಿಗಳ (ಮೀಸಲಾತಿ ಅನ್ವಯಿಸಿ) ಅಂತಿಮ ಆಯ್ಕೆ ಪಟ್ಟಿ ಸಿದ್ಧಪಡಿಸಲಾ ಗುತ್ತದೆ. ಈ ಅಭ್ಯರ್ಥಿಗಳಲ್ಲಿ ಅಗತ್ಯ ಇರುವ ಅಭ್ಯರ್ಥಿಗಳಿಗೆ ಭಾಷಾ ಪರೀಕ್ಷೆ ನಡೆಸಿ, ಅದರಲ್ಲಿ ಅರ್ಹತೆ ಪಡೆದವರನ್ನು ನೇಮಕಮಾಡಿ ಕೊಳ್ಳಲಾಗುತ್ತದೆ.

ನೆನಪಿಡಿ: ಎಸ್ಸೆಸ್ಸೆಲ್ಸಿ ಅಥವಾ ಪಿ.ಯು.ಸಿ.ಯಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ಓದಿ, ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಈ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿರುತ್ತದೆ.

ಪರೀಕ್ಷೆಯ ಸ್ವರೂಪ: ಆನ್ಲೈನ್ ಪರೀಕ್ಷೆಯು 120 ಅಂಕಗಳಿಗೆ ನಡೆಯಲಿದ್ದು, ನಾಲ್ಕು ವಿಭಾಗಗಳನ್ನು ಹೊಂದಿರುತ್ತದೆ. ಅವುಗಳೆಂದರೆ;

1. ಇಂಗ್ಲಿಷ್ ಭಾಷೆ , 2. ಬ್ಯಾಂಕಿಂಗ್ ಕ್ಷೇತ್ರದ ಜ್ಞಾನ, 3.ಸಾಮಾನ್ಯಜ್ಞಾನ/ಆರ್ಥಿಕತೆ, 4. ಕಂಪ್ಯೂಟರ್ ಆಪ್ಟಿಟ್ಯೂಟ್. ಒಟ್ಟು 120 ಪ್ರಶ್ನೆಗಳನ್ನು ಕೇಳಲಾಗುತ್ತದೆ. ಪರೀಕ್ಷೆ ಬರೆಯಲು 2 ಗಂಟೆ ಕಾಲಾವಕಾಶ ನೀಡಲಾಗುತ್ತದೆ.

ಈ ಪರೀಕ್ಷೆಯ ಜತೆಯಲ್ಲಿಯೇ ಇಂಗ್ಲಿಷ್ ಭಾಷೆಗೆ ಸಂಬಂಧಿಸಿದ ವಿವರಣಾತ್ಮಕ ಪರೀಕ್ಷೆ ನಡೆಯಲಿದೆ.ಪತ್ರ ಮತ್ತು ಪ್ರಬಂಧ ಬರೆಯುವುದಕ್ಕೆ ಸಂಬಂಧಿಸಿದಂತೆ ತಲಾ ಒಂದೊಂದು ಪ್ರಶ್ನೆ ಕೇಳಲಾಗಿರುತ್ತದೆ. ಇದಕ್ಕೆ ಉತ್ತರ ಬರೆಯಲು 30 ನಿಮಿಷ ಕಾಲಾವಕಾಶ ನೀಡಲಾಗುತ್ತದೆ. 50 ಅಂಕಗಳಿಗೆ ಈ ಪರೀಕ್ಷೆ ನಡೆಯಲಿದೆ. ಸಂದರ್ಶನಕ್ಕೆ 50 ಅಂಕ ನಿಗದಿಪಡಿಸ ಲಾಗಿರುತ್ತದೆ. ಇದರಲ್ಲಿ ಬ್ಯಾಂಕ್ ನಿಗದಿಪಡಿಸಿರುವಷ್ಟು ಕನಿಷ್ಠ ಅಂಕ ಪಡೆದ ಅಭ್ಯರ್ಥಿಗಳನ್ನು ಮಾತ್ರ ನೇಮಕಕ್ಕೆ ಪರಿಗಣಿಸಲಾಗುತ್ತದೆ.

ಪ್ರೊಬೇಷನ್ ಅವಧಿ:
ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿಗೆ ಸೇರಿದ ದಿನಾಂಕದಿಂದ 6 ತಿಂಗಳ ಕಾಲ ಸಕ್ರಿಯ ಸೇವೆಯ ಅವಧಿಗೆ ಪ್ರೊಬೇಷನ್ನಲ್ಲಿರುತ್ತಾರೆ.

ಆರ್. ಕೆ. ಬಾಲಚಂದ್ರ
ವೃತ್ತಿ ಮಾರ್ಗದರ್ಶಕರು, ಬೆಂಗಳೂರು

ಸುರತ್ಕಲ್ ಎನ್‌ಐಟಿಕೆಯಲ್ಲಿ ಉದ್ಯೋಗಾವಕಾಶ

ಮಂಗಳೂರಿನ ಸುರತ್ಕಲ್‌ನಲ್ಲಿರುವ ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾ ಲಯದಲ್ಲಿ (ಎನ್‌ಐಟಿಕೆ) ಖಾಲಿ ಇರುವ ಲೈಬ್ರರಿ ಟ್ರೈನಿ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿದೆ. 11 ತಿಂಗಳ ಅವಧಿಗೆ ಗುತ್ತಿಗೆ ಅವಧಿ ಮೇರೆಗೆ ತಾತ್ಕಾಲಿಕವಾಗಿ ಈ ಹುದ್ದೆಗಳಿಗೆ ನೇಮಕಾತಿ ನಡೆಸಲಾಗುವುದು.

ಹುದ್ದೆ ವಿವರ
ಒಟ್ಟು ಐದು ಲೈಬ್ರರಿ ಟ್ರೈನಿ ಹುದ್ದೆಗಳು.

ವಿದ್ಯಾರ್ಹತೆ
ಅಭ್ಯರ್ಥಿಗಳು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಅಥವಾ ಅದಕ್ಕೆ ಪರ್ಯಾಯ ಪದವಿಯನ್ನು ಹೊಂದಿರಬೇಕು.

ವಯೋಮಿತಿ
ಅಭ್ಯರ್ಥಿಗಳ ಗರಿಷ್ಠ ವಯೋಮಿತಿ 26 ವರ್ಷ ಮೀರಿರಬಾರದು. ಪರಿಶಿಷ್ಟ ಜಾತಿ ಮತ್ತು ಪಂಗಡ, ಒಬಿಸಿ, ವಿಕಲಚೇತನ ಅಭ್ಯರ್ಥಿಗಳಿಗೆ ಸರಕಾರದ ನಿಯಮದ ಅನುಸಾರ ವಯೋಮಿತಿ ಸಡಿಲಿಕೆ ಮಾಡಲಾಗುವುದು.

ಆಯ್ಕೆ
ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.ಅಭ್ಯರ್ಥಿಗಳು ಎನ್‌ಐಟಿಕೆ

ಅರ್ಜಿ ಸಲ್ಲಿಕೆ
ಅಧಿಕೃತ ಜಾಲತಾಣದಲ್ಲಿ ಲಭ್ಯ ಇರುವ ನಿಗದಿತ ಅರ್ಜಿ ನಮೂನೆಯ ಜೊತೆಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಈ ವಿಳಾಸಕ್ಕೆ ಅರ್ಜಿ ಸಲ್ಲಿಕೆ ಮಾಡಬೇಕು:

ರಿಜಿಸ್ಟ್ರಾರ್, ರಾಷ್ಟ್ರೀಯ ತಾಂತ್ರಿಕ ಸಂಸ್ಥೆ ಕರ್ನಾಟಕ, ಸುರತ್ಕಲ್ ಪೋಸ್ಟ್, ಶ್ರೀನಿವಾಸ ನಗರ, ಮಂಗಳೂರು- 575025.ಅರ್ಜಿ ಸಲ್ಲಿಕೆಗೆ ಅಭ್ಯರ್ಥಿಗಳಿಗೆ ಜೂನ್-30 ಕೊನೆಯ ದಿನ.

ಈ ಹುದ್ದೆ ಕುರಿತು ಹೆಚ್ಚಿನ ಮಾಹಿತಿ ವೆಬ್ ಸೈಟ್‌ನಲ್ಲಿ ಲಭ್ಯ: https://www.nitk.ac.in

ಪ್ರಸಾರ ಭಾರತಿಯಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿ

ಭಾರತ ಸರಕಾರದ ಸಾರ್ವಜನಿಕ ಸೇವಾ ಪ್ರಸಾರ ಸಂಸ್ಥೆಯಾದ ಪ್ರಸಾರ ಭಾರತಿ, ಖಾಲಿ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿದೆ. ಆದರೆ ಈ ಎಲ್ಲಾ ಹುದ್ದೆಗಳನ್ನು ತಾತ್ಕಾಲಿಕ ಆಧಾರದ ಮೇಲೆ ಮಾತ್ರ ಭರ್ತಿ ಮಾಡಲಾಗುತ್ತದೆ.

ದೇಶಾದ್ಯಂತ ಆರು ವಲಯಗಳಲ್ಲಿ ಅಂದರೆ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ನವದೆಹಲಿ ಮತ್ತು ಈಶಾನ್ಯ ವಲಯಗಳಲ್ಲಿ ಖಾಲಿ ಇರುವ ತಾಂತ್ರಿಕ ಇಂಟರ್ನ್‌ಗಳ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಅಧಿಸೂಚನೆಯನ್ನು ಹೊರಡಿಸಿದೆ. ಒಟ್ಟು 421 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದ್ದು, ಅರ್ಹ ಅಭ್ಯರ್ಥಿಗಳು ಜುಲೈ-1ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹುದ್ದೆಗಳಿಗೆ ಸಂಬಂಧಿಸಿದ ಇತರ ವಿವರಗಳನ್ನು ವೆಬ್‌ಸೈಟ್ ಮೂಲಕ ಪರಿಶೀಲಿಸಬಹುದು.

ಹುದ್ದೆಗಳ ವಿವರಗಳು:
ದಕ್ಷಿಣ ವಲಯದಲ್ಲಿ ಹುದ್ದೆ: 63
ಪೂರ್ವ ವಲಯದಲ್ಲಿ ಹುದ್ದೆ: 65
ಪಶ್ಚಿಮ ವಲಯದಲ್ಲಿ ಹುದ್ದೆ: 66
ಈಶಾನ್ಯ ವಲಯದಲ್ಲಿ ಹುದ್ದೆ: 126
ದೆಹಲಿಯಲ್ಲಿ ಹುದ್ದೆ : 101

ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಿತ ವಿಭಾಗದಲ್ಲಿ ಎಂಜಿನಿಯರಿಂಗ್ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದಿರಬೇಕು. ಎಲೆಕ್ಟ್ರಾನಿಕ್ಸ್, ದೂರಸಂಪರ್ಕ, ಎಲೆಕ್ಟ್ರಿಕಲ್, ಸಿವಿಲ್, ಐ.ಟಿ ಅಥವಾ ಕಂಪ್ಯೂಟರ್ ಸೈನ್ಸ್ ವಿಭಾಗಗಳಲ್ಲಿ ಕನಿಷ್ಠ ಶೇ. 65ರಷ್ಟು ಅಂಕ ಗಳಿಸಿ ಉತ್ತೀರ್ಣರಾದವರಿಗೆ ಆದ್ಯತೆ ನೀಡಲಾಗುವುದು. 2024-25ರ ಪದವೀಧರರೂ ಸಹ ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳ ವಯಸ್ಸಿನ ಮಿತಿ 30 ವರ್ಷ.

ಅಭ್ಯರ್ಥಿಗಳು ಜುಲೈ 1, 2025ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾದವರಿಗೆ ಇಂಟರ್ನ್‌ಶಿಪ್ ಕಾರ್ಯಕ್ರಮವು ಒಂದು ವರ್ಷದ ಅವಧಿಯದ್ದಾಗಿರುತ್ತದೆ. ಈ ಅವಧಿಯಲ್ಲಿ, ತಿಂಗಳಿಗೆ ರೂ. 25,000 ಸ್ಟೈಫಂಡ್ ನೀಡಲಾಗುತ್ತದೆ. ಇತರ ವಿವರಗಳನ್ನು ಅಧಿಸೂಚನೆಯಲ್ಲಿ ಪರಿಶೀಲಿಸಿ: https://prasarbharati.gov.in/pbvacancies/

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ 28 ಮತ್ತು 29ರಂದು ಉದ್ಯೋಗ ಮೇಳ

ರೋಟರಾಕ್ಟ್ ಡಿಸ್ಟ್ರಿಕ್ಟ್-3192 ಘಟಕವು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಇದೇ 28 ಮತ್ತು 29ರಂದು (ಶನಿವಾರ ಮತ್ತು ಭಾನುವಾರ) ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು ಆವರಣದಲ್ಲಿ ಉದ್ಯೋಗ ಮೇಳವನ್ನು ಹಮ್ಮಿಕೊಂಡಿದೆ.

ಈ ಮೇಳಕ್ಕೆ ಉಚಿತ ಪ್ರವೇಶ ಇರಲಿದೆ. 50ಕ್ಕೂ ಅಧಿಕ ವಿದ್ಯಾಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹಾಗೂ 100ಕ್ಕೂ ಅಧಿಕ ಕಂಪನಿಗಳು ಈ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲಿವೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಪರಿಕರಗಳು ಈ ಉದ್ಯೋಗ ಮೇಳದಲ್ಲಿ ಇರಲಿದ್ದು, ಅಣಕು ಸಂದರ್ಶನಗಳೂ ಕೂಡಾ ನಡೆಯಲಿದೆ. ತಜ್ಞರ ಸಮಿತಿಗಳಿಂದ ವೈಯಕ್ತಿಕ ಸಮಾಲೋಚನೆ ಮತ್ತು ವೃತ್ತಿ ಕಾರ್ಯಾಗಾರಗಳನ್ನೂ ಈ ಉದ್ಯೋಗ ಮೇಳವು ಒಳಗೊಂಡಿರುತ್ತದೆ.

ಯೂನಿಯನ್ ಬ್ಯಾಂಕ್‌ನಲ್ಲಿ ನೇಮಕಾತಿಗೆ ಅರ್ಜಿ ಆಹ್ವಾನ

ಯೂನಿಯನ್ ಬ್ಯಾಂಕ್ ಖಾಲಿರುವ ಆಫೀಸ್ ಅಸಿಸ್ಟೆಂಟ್, ಅಟೆಂಡರ್, ಗಾರ್ಡನರ್ ಮತ್ತು ಅಧ್ಯಾಪಕ ಮುಂತಾದ ವಿವಿಧ ಹುದ್ದೆಗಳಿಗೆ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಈ ಹುದ್ದೆಗಳಿಗೆ ಅರ್ಜಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಆಸಕ್ತ ಅಭ್ಯರ್ಥಿಗಳು ಜುಲೈ 2ರ ವರೆಗೆ ಅರ್ಜಿಗಳನ್ನು ಕಳುಹಿಸಬಹುದು.

ಈ ನೇಮಕಾತಿಯ ವಿಶೇಷವೆಂದರೆ ಕನಿಷ್ಠ ಅರ್ಹತೆಗಳಲ್ಲಿ 7 ನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅಂದರೆ, ನೀವು 7 ಅಥವಾ 10 ನೇ ತರಗತಿಯವರೆಗೆ ಮಾತ್ರ ಓದಿದ್ದರೆ, ಇನ್ನೂ ಸರಕಾರಿ ಬ್ಯಾಂಕಿನಲ್ಲಿ ಕೆಲಸ ಪಡೆಯುವ ಅವಕಾಶವಿದೆ. ಅಭ್ಯರ್ಥಿಗಳ ಕನಿಷ್ಠ ವಯಸ್ಸು 22 ವರ್ಷಗಳು ಮತ್ತು ಗರಿಷ್ಠ 40 ವರ್ಷಗಳು ಆಗಿರಬೇಕು. ಆದಾಗ್ಯೂ, ಮೀಸಲಾತಿ ವರ್ಗದ ಅಭ್ಯರ್ಥಿಗಳಿಗೆ ಸರ್ಕಾರಿ ನಿಯಮಗಳ ಪ್ರಕಾರ ವಯೋಮಿತಿ ಸಡಿಲಿಕೆ ನೀಡಲಾಗುತ್ತದೆ.

ಹುದ್ದೆಗಳಿಗೆ ಅನುಗುಣವಾಗಿ ಅರ್ಹತೆಗಳನ್ನು ಸಹ ನಿಗದಿಪಡಿಸಲಾಗಿದೆ. ಅಧ್ಯಾಪಕರ ಹುದ್ದೆಗೆ ಪದವಿ ಅಥವಾ ಸ್ನಾತಕೋತ್ತರ ಪದವಿ ಕಡ್ಡಾಯವಾಗಿದೆ. ಕಚೇರಿ ಸಹಾಯಕ ಹುದ್ದೆಗೆ, ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪದವೀಧರರಾಗಿರಬೇಕು, ಜೊತೆಗೆ ಕಂಪ್ಯೂಟರ್ ಮತ್ತು ಮೂಲ ಲೆಕ್ಕಪತ್ರ ನಿರ್ವಹಣೆಯ ಜ್ಞಾನವೂ ಅಗತ್ಯ. ಅಟೆಂಡರ್ ಹುದ್ದೆಗೆ, ಅಭ್ಯರ್ಥಿಯು ಕೇವಲ 10ನೇ ತರಗತಿ ಉತ್ತೀರ್ಣರಾಗಿರಬೇಕು. ಆದರೆ ಗಾರ್ಡನರ್ ಹುದ್ದೆಗೆ ಕೇವಲ 7ನೇ ತರಗತಿ ಉತ್ತೀರ್ಣರಾದರೆ ಸಾಕು.

ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡು ಆಯ್ಕೆಯಾದ ಅಧ್ಯಾಪಕ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳಿಗೆ ತಿಂಗಳಿಗೆ 30,000, ಕಚೇರಿ ಸಹಾಯಕರಿಗೆ 20,000, ಸಹಾಯಕರಿಗೆ 14,000 ಮತ್ತು ತೋಟಗಾರರಿಗೆ 12,000 ರು. ಸಂಬಳ ಸಿಗುತ್ತದೆ.

ಈ ನೇಮಕಾತಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಸಂಪೂರ್ಣವಾಗಿ ಆಫ್‌ಲೈನ್‌ನಲ್ಲಿದೆ. ಅಭ್ಯರ್ಥಿಗಳು ಯೂನಿಯನ್ ಬ್ಯಾಂಕಿನ ಅಧಿಕೃತ ವೆಬ್‌ಸೈಟ್ unionbankofindia.co.in ನಿಂದ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು . ಫಾರ್ಮ್ ಅನ್ನು ಸರಿಯಾಗಿ ಭರ್ತಿ ಮಾಡಿ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬೇಕು.

ಆಳ್ವಾಸ್ ಪ್ರಗತಿ ಉದ್ಯೋಗ ಮೇಳ

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಆಯೋಜಿಸುವ 'ಆಳ್ವಾಸ್ ಪ್ರಗತಿ' ಉದ್ಯೋಗ ಮೇಳದ 15ನೇ ಆವೃತ್ತಿ ಆಗಸ್ಟ್ 1 ಮತ್ತು 2ರಂದು ಆಳ್ವಾಸ್ ಕಾಲೇಜಿನ ವಿದ್ಯಾಗಿರಿ ಕ್ಯಾಂಪಸ್‌ನಲ್ಲಿ ನಡೆಯಲಿದೆ.

ಮೇಳದಲ್ಲಿ ಪಾಲ್ಗೊಳ್ಳುವ ಕಂಪನಿಗಳ ವಿವರವನ್ನು https://alvaspragati.com/ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳು ಕಡ್ಡಾಯವಾಗಿ ನೋಂದಣಿ ಮಾಡಬೇಕು. ಈ ಉದ್ಯೋಗಮೇಳದಲ್ಲಿ 300ರಷ್ಟು ಕಂಪನಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಹೊರ ಜಿಲ್ಲೆಗಳಿಂದ ಬರುವ ಅಭ್ಯರ್ಥಿಗಳಿಗೆ ಜುಲೈ 31ರಿಂದ ಅಲ್ಲಿ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.

ಅಭ್ಯರ್ಥಿಗಳು ಪಾಸ್‌ಪೋರ್ಟ್ ಅಳತೆಯ 5ರಿಂದ 10 ಭಾವಚಿತ್ರ, ಸಂಪೂರ್ಣ ಶೈಕ್ಷಣಿಕ ಮಾಹಿತಿ ಒಳಗೊಂಡ ಸ್ವ-ವಿವರದ (ರೆಸ್ಯೂಮ್) 8ರಿಂದ 10 ಪ್ರತಿಗಳು, ಅಂಕಪಟ್ಟಿಯ ಜೆರಾಕ್ಸ್ ಪ್ರತಿಗಳು, ಆನ್‌ಲೈನ್ ಮೂಲಕ ನೋಂದಣಿ ಮಾಡಿದ್ದರ ಸಂಖ್ಯೆ ಹೊಂದಿರಬೇಕು. ಉದ್ಯೋಗ ಮೇಳದಂದು ಬೆಳಗ್ಗೆ 8 ಗಂಟೆಗೆ ಮೂಡುಬಿದಿರೆ ವಿದ್ಯಾಗಿರಿ ಕ್ಯಾಂಪಸ್‌ನಲ್ಲಿ ಹಾಜರಿರಬೇಕು.

ದಕ್ಷಿಣ ಕನ್ನಡ ಜಿಲ್ಲೆಯ ಐ.ಟಿ.ಐ ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯವನ್ನೂ ಕಲ್ಪಿಸಲಾಗುವುದು. ಮಾಹಿತಿಗಾಗಿ ಅಭ್ಯರ್ಥಿಗಳು ವೆಬ್‌ಸೈಟ್ ನೋಡಬಹುದಾಗಿದೆ ಅಲ್ಲದೆ, ಮೊಬೈಲ್ ನಂಬರ್: 9741440490, 9611750531 ಸಂಪರ್ಕಿಸಬಹುದಾಗಿದೆ.

▶▶ ಬಾಗಲಕೋಟೆಗೆ ಬಂತು ಮೆಡಿಕಲ್ ಕಾಲೇಜ್ ▶▶ ದಶಕದ ಹಿಂದಿನ ಘೋಷಣೆ ಈಡೇರಿಕೆ
▶▶ ಒತ್ತಡ ಹೇರುವಲ್ಲಿ ಶಾಸಕ ಮೇಟಿ ಯಶಸ್ವಿ ▶▶ ಕಾಲೇಜಿಗೆ 42 ಎಕರೆ ಜಾಗ ಮೀಸಲಾಗಿದೆ

ಕೊನೆಗೂ ಹತ್ತು ವರ್ಷದ ಬಳಿಕ ನನಸು

ಜಿಲ್ಲಾ ನೋಟ

ಅಭಿಷೇಕ್ ಪಾಟೀಲ್ ಬಾಗಲಕೋಟೆ

ಜಿಲ್ಲೆಯ ಜನರ ಪಾಲಿಗೆ ದಶಕದಿಂದ ಕನಸಾಗಿ ಉಳಿದಿದ್ದ ಜಿಲ್ಲೆಯ ಸರಕಾರಿ ಮೆಡಿಕಲ್ ಕಾಲೇಜು ಆರಂಭದ ಕನಸು ಈಡೇರುವತ್ತ ಹಂತ ತಲುಪಿದೆ. ಬಾಗಲಕೋಟೆಯಲ್ಲಿ ಸರಕಾರಿ ಮೆಡಿಕಲ್ ಘೋಷಣೆಯಾದ ದಶಕಗಳ ಬಳಿಕ ಕಾಲೇಜಿನ ನಿರ್ಮಾಣಕ್ಕೆ ಬೇಕಿರುವ ಭೂಮಿ, ವಿಶೇಷ ಅಧಿಕಾರಿ ಹಾಗೂ ಅನುದಾನ, ಇತರೆ ಕೆಲಸಗಳು ಪ್ರಾರಂಭವಾಗಿವೆ. ಇದರಿಂದ ನೂತನ ಮೆಡಿಕಲ್ ಕಾಲೇಜ್ ಆರಂಭವಾಗುವ ಲಕ್ಷಣಗಳು ನಿಚ್ಚಳವಾಗಿವೆ..!

ದಶಕದ ಹಿಂದಿನ ಘೋಷಣೆ

ಸಿದ್ದರಾಮಯ್ಯ ಅವರು ಮೊದಲ ಬಾರಿ ಸಿಎಂ ಆಗಿದ್ದ ಅವಧಿಯ 2014-15ರಲ್ಲಿ ಜಿಲ್ಲೆಗೆ ಮೆಡಿಕಲ್ ಕಾಲೇಜ್ ಘೋಷಣೆ ಮಾಡಿದ್ದರು.

ನಂತರ ಅವರ ಅಧಿಕಾರ ಇರುವವರೆಗೂ ಅದಕ್ಕೆ ಯಾವುದೇ ಅನುದಾನ ನೀಡಲಿಲ್ಲ. 2018ರಲ್ಲಿ ಕಾಂಗ್ರೆಸ್ ಸರಕಾರ ಹೋಗಿ ಕಾಂಗ್ರೆಸ್ ಹಾಗೂ ಜೆಡಿಎಸ್ ಸಮ್ಮಿಶ್ರ ಸರಕಾರ ಆಡಳಿತಕ್ಕೆ ಬಂದಾಗಲೂ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಅವರು ಕೂಡ ಸರಕಾರಿ ಮೆಡಿಕಲ್ ಕಾಲೇಜ್ ಪ್ರಾರಂಭದ ಗೋಜಿಗೆ ಹೋಗಲಿಲ್ಲ.

ಅನುದಾನ ನೀಡದ ಮೈತ್ರಿ

ರಾಜಕೀಯ ಏರುಪೇರುಗಳಿಂದ ಸಮ್ಮಿಶ್ರ ಸರಕಾರ ಬಿದ್ದು, ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದ ಮುಖ್ಯಮಂತ್ರಿಯಾದರು. ಅವರ ನಂತರ ಬಸವರಾಜ ಬೊಮ್ಮಾಯಿ ಕೂಡ ರಾಜ್ಯದ ಮುಖ್ಯಮಂತ್ರಿಯಾದರೂ ಜಿಲ್ಲೆಗೆ ಘೋಷಣೆಯಾಗಿದ್ದ ಮೆಡಿಕಲ್ ಕಾಲೇಜಿಗೆ ಯಾವುದೇ ಅನುದಾನ ನೀಡದೇ ಕೇವಲ ಘೋಷಣೆಯಾಗಿಯೇ ಉಳಿಯಿತು.

ನಿರಂತರ ಹೋರಾಟ

ಇವುಗಳ ನಡುವೆ ಕರ್ನಾಟಕ ರಕ್ಷಣಾ ವೇದಿಕೆ ಸೇರಿದಂತೆ ಅನೇಕ ಸಂಘಟನೆಗಳು ಹಾಗೂ ಸಾರ್ವಜನಿಕರು ಘೋಷಣೆಯಾಗಿರುವ ಮೆಡಿಕಲ್ ಕಾಲೇಜಿನ ಕಾರ್ಯಾರಂಭಕ್ಕೆ ಸರಕಾರಗಳು ಮನಸ್ಸು ಮಾಡಬೇಕು ಎಂದು ಒತ್ತಡ ಹೇರುವ ನಿರಂತರ ಹೋರಾಟ ಮಾಡುತ್ತಾ ಬಂದವು.

ಭೂಮಿಪೂಜೆ, ಉದ್ಘಾಟನೆ

ಬಾದಾಮಿ ಕ್ಷೇತ್ರದ ಶಾಸಕರಾಗಿದ್ದ ಸಿದ್ದರಾಮಯ್ಯ ಅವರು 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಜಿಲ್ಲೆಗೆ ಸರಕಾರಿ ಕಾಲೇಜ್ ಘೋಷಣೆಯನ್ನು ನಾನು ಮಾಡಿದ್ದೆ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ನಾನೇ ಕಾಲೇಜಿಗೆ ಭೂಮಿ ಪೂಜೆ ಮಾಡಿ, ನಾನೇ ಉದ್ಘಾಟಿಸುವ ಭರವಸೆಯ ಮಾತುಗಳನ್ನು ಆಡಿದ್ದರು. ಆದರೆ, ಗ್ಯಾರಂಟಿ ಯೋಜನೆಗಳ ನಡುವೆ ಸರಕಾರಿ ಮೆಡಿಕಲ್ ಕಾಲೇಜಿಗೆ ಅನುದಾನ ಹೊಂದಿಸುವುದು ಕಷ್ಟ ಸಾಧ್ಯವಾಗಿತ್ತು. ಆದರೂ ಕಾಂಗ್ರೆಸ್‌ನ ಜಿಲ್ಲಾ ನಾಯಕರು ಪದೆ ಪದೇ ಈ ಬಗ್ಗೆ ಸಿಎಂ ಮೇಲೆ ಒತ್ತಡ ಹೇರಿದರೂ ಸಿಎಂ ಸಿದ್ದರಾಮಯ್ಯ ಮಾತ್ರ ಮುಂದೆ ನೋಡೋಣ ಎಂಬ ಮಾತುಗಳನ್ನಾಡಿದ್ದರಿಂದ ಕನಸು ನನಸಾಗುವ ಲಕ್ಷಣಗಳು ಕಂಡಿರಲಿಲ್ಲ.

ಶಾಸಕರ ವಿಶೇಷ ಕಾಳಜಿ:

ಸಿಎಂ ಸಿದ್ದರಾಮಯ್ಯ ಅತ್ಯಾಪ್ತರಾಗಿರುವ ಶಾಸಕ ಹಾಗೂ ಬಿಟಿಡಿಎ ಅಧ್ಯಕ್ಷ ಎಚ್.ವೈ.ಮೇಟಿ ಅವರು ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಮನವರಿಕೆ ಮಾಡಿ ಕೊಟ್ಟಿದ್ದು ಹಾಗೂ ಕಾಲೇಜ್ ಪ್ರಾರಂಭಕ್ಕೆ ಅನುಕೂಲ ಮಾಡುವಂತೆ ಒತ್ತಡ ಹೇರುವಲ್ಲಿ ಯಶಸ್ವಿಯಾದರು. ಸರಕಾರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಮೂಲಕ ನಗರದಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಪ್ರಾರಂಭಿಸುವಂತೆ ಸೂಚಿಸಿದೆ.

ವಿಶೇಷ ಅಧಿಕಾರಿ ನೇಮಕ

ನಗರದಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಪ್ರಾರಂಭಕ್ಕೆ ಎಲ್ಲ ಸಿದ್ಧತೆ ಮಾಡಲು ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಒಬಿಜಿ ವಿಭಾಗದ ಮುಖ್ಯಸ್ಥ ಡಾ. ಬಿ.ಎಚ್.ನಾರಾಯಣಿ ಅವರನ್ನು ವಿಶೇಷ ಅಧಿಕಾರಿಯಾಗಿ ಸರಕಾರ ನೇಮಿಸಿದೆ. ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಮೂಲಕ ನಗರದಲ್ಲಿ ಸರಕಾರಿ ಮೆಡಿಕಲ್ ಕಾಲೇಜ್ ಕಟ್ಟಡಕ್ಕೆ ಡಿಪಿಆರ್ ತಯಾರಿಸಿ, 526 ಕೋಟಿ ರು. ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಲಾಗಿದೆ. ಈ ಮೊತ್ತವನ್ನು ರಾಜೀವ ಗಾಂಧಿ ವಿವಿಯ ನಿಧಿಯಲ್ಲಿ ಮೀಸಲಿರಿಸಿರುವ ಬಗ್ಗೆ ದೃಢೀಕರಣವನ್ನು ಸಲ್ಲಿಸುವಂತೆ ವೈದ್ಯಕೀಯ ಶಿಕ್ಷಣ ಇಲಾಖೆ ಸರಕಾರದ ಅಧೀನ ಕಾರ್ಯದರ್ಶಿ ಶಿವಲಿಂಗಪ್ರಭು ವಾಲಿ ರಾಜೀವ ಗಾಂಧಿ ಆರೋಗ್ಯ ವಿವಿ ಕುಲಸಚಿವರಿಗೆ ಪತ್ರ ಬರೆದಿದ್ದಾರೆ.

> ನಗರದಲ್ಲಿ ಮೆಡಿಕಲ್ ಕಾಲೇಜ್ ಪ್ರಾರಂಭಕ್ಕೆ ರಾಜೀವ ಗಾಂಧಿ ಆರೋಗ್ಯ ವಿವಿಯಿಂದ ಅನುದಾನ ನೀಡಲು ಸರಕಾರ ಸೂಚಿಸಿದೆ. ಆದಷ್ಟು ಬೇಗ ಕೆಲಸಗಳು ಪ್ರಾರಂಭವಾಗಲಿವೆ. ಸರಕಾರಿ ಮೆಡಿಕಲ್ ಕಾಲೇಜು ಪ್ರಾರಂಭವಾಗುವುದರಿಂದ ಜಿಲ್ಲೆಯ ಜನರಿಗೆ ಹೆಚ್ಚಿನ ಅನುಕೂಲವಾಗಲಿದೆ.
> -ಎಚ್.ವೈ.ಮೇಟಿ, ಬಾಗಲಕೋಟೆ ಶಾಸಕ

ಕಾಲೇಜಿಗೆ 42 ಎಕರೆ ಮೀಸಲು

ಸರಕಾರಿ ಕಾಲೇಜ್ ನಿರ್ಮಾಣಕ್ಕೆ ಒಟ್ಟು 42 ಎಕರೆ ಜಾಗೆಯನ್ನು ಬಿಟಿಡಿಎ (ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ) ನೀಡಲಿದೆ. ಅದಕ್ಕೆ ಸಂಬಂಧಪಟ್ಟಂತೆ ಬಿಟಿಡಿಎ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ನೀಡಿದ್ದ ನವನಗರದ ಸೆಕ್ಟರ್ ಸಂಖ್ಯೆ 1 ಹಾಗೂ 13ನ್ನು ಪುನಃ ಬಿಟಿಡಿಎಗೆ ಮರಳಿ ನೀಡುವಂತೆ ತೋವಿವಿಗೆ ಪತ್ರ ಬರೆದಿದ್ದು, ಈ ಎರಡು ಸೆಕ್ಟರ್ ಸೇರಿ ಒಟ್ಟು 42 ಎಕರೆ ಜಾಗೆಯನ್ನು ಸರಕಾರಿ ಮೆಡಿಕಲ್ ಕಾಲೇಜಿಗೆ ನೀಡಲಾಗುತ್ತಿದೆ.

ಭರವಸೆ ಈಡೇರಿಸಿದ ಸಿಎಂ

ಒಟ್ಟಾರೆ ಕಳೆದ ಒಂದು ದಶಕದ ಹಿಂದೆ ಘೋಷಣೆಯಾಗಿದ್ದ ಸರಕಾರಿ ಮೆಡಿಕಲ್ ಕಾಲೇಜು ಪ್ರಾರಂಭದ ಭರವಸೆ ಇದೀಗ ಈಡೇರುತ್ತಿದೆ. ಇದು ಜಿಲ್ಲೆಯ ಜನತೆ ಮಟ್ಟಿಗೆ ನಿಜಕ್ಕೂ ಒಂದು ಸಂಭ್ರಮದ ಸಂಗತಿ ಮಾತ್ರವಲ್ಲ, ಇದೊಂದು ಐತಿಹಾಸಿಕ ಘಳಿಗೆ ಕೂಡ. ಕೊನೆಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಿಲ್ಲೆಯ ಜನತೆಗೆ ಕೊಟ್ಟ ವಾಗ್ದಾನವನ್ನು ಉಳಿಸಿಕೊಂಡಿದ್ದಾರೆ. ಇದಕ್ಕೆ ಶಾಸಕರಾದ ಮೇಟಿ ಕೂಡ ಸಿಎಂಗೆ ಒತ್ತಡ ಹೇರಿ ಜಿಲ್ಲೆಗೆ ಕಾಲೇಜು ಮಂಜೂರು ಮಾಡಿಸಿಕೊಂಡು ಬರುವಲ್ಲಿ ಒಬ್ಬ ಯಶಸ್ವಿ ಜನಪ್ರತಿನಿಧಿಯಾಗಿದ್ದಾರೆ.

▶▶ ಹಕ್ಕಿಗಳಂತೆ ಹಾರಿ ಬರುವ ಕ್ಷಿಪಣಿಗಳು ▶▶ ನೆಲಕ್ಕೆ ಬಿದ್ದು ಸಿಡಿಯುವ ಬಾಂಬ್‌ಗಳು
ಮಡಿಕೇರಿ ಮಹಿಳೆಯಿಂದ ಖುದ್ದು ಚಿತ್ರಣ ▶▶ ಇಸ್ರೇಲಿಗರ ಪ್ರತಿ ಮನೆಗೆ ಬಂಕರ್ ಕಡ್ಡಾಯ

ಇಸ್ರೇಲ್‌ನಲ್ಲಿ ಸದಾ ಜೀವಂತ ದೇಶ ಪ್ರೇಮ

ಜಿಲ್ಲಾ ನೋಟ

ಅನಿಲ್ ಎಚ್.ಟಿ., ಮಡಿಕೇರಿ

ಹಕ್ಕಿಗಳಂತೆ ಆಕಾಶದಲ್ಲಿ ಕ್ಷಿಪಣಿಗಳು ಹಾರಿ ಬರುತ್ತಿರುತ್ತವೆ.. ಮನೆ ಪಕ್ಕದಲ್ಲಿಯೇ ಬಾಂಬ್ ಬೀಳುತ್ತಿವೆ.. ರಾಕೆಟ್ ಗಳ ಶಬ್ದ... ಜನರ ಬೊಬ್ಬೆ.. ಇವೆಲ್ಲಾ ಎರಡು ವಾರಗಳಿಂದ ಮಾಮೂಲಿನಂತಾಗಿದೆ. ಹೊರಜಗತ್ತಿಗೆ ಇಲ್ಲಿ ಯುದ್ದ ನಡೆಯುತ್ತಿದೆ ಎಂಬ ಆತಂಕವಿದೆ. ಸ್ಥಳೀಯರಿಗೆ ಕ್ಷಿಪಣಿಗಳು, ಬಾಂಬ್ ಗಳ ಶಬ್ದ ಕೇಳದೇ ಇದ್ದರೆ ನಿದ್ದೆಯೇ ಬಾರದ ಪರಿಸ್ಥಿತಿ ಇಲ್ಲಿದೆ.

ವಿಶ್ವವಾಣಿ ಜತೆ ತಂಗಮಣಿ

ಹೀಗೆಂದು ಯುದ್ದಪೀಡಿತ ಭೂಮಿ ಇಸ್ರೇಲ್ ನಿಂದ 'ವಿಶ್ವವಾಣಿ' ಜತೆ ಮಾಹಿತಿ ಹಂಚಿಕೊಂಡವರು ಮೂಲತಃ ಮಡಿಕೇರಿಯವರೇ ಆದ ತಂಗಮಣಿಯವರು. ಹತ್ತು ವರ್ಷಗಳಿಂದ ಇಸ್ರೇಲ್‌ನಲ್ಲಿ ಕೇರ್ ಗೀವರ್ ಅಥವಾ ಹಿರಿಯ ನಾಗರಿಕರ ಶುಶ್ರೂಶಕಿಯಾಗಿ ಕಾರ್ಯನಿರ್ವಹಿಸುತ್ತಿರುವ ತಂಗಮಣಿ ಇದಕ್ಕೂ ಮೊದಲು ಮಡಿಕೇರಿಯ ಅಶ್ವಿನಿ ಆಸ್ಪತ್ರೆಯಲ್ಲಿದ್ದರು.

ಕದನ ವಿರಾಮ ನಂಬಲ್ಲ

ಸದ್ಯ ಇಸ್ರೇಲ್ ಮತ್ತು ಇರಾನ್ ನಡುವೆ ಕದನ ವಿರಾಮ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಸ್ಥಿಕೆಯಲ್ಲಿ ಆಗಿದೆ. ಎರಡು ದೇಶಗಳ ಯುದ್ದವನ್ನು ಮಹಾ ಸಮರ ಎಂದು ವಿವಿಧ ದೇಶಗಳ ಮಾಧ್ಯಮಗಳು ಆತಂಕದಿಂದ ಬಣ್ಣಿಸಿದ್ದವು. ಆದರೆ ಕದನ ವಿರಾಮ ನಂಬುವ ಸ್ಥಿತಿಯಲ್ಲಿಲ್ಲ, ತಂಗಮಣಿ ಹೇಳುವಂತೆ ಇಸ್ರೇಲ್ ನಲ್ಲಿ ಇಂಥ ಕದನ ವಿರಾಮ ಯಾರೂ ನಂಬುವುದಿಲ್ಲ. ಯಾವಾಗ ಬೇಕಾದರೂ ಯಾವ ದಿಕ್ಕಿನಿಂದ ಬೇಕಾದರೂ ಬಾಂಬ್ ದಾಳಿ ಸಾಧ್ಯವಿದೆ. ಕದನ ವಿರಾಮ ಎಂಬುದು ತಾತ್ಕಾಲಿಕ ವಿರಾಮವಷ್ಟೇ ಹೊರತು ಪ್ರಕ್ಷುಬ್ದತೆಯ ಅಂತ್ಯವಲ್ಲ ಎಂದು ಹೇಳುತ್ತಾರೆ ತಂಗಮಣಿ.

ರಮತ್‌ಗನ್ ನಗರ ನಿವಾಸಿ

ಇಸ್ರೇಲ್ ನ ಪ್ರಮುಖ ನಗರಗಳಲ್ಲೊಂದಾದ ಟೆಲ್ ಅವಿವ್ ನಿಂದ ಅರ್ಧ ಗಂಟೆ ಸಾಗಿದರೆ ಸಿಗುವ ರಮತ್‌ಗನ್ ಎಂಬ ನಗರದಲ್ಲಿ ತಂಗಮಣಿ ಇದ್ದಾರೆ. ಹೀಗಾಗಿ ಹಗಲೂ ರಾತ್ರಿಗಳು ಕ್ಷಿಪಣಿ ಧಾಳಿಯನ್ನು ತಂಗಮಣಿ ಆತಂಕದಿಂದಲೇ ನೋಡಿದ್ದಾರೆ. ರಮತ್ ಗನ್ ಗೆ ಇಸ್ರೇಲ್ ನ ಸ್ಯಾಟಲೈಟ್ ನಗರ ಎಂಬ ಕೀರ್ತಿಯೂ ಇದೆ.

ಜೀವ ಭಯ -ಪ್ರೊಟೆಕ್ಷನ್ ಸೆಂಟರ್

ಅಯ್ಯೋ . ಖಂಡಿತಾ ಇಲ್ಲ, ಎಲ್ಲರ ಮೊಬೈಲ್ ನಲ್ಲಿರುವ ಸರಕಾರದ ಆ್ಯಪ್‌ನಲ್ಲಿ ಶತ್ರುದೇಶದಿಂದ ಕ್ಷಿಪಣಿ, ರಾಕೆಟ್ ದಾಳಿಗೆ 10 ನಿಮಿಷ ಮುನ್ನ ಎಚ್ಚರಿಕೆಯ ಅಲರಾಂ ಸಂದೇಶ ಬರುತ್ತದೆ. ಈ ಸಂದೇಶ ಬಂದ ಕೂಡಲೇ ಎಲ್ಲಿಯೇ ಇದ್ದರೂ, ಯಾವುದೇ ಕೆಲಸ ಮಾಡುತ್ತಿದ್ದರೂ ಎಲ್ಲರೂ ಪ್ರೊಟೆಕ್ಷನ್ ಸೆಂಟರ್ ಅಥವಾ ಬಂಕರ್ ಗಳಿಗೆ ಓಡಿ ಹೋಗಿ ಆಶ್ರಯ ಪಡೆಯಬೇಕು. ಈ ಬಂಕರ್ ಗಳು ಹೇಗಿರುತ್ತದೆ ಎಂದರೆ, ಅಲ್ಲಿ ಹತ್ತಾರು ಜನರು ಹಾಯಾಗಿ ಗಂಟೆಗಟ್ಟಲೆ ಇರಬಹುದು. ಬಂಕರ್ ಗಳಲ್ಲಿ ಕಾಫಿ, ಟೀ, ಬಿಸಿ ನೀರಿನ ಲಭ್ಯತೆ ಇರುತ್ತದೆ. ಹಿರಿಯ ನಾಗರಿಕರಿಗೆ, ರೋಗಿಗಳಿಗೆ ಹಾಸಿಗೆ ಕೂಡ ಮಲಗಲು ಸಿಗುತ್ತದೆ. ಈಗ ಪರಿಸ್ಥಿತಿ ಸುರಕ್ಷಿತ ಎಂಬ ಸಂದೇಶ ಲಭಿಸಿದ ನಂತರ ನಾವೆಲ್ಲಾ ಮತ್ತೆ ಮನೆ, ಕಛೇರಿಗಳಿಗೆ ತೆರಳಬಹುದು.

ಬಂಕರ್‌ಗಳು ಕಡ್ಡಾಯ

ಈಗ ಇಸ್ರೇಲ್ ನಲ್ಲಿ ನಿರ್ಮಾಣವಾಗುತ್ತಿರುವ ಹೊಸ ಮನೆಗಳಿಗೆ ನೀರು, ಪುಷ್ಪ ವನದ ಸೌಲಭ್ಯ ಇಲ್ಲದೇ ಹೋದರೂ ಪ್ರತೀ ಹೊಸ ಮನೆಯಲ್ಲಿಯೂ ಕಡ್ಡಾಯವಾಗಿ ಬಂಕರ್‌ಗಳು ಇರಲೇಬೇಕು ಎಂಬ ನಿಯಮವನ್ನು ಸರಕಾರ ಮಾಡಿದೆ. ಅಂದರೆ, ಯುದ್ದಗಳ ಸಾಧ್ಯತೆ ಸದಾ ಇರುತ್ತದೆ. ನಾಗರಿಕರು ಸುರಕ್ಷಿತರಾಗಿರಿ ಎಂಬ ಸಂದೇಶವನ್ನು ಇದು ನೀಡುತ್ತದೆ ಎನ್ನುತ್ತಾರೆ ತಂಗಮಣಿ.

ಸೈರನ್ ಸಂದೇಶ

ಬಾಂಬ್ ಅಥವಾ ಕ್ಷಿಪಣಿ ದಾಳಿಗೆ ಮುನ್ನ ಇಸ್ರೇಲ್ ನಾದ್ಯಂತ ಕಳೆದ 15 ದಿನಗಳಿಂದ ಸೈರನ್ ಸಂದೇಶ ಮೊಳಗುತ್ತಲೇ ಇದೆ. ಸೈರನ್ ಶಬ್ದ ಹೇಗಾಗಿದೆ ಎಂದರೆ ಮೊದಲೆಲ್ಲಾ ಸೈರನ್ ಕೇಳಿದಾಗ ಮನಸ್ಸಿಗೆ ಏನೋ ಆತಂಕವಾಗುತ್ತಿತ್ತು. ಆದರೆ ಸೈರನ್ ಈಗ ಕಿವಿಗೂ, ಮನಸ್ಸಿಗೂ ಅಭ್ಯಾಸವಾಗಿ ಬಿಟ್ಟಿದೆ. ಸೈರನ್ ಕೇಳದೇ ಹೋದರೆ ಈಗ ಏನಾಯಿತು ಎಂದು ಪ್ರಶ್ನಿಸುವಂತಾಗಿದೆ ಎಂದು ತಂಗಮಣಿ ಹಾಸ್ಯ ಚಟಾಕಿ ಹಾರಿಸುತ್ತಾರೆ.

ಮೈದಾನಗಳಲ್ಲಿ ಮಕ್ಕಳ ಆಟ

ಇಸ್ರೇಲ್ ನಲ್ಲಿ ಮಕ್ಕಳು ಮಾಮೂಲಿನಂತೆ ಮೈದಾನಗಳಲ್ಲಿ ಆಟವಾಡುತ್ತಲೇ ಇದ್ದಾರೆ. ಆದರೆ ಸೈರನ್ ಕೇಳಿದೊಡನೇ ಮಕ್ಕಳು ಕೂಡ ಹತ್ತಿರದಲ್ಲಿ ಬಂಕರ್ ಇರುವ ಸ್ಥಳಕ್ಕೆ ದೌಡಾಯಿಸುತ್ತಾರೆ. ಹಲವೆಡೆ ನೂರಾರು ಜನರಿಗೆ ಆಶ್ರಯ ನೀಡಬಲ್ಲಂಥ ಬಂಕರ್‌ಗಳನ್ನೂ ಇಸ್ರೇಲ್ ಸರಕಾರ ನಿರ್ಮಿಸಿದೆ. ಅಲ್ಲಿ ಎಷ್ಟು ಹೊತ್ತು ಬೇಕಾದರೂ ಈ ಬಂಕರ್ ಗಳಲ್ಲಿ ಇರಬಹುದು.

ಮನೆ ಹತ್ತಿರಕ್ಕೆ ಬಾಂಬ್

ತಂಗಮಣಿ ಇರುವ ಮನೆಯಿಂದ 200 ಮೀಟರ್ ದೂರದಲ್ಲಿಯೇ ಕಳೆದ ವಾರ ಬಾಂಬ್ ಬಿದ್ದಿತ್ತು. ನಮ್ಮ ಕಥೆ ಮುಗಿಯಿತು ಎಂದೇ ಭಾವಿಸಿದ್ದೆ. ಆದರೆ ಪುಣ್ಯ ಯಾರದ್ದೇ ಜೀವಹಾನಿ ಆಗಲಿಲ್ಲ ಎಂದು ಹೇಳಿದ ತಂಗಮಣಿ, ಸೈರನ್ ಮೊಳಗಿದೊಡನೆ ಮನೆ ಮುಂದಿನ ಶೆಟರ್ ಬಟನ್ ಒತ್ತಿದರೆ ಇಡೀ ಮನೆಯೇ ಶಟರ್ ನಿಂದ ಆವರಿಸಿಕೊಳ್ಳುತ್ತದೆ. ಹೀಗಾಗಿ ಬಾಂಬ್ ಸ್ಪೋಟಗೊಂಡರೂ ಕಬ್ಬಿಣದ ಶಟರ್ ಗಳಿಂದ ಮುಚ್ಚಿರುವ ಮನೆ, ಕಛೇರಿ, ಅಂಗಡಿಗಳು ಸುರಕ್ಷಿತವಾಗಿರುತ್ತವೆ ಎಂದು ಅಲ್ಲಿನ ಭದ್ರತೆ ವ್ಯವಸ್ಥೆ ಹಂಚಿಕೊಂಡರು.

ಕಬ್ಬಿಣ ಲೋಹದ ಬಂಕರ್:

ಬಂಕರ್‌ಗಳನ್ನೂ ಇಂಥ ಪ್ರಬಲವಾದ ಕಬ್ಬಿಣದ ಲೋಹ ಬಳಸಿ ನಿರ್ಮಿಸಿರುವುದರಿಂದ ಶೇ.99ರಷ್ಟು ಸುರಕ್ಷಿತ ಬಂಕರ್ ಗಳಿರುತ್ತವೆ. ಇಸ್ರೇಲ್ ನಲ್ಲಿ ಸರಕಾರ ಜಾರಿ ಮಾಡಿರುವ ನಿಯಮದಂತೆ ಯುವಕ, ಯುವತಿ ಕಡ್ಡಾಯವಾಗಿ ಮೂರು ವರ್ಷ ಸೇನೆಯಲ್ಲಿ ಸೇವೆ ಸಲ್ಲಿಸಬೇಕು. ಇಸ್ರೇಲ್ ಸೇನೆಯ ಕಠಿಣ ತರಬೇತಿ ಪಡೆಯಲೇಬೇಕು. ಹೀಗಾಗಿ ಪ್ರತಿ ನಾಗರಿಕನೂ ಇಲ್ಲಿ ಸೈನಿಕನಂತೆ ಇರುತ್ತಾನೆ.

ತಂದೆ, ತಾಯಿಯಿಂದ ಮಕ್ಕಳು ವಯಸ್ಕರಾದ ಕೂಡಲೇ ಬಹುತೇಕ ದೂರವಾಗುತ್ತಾರೆ.

ಹಿರಿಯರಿಗೆ ಕೇರ್ ಗೀವರ್ಸ್

ಗಂಡುಮಕ್ಕಳು ಸೇನೆಯಲ್ಲಿದ್ದೇ ಉನ್ನತ ಶಿಕ್ಷಣ ಪಡೆದು ಬೇಕಾದ ಉದ್ಯೋಗ ಗಿಟ್ಟಿಸಿಕೊಂಡು ವಿವಾಹವಾಗುತ್ತಾರೆ. ಬಳಿಕ ಪೋಷಕರಿಂದ ಪ್ರತ್ಯೇಕವಾಗಿ ಸ್ವಂತ ಮನೆ ಮಾಡಿಕೊಂಡು ತನ್ನದೇ ಜೀವನ ರೂಪಿಸಿಕೊಳ್ಳುತ್ತಾರೆ. ಹೀಗಿರುವಾಗ ಪೋಷಕರನ್ನು ನೋಡಿಕೊಳ್ಳಲು ಕೇರ್ ಗೀವರ್ ಗಳು ಬೇರೆ ಬೇರೆ ದೇಶಗಳಿಂದ ಇಸ್ರೇಲ್ ಗೆ ಬರುತ್ತಾರೆ. ಭಾರತೀಯರು ಬಹಳಷ್ಟು ಮಂದಿ ಕೇರ್ ಗೀವರ್ಸ್‌ಗಳಾಗಿ ಇಲ್ಲಿ ಕೆಲಸ ಗಿಟ್ಟಿಸಿಕೊಂಡಿದ್ದಾರೆ.

ಇಸ್ರೇಲಿಗರ ದೇಶಪ್ರೇಮ

ಇವರಲ್ಲಿ ದೇಶಪ್ರೇಮ ಹಾಸುಹೊಕ್ಕಾಗಿದೆ. ಮೊದಲು ಇಸ್ರೇಲ್, ನಂತರ ಕುಟುಂಬ, ಉದ್ಯೋಗ ಎಂಬಂತೆ ಜೀವಿಸುತ್ತಿದ್ದಾರೆ. ದೇಶಕ್ಕಾಗಿ ಏನನ್ನೂ ಬೇಕಾದರೂ ಮಾಡಬಲ್ಲರು. ಸೌಂದರ್ಯದ ಜತೆ ಅತ್ಯುತ್ತಮ ದೇಹದಾರ್ಢ್ಯತೆ ಇರುವ ಇಸ್ರೇಲಿಗರು ಸಾಹಸ ಪ್ರವೃತ್ತಿಯವರು ಎಂದು ಯುದ್ಧದ ನಾಡಿನಿಂದ ತಂಗಮಣಿ ಲೈವ್ ಚಿತ್ರಣ ನೀಡಿದರು.

ಚಿತ್ತವಿಹಾರ

ಒತ್ತಡವೂ ಇರಲಿ ಒಂದಷ್ಟು

● ಮಹಾದೇವ ಬಸರಕೋಡ

ಆಧುನಿಕ ಕಾಲಘಟ್ಟದಲ್ಲಿ ಅತಿಯಾದ ಒತ್ತಡ ಬದುಕಿನ ಭಾಗವೇ ಆಗುತ್ತಿದೆ. ಸಲ್ಲದ ನಿರೀಕ್ಷೆಗಳು, ತೀರ ಅನಿಶ್ಚಿತ ತಿರುವುಗಳು, ನಮಗೊದಗಿಬಂದ ನೋವು ಸಂಕಟ, ಅವಗಢ ಗಳನ್ನು ಸಮರ್ಥವಾಗಿ ಎದುರಿಸುವಲ್ಲಿನ ತಿಳಿವಳಿಕೆಯಲ್ಲಿನ ಕೊರತೆ, ಅತಿಯಾದ ಸ್ಪರ್ಧೆ, ಎಲ್ಲವೂ ನನಗೆ ತಿಳಿದಿದೆ ಎನ್ನುವ ಅಹಂ, ಹೀಗೆಯೆ ಹತ್ತು ಹಲವು ಕಾರಣ ಗಳಿಂದ ನಾವು ನಿತ್ಯವೂ ಒತ್ತಡಕ್ಕೆ ಒಳಗಗಾಗುತ್ತಲೇ ಇರುತ್ತೇವೆ. ಒತ್ತಡವು, ವಾಸ್ತವದಲ್ಲಿ ಬದಲಾವಣೆ ಗಳು ಸಂಭವಿಸಿದಾಗ, ಸವಾಲು ಸಂಕಷ್ಟಗಳು ಎದುರಾದಾಗ ನಮ್ಮ ದೇಹ ಸಹಜವಾಗಿ ತೋರಿಸುವ ಪ್ರಕ್ರಿಯೆಯಾಗಿದೆ. ಒತ್ತಡವು ನಮ್ಮ ಅಸಮ್ಮತಿಯ ನಡುವೆಯೂ ಎದುರುಗೊಳ್ಳು ತ್ತದೆ. ಒತ್ತಡ ಅತಿಯಾದಾಗ ಮತ್ತು ಅದನ್ನು ನಮ್ಮ ಜೊತೆಯಲ್ಲಿಯೇ ಬಹಳಷ್ಟು ಸಮಯ ಸಾಗಿಸಿ ಕೊಂಡು ಹೋದಾಗ ಸಹಜವಾಗಿಯೇ ನಮ್ಮ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವ ನ್ನುಂಟು ಮಾಡುತ್ತದೆ. ದೈಹಿಕ ವಾಗಿ ಮತ್ತು ಮಾನಸಿಕವಾಗಿ ಬಳಲಿಸುತ್ತದೆ. ವಿವೇಚನಾರಹಿತ ವಿಭಿನ್ನ ನಡುವಳಿಕೆಗಳಿಗೆ ಕಾರಣವಾಗಿ ತೀರ ಸಂಕಷ್ಟಗಳನ್ನು ತಂದೊಡ್ಡ ಬಲ್ಲದು. ಅತಿಯಾದ ಮತ್ತು ಸುಧೀರ್ಘವಾಗಿ ನಮ್ಮ ಜೊತೆಯಾಗುವ ಒತ್ತಡ ಒಟ್ಟಿನಲ್ಲಿ ಅಪಾಯಕಾರಿ ಎಂಬುದಂತು ಸತ್ಯ. ಇದಕ್ಕೆ ಸಮಾನಾಂತರದಲ್ಲಿಯೇ ಒತ್ತಡವಿಲ್ಲದೆ ಬದುಕು ಜಡಗೊಳ್ಳುವ ಸಾಧ್ಯತೆಯನ್ನು ಕೂಡ ತಳ್ಳಿಹಾಕುವಂತಿಲ್ಲ.

ಒತ್ತಡದಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬ ಸಂತರನ್ನು ಭೇಟಿ ಮಾಡಿದ. ಸಂತರು ಅವನನ್ನು ನೋಡುತ್ತಲೇ ಅವನ ಸಮಸ್ಯೆಯನ್ನು ಅರಿತು ಕೊಂಡರು. ತುಂಬ ಪ್ರೀತಿಯಿಂದ ಮತ್ತು ನಗುಮೊಗದಿಂದ ಬರಮಾಡಿಕೊಂಡು ಬಂದರು. ಒಂದಷ್ಟು ವಿಶ್ರಮಿಸಲು ತಿಳಿಸಿದರು. ಸ್ವಲ್ಪ ಸಮಯದ ನಂತರ ಅವನಿಗೆ ಬರಲು ಹೇಳಿದರು. ಅವನು ಸಂತರನ್ನು ಭೇಟಿ ಮತ್ತೆ ಮಾಡಲು ಬಂದಾಗ ಅವರು ವೀಣೆಯನ್ನು ನುಡಿಸುವಲ್ಲಿ ತಲ್ಲೀನರಾಗಿದ್ದರು. ಅದೇ ಮಂದಹಾಸ ಅವರ ಮೊಗದಲ್ಲಿ ಮಿನುಗುತ್ತಿತ್ತು. ಎಂಥದೇ ಸಂದರ್ಭದಲ್ಲಿಯೂ ಒತ್ತಡದಲ್ಲಿಯೂ ನಗುಮೊಗದಿಂದಲೇ ಇರುವ ತಮ್ಮ ಬದುಕಿನ ರಹಸ್ಯವೇನು? ನನಗೆ ನಿತ್ಯವೂ ಒತ್ತಡದಿಂದಾಗಿ ಬದುಕು ದುಸ್ತರವೆನಿಸುತ್ತಿದೆ ಎಂದ. ಸಂತರು ತಮ್ಮ ಕೈಯಲ್ಲಿದ್ದ ವೀಣೆಯ ತಂತಿಗಳನ್ನು ತೋರಿಸುತ್ತ ತಂತಿಗಳು ಸಡಿಲಗೊಂಡರೆ ನಿನಾದ ಹೊರಡಲು ಅಸಾಧ್ಯ. ಅಂತೆಯೇ ಅತಿಯಾಗಿ ಬಿಗಿದರೂ ಅವುಗಳು ಹರಿದು ಹೋಗುವ ಸಾಧ್ಯತೆಯೂ ಇದೆ. ತಂತಿಗಳಲ್ಲಿ ಇರುವ ಹಿತಮಿತವಾದ ಬಿಗಿತ ಮಾತ್ರವೇ ನಿನಾದ ವನ್ನುಂಟು ಮಾಡಲು ಸಾಧ್ಯ. ಬದುಕು ಕೂಡ ಹೀಗೆಯೇ. ಬದುಕಿನಲ್ಲಿ ಒತ್ತಡ ಅನಿವಾರ್ಯವೇ. ಅದನ್ನು ಹಿತಮಿತವಾಗಿಸಿ ಕೊಳ್ಳುವುದು, ನಮ್ಮ ಅಗತ್ಯಕ್ಕೆ ತಕ್ಕಂತೆ ಬಳಸಿ ಕೊಳ್ಳುವುದು ಜಾಣತನವಾಗಿದೆ ಎಂದರು. ಸಂತರ ಮಾತು ವ್ಯಕ್ತಿಯಲ್ಲಿ ಅರಿವಿನ ಬೆಳಕನ್ನು ಹೊತ್ತಿಸಿತ್ತು.

ನಿಜ ಅರ್ಥದಲ್ಲಿ ಒತ್ತಡವು ನಮ್ಮ ನೈಜ ಸಮಸ್ಯೆ ಅಲ್ಲವೇ ಅಲ್ಲ. ನಿಜವಾದ ಸಮಸ್ಯೆ ಇರುವುದು ಅದನ್ನು ನಿಭಾಯಿಸುವದರಲ್ಲಿ ನಾವು ಅಸಮರ್ಥ ರಾಗುವುದು ಮಾತ್ರವಲ್ಲದೇ ಅದನ್ನು ನಿರಂತರ ವಾಗಿ ನಮ್ಮ ಜೊತೆಯಲ್ಲಿಯೇ ಇರಿಸಿಕೊಳ್ಳುವುದು ಸಮಸ್ಯೆ ಮೂಲವಾಗಿದೆ. ಒತ್ತಡವನ್ನು ಬಿಲ್ಲಿಗೇರಿಸಿದ ಬಾಣದಂತೆ ಗುರಿ ತಲುಪಲು ಬಳಸಿಕೊಳ್ಳುವುದು ನಮ್ಮ ಆದ್ಯತೆಯಾಗಬೇಕು. ಸವಾಲುಗಳನ್ನು ಎದುರಿಸಲು ದೈಹಿಕವಾಗಿ ಮತ್ತು ಮಾನಸಿಕವಾಗಿ ಸಿದ್ಧಗೊಳ್ಳುವ ಸಾಧನವಾಗಿಸಿ ಕೊಳ್ಳಬೇಕು. ಒತ್ತಡಗಳು ನಿರ್ಮಾಣವಾಗುವುದು ನಮ್ಮ ಪರಿಮಿತಿ ಯಾಚೆಗಿನ ಸಂಗತಿಯಾಗಿದ್ದು, ಅದರಿಂದ ತಪ್ಪಿಸಿಕೊಳ್ಳುವುದು ಕಷ್ಟಸಾಧ್ಯವೇ ಸರಿ. ಅದನ್ನು ಸಮರ್ಥ ರೀತಿಯಲ್ಲಿ ಬದುಕಿಗೆ ಚೇತೋಹಾರಿಯಾಗಿಸಿಕೊಳ್ಳುವುದು ನಮ್ಮ ಆಯ್ಕೆಯಾಗಬೇಕು.

ಬೀದಿ ಬೀದಿಯಲ್ಲಿ ಪುಸ್ತಕಗಳು!

● ಸುರೇಶ ಗುದಗನವರ

ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ಒಂದು ವೀಡಿಯೋ ನೋಡಿದೆ. ಅದರಲ್ಲಿ ಒಬ್ಬ ಮಹಿಳೆ ಫುಟ್‌ಪಾತ್‌ನಲ್ಲಿ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದರು. ಅವರ ಮಗ ವೈದ್ಯ, ಮಗಳು ವಿಜ್ಞಾನಿ, ಅಳಿಯ ಐಪಿಎಸ್ ಅಧಿಕಾರಿ. ಅವರ ಪತಿ ಪತ್ರಕರ್ತ ಹಾಗೂ ಹಿಂದಿ ಲೇಖಕರು. ಕಳೆದ ಮೂರು ದಶಕಗಳಿಂದ ದೆಹಲಿಯ ಮಂಡಿ ಹೌಸ್‌ನ ಬಳಿಯ ಶ್ರೀರಾಮ್ ಆರ್ಟ್ ಕಲ್ಚರಲ್ ಆಡಿಟೋರಿಯಂನ ಹೊರಗಿನ ಮರದ ಕೆಳಗೆ ಪಾದಚಾರಿ ಮಾರ್ಗದಲ್ಲಿ ಪುಸ್ತಕಗಳನ್ನು ಮಾರಾಟ ಮಾಡುತ್ತ ಎಸ್‌ಆರ್‌ಸಿ ಆಂಟಿ ಎಂದೇ ಪ್ರಸಿದ್ಧಿ

ಬೀದಿಯ ಬದಿಯಲ್ಲಿ ಪುಸ್ತಕ ಮಾರಾಟ ಆರಂಭಿಸಿದ ಇವರು, ಸ್ವಂತ ಪ್ರಕಾಶನ ಸಂಸ್ಥೆಯನ್ನೂ ಹೊಂದಿದ್ದಾರೆ. ಆದರೆ, ಬೀದಿ ಬದಿ ಮಾರಾಟವನ್ನು ತ್ಯಜಿಸಿಲ್ಲ!

ಪಡೆದಿದ್ದಾರೆ. ಅವರೇ ಸ್ವಾಭಿಮಾನಿ ಮಹಿಳೆ ಸಂಜನಾ ತಿವಾರಿ.

ಸಂಜನಾ ತಿವಾರಿ ಬಿಹಾರದ ಸಿವಾನ್ ಜಿಲ್ಲೆಯವರು. ಸಂಜನಾರಿಗೆ ಬಾಲ್ಯದಿಂದಲೂ ಪುಸ್ತಕಗಳ ಬಗ್ಗೆ ಒಲವು. ಓದುವ ಬಗ್ಗೆ ಒಲವು ಇತ್ತು. ಸಂಜನಾ 10ನೇ ತರಗತಿಯವರೆಗೆ ಮಾತ್ರ ಓದಿದರು. ಅವರು 17ನೇ ವಯಸ್ಸಿನಲ್ಲಿ, ಪತ್ರಕರ್ತ ರಾಧೇಶ್ಯಾಮ್ ತಿವಾರಿ ಅವರನ್ನು ಮದುವೆಯಾಗಿ, 1994ರಲ್ಲಿ ದೆಹಲಿಗೆ ಬಂದು ನೆಲೆಸಿದರು.

ದೆಹಲಿಯಲ್ಲಿ ಸಂಜನಾ ಅಧ್ಯಯನ ಮುಂದುವರೆಸಿದರು. ಓದಿನ ಹವ್ಯಾಸ ಬೆಳೆಸಿಕೊಂಡಿದ್ದ ಸಂಜನಾ ಅವರು ವಾಣಿ ಪ್ರಕಾಶನದಲ್ಲಿ ಪುಸ್ತಕ ಮಾರಾಟಗಾರ್ತಿಯಾಗಿ ಕೆಲಸಕ್ಕೆ ಸೇರಿದರು. ಕೆಲವು ತಿಂಗಳುಗಳು ಕಳೆದ ನಂತರ ರಂಗಮಂದಿರ ಆವರಣದೊಳಗೆ ಸಂಜನಾ ಒಂದು ಪುಸ್ತಕದ ಅಂಗಡಿಯನ್ನು ತೆರೆದರು. ರಂಗಮಂದಿರದ ಗೇಟ್ ಮುಚ್ಚಿದಾಗ ಹೊರಗೆ ಮರದ ಕೆಳಗಡೆ ಪುಸ್ತಕ ಮಾರಾಟ ಪ್ರಾರಂಭಿಸಿದರು. ಜನರು ಬಂದು ಪುಸ್ತಕಗಳನ್ನು ಕೊಳ್ಳತೊಡಗಿದರು. ಪುಸ್ತಕಗಳ ಮಾರಾಟವು ಉತ್ತಮವಾಯಿತು.

ಆದರೆ ದೆಹಲಿ ಕಾರ್ಪೋರೇಷನ್‌ದ ಅಧಿಕಾರಿಗಳು ಪುಸ್ತಕ ಗಂಟುಮೂಟೆಯೊಂದಿಗೆ ಸಂಜನಾ ಅವರನ್ನು ಪೋಲಿಸ್ ಠಾಣೆಗೆ ಕರೆದೊಯ್ದರು. ಆದರೆ ಅವರು ಯಾರಿಗೂ ಹೆದರಲಿಲ್ಲ. ಓದುಗರ ಬಳಗ, ಲೇಖಕರು ಹಾಗೂ ಕಲಾವಿದರು ಸಂಜನಾರಿಗೆ ಬೆಂಬಲವಾಗಿ ನಿಂತರು. ಹೀಗೆಯೇ ಬೀದಿಬದಿಯ ಪುಸ್ತಕ ವ್ಯಾಪಾರ ನಿರಂತರವಾಗಿ ನಡೆಯಿತು.

ಸ್ನಾತಕೋತ್ತರ ಪದವಿ

ಪುಸ್ತಕ ಮಾರಾಟ ಮಾಡುವ ಅವರ ಹವ್ಯಾಸಕ್ಕೆ ಅವರಿಗೆ ಪತಿಯಿಂದಲೂ ದೊರಕಿತು. ಪ್ರತಿದಿನ ಬೆಳಿಗ್ಗೆ 11 ಗಂಟೆಗೆ ಮಂಡಿಹೌಸ್‌ಗೆ ಬಂದು ಮರದ ಕೆಳಗೆ ಪುಸ್ತಕಗಳನ್ನು ಮಾರಾಟ ಮಾಡಿ, ರಾತ್ರಿ 9 ಗಂಟೆಗೆ ಮನೆಗೆ ಹೊರಡುವುದು ಅವರ ನಿತ್ಯದ ದಿನಚರಿಯಾಯಿತು. ಜತೆಜತೆಗೇ, 2020ರಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದರು.

ಸಂಜನಾ ಕುಳಿತಿರುವ ಮಡಿಸುವ ಚಾಪೆಯ ಮೇಲೆ ನೂರಾರು ಪುಸ್ತಕಗಳನ್ನು ಕಾಣಬಹುದು. ನಾಟಕ ನೋಡಲು ಬರುವ ಜನರು, ರಂಗಭೂಮಿ ವಿದ್ಯಾರ್ಥಿಗಳು, ನಾಟಕಕಾರರು, ನಟರು ಮುಂತಾದವರು ಪುಸ್ತಕಗಳನ್ನು ನೋಡುತ್ತಾ ಖರೀದಿಸುತ್ತಾರೆ. ನಟ ಮಾನವ್‌ಕೌಲ್, ನಾಗಾರ್ಜುನ, ಮದನ್ ಕಶ್ಯಪ್, ಗೀತಾಂಜಲಿ ಶ್ರೀ ಮುಂತಾದ ಗಣ್ಯರು ಅವರ ಪುಸ್ತಕದ ಅಂಗಡಿಗೆ ಬಂದು ಮೆಚ್ಚುಗೆ ವ್ಯಕ್ತಪಡಿಸಿ ಪುಸ್ತಕಗಳನ್ನು ಖರೀದಿಸಿದ್ದಾರೆ.

> 'ನಿಮ್ಮ ಮಾತೃಭಾಷೆ ನಿಮ್ಮ ಸ್ವಂತ ತಾಯಿಯಂತೆ. ನೀವು ತಮಿಳುರಾಗಿದ್ದರೆ, ತಮಿಳು ಸಾಹಿತ್ಯವನ್ನು ಓದಿರಿ. ನೀವು ಬಂಗಾಳಿಯಾಗಿದ್ದರೆ, ಬಂಗಾಳಿ ಸಾಹಿತ್ಯವನ್ನು ಓದಿರಿ. ಆದರೆ ಇಂಗ್ಲೀಷ್ ಸಾಹಿತ್ಯವನ್ನು ಮಾತ್ರ ಅನುಸರಿಸ ಬೇಡಿ. ಯಾಕೆಂದರೆ ಆಗ ನಿಮ್ಮ ಸ್ವಂತ ಭಾಷೆಯ ಸಾಹಿತ್ಯದ ರುಚಿ ಸಿಗುವುದಿಲ್ಲ' - ಸಂಜನಾ ತಿವಾರಿ, ಪುಸ್ತಕ ವ್ಯಾಪಾರಿ.

ಸ್ವಂತ ಪ್ರಕಾಶನ

ಸಂಜನಾ ಪಬ್ಲಿಕೇಷನ್ಸ್ ಎಂಬ ಪ್ರಕಾಶನ ಸಂಸ್ಥೆ ಆರಂಭಿಸಿ, ಉದಯೋನ್ಮುಖ ಬರಹಗಾರರ ಎರಡನೂರಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದ್ದಾರೆ. ಅಲ್ಲದೇ ಅವರು ಪಕ್ಕದಲ್ಲೇ ಇರುವ ತ್ರಿವೇಣಿ ಥಿಯೇಟರ್‌ನಲ್ಲಿ ಪ್ರತಿ ತಿಂಗಳೂ ಒಂದು ದಿನ ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸುವುದು ವಿಶೇಷವಾಗಿದೆ. ಅವರು ಕಾರ್ಯಕ್ರಮದ ಎಲ್ಲ ವ್ಯವಸ್ಥೆಯನ್ನು ಮಾಡಿ, ವೇದಿಕೆಯ ಮೇಲೆ ಕುಳಿತುಕೊಳ್ಳದೇ ಸಭಿಕರ ಜೊತೆ ಕುಳಿತು ಆನಂದವನ್ನು ಸವಿಯುತ್ತಾರೆ. ಹೊಸ ತಲೆಮಾರಿನ ಲೇಖಕರಿಗೆ ಇದೊಂದು ಮುಖ್ಯ ವೇದಿಕೆಯಾಗಿದ್ದು, ಕಾವ್ಯ ವಾಚನ, ಪುಸ್ತಕ ಬಿಡುಗಡೆ, ವಿಚಾರ ಸಂಕಿರಣಗಳು ನಡೆಯುತ್ತವೆ. ಹೀಗೆ ಪ್ರತಿ ತಿಂಗಳು ಸಾಹಿತ್ಯೋತ್ಸವವನ್ನು ದಾನಿಗಳ ನೆರವಿನಿಂದ ಯಶಸ್ವಿಯಾಗಿ ಮುನ್ನಡೆಸಿಕೊಂಡು ಮುನ್ನಡೆದಿದ್ದಾರೆ.

ಈಗಲೂ ಬೀದಿಬದಿಯಲ್ಲಿ ಪುಸ್ತಕ ಮಾರಾಟ ಮುಂದುವರಿಸಿದ್ದಾರೆ. ಸ್ವತಃ ಪ್ರತಿದಿನ ಸ್ಕೂಟರಿನಲ್ಲಿ ನಾಲ್ಕರಿಂದ ಐದು ದೊಡ್ಡ ಚೀಲಗಳಲ್ಲಿ ಪುಸ್ತಕಗಳನ್ನು ತಂದು ಮಾರಾಟ ಮಾಡುತ್ತಾರೆ. ಅವರ ಮಗ ದೊಡ್ಡ ಪುಸ್ತಕದ ಅಂಗಡಿಯನ್ನು ತೆರೆಯಲು ಸಲಹೆ ನೀಡಿದ್ದರು. ಅವರಿಗೆ ದೊಡ್ಡ ಅಂಗಡಿ ತೆರೆಯಲು ಆಸಕ್ತಿ ಇಲ್ಲ.

ಪುಸ್ತಕಗಳೇ ನನ್ನ ಜೀವನ. ಪುಸ್ತಕಗಳಿಲ್ಲದೇ ನಾನು ಬದುಕಲು ಸಾಧ್ಯವಿಲ್ಲ. ದೆಹಲಿಯ ಮಂಡಿಹೌಸ್‌ನ ಋಣದ ಭಾರ ತೀರಿಸಲು, ಈ ಜನ್ಮ ಸಾಲದೆನ್ನುತ್ತಾರೆ ಅವರು.

ನಿಸ್ವಾರ್ಥ ಸೇವೆಗೆ ಒಂದು ಹೆಸರು

● ಮಲ್ಲಪ್ಪ. ಸಿ. ಖೊದ್ನಾಪೂರ (ತಿಕೋಟಾ)

ಮಗುವಿದ್ದಾಗಲೇ ನೋಡುವ, ಕೇಳುವ ಮತ್ತು ಮಾತನಾಡುವ ಚೇತನಗಳನ್ನೇ ಕಳೆದುಕೊಂಡು ಜೀವನದಲ್ಲಿ ಹತಾಶೆರಾಗಿರುವವರಿಗೆ ಒಂದು ಆಶಾಕಿರಣ ವಾದ, ನೊಂದ ಜೀವಿಗಳಿಗೆ ಮಮತೆಯ ಮಡಿಲಾಗಿ ಇಡೀ ಜಗತ್ತೇ ಮೂಗಿನ ಮೇಲೆ ಬೆರಳಿಡುವಂತೆ ಬದುಕಿದ ವಿಶ್ವಕಂಡ ಶ್ರೇಷ್ಠ ಪ್ರೇರಣಾತ್ಮಕ ಪ್ರತಿಭೆ. ಅವರೇ ಹೆಲನ್ ಕೆಲರ್. ಅಮೇರಿಕಾದ ಅಲಬಾಮಾದಲ್ಲಿ ಜೂನ್ 27, 1880 ರಲ್ಲಿ ಜನಿಸಿದ ಈಕೆಗೆ 19 ತಿಂಗಳ ವಯಸ್ಸಾಗಿದ್ದಾಗ, ಜ್ವರದಿಂದಾಗಿ ತನ್ನ ದೃಷ್ಟಿ, ಶ್ರವಣ, ಮಾತು ಆಡುವ ಶಕ್ತಿಯನ್ನು ಕಳೆದುಕೊಂಡಳು. ನಂತರ ಏಳು ವರ್ಷ ವಯಸ್ಸಿನವರೆಗೆ ಕೇವಲ ಕೈ ಸನ್ನೆ ಮತ್ತು ಹಾವಭಾವಗಳ ಮೂಲಕವೇ ತನ್ನ ಮನದಾಳದ ಇಂಗಿತವನ್ನು ತಿಳಿಸುತ್ತಿರುವ ಈಕೆಯನ್ನು ನೋಡಿಕೊಳ್ಳಲು ಹದಿನಾಲ್ಕು ವರ್ಷ ದೊಡ್ಡವಳಾಗಿದ್ದ ದೃಷ್ಟಿಮಾಂದ್ಯ ಅನ್ನೆ ಸುಲ್ಲಿವನ್ ಎಂಬ ಯುವತಿ ಹೆಲನ್‌ಳ ಬಾಳಲ್ಲಿ ನಂದಾದೀಪವಾಗಿ ಭವಿಷ್ಯವನ್ನೇ ಬದಲಾಯಿಸಿದಳು.

ಹೆಲನ್ ತನ್ನ ಸಂಕಲ್ಪ ಬಲ, ಸೂಕ್ಷ್ಮ ಸ್ಪರ್ಶಪ್ರಜ್ಞೆ, ಜ್ಞಾಪಕ ಶಕ್ತಿ ಮತ್ತು ಕಲ್ಪನಾ ಪ್ರತಿಭೆಯ ಮತ್ತು ಸಹಾಯಕಿ ಅನ್ನೆ ಇವಳ ಸಹಾಯದಿಂದ ಫಿಂಗರ್ ಸ್ಪೆಲ್ಲಿಂಗ್, ಉಬ್ಬು ಅಕ್ಷರಗಳಿರುವ ಪುಸ್ತಕ ಮತ್ತು ಬ್ರೈಹೀ ಲಿಪಿಯ ಮೂಲಕ ಇಂಗ್ಲೀಷ ಓದುವದನ್ನು ಮತ್ತು ಬರೆಯುವದನ್ನು ಕಲಿತಳು. ಇಂಗ್ಲೀಷ್ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದ್ದ ಆಕೆಗೆ ಜೀವನದಲ್ಲಿ ಸವಾಲನ್ನು ಎದುರಿಸಿ, ಯಶಸ್ಸು ಪಡೆದ ಶ್ರೇಷ್ಠ ಸಾಧಕರ ಯಶೋಗಾಥೆ, ಜೀವನ ಚರಿತ್ರೆ ಮತ್ತು ಪ್ರೇರಣೆ ನೀಡುವ ಪುಸ್ತಕಗಳನ್ನು ಓದುವ ಹವ್ಯಾಸವಿತ್ತು. 24 ನೆಯ ವಯಸ್ಸಿನಲ್ಲಿ ಅಮೇರಿಕಾದ ಪ್ರಥಮ ಕಿವುಡ-ಮೂಕ ಬಿ.ಎ. ಪದವಿ ಪಡೆದ ಅಮೇರಿಕಾದ ಮೊದಲ ಮಹಿಳೆಯಾಗಿ ಸಾಧನೆಗೈದಳು.

ಅಮೇರಿಕನ್ ಫೌಂಡೇಷನ್ ಫಾರ್ ಬ್ಲೈಂಡ್ ಸಂಸ್ಥೆ ಪ್ರಾರಂಭಿಸಿ, ಅದೇಷ್ಟೋ ಕುರುಡರ ಬಾಳಲ್ಲಿ ದಿವ್ಯ ಬೆಳಕು ಮೂಡಿಸುವಲ್ಲಿ ಸುಮಾರು 44 ವರ್ಷಗಳವರೆಗೆ ನಿಸ್ವಾರ್ಥ ಸೇವೆ ಗೈಯುತ್ತಾ ಅಪ್ರತಿಮ ಮಾನವೀಯತೆ ಮೆರೆದಳು. ಹಕ್ಕು-ಗುರಿ-ಹಿತಕ್ಕಾಗಿ ಧ್ವನಿ ಎತ್ತಿ, ಸದಾ ಅನಾಥ, ವಿಕಲಾಂಗ, ನಿರಾಶ್ರಿತ, ಶ್ರಮಿಕ, ಬಡವ ಮಕ್ಕಳ ಮತ್ತು ಸ್ತ್ರೀಯರ ಮತ್ತು ಅಶಕ್ತ ವರ್ಗದ ಪಾಲಿಗೆ ಸ್ಪೂರ್ತಿಯಾಗಿ, ಬಾಳಿಗೆ ಬೆಳಕಾದರು.

ಮನೋಬಲವೊಂದಿದ್ದರೆ ಜೀವನದಲ್ಲಿ ಎಂತಹ ಅಗಾಧ ಸಾಧನೆಯನ್ನು ಪಡೆಯಲು ಸಾಧ್ಯವೆಂದು ಇಡೀ ವಿಶ್ವಕ್ಕೆ ತೋರಿದಳು. ಆಕೆ ಹಲವು ಪುಸ್ತಕಗಳನ್ನು ಬರೆದಳು; ಅವಳ ಕುರಿತು ಹಲವು ಪುಸ್ತಕಗಳು ಹೊರಬಂದಿವೆ; ಆಕೆಯ ಅಸಾಧಾರಣ ಸಾಹಸ ಬದುಕಿನ ಕುರಿತಾಗಿ ಚಲನಚಿತ್ರಗಳೂ ನಿರ್ಮಾಣಗೊಂಡಿವೆ.

ಅಶಕ್ತರ ಬದುಕನ್ನು ಬೆಳಗಲು ಹೋರಾಟ ಮಾಡಿದ ಸಾಹಸಿ ಎಂದೇ ಹೆಲನ್ ಕೆಲರ್‌ನ್ನು ಜಗತ್ತು ಸ್ವೀಕರಿಸಿದೆ.

ಹೆಲನ್‌ಗೆ ಸಹಾಯಕಿಯಾಗಿ ಬಂದ ಆ್ಯನೆ ಸುಲಿವನ್, ಆಕೆಯ ಅಧ್ಯಾಪಕಿಯೂ ಆಗಿ, ಆಕೆಯ ಬದುಕಿಗೆ ತಿರುವೊಂದನ್ನು ನೀಡದಳು.

ಅಮ್ಮ

ಅವಳಿಗೆ ಹಗಲಿರುಳೂ ದುಡಿದು ಅಭ್ಯಾಸವಿಲ್ಲ
ಆದರೂ ಪ್ರತಿ ಕ್ಷಣ ದುಡಿಯುತ್ತಾಳೆ ತನ್ನ ಮಗುವಿಗಾಗಿ
ಅವಳಿಗೆ ಹಾಡಲು ಸಹ ಸರಿಯಾಗಿ ಬಾರದು
ಆದರೂ ಗಾಯಕಿಯಾಗುತ್ತಾಳೆ ತನ್ನ ಮಗುವಿಗಾಗಿ
ಅವಳಿಗೆ ರಾತ್ರಿಯಿಡೀ ನಿದ್ದೆಗೆಟ್ಟು ಅಭ್ಯಾಸವಿಲ್ಲ
ಆದರೂ ಇಡೀ ರಾತ್ರಿ ಜಾಗರಣೆ ಮಾಡುತ್ತಾಳೆ ತನ್ನ ಮಗುವಿಗಾಗಿ
ನೃತ್ಯವೆಂದರೆ ಅವಳಿಗೆ ಗೊತ್ತೇ ಇಲ್ಲ
ಆದರೂ ನೃತ್ಯಪಟುವಾಗುತ್ತಾಳೆ ಮಗುವಿಗಾಗಿ
ಕ್ರಿಕೆಟ್ ಆಟದ ಗಂಧಗಾಳಿ ಆಕೆಗೆ ಇಲ್ಲ
ಆದರೂ ಬ್ಯಾಟು ಬಾಲು ಆಡುತ್ತಾಳೆ ತನ್ನ ಮಗುವಿಗಾಗಿ
ಅವಳ ಬಳಿ ಸಾಕಷ್ಟು ಹಣವೂ ಇರುವುದಿಲ್ಲ
ಆದರೂ ಸಹ ಗೋಗರೆಯುತ್ತಾಳೆ ಅಪ್ಪನನ್ನು ತನ್ನ ಮಗುವಿಗಾಗಿ
ಅವಳು ತಾನಾಗಿ ಹೊಟ್ಟೆ ತುಂಬಾ ತಿನ್ನುವುದಿಲ್ಲ
ಆದರೂ ಹೊಟ್ಟೆತುಂಬಿದಂತೆ ನಟಿಸುತ್ತಾಳೆ ತನ್ನ ಮಗುವಿಗಾಗಿ
ಅವಳಿಗೆ ಸರಿಯಾಗಿ ಓದುಬರಹ ಬರುವುದಿಲ್ಲ
ಆದರೂ ಉತ್ತಮ ಸಂಸ್ಕಾರ ಕಲಿಸುತ್ತಾಳೆ ತನ್ನ ಮಗುವಿಗೆ
ಅವಳು ಸರಿಯಾಗಿ ಪಾಠಶಾಲೆಗೆ ಹೋಗಿರುವುದಿಲ್ಲ
ಆದರೂ ಸಹ ಮೊದಲಗುರುವಾಗುತ್ತಾಳೆ ತನ್ನ ಮಗುವಿಗೆ!

● ಕೆ.ವಿ.ಸಂತೋಷ್

ಅಜ್ಜ ನೀಡಿದ ಬಳುವಳಿ!

● ಕೆ.ಎಸ್.ಸೋಮೇಶ್ವರ

ಅಂಚೆ ಚೀಟಿಗಳ ಸಂಗ್ರಹ, ನಾಣ್ಯಗಳ ಸಂಗ್ರಹ ಮತ್ತು ಬ್ಯಾಂಕ್ ನೋಟುಗಳು ಮತ್ತು ವಿಶೇಷ ಕಾಗದಗಳ ಸಂಗ್ರಹದ ಗಂಭೀರ ಹವ್ಯಾಸ ಬೆಳೆಸಿಕೊಂಡವರಲ್ಲಿ, ವಿ. ಸುಂದರ್ ಒಬ್ಬರು. ಈ ಹವ್ಯಾಸದಲ್ಲಿ ಬಹಳ ಕಾಲದಿಂದ ತೊಡಗಿಸಿಕೊಂಡಿದ್ದಾರೆ.

ಸುಂದರ್ ರವರು ಎಕನಾಮಿಕ್ ಟೈಮ್ಸ್ , ಕೊಲ್ಕತ್ತಾ ಮತ್ತು ನಂತರದಲ್ಲಿ ಇಂಡಿಯನ್ ಎಕ್ಸ್ ಪ್ರೆಸ್, ಬೆಂಗಳೂರು ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿ, ಬೆಂಗಳೂರಿನಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಚಿಕ್ಕಂದಿನಲ್ಲಿಯೆ ಆರಂಭವಾದ ಈ ಹವ್ಯಾಸ ಈಗ ಇನ್ನಷ್ಟು ಪೂರ್ಣ ಪ್ರಮಾಣದಲ್ಲಿ ನಡೆಯುತ್ತಿದೆ. ಅಂಚೆ ಚೀಟಿ ಸಂಗ್ರಹಕ್ಕೆ ಇವರಿಗೆ ಸ್ಫೂರ್ತಿ ನೀಡಿದವರು, ಇವರ ಅಜ್ಜ, ವೆಂಕಟೇಶ್ವರ ಅಯ್ಯರ್‌ರವರು. ಇವರು ಸುಂದರ್ ರವರ ತಾಯಿಯ ತಂದೆ. ಆ ಒಬ್ಬ ವ್ಯಕ್ತಿಯು ಅಂದಿನ ಕಾಲದಲ್ಲೇ ತೊಡಗಿಸಿಕೊಂಡು ಬಂದ ಹವ್ಯಾಸ ಮೊಮ್ಮಗನಿಗೆ ಯಥಾವತ್ ಧಾರೆಯೆರೆಯಲ್ಪಟ್ಟಿದೆ.

ಸಣ್ಣ ವಯಸ್ಸಿನಿಂದಲೇ ಗಳಿಸಿಕೊಂಡ ಅಜ್ಜನ ಬಳುವಳಿಯನ್ನು ಸುಂದರ್‌ರವರು ಮುಂದುವರಿಸಿಕೊಂಡು ಬಂದಿದ್ದಾರೆ. ಈ ಒಬ್ಬ ಹವ್ಯಾಸಿಯನ್ನು ಪದಗಳ ಮೂಲಕ ಪರಿಚಯ ಮಾಡುವುದು ಬಹಳ ಸಾಧಾರಣ ಎನಿಸಿಬಿಡುತ್ತದೆ. ಏಕೆಂದರೆ, ಇಂತಹ ಒಂದು ಆಸಕ್ತಿಯನ್ನು ಬೆಳೆಸಿಕೊಳ್ಳಲು ಅದಕ್ಕೆ ಬೇಕಾಗಿರುವ ತಾಳ್ಮೆ ಮತ್ತು ಅದಮ್ಯ ಉತ್ಸಾಹ ಪದಗಳಲ್ಲಿ ಲೆಕ್ಕ ಮಾಡುವಂತಹುದಲ್ಲ. ಇವರ ಈ ಒಂದು ಚಟುವಟಿಕೆ ಇದುವರೆಗೂ ಯಾವುದೇ ರೀತಿಯಲ್ಲಿ ಪ್ರಚಾರಕ್ಕಾಗಿ ತೊಡಸಿಕೊಂಡಿರುವುದಲ್ಲ. ಅವರ ಒಂದೊಂದು ಸಂಗ್ರಹವೂ ಹೇಳುವ ಕಥೆ ಅದರಲ್ಲಿನ ಈ ವ್ಯಕ್ತಿಯ ಆಸಕ್ತಿ ಮತ್ತು ಉತ್ಸಾಹವನ್ನು ಪ್ರತಿ ಫಲಿಸುತ್ತದೆ. ಚಿಕ್ಕಂದಿನ ಚಟುವಟಿಕೆ ಇಂದಿಗೂ ಅದೇ ಕುತೂಹಲದಿಂದ ನೋಡುತ್ತಿದೆ. ಇದಕ್ಕೆ ಅವರ ಮನೆಯವರ ಸಂಪೂರ್ಣ ಸಹಕಾರ ಉತ್ತೇಜನ ಇದ್ದೇ ಇದೆ.

ಅವರ ಅಜ್ಜನಿಂದ ಬಂದ ಅಂಚೆ ಚೀಟಿ ಸಂಗ್ರಹದ ಹವ್ಯಾಸ, ಇವರ ಮನಸ್ಸಿಗೆ ಸಂತಸ ನೀಡುತ್ತಿದೆ ಎಂಬುದೇ ವಿಶೇಷ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಮಣ್ಣಿನ ಮಡಕೆ ಮಾಡುವವನು (3)
5. ಮತ್ತೇರಿದ ಆನೆ (4)
6. ಯಮನೊಂದಿಗೆ ಬಂದಿರುವ ತೆರೆ (4)
7. ಶತ್ರುವಿನೊಂದಿಗೆ ಬಂದಿರುವ ಬಿನ್ನಹ (3)
10. ಋಷಿಯೊಬ್ಬನ ಹೆಸರೂ ಆಗಬಲ್ಲ ಆನೆ (3)
12. ಅಪಹರಿಸು ಎಂದರ್ಥ (5)
13. ರಸದ ನಡುವಿನ ವೇಗ (3)
15. ಶ್ರೀಕೃಷ್ಣನ ಸ್ನೇಹಿತ (3)
19. ಹಿಡಿತಕ್ಕೆ ಸಿಕ್ಕ ಎಂದರ್ಥ (4)
20. ಅಗಲ ಬಾಯಿಯ ತಟ್ಟೆ ಅಸ್ತವ್ಯಸ (4)
21. ಚರ್ಮವಾದ್ಯದಲ್ಲಿ ಆಭರಣ? (3)

ಮೇಲಿಂದ ಕೆಳಕ್ಕೆ

1. ಮನ್ಮಥನ ಶತ್ರು (4)
2. ಆನೆಗೆ ಮತ್ತೊಂದು ಹೆಸರಿದು (3)
3. ನಿಜವಾಗಿಯೂ ಇರುಳು (3)
4. ಮನೆಯಿಲ್ಲದವನು ಕೊನೆಗೆ ಅನುಸ್ವರದೊಂದಿಗೆ (4)
7. ಅರದ ನಡುವೆ ಸಿಲುಕಿರುವ ದಾನವ (3)
8. ಪ್ರತಿಸಲ ಮಾಡಬೇಕಾದ ಕಾರ್ಯ (3)
9. ಸಿಡಿಮದ್ದು (3)
10. ಬೆಳಗಿನ ಹೊತ್ತಿನಲ್ಲಿ ಇದೆ (3)
11. ಅಸ್ತವ್ಯಸ್ತವಾಗಿದೆ ಗದ್ದಲ (3)
14. ಗಂಗೆಯನ್ನು ಭೂಮಿಗೆ ತರಿಸಿದಾತ (4)
16. ಚೈತನ್ಯವನ್ನು ಪಡೆ (4)
17. ಜನ ಮಾಡಿದ ಜೋಪಾನ (3)
18. ಮನಸ್ಸಿನ ಓಘ (3)

ಸರಿಯುತ್ತರಗಳು

ಕೋಳೂರಿನ ಚೆನ್ನಕ್ಕನ ಶಿವಭಕ್ತಿ

ಕೋಳೂರಿನಲ್ಲಿ ಶಿವದೇವನೆಂಬ ಭಕ್ತನಿದ್ದ. ಈ ಗ್ರಾಮ ಹಾವೇರಿ ಜಿಲ್ಲೆಯಲ್ಲಿದೆ. ಶಿವದೇವ ಮತ್ತು ಆತನ ಹೆಂಡತಿ ಉತ್ಕಟ ಶಿವಭಕ್ತರಾಗಿದ್ದರು. ಆ ಊರಿನ ಕಲ್ಲೇಶ್ವರಲಿಂಗ ಇವರ ಆರಾಧ್ಯ ದೈವವಾಗಿತ್ತು. ಪ್ರತಿನಿತ್ಯವೂ ಅತ್ಯಂತ ಭಕ್ತಿಯಿಂದ ಅದನ್ನು ಪೂಜಿಸಿ ಕಪಿಲವರ್ಣದ ಗೋವಿನ ಹಾಲನ್ನು ನೈವೇದ್ಯ ಮಾಡುವ ನೇಮವನ್ನು ಇವರು ಇಟ್ಟುಕೊಂಡಿದ್ದರು.

ಈ ದಂಪತಿಗಳಿಗೆ ಒಬ್ಬಳೇ ಮಗಳು. ಹೆಸರು ಚೆನ್ನಕ್ಕ. ಭಕ್ತಿಯ ವಾತಾವರಣದಲ್ಲಿಯೇ ಬೆಳೆದ ಈಕೆಯಲ್ಲಿ ಭಕ್ತಿ ಸಹಜವಾಗಿಯೇ ಹೆಚ್ಚಾಗಿತ್ತು. ಏಳು ವರ್ಷಗಳೂ ತುಂಬದ ಈ ಕೂಸು ಅವರ ಸಂಸಾರದ ಸರ್ವಸ್ವವಾಗಿತ್ತು.

ಒಮ್ಮೆ ಚೆನ್ನಕ್ಕನ ತಂದೆತಾಯಿಗಳು ಕಾರ್ಯನಿಮಿತ್ತರಾಗಿ ಪರವೂರಿಗೆ ಹೋಗಬೇಕಾಗಿ ಬಂತು. ಆಗ ಅವರು ಕಲ್ಲೇಶ್ವರನ ಪೂಜೆ ಮತ್ತು ನೈವೇದ್ಯದ ಹೊಣೆಯನ್ನು ಚೆನ್ನಕ್ಕನಿಗೆ ವಹಿಸಿದರಲ್ಲದೆ ಪೂಜೆಯ ಅನಂತರ ಹಾಲನ್ನು ಶಿವನಿಗೆ ತಪ್ಪದೆ ಅರ್ಪಿಸುವಂತೆ ಹೇಳಿಹೋದರು. ಈ ಸುಯೋಗ ಲಭಿಸಿದುದಕ್ಕಾಗಿ ಚೆನ್ನಕ್ಕ ಸಂತೋಷದಿಂದ ಹಿಗ್ಗಿದಳು. ಸ್ನಾನ ಮಾಡಿ, ಮಡಿಯುಟ್ಟು, ದೇವಾಲಯಕ್ಕೆ ಬಂದಳು. ಶಿವಲಿಂಗವನ್ನು ಭಕ್ತಿಯ ತನ್ಮಯತೆಯಿಂದ ಪೂಜಿಸಿದಳು. ಅನಂತರ ಬಳ್ಳದಲ್ಲಿ ತಾನು ತಂದಿದ್ದ ಹಾಲನ್ನು ಶಿವನ ಮುಂದಿಟ್ಟು ಅದನ್ನು ಕುಡಿಯುವಂತೆ ಪ್ರಾರ್ಥಿಸಿದಳು. ಆದರೆ ಇವಳ ಪ್ರಾರ್ಥನೆ ವ್ಯರ್ಥವಾಯಿತು. ಶಿವ ಬಂದು ಹಾಲನ್ನು ಕುಡಿಯಲಿಲ್ಲ. ಭಕ್ತೆಯ ಮುಗ್ಧಸಂಭ್ರಮ ಮರೆಯಾಯಿತು.

ಆತಂಕದಿಂದ ಶಿವನನ್ನು ಮತ್ತೆ ಮತ್ತೆ ಬೇಡಿಕೊಳ್ಳತೊಡಗಿದಳು. ಬಹುಶಃ ತಾನು ಎದುರಿಗಿರುವುದರಿಂದ ಶಿವ ಹಾಲನ್ನು ಕುಡಿಯಲಾರನೆಂದು ಮರೆಗೆ ಹೋಗಿ ನಿಂತಳು. ಪುನಃ ಬಂದು ನೋಡಿದಳು; ಪ್ರಾರ್ಥಿಸಿದಳು. ಎಲ್ಲವೂ ವ್ಯರ್ಥವಾದಾಗ ಅವಳ ಸಂಕಟ ಮಿತಿಮೀರಿತು. ತನ್ನ ಭಕ್ತಿಯಲ್ಲೇನೋ ಕುಂದಿರಬೇಕೆಂದು ಅನಿಸಿತು. ಕ್ಷಮಿಸಿ ಹಾಲನ್ನು ಕುಡಿಯಬೇಕೆಂದು ಶಿವನನ್ನು ಪ್ರಾರ್ಥಿಸಿದಳು. ಆದರೆ ಎಲ್ಲವೂ ವಿಫಲವಾದಾಗ ಆ ನಿರಾಶೆಯನ್ನು ತಾಳಲಾರದೆ ಅಲ್ಲಿದ್ದ ಕಲ್ಲಿಗೆ ತನ್ನ ತಲೆಯನ್ನು ಹೊಡೆದುಕೊಳ್ಳುತ್ತ ತನ್ನನ್ನೇ ಅರ್ಪಿಸಿಕೊಳ್ಳಲು ಸಿದ್ಧಳಾದಳು. ಶಿವ ಗತ್ಯಂತರವಿಲ್ಲದೆ ಕೂಡಲೇ ಪ್ರತ್ಯಕ್ಷನಾಗಿ ನೈವೇದ್ಯದ ಹಾಲನ್ನು ಕುಡಿದು ಅವಳನ್ನು ಸಂತೈಸಿದ. ಅಂದಿನಿಂದ ದಿನದಿನವೂ ಇವಳ ಪೂಜೆಯ ಕ್ರಮ ಅದೇ ರೀತಿಯಲ್ಲಿ ಮುಂದುವರಿಯಿತು. ನಿತ್ಯವೂ ಶಿವ ಬಂದು ಹಾಲನ್ನು ಕುಡಿಯುತ್ತಿದ್ದ. ಅನಂತರ ಬರಿಯ ಬಟ್ಟಲನ್ನು ಚೆನ್ನಕ್ಕ ಮನೆಗೆ ತರುತ್ತಿದ್ದಳು.

ಹೀಗೆ ಕೆಲವು ದಿನಗಳು ಕಳೆದಮೇಲೆ ಚೆನ್ನಕ್ಕನ ತಂದೆತಾಯಿಗಳು ಊರಿಗೆ ಹಿಂದಿರುಗಿದರು. ದೇವಾಲಯಕ್ಕೆ ಹೋಗಿ ಬರುತ್ತಿದ್ದ ಮಗಳನ್ನು ಎದುರಿನಲ್ಲಿಯೇ ಸಂಧಿಸಿದರು. ಆಕೆಯ ಕೈಯಲ್ಲಿದ್ದ ಹಾಲಿನ ಪಾತ್ರೆ ಬರಿದಾಗಿದ್ದುದನ್ನು ಗಮನಿಸಿ ಅಚ್ಚರಿಗೊಂಡರು. ಶಿವ ನಿಜವಾಗಿ ಹಾಲು ಕುಡಿಯುವನೇ ಎಂಬುದನ್ನು ಪರೀಕ್ಷಿಸಿ ನೋಡುವ ಮನಸ್ಸಾಯಿತು ಅವರಿಗೆ.

ಮರುದಿನ ಪೂಜೆಯ ಸಮಯ ಬಂತು. ಚೆನ್ನಕ್ಕ ಎಂದಿನಂತೆ ಪೂಜೆಮಾಡಿ ಹಾಲನ್ನು ಮುಂದಿಟ್ಟಾಗ ಶಿವ ಅದನ್ನು ಕುಡಿಯಲಿಲ್ಲ. ಮಗಳು ಸುಳ್ಳು ಹೇಳಿದಳು ತಂದೆಗೆ ಕೋಪ ಬಂತು. ಅವಳನ್ನು ದಂಡಿಸುವುದಕ್ಕಾಗಿ ಮುಂದೆ ಬಂದ. ಮುಗ್ಧ ಚೆನ್ನಕ್ಕ ಏನೂ ಮಾಡಲಾರದೆ ಶಿವನೇ ಗತಿಯೆಂದು ಓಡಿಹೋಗಿ ಲಿಂಗವನ್ನು ತಬ್ಬಿಕೊಂಡಳು. ಶಿವ ಪ್ರತ್ಯಕ್ಷನಾಗಿ ಅವಳನ್ನು ತನ್ನಲ್ಲಿ ಅಡಗಿಸಿಕೊಂಡ.

ಇದನ್ನು ಕಂಡ ತಂದೆಗೆ ಪಶ್ಚಾತ್ತಾಪವಾಯಿತು. ಮಗಳನ್ನು ಕಳೆದುಕೊಳ್ಳಲಾರದೆ ಓಡಿಬಂದು ಶಿವನಲ್ಲಿ ಐಕ್ಯವಾ ಗುತ್ತಿದ್ದ ಆಕೆಯ ತಲೆಗೂದಲನ್ನು ಹಿಡೆದೆಳೆದ. ಆಗ ಕೂದಲು ಮಾತ್ರ ಹೊರಗುಳಿದು ಆಕೆ ಲಿಂಗದಲ್ಲಿ ಐಕ್ಯವಾದಳು. ಕೋಳೂರಿನಲ್ಲಿರುವ ಕಲ್ಲಿನಾಥನ ಲಿಂಗದಲ್ಲಿ ಈಗಲೂ ಕೂದಲ ಗುರುತುಗಳಿವೆ ಎನ್ನುತ್ತಾರೆ. ಅಂದಿನಿಂದ ಭಕ್ತೆ ಚೆನ್ನಕ್ಕ ಕೋಳೂರು ಕೊಡಗೂಸು (ಕೊಡದ ಕೂಸು-ಕನ್ಯೆ) ಎಂದೇ ಪ್ರಸಿದ್ಧಳಾದಳು.

ಮಕ್ಕಳಲ್ಲಿ ನಾವು ಯಾವ ಗುಣಗಳನ್ನು ಬಿತ್ತುತ್ತೇವೋ ಅದನ್ನು ಅವರು ನಿಷ್ಕಲ್ಮಶ ಮನಸ್ಸಿನಿಂದ ಆಚರಿಸುತ್ತಾರೆ. ಅವರ ಮನಸ್ಸು ಹಸಿ ಮಣ್ಣಿನಂತೆ. ನಾವು ಒಳ್ಳೆಯದನ್ನು ಬಿತ್ತಿದರೆ ಅವರು ಒಳ್ಳೆಯದನ್ನೇ ಕಲಿಯುತ್ತಾರೆ. ಆದ್ದರಿಂದಲೇ ಮಕ್ಕಳ ಒಡನಾಟದಲ್ಲಿರುವ ತಂದೆ ತಾಯಿಗಳು ಬರೀ ತಮ್ಮ ಮಾತಿನ ಕಡೆಯಲ್ಲ ತಮ್ಮ ಕೃತಿಯ ಕಡೆ ಕೂಡ ಗಮನ ಕೊಡಬೇಕು. ಮಕ್ಕಳು ನಾವು ಹೇಳಿದ್ದಕ್ಕಿಂತ ನಾವು ಮಾಡಿದ್ದನ್ನು ನೋಡಿ ಕಲಿಯುವುದೇ ಹೆಚ್ಚು. ಮಕ್ಕಳನ್ನು ಬೆಳೆಸುವುದು ಮಕ್ಕಳಾಟವಲ್ಲ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಹಸಿವು ಮಮತೆ ಈ ಸೃಷ್ಟಿ ರಹಸ್ಯಗಳು

ಹೊಟ್ಟೆಯಲಿ ಹಸಿವು, ಮನದಲಿ ಮಮತೆ ಈ ಎರಡು
ಗುಟ್ಟು ಕೀಲುಗಳಿಹವು ಸೃಷ್ಟಿಯಂತ್ರದಲಿ
ಕಟ್ಟಿಪುವು ಕೋಟೆಗಳ, ಕೀಳಿಪುವು ತಾರೆಗಳ
ಸೊಟ್ಟಾಗಿಪುವು ನಿನ್ನ - ಮಂಕುತಿಮ್ಮ||

ಮನುಷ್ಯನ ಉದರದ ಹಸಿವು ಹಾಗೂ ಮನದಲ್ಲಿನ ಮಮತೆಗಳೇ ಈ ಜಗತ್ತಿನ ಸೃಷ್ಟಿಯಂತ್ರದ ಹಾಗೂ ನಮ್ಮಯ ಬದುಕಿನ ಕೀಲುಗಳು. ಈ ಹಸಿವು ಹಾಗೂ ಮಮತೆಗಳು ಮನುಷ್ಯನಿಂದ ಅಸಾಧ್ಯವಾದುದನ್ನೂ ಸಹ ಸಾಧ್ಯವಾಗಿಸಿವೆ. ಹಸಿವು ಹಾಗೂ ಮಮತೆಗಳು ಯಾವ ರೀತಿ ಎಂದರೆ, ನಮ್ಮಗಳಿಂದ ಕೋಟೆಗಳನ್ನು ಕಟ್ಟಿಸುತ್ತವೆ ಹಾಗೆಯೇ ನಭದಲ್ಲಿಯ ತಾರೆಗಳನ್ನೂ ಸಹ ಕೀಳಿಸುವಂತೆ ಪ್ರೇರೇಪಿಸುತ್ತವೆ. ಅಂತೆಯೇ ಫಲ ಕೈಗೂಡದೇ ಇದ್ದಾಗ ಅವುಗಳು ನಮ್ಮ ಜೀವನವನ್ನೂ ಸಹ ಸೊಟ್ಟಾಗಿ ಸುತ್ತವೆ ಎಂದು ಮನುಷ್ಯನ ನೈಜ ಬದುಕಿನ ಸ್ವರೂಪವನ್ನು ಈ ಪದ್ಯದಲ್ಲಿ ತಿಳಿಸಿದ್ದಾರೆ.

ಮನುಷ್ಯನ ಮನದಲ್ಲಿ ಎಲ್ಲಾ ಆಕಾಂಕ್ಷೆಗಳು, ಮಹತ್ವಾಕಾಂಕ್ಷೆ ಗಳೆಲ್ಲವೂ ಸಹ ಮೂಡುವುದು ಈ ಹಸಿವು ಹಾಗೂ ಮಮತೆಗ ಳಿಂದಲೇ ಹೌದು. ಅಂತೆಯೇ ಮನುಷ್ಯನಿಗಿರುವ ಹಸಿವು ಹಾಗೂ ಮನದಲ್ಲಿ ಮೂಡುವ ಮಮತೆಗಳು ಆತನಿಂದ ಎಂಥಹ ಕೆಲಸಕ್ಕೂ ಕೈ ಹಾಕಿಸಿಬಿಡುತ್ತವೆ. ಹಸಿವೆಂಬುದು ಮೊದಲಿಗೆ ವಸ್ತುಗಳ ಅವಿಷ್ಕಾರಕ್ಕೋ, ಪಡೆಯಲೋ ಪ್ರೇರೇಪಿಸಿದರೆ, ನಂತರ ಪಡೆದ ವಸ್ತುಗಳ ಮೇಲೆ ಮನದಲ್ಲಿ ಮಮಕಾರ ಉಂಟಾಗುತ್ತದೆ. ಈ ಹಿಂದಿನ ಇತಿಹಾಸವನ್ನೇ ನಾವು ನೋಡಿದರೂ ಸಹ ಎಲ್ಲಾ ವ್ಯವಸ್ಥೆಗಳೂ ಸಹ ನಿಂತಿರುವುದು ಈ ಹಸಿವು ಹಾಗೂ ಮನದ ಮಮತೆ ಗಳಿಂದಲೇ ಹೌದು. ಜಠರಾಗ್ನಿಯು ಭುಗಿಲೆದ್ದರೆ ಆ ಜ್ವಾಲೆಗೆ ಕಂದದವರು ಯಾರೂ ಇಲ್ಲ. ಹಾಗೆಯೇ ಈ ಮನದಲ್ಲಿಯ ಮಮತೆಗಳೂ ಸಹ ಯಾವುದೋ ರೀತಿಯಲ್ಲಿ ಎಲ್ಲವೂ ನನ್ನದಾಗಬೇಕು ಎಂಬ ಇಚ್ಛೆಯನ್ನು ವ್ಯಕ್ತಪಡಿಸಿ ಆಪೋಷನ ಮಾಡುತ್ತಲಿರುತ್ತದೆ. ಇವನು ಕಟ್ಟಿದ ರಾಜ್ಯಗಳು, ಗೆದ್ದ ಪ್ರದೇಶಗಳು, ಸಮುದ್ರಗಳು, ಆಕಾಶ, ಕಲಿತ ಕಲೆ, ಶಾಸ್ತ್ರ, ಅರಿತ ಜ್ಞಾನ - ವಿಜ್ಞಾನಗಳು ಎಲ್ಲವೂ ತನ್ನನ್ನು ಮತ್ತು ತಾನು ಕಟ್ಟಿಕೊಂಡ ಸಮಾಜವನ್ನು ಬದಲಾಯಿಸುವ, ಸುಧಾರಿಸುವ ಮತ್ತು ಔನ್ನತ್ಯಕ್ಕೆ ಕೊಂಡುಹೋಗುವ ಇವನ ಪ್ರಯತ್ನಕ್ಕೆ ಇವನ ಮಹತ್ವಾಕಾಂಕ್ಷೆ ಮತ್ತು ಮಮತೆಗಳೇ ಕಾರಣವೆಂದರೆ ಸೂಕ್ತವಾಗುತ್ತದೆ. ಆದುದರಿಂದ ಮನುಷ್ಯನ ಹೊಟ್ಟೆಯ ಹಸಿವು, ಮಾನಸಿಕವಾದ ಜ್ಞಾನ ವಿಜ್ಞಾನದ ಹಸಿವುಗಳು ಹಾಗೂ ಆತನು ಮನದಲ್ಲಡಗಿಸಿಕೊಂಡ ಮಮತೆಗಳು ಆತನನ್ನು ಮೇರು ಮಟ್ಟಕ್ಕೂ ತರುತ್ತವೆ; ಅಂತೆಯೇ ಪ್ರಪಾತಕ್ಕೂ ಕೊಂಡೊಯ್ಯುತ್ತವೆ. ಇವೆರಡೂ ಕೋಟೆಗಳನ್ನು ಕಟ್ಟಿಸುತ್ತವೆ ಅಂದರೆ ಸಮಾಜಕ್ಕೆ ಕೋಟೆಯಾಗಿ ರಕ್ಷಿಸುವಂಥಹ ಕೆಲಸವನ್ನೂ ಮಾಡಿಸುತ್ತವೆ. ಕೆಲವೊಮ್ಮೆ ಈ ಹಸಿವು ಹಾಗೂ ಮಮತೆಗಳು ಅಸಾಧ್ಯವಾದುದನ್ನು ಸಾಧಿಸಲೆತ್ನಿಸಿ ಆತನನ್ನು ಚೊಟ್ಟವಾಗಿಸಿಯೂ ಬಿಡುತ್ತವೆ. ಒಟ್ಟಿನಲ್ಲಿ ಮನುಷ್ಯನಲ್ಲಿ ಉದ್ಭವಿಸುವ ಆಸೆಗಳ ಮೂಲ ಆತನ ಹಸಿವು ಹಾಗು ಆತನಲ್ಲಿಯ ಮಮತೆಗಳು, ಇವೆರಡೂ ಈತನನ್ನು ಔನ್ನತ್ಯಕ್ಕೂ ಕೊಂಡೊಯ್ಯುತ್ತವೆ ಹಾಗೆಯೇ ಕೆಲವೊಮ್ಮೆ ಆತನನ್ನು ಚೊಟ್ಟವಾಗಿಸಿಬಿಡುತ್ತವೆ ಎಂಬ ನಗ್ನ ಸತ್ಯವನ್ನ ಈ ಪದ್ಯವು ಹೇಳಿದೆ.

ಡೈನಾಮೆಟ್ ಕಂಡು ಹಿಡಿದವನು ನೊಬೆಲ್. ಆತನು ರಾಸಾಯನಿಕ ವಸ್ತುಗಳ ಮೇಲೆ ಇಟ್ಟಿದ್ದ ಮಮತೆ ಹಾಗೂ ಹೆಸರಾಗಬೇಕೆಂಬ ಹಂಬಲದ ಮಮತೆಯಲಿ ಈ ಅವಿಷ್ಕಾರ ಮಾಡಿ ಹೇರಳವಾಗಿ ಹಣ ಸಂಪಾದನೆ ಮಾಡಿದನು. ಕೊನೆಗೊಮ್ಮೆ ನಾನು ಕಂಡು ಹಿಡಿದ ಅವಿಷ್ಕಾರವೇ ಈ ಮಾನವ ಕುಲಕ್ಕೆ ಘೋರ ದುರಂತ ಎಸಗುತ್ತದೆ ಎಂದರಿತ ಆತನು ತನ್ನಲ್ಲಿಯ ಎಲ್ಲಾ ಸಂಪತ್ತನ್ನು ದಾನಮಾಡಿದನು. ಈಗಲೂ ಆತನ ಹೆಸರಲ್ಲಿ ನೊಬೆಲ್ ಬಹುಮಾನ ಇರುವುದನ್ನು ಕಂಡಿದ್ದೇವೆ. ಈತನಲ್ಲಿಯ ಹಸಿವು, ಜ್ಞಾನ ವಿಜ್ಞಾನದ ಹಸಿವು, ರಾಸಾಯನಿಕ ವಸ್ತುಗಳ ಮೇಲಿನ ಮಮತೆಗಳು ಆತನಿಂದ ಡೈನಾಮೆಟ್‌ಗಳನ್ನು ಕಂಡು ಹಿಡಿಸಿದವು. ಆದರೆ ಆತನಿಗೆ ನಾನು ಅವಿಷ್ಕಾರ ಮಾಡಿರುವುದು ಸೊಟ್ಟಾಗಿದೆ ಎಂಬ ಅರಿವು ಆಗಿ ಆತನು ತನ್ನ ತಪ್ಪನ್ನು ತಿದ್ದಿಕೊಂಡನು. ಹೀಗೆ ಹಸಿವು ಹಾಗೂ ಮಮತೆಗಳು ಎಂತಹ ಕೆಲಸಕ್ಕೂ ಈ ಮಾನವರಿಂದ ಕೈ ಹಾಕಿಸುತ್ತವೆ ಎಂಬ ಸೂಕ್ತಿಯು ಸತ್ಯವಾದುದೇ ಆಗಿದೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಸಮಾಚಾರ ಸಣ್ಣದಲ್ಲ

ಲೆಜೆಂಡ್ಸ್ ಚಾಂಪಿಯನ್‌ಗೆ ಯುವರಾಜ್ ನಾಯಕ

ದೆಹಲಿ: ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟಿ20 ಟೂರ್ನಿಗೆ ಇಂಡಿಯಾ ಚಾಂಪಿಯನ್ಸ್ ತಂಡವನ್ನು ಪ್ರಕಟಿಸಲಾಗಿದೆ. 17 ಸದಸ್ಯರನ್ನು ಒಳಗೊಂಡಿರುವ ಈ ಚಾಂಪಿಯನ್ಸ್ ತಂಡವನ್ನು ಟೀಮ್ ಇಂಡಿಯಾದ ಮಾಜಿ ಆಲ್ ರೌಂಡರ್ ಯುವರಾಜ್ ಸಿಂಗ್ ಮುನ್ನಡೆಸಲಿದ್ದಾರೆ. ತಂಡದಲ್ಲಿ ಅನುಭವಿ ಕ್ರಿಕೆಟಿಗರಾದ ಸುರೇಶ್

ರೈನಾ, ಶಿಖರ್ ಧವನ್, ಇರ್ಫಾನ್ ಪಠಾಣ್, ಯೂಸುಫ್ ಪಠಾಣ್ ಸೇರಿದಂತೆ ಅನೇಕರು ಕಾಣಿಸಿಕೊಂಡಿದ್ದಾರೆ. ಕರ್ನಾಟಕದ ಮಾಜಿ ಕ್ರಿಕೆಟಿಗರಾದ ರಾಬಿನ್ ಉತ್ತಪ್ಪ ಹಾಗೂ ವಿನಯ್ ಕುಮಾರ್ ಕೂಡ ಇಂಡಿಯಾ ಚಾಂಪಿಯನ್ಸ್ ತಂಡ ದಲ್ಲಿದ್ದಾರೆ. 2024ರಲ್ಲಿ ನಡೆದ ಚೊಚ್ಚಲ ಟೂರ್ನಿಯ ಫೈನಲ್ ನಲ್ಲಿ ಪಾಕಿಸ್ತಾನ್ ಚಾಂಪಿ ಯನ್ಸ್ ತಂಡಕ್ಕೆ ಸೋಲುಣಿಸಿ ಇಂಡಿಯಾ ಚಾಂಪಿ ಯನ್ಸ್ ಟ್ರೋಫಿ ಗೆದ್ದಿದ್ದರು. ಇದೀಗ ಮತ್ತೊಮ್ಮೆ 5 ತಂಡಗಳನ್ನು ಹಿಂದಿಕ್ಕಿ 2025ರಲ್ಲೂ ಚಾಂಪಿಯನ್ ಪಟ್ಟ ಅಲಂಕರಿಸುವ ವಿಶ್ವಾಸ ಇಂಡಿಯಾ ಚಾಂಪಿಯನ್ಸ್ ಪಡೆಗಿದೆ. ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟಿ20 ಟೂರ್ನಿಯ ಎರಡನೇ ಆವೃತ್ತಿ ಜುಲೈ 18ರಿಂದ ಶುರುವಾಗಲಿದೆ. ಇಂಗ್ಲೆಂಡ್‌ನಲ್ಲಿ ಜರುಗಲಿರುವ ಆರು ತಂಡಗಳ ನಡುವಣ ಈ ಟಿ20 ಟೂರ್ನಿಯ ಫೈನಲ್ ಪಂದ್ಯವು ಆಗಸ್ಟ್ 2ರಂದು ಬರ್ಮಿಂಗ್‌ಹ್ಯಾಮ್‌ನ ಎಡ್ಜ್ ಬಾಸ್ಟನ್ ಸ್ಟೇಡಿಯಂನಲ್ಲಿ ನಡೆಯಲಿದೆ.

ಹಾಕಿ: ಭಾರತಕ್ಕೆ 3ನೇ ಸ್ಥಾನ

ಬರ್ಲಿನ್: ಭಾರತ ಜೂನಿಯರ್ ಪುರುಷರ ಹಾಕಿ ತಂಡ ಬುಧವಾರ ನಡೆದ ಪಂದ್ಯದಲ್ಲಿ 2-1 ಗೋಲುಗಳಿಂದ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ, ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯಲ್ಲಿ ಮೂರನೇ ಸ್ಥಾನ ಗಳಿಸಿತು. ತೃತೀಯ ಸ್ಥಾನಕ್ಕಾಗಿ ನಡೆದ ಪಂದ್ಯದ ಪೂರ್ವಾರ್ಧದಲ್ಲಿ ಗೋಲುಗಳು ಬರಲಿಲ್ಲ. ಆಸ್ಟ್ರೇಲಿಯಾ ತಂಡದ ನಾಯಕ ಟೋಬಿ ಮಲೋನ್ 40ನೇ ನಿಮಿಷ ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ ವಿರಾಮದ ನಂತರ ರೋಹಿತ್ (45ನೇ ನಿಮಿಷ) ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸಿ ಸ್ಕೋರ್ ಸಮ ಮಾಡಿದರು. 52ನೇ ನಿಮಿಷ ಅಜೀತ್ ಯಾದವ್ ಗಳಿಸಿದ ಗೋಲು ಭಾರತದ ಪಾಲಿಗೆ ಗೆಲುವಿನ ಗೋಲಾಗಿ ಪರಿಣಮಿಸಿತು. ಭಾರತ ಲೀಗ್ ಪಂದ್ಯಗಳಲ್ಲಿ 1-7ರಿಂದ ಜರ್ಮನಿಗೆ ಮಣಿದಿತ್ತು. ನಂತರ 3-1ರಿಂದ ಆಸ್ಟ್ರೇಲಿಯಾ ವಿರುದ್ಧ ಜಯಗಳಿಸಿತ್ತು, ಆದರೆ ಈ ಹಂತದ ಕೊನೆಯ ಪಂದ್ಯದಲ್ಲಿ 1-5ರಿಂದ ಸ್ಪೇನ್‌ಗೆ ಮಣಿದಿತ್ತು.

ದುಬಾರಿಯಾದ ಕಳಪೆ ಫೀಲ್ಡಿಂಗ್, ಕೈಚೆಲ್ಲಿದ ಕ್ಯಾಚ್‌ಗಳು | ಸೋಲನ್ನು ತಪ್ಪಿಸದ 5 ವೈಯಕ್ತಿಕ ಶತಕಗಳು

ಸೋಲಿನ ಆತ್ಮಾವಲೋಕನದಲ್ಲಿ ಟೀಮ್ ಇಂಡಿಯಾ

ಲೀಡ್ಸ್: 148 ವರ್ಷಗಳ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ ತಂಡವೊಂದು ಪಂದ್ಯವೊಂದರಲ್ಲಿ 5 ಶತಕ ಸಿಡಿಸಿರುವುದು ಕೇವಲ ಮೂರು ಬಾರಿ, ಆ ರೀತಿ 5 ಶತಕ ಸಿಡಿಸಿ ಅಬ್ಬರಿಸಿದ ತಂಡಗಳೆಲ್ಲವೂ ಭರ್ಜರಿ ಜಯ ಸಾಧಿಸಿದೆ. ಆದರೆ ಟೀಮ್ ಇಂಡಿಯಾ ಪಾಲಿಗೆ ಮಂಗಳವಾರ ಆ ಅದೃಷ್ಟ ಕೂಡಿ ಬರಲಿಲ್ಲ. ಇಂಗ್ಲೆಂಡ್ ವಿರುದ್ಧದ ಸೋಲಿನ ಆತ್ಮಾವಲೋಕನದ ಚರ್ಚೆ ಇದೀಗ ತಂಡದಲ್ಲಿ ಆರಂಭವಾಗಿದೆ.

ಹೆಡಿಂಗ್ಲೆ ಮೈದಾನದಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ಭಾರತದ ಬ್ಯಾಟ್ಸ್‌ಮನ್ ಯಶಸ್ವಿ ಜೈಸ್ವಾಲ್ (101), ಶುಭ್‌ಮನ್ (147) ಹಾಗೂ ರಿಷಭ್ ಪಂತ್ (134) ಶತಕ ಸಿಡಿಸಿದ್ದರು. ಹಾಗೆಯೇ ದ್ವಿತೀಯ ಇನಿಂಗ್ಸ್‌ನಲ್ಲಿ ಕೆ.ಎಲ್ ರಾಹುಲ್ (137) ಹಾಗೂ ರಿಷಭ್ ಪಂತ್ (118) ಶತಕ ಬಾರಿಸಿದ್ದರು.

ಈ 5 ವೈಯಕ್ತಿಕ ಶತಕಗಳ ಹೊರತಾಗಿಯೂ ಪಂದ್ಯದಲ್ಲಿ ಟೀಮ್ ಇಂಡಿಯಾಗೆ ಗೆಲ್ಲಲು ಸಾಧ್ಯವಾಗಿಲ್ಲ. ಭಾರತ ತಂಡವು ಎರಡನೇ ಇನ್ನಿಂಗ್ಸ್ ನಲ್ಲಿ ನೀಡಿದ 371 ರನ್ ಗಳ ಗುರಿಯನ್ನು ಇಂಗ್ಲೆಂಡ್ ತಂಡವು 82 ಓವರ್‌ಗಳಲ್ಲಿ ಬೆಂಬತ್ತಿ ಗೆಲುವಿನ ಗುರಿ ತಲುಪಿ, 5 ವಿಕೆಟ್ ಗಳ ಭರ್ಜರಿ ಜಯ ಸಾಧಿಸಿದೆ.

ಒಂದೇ ಪಂದ್ಯದಲ್ಲಿ ಈ ಹಿಂದೆ 5 ಶತಕ ಸಿಡಿಸಿದ್ದ ಆಸ್ಟ್ರೇಲಿಯಾ, ಪಾಕಿಸ್ತಾನ ತಂಡಗಳು ಭರ್ಜರಿ ಗೆಲುವು ದಾಖಲಿಸಿದ್ದವು. 1955ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ 5 ಶತಕ ಬಾರಿಸಿದ ಆಸೀಸ್ ಪಡೆ ಇನ್ನಿಂಗ್ಸ್ ಹಾಗೂ 82 ರನ್‌ಗಳ ಅಮೋಘ ಗೆಲುವು ದಾಖಲಿಸಿತ್ತು. 2001ರಲ್ಲಿ ಬಾಂಗ್ಲಾದೇಶದ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ 5 ಶತಕ ಬಾರಿಸಿದ್ದ ಪಾಕಿಸ್ತಾನವು ಇನ್ನಿಂಗ್ಸ್ ಹಾಗೂ 264 ರನ್‌ಗಳ ಅಭೂತಪೂರ್ವ ಗೆಲುವು ದಾಖಲಿಸಿತ್ತು. ಆದರೆ ಟೀಮ್ ಇಂಡಿಯಾ ದಾಂಡಿಗರು ಬಾರಿಸಿದ 5 ಶತಕಗಳು ಸೋಲಿನೊಂದಿಗೆ ವ್ಯರ್ಥವಾಗಿದೆ.

ಈ ಮೂಲಕ 148 ವರ್ಷಗಳ ಟೆಸ್ಟ್ ಇತಿಹಾಸದಲ್ಲಿ ಪಂದ್ಯವೊಂದರಲ್ಲಿ 5 ಶತಕ ಸಿಡಿಸಿದರೂ ಸೋತ ತಂಡವೆಂಬ ಹಣೆಪಟ್ಟಿ ಟೀಮ್ ಇಂಡಿಯಾ ಪಾಲಾಗಿದೆ. ಇಂಗ್ಲೆಂಡ್ ವಿರುದ್ಧ ಇನ್ನೂ ನಾಲ್ಕು ಟೆಸ್ಟ್ ಪಂದ್ಯಗಳು ಉಳಿದಿದ್ದು, ಅವುಗಳಲ್ಲಿ ಗೆಲುವು ದಾಖಲಿಸಿ ಗಿಲ್ ಪಡೆ ಇತಿಹಾಸ ಬರೆಯಲಿದೆಯಾ ಎಂಬುದನ್ನು ಕಾದು ನೋಡಬೇಕಿದೆ.

ಟೀಮ್ ಇಂಡಿಯಾ ಸೋಲಿಗೆ ಪ್ರಮುಖ ಕಾರಣಗಳಿವು

ಮೊದಲ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ 6 ರನ್‌ಗಳ ಮುನ್ನಡೆ ಸಾಧಿಸಿದರೂ ಕೂಡ ತಂಡಕ್ಕೆ ಸೋಲು ಕಾರಣಗಳು ಹತ್ತಲವು. ಅವುಗಳಲ್ಲಿ ಪ್ರಮುಖವಾದವುಗಳು ಏನೇನು ಎಂಬ ಮಾಹಿತಿ ಇಲ್ಲಿದೆ:

ಕಳಪೆ ಫೀಲ್ಡಿಂಗ್: ಕ್ರಿಕೆಟ್ ಅಂಗಳದಲ್ಲಿ ಕ್ಯಾಚ್ ನಿಂದಲೇ ಪಂದ್ಯ ಗೆದ್ದ ಮತ್ತು ಕ್ಯಾಚ್ ಕೈಚೆಲ್ಲಿ ಪಂದ್ಯ ಸೋತ ಹಲವು ನಿದರ್ಶನಗಳಿವೆ. ಇದೀಗ ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್‌ನಲ್ಲಿ ಭಾರತದ ಸೋಲಿಗೂ ಆಟಗಾರು ಕ್ಯಾಚ್ ಕೈಚೆಲ್ಲಿದ್ದು ಕೂಡ ಒಂದು ಕಾರಣವಾಗಿದೆ. ಮೊದಲ ಟೆಸ್ಟ್ ಪಂದ್ಯದಲ್ಲಿ ಒಟ್ಟಾರೆ ಭಾರತೀಯ ಆಟಗಾರರು 6 ಕ್ಯಾಚ್‌ಗಳನ್ನು ಕೈಚೆಲ್ಲಿದರು, ಅದರಲ್ಲಿ ಯಶಸ್ವಿ ಜೈಸ್ವಾಲ್ ಒಬ್ಬರೇ ಒಟ್ಟು 4 ಕ್ಯಾಚ್‌ಗಳನ್ನು ಬಿಟ್ಟರು.

ದ್ವಿತೀಯ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್ ವೈಫಲ್ಯ: ಮೊದಲ ಇನಿಂಗ್ಸ್‌ನಲ್ಲಿ ಒಟ್ಟು ಮೂವರು ಆಟಗಾರರು ಶತಕ ಬಾರಿಸಿ ತಂಡಕ್ಕೆ ಉತ್ತಮ ಆರಂಭ ತಂದುಕೊಟ್ಟರೂ, ಅದೇ ಲಯವನ್ನು ದ್ವಿತೀಯ ಇನಿಂಗ್ಸ್‌ನಲ್ಲಿ ಮುಂದುವರಿಸಲು ವಿಫಲವಾದರು. ಪಂತ್ ಮತ್ತು ರಾಹುಲ್ ಹೊರತುಪಡಿಸಿ ಉಳಿದ ಬ್ಯಾಟರ್‌ಗಳಿಂದ ನಿರೀಕ್ಷಿತ ಬ್ಯಾಟಿಂಗ್ ಕಂಡು ಬರಲಿಲ್ಲ. ಅಲ್ಲದೇ ಬಾಲಂಗೋಚಿಗಳಿಂದ ಹೆಚ್ಚಿನ ರನ್ ಕೊಡುಗೆ ತಂಡಕ್ಕೆ ಲಭಿಸಲಿಲ್ಲ.

ಕೈಕೊಟ್ಟ ಬೌಲಿಂಗ್: ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಬೌಲಿಂಗ್ ದಾಳಿ ನಡೆಸಿದ್ದ ಎಲ್ಲಾ ಬೌಲರ್‌ಗಳು ಇಂಗ್ಲೆಂಡ್‌ನ ಆರಂಭಿಕ ಜೋಡಿಯನ್ನು ಬೇರ್ಪಡಿಸುವಲ್ಲಿ ವಿಫಲರಾದರು. ಜಸ್‌ಪ್ರೀತ್ ಬುಮ್ರಾ ಎರಡನೇ ಇನಿಂಗ್ಸ್‌ನಲ್ಲಿ ಹೆಚ್ಚಿನ ಪ್ರಭಾವ ಬೀರಲಿಲ್ಲ, ಜತೆಗೆ ಏಕೈಕ ಸ್ಪಿನ್ನರ್ ಜಡೇಜಾ ಎರಡೂ ಇನಿಂಗ್ಸ್‌ನಲ್ಲಿಯೂ ಕೈಚಳಕ ತೋರಿಸುವಲ್ಲಿ ವಿಫಲರಾದರು. ನಾಲ್ಕನೇ ವೇಗಿ ಆಯ್ಕೆ ಯಡವಟ್ಟು ಕೂಡ ಸೋಲಿಗೆ ಕಾರಣವಾಯಿತು.

ಗೋಲ್ಡನ್ ಸ್ಪೈಕ್ ಕೂಟದಲ್ಲಿ ತನ್ನ ಪ್ರದರ್ಶನದ ಬಗ್ಗೆ ಜಾವೆಲಿನ್ ಚಾಂಪಿಯನ್ ಹೇಳಿಕೆ

ಪ್ರದರ್ಶನ ತೃಪ್ತಿ ತಂದಿಲ್ಲ: ನೀರಜ್ ಚೋಪ್ರಾ

ಒಸ್ಟ್ರಾವಾ (ಚೆಕ್ ಗಣರಾಜ್ಯ): ಮಂಗಳವಾರ ರಾತ್ರಿ ಇಲ್ಲಿ ನಡೆದಿದ್ದ ಪ್ರತಿಷ್ಠಿತ ಗೋಲ್ಡನ್ ಸ್ಪೈಕ್ ಕೂಟದಲ್ಲಿ ನೀರಜ್ ಚೋಪ್ರಾ ಅವರು 85.29 ಮೀಟರ್ ಎಸೆತದೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು, ಆದರೆ ಪ್ರಶಸ್ತಿ ಗೆದ್ದರೂ ಪ್ರದರ್ಶನ ತೃಪ್ತಿ ತಂದಿಲ್ಲ ಎಂದು ಅವರು ಹೇಳಿದ್ದಾರೆ.



ಗೆಲುವಿನ ಬಳಿಕ ಮಾತನಾಡಿದ ನೀರಜ್ 'ನನ್ನ ಈ ಪ್ರದರ್ಶನದಿಂದ ನಾನು ಅಷ್ಟೊಂದು ಸಂತೋಷವಾಗಿಲ್ಲ, ಆದರೆ ನಾನು ಗೆದ್ದ ಟ್ರೋಫಿಯಿಂದ ನನಗೆ ತುಂಬಾ ಸಂತೋಷವಾಗಿದೆ. ನಾನು ಬಾಲ್ಯದಲ್ಲಿ ಈ ಟೂರ್ನಿಯನ್ನು ಬಹಳಷ್ಟು ನೋಡುತ್ತಿದ್ದೆ. ನನ್ನ ಕೋಚ್ ಜಾನ್ ಝೆಲೆಜ್ನಿ ಮತ್ತು ಉಸೇನ್ ಬೋಲ್ಟ್‌ರಂತಹ ಜನರು ಗೋಲ್ಡನ್ ಸ್ಪೈಕ್ ಗೆಲ್ಲುವುದನ್ನು ನಾನು ನೋಡುತ್ತಾ ಬೆಳೆದವನು, ಹೀಗಾಗಿ ನಾನು ಕೂಡ ಇಲ್ಲಿ ಪ್ರಶಸ್ತಿ ಗೆಲ್ಲುವ ಕನಸು ಕಂಡಿದ್ದೆ. ಈಗ ಕನಸು ನನಸಾಗಿದೆ, ಆದರೆ ಉತ್ತಮ ಪ್ರದರ್ಶನ ನೀಡಿಲ್ಲ ಎನ್ನುವ ಬಗ್ಗೆ ನನಗೆ ಬೇಸರವಿದೆ' ಎಂದರು.

ನೀರಜ್ 3ನೇ ಪ್ರಯತ್ನದಲ್ಲಿ 85.29 ಮೀಟರ್ ದೂರಕ್ಕೆ ಜಾವೆಲಿನ್ ಎಸೆದು ಅಗ್ರಸ್ಥಾನ ಪಡೆದುಕೊಂಡರು. ಮೊದಲ ಎಸೆತದಲ್ಲಿ ಫೌಲ್ ಮಾಡಿದ್ದ ನೀರಜ್, 2ನೇ ಪ್ರಯತ್ನದಲ್ಲಿ 83.45 ಮೀ. ದಾಖಲಿಸಿದರು. 4 ಮತ್ತು 5ನೇ ಪ್ರಯತ್ನದಲ್ಲಿ ಕ್ರಮವಾಗಿ 82.17 ಮೀ. ಹಾಗೂ 81.01 ಮೀ. ಎಸೆದ ಅವರ 6ನೇ ಎಸೆತ ಫೌಲ್ ಆಯಿತು.

ದಕ್ಷಿಣ ಆಫ್ರಿಕಾದ ಡೋವ್ ಸ್ಮಿತ್ 84.12 ಮೀಟರ್ ನೊಂದಿಗೆ ಬೆಳ್ಳಿ, ಗ್ರೆನಡಾದ ಆ್ಯಂಡರ್‌ಸನ್ ಪೀಟರ್ಸ್ 83.63 ಮೀಟರ್‌ನೊಂದಿಗೆ ಕಂಚಿನ ಪದಕ ತಮ್ಮದಾಗಿಸಿಕೊಂಡರು. ನೀರಜ್ ಈ ಹಿಂದಿನ ಎರಡು ಆವೃತ್ತಿಯಲ್ಲಿ ಸ್ಪರ್ಧಿಸುವ ಅವಕಾಶ ಪಡೆದಿದ್ದರೂ ಕೂಡ ಗಾಯದಿಂದ ಹಿಂದೆ ಸರಿದಿದ್ದರು, ಇದೀಗ ಚೊಚ್ಚಲ ಪ್ರಯತ್ನದಲ್ಲೇ ಪ್ರಶಸ್ತಿ ಗೆದ್ದಿದ್ದಾರೆ.

ಕೋಚ್ ಗೌತಮ್ ಗಂಭೀರ್‌ಗೆ ರವಿ ಶಾಸ್ತ್ರಿ ಸಲಹೆ

ಲೀಡ್ಸ್: ಇಲ್ಲಿನ ಹೆಡಿಂಗ್ಲೆಯಲ್ಲಿ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ಐದು ವಿಕೆಟ್‌ಗಳ ಸೋಲಿನ ನಂತರ ಭಾರತದ ಮಾಜಿ ಮುಖ್ಯ ಕೋಚ್ ರವಿಶಾಸ್ತ್ರಿ ತಂಡದ ಮೇಲೆ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಡ್ರೆಸ್ಸಿಂಗ್ ಕೊಠಡಿಯಲ್ಲಿ ಕಠಿಣ ಮನೋಭಾವ ಅಳವಡಿಸಿಕೊಳ್ಳುವಂತೆ ಅವರು ಕೋಚ್ ಗೌತಮ್ ಗಂಭೀರ್‌ಗೆ ಮನವಿ ಮಾಡಿದ್ದಾರೆ. ಗಂಭೀರ್ ತಂಡದ ಸಮಸ್ಯೆಗಳನ್ನು ಪತ್ತೆ ಮಾಡಿ ಎತ್ತಿ ಹಿಡಿಯಬೇಕು ಮತ್ತು ಪದೇ ಪದೇ ತಪ್ಪುಗಳನ್ನು ಮಾಡುತ್ತಿರುವ ಆಟಗಾರರನ್ನು ಹೊಣೆಗಾರರನ್ನಾಗಿ ಮಾಡಬೇಕು. ಅಗತ್ಯವಿದ್ದರೆ ಕೆಲವು ಆಟಗಾರರನ್ನು ಮುಂದಿನ ಪಂದ್ಯಗಳಿಂದ ಹೊರಗಿಡಬೇಕು ಎಂದು ಸೂಚಿಸಿದ್ದಾರೆ.

ಪಂದ್ಯದ ನಂತರ ಮಾಧ್ಯಮವೊಂದರ ಜೊತೆ ಮಾತನಾಡಿದ ರವಿಶಾಸ್ತ್ರ, ಪಂದ್ಯದಲ್ಲಿ ಕೋಚಿಂಗ್ ಸಿಬ್ಬಂದಿಯ ಪಾತ್ರವೂ ದೊಡ್ಡದು ಎಂದು ನಾನು ಭಾವಿಸುತ್ತೇನೆ. ಪಂದ್ಯದ ಸಕಾರಾತ್ಮಕ ಅಂಶಗಳನ್ನು ಖಂಡಿತವಾಗಿಯೂ ತೆಗೆದುಕೊಳ್ಳಬೇಕು. ನಾಯಕನಾಗಿ ಶುಭಮನ್ ಗಿಲ್ ತಮ್ಮ ಪಾತ್ರಕ್ಕಿಂತ ಹೆಚ್ಚಿನದನ್ನು ನೀಡಿದ್ದಾರೆ. ಅವರು ಒಂದು ಶತಕ ಗಳಿಸಿದರು ಮತ್ತು ಪಂದ್ಯದಲ್ಲಿ ಒಟ್ಟು ಐದು ಶತಕಗಳು ದಾಖಲಾಗಿವೆ. ಕ್ಯಾಚ್‌ಗಳನ್ನು ಕೈ ಚೆಲ್ಲುವುದು ಸೇರಿದಂತೆ ಕೆಲವು ವಿಷಯಗಳು ನಾಯಕನ ನಿಯಂತ್ರಣದಲ್ಲಿರುವುದಿಲ್ಲ, ತಂಡವು ಒಟ್ಟಾಗಿ ಶ್ರಮಿಸಬೇಕಾಗುತ್ತದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಜೀವನಶ್ರೇಷ್ಠ ಪ್ರಗತಿ ಸಾಧಿಸಿದ ರಿಷಭ್ ಪಂತ್ | ಗಿಲ್‌ಗೆ 20ನೇ ಸ್ಥಾನ

ಟೆಸ್ಟ್ ರ‍್ಯಾಂಕಿಂಗ್: ಪಂತ್ ಶ್ರೇಷ್ಠ ಸಾಧನೆ

ದುಬೈ: ಲೀಡ್ಸ್‌ನಲ್ಲಿ ಮುಕ್ತಾಯ ಕಂಡ ಇಂಗ್ಲೆಂಡ್ ವಿರುದ್ಧ ಮೊದಲ ಟೆಸ್ಟ್‌ನ ಎರಡೂ ಇನಿಂಗ್ಸ್‌ನಲ್ಲಿ ಶತಕ ಬಾರಿಸಿ ಮಿಂಚಿದ್ದ ಟೀಮ್ ಇಂಡಿಯಾದ ವಿಕೆಟ್ ಕೀಪರ್-ಬ್ಯಾಟರ್ ರಿಷಭ್ ಪಂತ್ ಮತ್ತು ಶುಭಮನ್ ಗಿಲ್ ನೂತನ ಟೆಸ್ಟ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಪ್ರಗತಿ ಸಾಧಿಸಿದ್ದಾರೆ. ಪಂತ್ ಜೀವನಶ್ರೇಷ್ಠ 7ನೇ ಸ್ಥಾನ ಗಳಿಸಿದ್ದಾರೆ.

ಅವಳಿ ಶತಕ ಬಾರಿಸಿದ್ದ ಪಂತ್ ಒಂದು ಸ್ಥಾನದ ಏರಿಕೆ ಕಂಡು ಸದ್ಯ 801 ರೇಟಿಂಗ್ ಅಂಕ ಪಡೆದಿದ್ದಾರೆ. ಇದೇ ವೇಳೆ ಮೊದಲ ಇನಿಂಗ್ಸ್‌ನಲ್ಲಿ ಶತಕ ಸಿಡಿಸಿದ್ದ ಶುಭಮನ್ ಗಿಲ್ 5 ಸ್ಥಾನಗಳ ಜಿಗಿತ ಕಂಡು 20ನೇ, ಕನ್ನಡಿಗ ಕೆ.ಎಲ್ ರಾಹುಲ್ 10 ಸ್ಥಾನ ಪ್ರಗತಿಯೊಂದಿಗೆ 38ನೇ ಸ್ಥಾನ ಪಡೆದಿದ್ದಾರೆ.

ಭಾರತೀಯ ಆಟಗಾರರು ಮಾತ್ರವಲ್ಲದೆ ಇಂಗ್ಲೆಂಡ್ ಆಟಗಾರರು ಕೂಡ ಶ್ರೇಯಾಂಕದಲ್ಲಿ ತಮ್ಮ ಸ್ಥಾನಗಳನ್ನು ವೃದ್ಧಿಸಿಕೊಂಡಿದ್ದಾರೆ. ಶತಕ ವೀರರಾದ ಬೆನ್ ಡಕೆಟ್(8) ಮತ್ತು ಓಲಿ ಪೋಪ್(19) ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ಬಾಂಗ್ಲಾ ದೇಶದ ಮುಷ್ಫಿಕರ್ ರಹೀಂ ಮತ್ತು ಶ್ರೀಲಂಕಾದ ಪಾಥುಮ್ ನಿಸ್ಸಂಕ ತಲಾ 21 ಸ್ಥಾನಗಳ ಏರಿಕೆಯೊಂದಿಗೆ ಕ್ರಮವಾಗಿ 28 ಮತ್ತು 31ನೇ ಸ್ಥಾನ ಪಡೆದಿದ್ದಾರೆ. ಇಂಗ್ಲೆಂಡ್‌ನ ಜೋ ರೂಟ್ ಅಗ್ರಸ್ಥಾನದಲ್ಲೇ ಮುಂದುವರಿದರೆ, ಮತ್ತೋರ್ವ ಆಟಗಾರ ಹ್ಯಾರಿ ಬ್ರೂಕ್ ಕೂಡ ದ್ವಿತೀಯ ಸ್ಥಾನ ಉಳಿಸಿಕೊಂಡಿದ್ದಾರೆ. ನ್ಯೂಜಿಲ್ಯಾಂಡ್‌ನ ಅನುಭವಿ ಆಟಗಾರ ಕೇನ್ ವಿಲಿಯಮ್ಸನ್ ಮೂರನೇ ಸ್ಥಾನ ಪಡೆದಿದ್ದಾರೆ.

ಟಾಪ್ ಬ್ಯಾಟರ್ಸ್

- ಜೋ ರೂಟ್- (889)
- ಹ್ಯಾರಿ ಬ್ರೂಕ್- (874)
- ಕೇನ್ ವಿಲಿಯಮ್ಸನ್- (867)
- ಸ್ಟೀವನ್ ಸ್ಮಿತ್- (824)

ಟಾಪ್ ಬೌಲರ್ಸ್

- ಜಸ್‌ಪ್ರೀತ್ ಬುಮ್ರಾ- (907)
- ಕಗಿಸೊ ರಬಾಡ- (868)
- ಪ್ಯಾಟ್ ಕಮಿನ್ಸ್- (847)
- ನೋಮನ್ ಅಲಿ- (806)

ಅಗ್ರಸ್ಥಾನದಲ್ಲೇ ಮುಂದುವರಿದ ಬುಮ್ರಾ: ಬೌಲಿಂಗ್ ಶ್ರೇಯಾಂಕದಲ್ಲಿ ಜಸ್‌ಪ್ರೀತ್ ಬುಮ್ರಾ ತಮ್ಮ ಅಗ್ರಸ್ಥಾನವನ್ನು ಉಳಿಸಿಕೊಂಡಿದ್ದಾರೆ. ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ 5 ವಿಕೆಟ್ ಗೊಂಚಲು ಪಡೆದಿದ್ದರು. ಇದೇ ಪಂದ್ಯದಲ್ಲಿ ಕಳಪೆ ಬೌಲಿಂಗ್ ಪ್ರದರ್ಶನ ತೋರಿದ್ದ ರವೀಂದ್ರ ಜಡೇಜಾ ಮೂರು ಸ್ಥಾನಗಳ ನಷ್ಟದೊಂದಿಗೆ ಅಗ್ರ 10ರಿಂದ ಹೊರಬಿದಿದ್ದು, 706 ರೇಟಿಂಗ್ ಅಂಕದೊಂದಿಗೆ 13ನೇ ಸ್ಥಾನ ಪಡೆದಿದ್ದಾರೆ.

ವಿಟಾಕೀಸ್

ಒಕೆಗೆ ಕ್ರೇಜಿಸ್ಟಾರ್ ರವಿಚಂದ್ರನ್ ಹಾರೈಕೆ

ಕನ್ನಡ ಚಿತ್ರರಂಗದ ದಿಗ್ಗಜರಲ್ಲಿ ಹಂಸಲೇಖ ಕೂಡ ಒಬ್ಬರು. ಸಂಗೀತ ನಿರ್ದೇಶಕರಾಗಿ, ಚಿತ್ರ ಸಾಹಿತಿಯಾಗಿ ಚಿತ್ರರಂಗಕ್ಕೆ ತಮ್ಮದೇ ಕೊಡುಗೆ ನೀಡಿರುವ ಹಂಸಲೇಖ ಈಗ ನಿರ್ದೇಶಕರ ಸ್ಥಾನ ಅಲಂಕರಿಸಿದ್ದಾರೆ. ಹೌದು ಹಂಸಲೇಖ ಒಕೆ ಎಂಬ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಇನ್ನೇನು ಚಿತ್ರೀಕರಣ ಆರಂಭಿಸಲಿರುವ ಈ ಚಿತ್ರಕ್ಕೆ ಕ್ರೇಜಿಸ್ಟಾರ್ ರವಿಚಂದ್ರನ್ ಶುಭಹಾರೈಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಂಸಲೇಖ ಅವರ ಸಾಹಸಕ್ಕೆ ಶುಭಾಶಯ ತಿಳಿಸಿದ್ದಾರೆ. ಒಕೆ ಶೀರ್ಷಿಕೆಯಲ್ಲಿ ಮೂಡಿಬರುತ್ತಿರುವ ಈ ಚಿತ್ರವನ್ನು ನಾಗೇಶ್ ವಾಷ್ಟರ್ ಮತ್ತು ಸೂರ್ಯಪ್ರಕಾಶ್ ನಿರ್ಮಾಣ ಮಾಡುತ್ತಿದ್ದಾರೆ.

> ನಾನು ಪರದೆಯಲ್ಲಿ ಮೆರೆದಿದ್ದರೆ ಅದಕ್ಕೆ ನೀವು ಮತ್ತು ನಿಮ್ಮ ಹಾಡುಗಳು ಕಾರಣ. ಎಂಬತ್ತರ ದಶಕದಲ್ಲಿ ನಮ್ಮಿಬ್ಬರ ಕಾಂಬಿನೇಷನ್‌ನಲ್ಲಿ ಮೂಡಿಬಂದ ಸಿನಿಮಾಗಳು ಭರ್ಜರಿ ಸಕ್ಸಸ್ ಕಂಡಿವೆ. ಆದರೆ ನಾವು ಸಕ್ಸಸ್ ಗುಂಗಿನಲ್ಲಿ ಕೂರಲಿಲ್ಲ. ಯಾಕೆಂದರೆ ಒಂದು ಸಿನಿಮಾ ಆಗುತ್ತಿದ್ದಂತೆಯೇ ಇನ್ನೊಂದು ಸಿನಿಮಾ ಶುರು ಮಾಡುತ್ತಿದ್ದೆವು. ನಾವಿಬ್ಬರು ಒಳ್ಳೆಯ ಗೆಳೆಯರು. ನನ್ನ ಮತ್ತು ಹಂಸಲೇಖ ಸ್ನೇಹದಲ್ಲಿ ಲೆಕ್ಕಾಚಾರ ಇರಲಿಲ್ಲ. ನನಗೆ ಲೆಕ್ಕಾಚಾರ ಗೊತ್ತಿಲ್ಲ. ಸಿನಿಮಾ ಮಾಡುವುದು ಮಾತ್ರ ನನಗೆ ಗೊತ್ತು. ಇಂದಿಗೂ ಯಾರಾದರೂ ಪ್ರೇಮಲೋಕ, ರಣಧೀರ ಸಿನಿಮಾಗಳ ಲಾಭ ಎಷ್ಟು ಅಂತ ಕೇಳಿದರೆ ನನಗೆ ಗೊತ್ತಿಲ್ಲ. ಒಟ್ಟಿಗೆ ಸಿನಿಮಾ ಮಾಡಿದೆವು ಅಷ್ಟೇ.
>
> -ವಿ.ರವಿಚಂದ್ರನ್

> ಐದು ವರ್ಷಗಳ ಹಿಂದೆ ಆದಿಪ್ ಅಖ್ತರ್, ಪಂಜರ ಎಂಬ ಕಥೆ ಬರೆದಿದ್ದರು. ಆ ಕಥೆ ಓದಿ ಸಂತಸವಾಯಿತು. ಅವರನ್ನು ಕರೆಯಿಸಿ ಮಾತುಕತೆ ನಡೆಸಿ ಅದನ್ನು ಸಿನಿಮಾ ಮಾಡಲು ಒಪ್ಪಿದೆ. ನಮ್ಮ ಮಣ್ಣಿನ ಗುಣವಿರುವ ಕಥೆಗಳು, ಕಥೆಗಾರರು ನಮ್ಮ ಸಿನಿಮಾಗೆ ಬೇಕು. ಸಿನಿಮಾದಲ್ಲಿ ಕನ್ನಡನಾಡಿನ ಸೊಗಡಿದ್ದರೆ ಜನ ಚಿತ್ರ ಮಂದಿರಕ್ಕೆ ಬಂದು ಸಿನಿಮಾ ನೋಡುತ್ತಾರೆ.
>
> -ಹಂಸಲೇಖ

ಅನಿಮೇಷನ್ ಲೋಕದಲ್ಲಿ ಮಹಾವತಾರ

ಹೊಂಬಾಳೆ ಫಿಲಂಸ್ ಪ್ರಸ್ತುತಪಡಿಸುತ್ತಿರುವ ಮಹಾವತಾರ ಸಿನಿಮಾಟಿಕ್ ಯೂನಿವರ್ಸ್ ಕುತೂಹಲ ಮೂಡಿಸಿದೆ. ಒಂದು ದಶಕಕ್ಕೂ ಹೆಚ್ಚು ಕಾಲ ಪ್ರಸಾರವಾಗಲಿರುವ ಈ ಸರಣಿಯು ಭಗವಾನ್ ವಿಷ್ಣುವಿನ ಹತ್ತು ದೈವಿಕ ಅವತಾರಗಳನ್ನು ಒಳಗೊಂಡಿದ್ದು, 2025ರಲ್ಲಿ ಮಹಾವತಾರ ನರಸಿಂಹ ದಿಂದ ಪ್ರಾರಂಭವಾಗಿ 2037ರಲ್ಲಿ ಮಹಾವತಾರ ಕಲ್ಕಿ ಭಾಗ-2 ದೊಂದಿಗೆ ಕೊನೆಗೊಳ್ಳಲಿದೆ. ಭಾರತದ ದೈವಿಕ ಪರಂಪರೆಯನ್ನು ಹಿಂದೆಂದೂ ನೋಡಿರದ ಸಿನಿಮಾಟಿಕ್ ರೂಪದಲ್ಲಿ ದೊಡ್ಡ ಪರದೆಯಲ್ಲಿ ಕಟ್ಟಿಕೊಡಲು ಉತ್ಸುಕರಾಗಿದ್ದೇವೆ. ಮಹಾವತಾರ ಯೂನಿವರ್ಸ್ ಮೂಲಕ ದಶಾವತಾರದ ಅಲೌಕಿಕ ಅನುಭವ ಪ್ರಾರಂಭವಾಗುತ್ತದೆ ಎಂದು ನಿರ್ದೇಶಕ ಅಶ್ವಿನ್ ಕುಮಾರ್ ಹೇಳಿದ್ದಾರೆ. ತೆರೆಯಲ್ಲಿ ಕಾಲ ಮತ್ತು ಗಡಿಗಳನ್ನು ಮೀರಿದ ಕಥೆಯನ್ನು ಕಟ್ಟಿ ಕೊಡಲು ಸಂತಸವಾಗುತ್ತಿದೆ. ಮಹಾವತಾರ ಮೂಲಕ, ವಿಷ್ಣುವಿನ ದಶಾವತಾರಗಳನ್ನು ಅನಿಮೇಷನ್ ಮೂಲಕ ಜೀವಂತಗೊಳಿಸಲು ಸಿನಿಮಾಟಿಕ್ ಯೂನಿವರ್ಸ್ ಅನ್ನು ಹೆಮ್ಮೆಯಿಂದ ಪ್ರಸ್ತುತಪಡಿಸುತ್ತಿದ್ದೇವೆ ಎಂದು ಹೊಂಬಾಳೆ ಫಿಲಂಸ್ ತಿಳಿಸಿದೆ.



ಪಶ್ಚಿಮ ಘಟ್ಟದಲ್ಲಿ ತಿಮ್ಮ ಕಂಡ ಕಾಳಿಂಗ

ತಿಮ್ಮನ ಮೊಟ್ಟೆಗಳು ಚಿತ್ರ ಈಗಾಗಲೇ ಹಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿದ್ದು ಪ್ರಶಸ್ತಿಯನ್ನೂ ಪ್ಡಡೆದುಕೊಂಡಿದೆ. ಇಲ್ಲಿ ಪಶ್ಚಿಮ ಘಟ್ಟದ ಮಹತ್ವ ಸಾರುವ ಜತೆಗೆ ಕಾಳಿಂಗ ಸರ್ಪದ ಉಳಿವಿನ ಬಗ್ಗೆಯೂ ಹೇಳಲಾಗಿದೆ. ತಮ್ಮ ಚಿತ್ರದ ಕುರಿತಂತೆ ನಿರ್ದೇಶಕ ರಕ್ಷಿತ್ ತೀರ್ಥಹಳ್ಳಿ ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್: ತಿಮ್ಮನ ಮೊಟ್ಟೆಗಳು ಕಾಳಿಂಗ ಸರ್ಪದ ಕುರಿತ ಕಥೆಯೆ ?

ರಕ್ಷಿತ್: ಇಲ್ಲಿ ಕಾಳಿಂಗ ಸರ್ಪದ ಕುರಿತ ಕಥೆ ಇದ್ದರೂ ಅದರ ಜತೆಗೆ ಪಶ್ಚಿಮ ಘಟ್ಟದ ಮಹತ್ವದ ಕುರಿತಂತೆ ಹೇಳಲಾಗಿದೆ. ಕಾಳಿಂಗ ಸರ್ಪವನ್ನು ಪಶ್ಚಿಮ ಘಟ್ಟದ ಪ್ರತಿನಿಧಿ ಎಂದು ಕರೆಯಬಹುದು. ಯಾಕೆಂದರೆ ಅದು ಪಶ್ಚಿಮ ಘಟ್ಟದ ಅರಣ್ಯ ಪ್ರದೇಶದಲ್ಲಿ ಮಾತ್ರ ಕಂಡುಬರುತ್ತದೆ. ಕಾಳಿಂಗ ಅಳಿವಿನಂಚಿನಲ್ಲಿರುವ ಪ್ರಭೇದ ಅದಕ್ಕೆ ಕಾರಣ ಕಾಡಿನ ನಾಶ, ಕಾಡು ಉಳಿದರೆ ಕಾಳಿಂಗ ಕೂಡ ಉಳಿಯುತ್ತದೆ ಎಂಬುದನ್ನು ಇಲ್ಲಿ ಮನಕ್ಕೆ ಮುಟ್ಟುವಂತೆ ಹೇಳಲಾಗಿದೆ.

ವಿ.ಸಿ: ಇಲ್ಲಿ ತಿಮ್ಮನ ಪಾತ್ರ ?

ರಕ್ಷಿತ್: ಇಲ್ಲಿ ಮೂರು ಮುಖ್ಯ ಪಾತ್ರಗಳಿದ್ದು ಈ ಮೂರು ಪಾತ್ರಗಳೂ ಕಾಳಿಂಗವನ್ನು ನೋಡುವ ದೃಷ್ಟಿಕೋನದ ಸುತ್ತ ಸಾಗುತ್ತವೆ. ಉರಗ ತಜ್ಞರು ಹಾವನ್ನು ವೈಜ್ಞಾನಿಕವಾಗಿ ನೋಡಿದರೆ ಕಾಡಿಗೆ ಹೊಂದಿಕೊಂಡು ಬೆಳೆದ ಜನರ ಸರ್ಪವನ್ನು ಹೇಗೆ ನೋಡುತ್ತಾರೆ. ತಿಮ್ಮನ ದೃಷ್ಟಿಕೋನ ಹೇಗಿರುತ್ತದೆ ಎಂಬುದು ಪ್ರಮುಖವಾಗಿದೆ.

ವಿ.ಸಿ: ಸಿನಿಮಾದಲ್ಲಿ ದೈವಾರಾಧನೆಯೂ ಇದೆಯಲ್ಲ ?

ರಕ್ಷಿತ್: ನಮ್ಮ ಪೂರ್ವಿಕರು ಕಾಡನ್ನು ಪೂಜ್ಯ ಭಾವನೆಯಿಂದ ನೋಡುತ್ತಿದ್ದರು. ಹಾಗಾಗಿಯೇ ಪಶ್ಚಿಮ ಘಟ್ಟದಲ್ಲಿ ನಾಗಬನ, ದೇವರ ಕಾಡುಗಳು ಎಲ್ಲೆಡೆಯೂ ಇದ್ದವು. ಅವು ಪೂಜನೀಯವಾಗಿದ್ದವು. ಆ ದೈವಿಕ ನಂಬಿಕೆಯಿಂದಲೇ ಇಂದಿಗೂ ನಮ್ಮ ಕಾಡುಗಳು ಉಳಿದಿವೆ. ಆ ದೈವಿಕ ಭಾವನೆಗಳು ಚಿತ್ರದಲ್ಲಿ ಬೆರೆತಿದೆ.

> ಮನುಷ್ಯನ ಹಸ್ತಕ್ಷೇಪದಿಂದ ಕಾಡು ನಾಶವಾಗುತ್ತಿದೆ. ಇದರಿಂದ ಕಾಡಿನಲ್ಲಿ ಕಾಳಿಂಗನ ಆವಾಸ ನಾಶವಾಗಿದ್ದು, ಅಪರೂಪದ ಉರಗ ಸಂತತಿ ಅಳಿವಿಂಚಿನಲ್ಲಿದೆ. ಇದೇ ವಿಚಾರವನ್ನು ಪ್ರೇಕ್ಷಕರ ಮುಂದಿಟ್ಟಿದ್ದೇನೆ.

ವಿ.ಸಿ: ಸಿನಿಮಾದಲ್ಲಿ ಕಾಳಿಂಗನನ್ನು ಕಾಣಬಹುದೆ?

ರಕ್ಷಿತ್: ಕಾಳಿಂಗ ಸರ್ಪವನ್ನು ಹಿಡಿದು ಚಿತ್ರೀಕರಿಸುವುದು ಸುಲಭದ ಮಾತಲ್ಲ, ಅದಕ್ಕೆ ಅವಕಾಶವೂ ಇಲ್ಲ. ಗ್ರಾಫಿಕ್ಸ್ ಮೂಲಕ ಕಾಳಿಂಗನನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಕಿಂಗ್ ಕೋಬ್ರಾ, ಆಕಾರದಲ್ಲಿ ದೈತ್ಯವಾಗಿರುವುದರಿಂದ ಅದು ಆಕ್ರಮಣಕಾರಿ ಹಾವು ಎಂದು ಕೆಲವರು ತಪ್ಪು ತಿಳಿದಿದ್ದಾರೆ. ಆದರೆ ಕಾಳಿಂಗ ತುಂಬಾ ಸೌಮ್ಯ ಸ್ವಭಾವದ, ಜನರು ಕಂಡರೆ ದೂರ ಓಡುವ ಹಾವು. ಈ ವಿಚಾರವನ್ನು ಚಿತ್ರದಲ್ಲಿ ಹೇಳಲಾಗಿದೆ.

ಕಾನನದ ನಡುವೆ ಜಂಗಲ್ ಮಂಗಲ್

ಸ್ಯಾಂಡಲ್‌ವುಡ್‌ನಲ್ಲಿ ಖಳನಾಗಿ ಖದರ್ ತೋರಿ ಪ್ರೇಕ್ಷಕರ ಮನಗೆದ್ದ ನಟ ಯಶ್ ಶೆಟ್ಟಿ ಈಗ ನಾಯಕನಾಗಿಯೂ ಮಿಂಚುತ್ತಿದ್ದಾರೆ. ಹೌದು ಜಂಗಲ್ ಮಂಗಲ್ ಚಿತ್ರದಲ್ಲಿ ಯಶ್ ಶೆಟ್ಟಿ ಮತ್ತೊಮ್ಮೆ ನಾಯಕನಾಗಿ ನಟಿಸಿದ್ದಾರೆ. ಈಗಾಗಲೇ ಶೂಟಿಂಗ್ ಮುಗಿಸಿರುವ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಇದೊಂದು ಅರೆ ಮಲೆನಾಡಿನಲ್ಲಿ ನಡೆಯುವ ಕಥೆಯಾಗಿದ್ದು ಎಲ್ಲಾ ಕಾಲಕ್ಕೂ ಹೊಂದುವ ಸ್ಟೋರಿ ಚಿತ್ರದಲ್ಲಿದೆ. ಕಾಡಿನಲ್ಲಿ ನಡೆಯುವ ಕಥೆ ಇಲ್ಲಿದ್ದು, ಅದನ್ನು ಕಾಮಿಡಿ ಜತೆಗೆ ಥ್ರಿಲ್ಲರ್ ಅಂಶಗಳನ್ನು ಬೆರೆಸಿ ಕಟ್ಟಿಕೊಡಲಾಗಿದೆ. ಯಶ್ ಶೆಟ್ಟಿ ರಡಗ್ ಲುಕ್‌ನಲ್ಲಿ ಮಿಂಚಿದ್ದು, ಉಗ್ರಂ ಮಂಜು ಖಳನಾಗಿ ನಟಿಸಿದ್ದಾರೆ. ಹರ್ಷಿತಾ ರಾಮಚಂದ್ರ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಕರಾವಳಿ ಸೊಗಡಿನಲ್ಲಿಯೇ ಸಂಭಾಷಣೆ ಮೂಡಿಬಂದಿದೆ.

ಈ ಚಿತ್ರಕ್ಕೆ ಕಥೆಯೇ ನಿಜವಾದ ನಾಯಕ, ಎಲ್ಲರ ಮನಸಿಗೆ ಹಿಡಿಸುವ ಅದ್ಭುತ ಕಥೆ ಚಿತ್ರದಲ್ಲಿದೆ ಎಂದು ನಟ ಯಶ್ ಶೆಟ್ಟಿ ಹೇಳಿದರು. ನಾನು ದಿವ್ಯಾ ಎಂಬ ಮಧ್ಯಮ ವರ್ಗದ ಜವಾಬ್ದಾರಿಯುತ ಕರಾವಳಿ ಹೆಣ್ಣುಮಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನನ್ನದು ಅಂಗನವಾಡಿ ಶಿಕ್ಷಕಿಯ ಪಾತ್ರ ಎಂದು ತಮ್ಮ ಪಾತ್ರದ ಕುರಿತಂತೆ ಹರ್ಷಿತಾ ತಿಳಿಸಿದರು. ಸಹ್ಯಾದ್ರಿ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ಜಂಗಲ್ ಮಂಗಲ್ ನಿರ್ಮಾಣವಾಗಿದ್ದು ಜುಲೈ 4 ರಂದು ತೆರೆಗೆ ಬರಲಿದೆ.

> ಹತ್ತು ವರ್ಷಗಳಿಂದ ಕನ್ನಡ ಹಾಗೂ ತುಳು ಚಿತ್ರರಂಗದ ವಿವಿಧ ಆಯಾಮಗಳಲ್ಲಿ ಕೆಲಸ ಮಾಡಿರುವ ನನಗೆ ನಿರ್ದೇಶಕನಾಗಿ ಇದು ಮೊದಲ ಚಿತ್ರ. ಇದು ಅರೆ ಮಲೆನಾಡಿನಲ್ಲಿ ನಡೆಯುವ ಕಥೆಯಾಗಿದ್ದರೂ, ಯೂನಿವರ್ಸಲ್ ಸಬ್ಜೆಕ್ಟ್ ಎನ್ನಬಹುದು. ಎಲ್ಲಾ ಪ್ರಾಂತ್ಯದಲ್ಲೂ ನಡೆಯುವ ಕಥೆಯೂ ಹೌದು. ನಿರ್ದೇಶಕ ಯೋಗರಾಜ್ ಭಟ್ ನಮ್ಮ ಚಿತ್ರಕ್ಕೆ ಜಂಗಲ್ ಮಂಗಲ್ ಎಂಬ ಶೀರ್ಷಿಕೆ ನೀಡಿದರು.
>
> -ರಕ್ಷಿತ್ ಕುಮಾರ್ ನಿರ್ದೇಶಕ